ಮಂಗಳೂರು
ಶುಕ್ರವಾರ, 13 ಮಾರ್ಚ್ 2026
ಸಂಪುಟ 47, ಸಂಚಿಕೆ 344, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ | ೦೨
ಸಿಇಸಿ ಪದಚ್ಯುತಿಗೆ 200 ಸಂಸದರ ಸಹಿ | ೦೨
ಜೀವಮಾನದ ಗೋಡೆಗೆ ಬಿಸಿಸಿಐ ಗರಿ | ೧೧

ಹಾರ್ಮುಜ್ ಮೂಲಕ ಭಾರತೀಯ ಹಡಗುಗಳು ಸಂಚರಿಸಲು ಇರಾನ್ ಅನುಮತಿ

ಭಾರತಕ್ಕೆ ತೈಲ, ಅನಿಲ ಸರಾಗ

ಹೊಸದಿಲ್ಲಿ: ಇಸ್ರೇಲ್-ಅಮೆರಿಕ ಮತ್ತು ಇರಾನ್ ನಡುವೆ ನಡೆಯುತ್ತಿರುವ ಉದ್ವಿಗ್ನ ಪರಿಸ್ಥಿತಿಯ ನಡುವೆಯೂ ಭಾರತದ ತೈಲ ಟ್ಯಾಂಕರ್‌ಗಳು ಹಾಗೂ ಕಂಟೈನರ್ ಹಡಗುಗಳು ಹಾರ್ಮುಜ್ ಜಲಸಂಧಿಯ ಮೂಲಕ ಸಂಚರಿಸಲು ಇರಾನ್ ಅನುಮತಿ ನೀಡಿದ್ದು, ಇದು ಜಾಗತಿಕ ಮಟ್ಟದಲ್ಲಿ ಭಾರತಕ್ಕೆ ಸಿಕ್ಕ ಮಹತ್ವದ ಗೆಲುವು ಎಂದು ಬಣ್ಣಿಸಲಾಗಿದೆ.



ಈ ಮಹತ್ವದ ಬೆಳವಣಿಗೆಯು ಭಾರತಕ್ಕೆ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲ ಪೂರೈಕೆಯನ್ನು ಸರಾಗಗೊಳಿಸಲಿದೆ.


ವಿದೇಶಾಂಗ ಸಚಿವ ಎಸ್. ಜೈಶಂಕರ್ ಹಾಗೂ ಇರಾನ್‌ನ ಸಹವರ್ತಿ ಸಯ್ಯದ್ ಅಬ್ಬಾಸ್ ಅರಾಗ್ಚಿ ಅವರ ನಡುವೆ 3 ಬಾರಿ ದೂರವಾಣಿ ಮಾತುಕತೆಯ ಬಳಿಕ ಈ ಅನುಮತಿ ಲಭ್ಯವಾಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಹಡಗು ಗಳು ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟುತ್ತಿರುವುದಾಗಿ ಮಾಹಿತಿ ಸಿಕ್ಕಿದೆ. ಇದರ ಮಧ್ಯೆ, ಹಾರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ತೈಲವನ್ನು ಹೊತ್ತುಕೊಂಡು ಬಂದ ಒಂದು ಹಡಗು ಮುಂಬೈ ಬಂದರಿಗೆ ತಲುಪಿದೆ. ಸೌದಿ ಅರೇಬಿಯಾದಿಂದ ಹೊರಟ ಲೈಬೀರಿಯಾ ಧ್ವಜದ ಟ್ಯಾಂಕರ್ ಬುಧವಾರ ಮುಂಬೈ ಬಂದರಿಗೆ ಬಂದಿದ್ದು, ಯುದ್ಧ ಆರಂಭವಾದ ಬಳಿಕ ಈ ಮಾರ್ಗದ ಮೂಲಕ ಭಾರತಕ್ಕೆ ತಲುಪಿದ ಮೊದಲ ತೈಲ ಹಡಗು ಇದಾಗಿದೆ. ➡ಪುಟ ೪

ದೇಶದಲ್ಲಿ ಇಂಧನ ಕೊರತೆ ಇಲ್ಲ

ಇದರ ನಡುವೆ, ಇಂಧನ ಸಚಿವ ಹರ್ದೀಪ್ ಸಿಂಗ್ ಪುರಿ



ಗುರು ವಾರ ಸಂಸತ್ತಿನಲ್ಲಿ ಮಾತನಾಡಿ ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹೇಳಿದರು. ಆಧುನಿಕ ಇಂಧನ ಇತಿಹಾಸದಲ್ಲಿ ಇಂತಹ ಕ್ಷಣವನ್ನು ಜಗತ್ತು ಎದುರಿಸಿಲ್ಲ. ಭಾರತದ ಕಚ್ಚಾ ತೈಲ ಸರಬರಾಜು ಸುರಕ್ಷಿತವಾಗಿದೆ. ಹಾರ್ಮುಜ್ ಮೂಲಕ ಬರಬೇಕಿದ್ದ ಪ್ರಮಾಣಕ್ಕಿಂತಲೂ ಹೆಚ್ಚು ತೈಲವನ್ನು ಭಾರತ ಈಗಾಗಲೇ ಖಚಿತಪಡಿಸಿಕೊಂಡಿದೆ ಎಂದು ಹೇಳಿದರು.



ಭಾರತಕ್ಕೆ ತೈಲ ತಂದ ಟ್ಯಾಂಕರ್‌ನ ರಹಸ್ಯ ಪ್ರಯಾಣ

ಯುದ್ಧದ ನೆರಳಲ್ಲಿ 'ಕತ್ತಲ ದಾರಿ' ಪಯಣ!

ಮುಂಬೈ: ಮಧ್ಯಪ್ರಾಚ್ಯದಲ್ಲಿ ಅಮೆರಿಕ- ಇರಾನ್ ಸಂಘರ್ಷ ತೀವ್ರವಾಗಿರುವ ಸಂದರ್ಭದಲ್ಲಿ, ತೈಲ ಹೊತ್ತುಕೊಂಡು ಬಂದ ಒಂದು ದೊಡ್ಡ ಕಚ್ಚಾತೈಲ ಟ್ಯಾಂಕರ್ 'ಕತ್ತಲ ದಾರಿ' ಬಳಸಿಕೊಂಡು ಅಪಾಯಕರ ಹಾರ್ಮುಜ್ ಜಲಸಂಧಿಯನ್ನು ದಾಟಿ ಎಲ್ಲರಿಗೂ ಅಚ್ಚರಿ ಮೂಡಿಸಿದೆ. ಸೌದಿ ಅರೇಬಿಯಾದಿಂದ ಹೊರಟ ಈ ಲಿಬೇರಿಯಾ ಧ್ವಜದ 'ಶೆನ್‌ಲಾಂಗ್ ಸ್ಯೂಯೆಜ್‌ಮ್ಯಾಕ್ಸ್' ಟ್ಯಾಂಕರ್ ಸುಮಾರು 1.35 ಲಕ್ಷ ಮೆಟ್ರಿಕ್ ಟನ್ ಕಚ್ಚಾ ತೈಲ ಹೊತ್ತು ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ. ಅಮೆರಿಕ-ಇರಾನ್ ಯುದ್ಧ ಆರಂಭವಾದ ಬಳಿಕ ಹಾರ್ಮುಜ್ ಮೂಲಕ ಭಾರತ ತಲುಪಿದ ಮೊದಲ ಟ್ಯಾಂಕರ್ ಇದಾಗಿದೆ.

'ಡಾರ್ಕ್ ಮೋಡ್' ಎಂದರೇನು?: ಸಾಮಾನ್ಯವಾಗಿ ಸಮುದ್ರದಲ್ಲಿ ಸಾಗುವ ಪ್ರತಿಯೊಂದು ಹಡಗು ಆಟೋಮ್ಯಾಟಿಕ್ ಐಡೆಂಟಿಫಿಕೇಷನ್ ಸಿಸ್ಟಮ್(ಎಐಎಸ್) ಮೂಲಕ ತನ್ನ ಗುರುತು, ಸ್ಥಳ ಮತ್ತು ದಿಕ್ಕನ್ನು ಪ್ರಸಾರ ಮಾಡುತ್ತದೆ. ➡ಪುಟ ೪

ಅಪಾಯದ ನಡುವೆ ಸಾಹಸ

ಈ ಹಡಗಿನ ಪ್ರಯಾಣ ಮಾರ್ಚ್ 1ರಂದು ಸೌದಿ ಅರೇಬಿಯಾದ ರಾಸ್ ತನೂರಾ ಬಂದರಿನಿಂದ ಆರಂಭವಾಯಿತು.ಕೆಲ ದಿನಗಳ ಬಳಿಕ ಅದು ಯುದ್ಧದಿಂದ ಉದ್ವಿಗ್ನವಾಗಿರುವ ಹಾರ್ಮುಜ್ ಜಲಸಂಧಿಗೆ ಪ್ರವೇಶಿಸಿತು. ಇತ್ತೀಚಿನ ಸಂಘರ್ಷಗಳಿಂದಾಗಿ ಈ ಮಾರ್ಗದಲ್ಲಿ ಹಲವಾರು ಹಡಗುಗಳ ಮೇಲೆ ದಾಳಿ ನಡೆದಿರುವುದರಿಂದ ಬಹುತೇಕ ವ್ಯಾಪಾರಿಕ ಹಡಗುಗಳು ಸಂಚಾರವೇ ನಿಲ್ಲಿಸಿವೆ. ಆದರೆ ಈ ಟ್ಯಾಂಕರ್ ಮಾತ್ರ ಅಪಾಯವನ್ನು ಲೆಕ್ಕಿಸದೆ 'ಡಾರ್ಕ್ ಟ್ರಾನ್ಸಿಟ್' ತಂತ್ರದಿಂದ ಮಾರ್ಗ ದಾಟಿ ಮುಂಬೈ ಬಂದರಿಗೆ ಸುರಕ್ಷಿತವಾಗಿ ತಲುಪಿದೆ.

ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಭಾರತೀಯ ಹಡಗುಗಳಿಗೆ ಅನುಮತಿ ನೀಡಿರುವ ಇರಾನ್ ಹಾರ್ಮುಜ್ ಜಲಸಂಧಿಯನ್ನು ದಾಟಲು ಬಯಸುವ ಎಲ್ಲಾ ಹಡಗುಗಳು ತನ್ನಿಂದ ಪೂರ್ವಾನುಮತಿ ಪಡೆಯಬೇಕು ಎಂದು ಎಚ್ಚರಿಸಿದೆ. ಅನುಮತಿ ಪಡೆಯದೇ ಸಾಗಿದರೆ ಹಡಗುಗಳನ್ನು ಗುರಿಯಾಗಿಸಬಹುದು ಎಂದು ತಿಳಿಸಲಾಗಿದೆ. ➡ಪುಟ ೪

ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ 28 ಭಾರತೀಯ ಹಡಗುಗಳು

ಭಾರತದ ನೌಕಾ ಸಾಗಣೆ ಸಚಿವಾಲಯದ ಪ್ರಕಾರ, ಪರ್ಷಿಯನ್ ಗಲ್ಫ್ ಪ್ರದೇಶದಲ್ಲಿ ಈಗ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಕಾರ್ಯನಿರ್ವಹಿಸುತ್ತಿವೆ. ಹಾರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ 24 ಹಡಗುಗಳು, 677 ಭಾರತೀಯ ನೌಕರರು ಮತ್ತು ಜಲಸಂಧಿಯ ಪೂರ್ವ ಭಾಗದಲ್ಲಿ 4 ಹಡಗುಗಳು, 101 ಭಾರತೀಯ ನೌಕರರು ಇದ್ದಾರೆ. ಅಧಿಕಾರಿಗಳು ಪರಿಸ್ಥಿತಿಯನ್ನು ಸಮೀಪದಿಂದಲೇ ಗಮನಿಸುತ್ತಿದ್ದಾರೆ ಮತ್ತು ಭಾರತೀಯ ಹಡಗುಗಳು ಹಾಗೂ ನೌಕರರ ಸುರಕ್ಷತೆಗಾಗಿ ನಿರಂತರವಾಗಿ ಸಂಪರ್ಕದಲ್ಲಿದ್ದಾರೆ.



ಯುದ್ಧ ಕೊನೆಗೊಳಿಸಲು ಷರತ್ತು ವಿಧಿಸಿದ ಇರಾನ್

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷವು ಭಾರೀ ತಿರುವು ಪಡೆದುಕೊಂಡಿದ್ದು, ಈ ಯುದ್ಧವನ್ನು ಕೊನೆಗೊಳಿಸಲು ಅಮೆರಿಕ ಮತ್ತು ಇಸ್ರೇಲ್ ಮುಂದೆ ಇರಾನ್ ಮೂರು ಷರತ್ತುಗಳನ್ನು ಮಂಡಿಸಿದೆ. ಒಂದು ಯುದ್ಧಕ್ಕೆ ಸಂಬಂಧಿಸಿದ ಯಾವುದೇ ನಿರ್ಣಯವು ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಗುರುತಿಸಬೇಕು, ಎರಡು ದೇಶವು ಭವಿಷ್ಯದ ದಾಳಿಗಳನ್ನು ಎದುರಿಸುವುದಿಲ್ಲ ಎಂದು ಖಾತರಿಪಡಿಸಬೇಕು, ಮೂರು ಯುದ್ಧದ ಸಮಯದಲ್ಲಿ ಉಂಟಾದ ಹಾನಿಗಾಗಿ ಇರಾನ್‌ಗೆ ಪರಿಹಾರ ನೀಡಬೇಕು ಎಂದು ಇರಾನ್ ಅಧ್ಯಕ್ಷ ಮಸೌದ್ ಪೆಜಾಶ್ಕಿಯಾನ್ ಹೇಳಿದ್ದಾರೆ.

ಇಂಧನ ಕೊರತೆ ವದಂತಿ

ಹೊಸದಿಲ್ಲಿ: ಪಶ್ಚಿಮ ಏಷ್ಯಾ ಸಂಕಷ್ಟದ ಹಿನ್ನೆಲೆ ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್‌ಪಿಜಿ ಕೊರತೆ ಉಂಟಾಗಿದೆ ಎಂಬ ವದಂತಿಗಳ ಹಿನ್ನೆಲೆ ಜನರು ಪೆಟ್ರೋಲ್ ಬಂಕ್‌ಗಳು ಮತ್ತು ಗ್ಯಾಸ್ ಏಜೆನ್ಸಿಗಳ ಮುಂದೆ ನಿಂತಿರುವ ದೃಶ್ಯಗಳು ಗುರುವಾರವೂ ಸಾಮಾನ್ಯವಾಗಿತ್ತು. ಆದರೆ, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಸ್ಪಷ್ಟಪಡಿಸಿದ್ದು, ದೇಶದಲ್ಲಿ ಇಂಧನ ಕೊರತೆ ಇಲ್ಲ ಎಂದು ಹಾಗೂ ವದಂತಿಗಳಿಗೆ ಅವಕಾಶ ಕೊಡಬಾರದು ಎಂದು ಹೇಳಿದೆ. ಆದಾಗ್ಯೂ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಕೊರತೆಯಿಂದಾಗಿ ಹಲವೆಡೆ ಹೋಟೆಲ್‌ಗಳು ತಮ್ಮ ಕಾರ್ಯಾಚರಣೆಯನ್ನು ಕಡಿಮೆ ಮಾಡಿಕೊಳ್ಳ ಬೇಕಾದ ಪರಿಸ್ಥಿತಿ ಎದುರಾಗಿದೆ. ಚೆನ್ನೈ ಸೇರಿದಂತೆ ಕೆಲವು ನಗರಗಳಲ್ಲಿ ಹೋಟೆಲ್‌ಗಳು ದೋಸೆ, ಫ್ರೈಡ್ ರೈಸ್ ಮುಂತಾದ ಹೆಚ್ಚಿನ ಇಂಧನ ಬೇಕಾಗುವ ಆಹಾರಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದ್ದಾಗಿ ವರದಿಯಾಗಿದೆ. ಗ್ಯಾಸ್ ಬುಕ್ಕಿಂಗ್‌ಗಾಗಿ ಜನರು ಹೆಚ್ಚಾಗಿ ಮನವಿ ಸಲ್ಲಿಸುತ್ತಿರುವುದರಿಂದ ತೈಲ ಕಂಪನಿಗಳ ಆನ್‌ಲೈನ್ ವ್ಯವಸ್ಥೆಯೂ ಒತ್ತಡಕ್ಕೆ ಒಳಗಾಗಿದೆ. ಆದರೆ, ಎರಡ್ಮೂರು ದಿನಗಳಲ್ಲಿ ಸಾಮಾನ್ಯ ಸ್ಥಿತಿಗೆ ಮರಳಲಿದೆ ಎಂದು ಹೇಳಲಾಗಿದೆ.

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ, ತಿಥಿ:ದಶಮಿ, ನಕ್ಷತ್ರ: ಪೂರ್ವಾಷಾಢ

ದಿನದ ಮಾತು

ಬುದ್ಧಿವಂತನಾದವನು ತಾನು ಅಜರಾಮರನೆಂದೇ ತಿಳಿದುಕೊಂಡು ವಿದ್ಯೆ ಮತ್ತು ಸಂಪತ್ತನ್ನು ಗಳಿಸುತ್ತಿರಬೇಕು.

▲ಸುಭಾಷಿತ

ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

ಕಿರುಸುದ್ದಿ

ನಿಯಮಾನುಸಾರ ಲೋಕ ಸಭೆ ಕಾರ್ಯನಿರ್ವಹಣೆ

ಹೊಸದಿಲ್ಲಿ: ಲೋಕಸಭೆಯ ಸಭಾಪತಿಪೀಠ ಯಾರೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ. ಇದು ಸದನದ ಘನತೆಯ ದ್ಯೋತಕವಾಗಿದೆ. ಸದನವು ನಿಯಮಗಳಿಗೆ ಅನುಸಾರ ಕಾರ್ಯ ನಿರ್ವಹಿಸುತ್ತದೆ. ಯಾರೇ ಸದಸ್ಯರಿಗೆ ತಮಗೆ ಬೇಕೆನಿಸಿದ ಸಮಯದಲ್ಲಿ ತಮಗೆ ಬೇಕಾದ ವಿಚಾರದಲ್ಲಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಹೇಳಿದ್ದಾರೆ.

• ಪುಟ ೨

ಗೃಹ ಬಳಕೆ ಸಿಲಿಂಡರ್ ಅಭಾವವಿಲ್ಲ: ಮುನಿಯಪ್ಪ

ವಿಧಾನಪರಿಷತ್: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಪರಿ ಸ್ಥಿತಿಯಿಂದಾಗಿ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಅಡುಗೆ ಅನಿಲ ಅಭಾವ ಉಂಟಾ ಗಿದೆ. ಆದರೆ, ಗೃಹ ಬಳಕೆ ಸಿಲಿಂಡರ್‌ಗಳಿಗೆ ರಾಜ್ಯದಲ್ಲಿ ಕೊರತೆ ಯಿಲ್ಲ. 10– 12 ದಿನ ಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳೂ ಪೂರೈಕೆಯಾಗಲಿವೆ. ರಾಜ್ಯದ ಜನತೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಸಬರಾಜು ಇಲಾಖೆ ಸಚಿವ ಕೆ.ಎಚ್. ಮುನಿಯಪ್ಪ ಅವರು ಹೇಳಿದರು.

• ಪುಟ ೫

ಬಿಪಿಎಲ್: ವಾರ್ಷಿಕ ಆದಾಯ ಮಿತಿ 3 ಲಕ್ಷ ರೂ.ಗೆ ಹೆಚ್ಚಳ?

ವಿಧಾನಸಭೆ: ರಾಜ್ಯದಲ್ಲಿ ಆದ್ಯತಾ ಕುಟುಂಬಗಳಿಗೆ (ಪಿಎಚ್‌ಎಚ್) ನೀಡಲಾಗುವ ಪಡಿತರ ಚೀಟಿಗಳ ವಾರ್ಷಿಕ ಆದಾಯ ಮಿತಿಯನ್ನು ಪ್ರಸ್ತುತ ಇರುವ 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

• ಪುಟ ೫

ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್

• ಪುಟ ೨

ಅನಿಲ್ ಅಂಬಾನಿ ಒಡೆತನದ 581 ಕೋಟಿ ರೂ. ಆಸ್ತಿ ಜಪ್ತಿ

• ಪುಟ ೨

16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ

• ಪುಟ ೨

ಮೇ ವೇಳೆಗೆ ಎಲ್ಲಾ ಕ್ರಸ್ಟ್‌ಗೇಟ್ ಬದಲಾವಣೆ ಕಾರ್ಯ ಪೂರ್ಣ

ತುಂಗಭದ್ರಾ ಡ್ಯಾಂಗೆ ಹೊಸ ಗೇಟ್

ವಿಧಾನ ಪರಿಷತ್: ತುಂಗಭದ್ರಾ ಅಣೆಕಟ್ಟೆಯ ಎಲ್ಲ ಕ್ರಸ್ಟ್‌ಗೇಟ್‌ಗಳ ಬದಲಾವಣೆ ಕಾರ್ಯವನ್ನು ರಾಜ್ಯ ಸರ್ಕಾರ ಆದ್ಯತೆ ಮೇರೆಗೆ ಕೈಗೆತ್ತಿಕೊಂಡಿದ್ದು, ಬರುವ ಮೇ ವೇಳೆಗೆ ಪೂರ್ಣಗೊಳಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.



ಮೇಲ್ಮನೆಯಲ್ಲಿ ಶೂನ್ಯ ವೇಳೆಯಲ್ಲಿ ಜೆಡಿಎಸ್‌ನ ಟಿ.ಎ.ಶರವಣ, ತುಂಗಭದ್ರಾ ಅಣೆಕಟ್ಟು ಕ್ರಸ್ಟ್ ಗೇಟ್ ಅಳವಡಿಕೆ ವಿಚಾರ ಪ್ರಸ್ತಾಪಿಸಿದರು. ತುಂಗಭದ್ರಾ ಅಣೆಕಟ್ಟೆಯ 33 ಗೇಟ್‌ಗಳ ದುರಸ್ತಿ ಕಾರ್ಯವನ್ನು ಹಂತ-ಹಂತವಾಗಿ ಕೈಗೊಳ್ಳಲು ಬೇಡಿಕೊಂಡರೂ ಸರ್ಕಾರ ಕೇಳದೇ ಎಲ್ಲ ಗೇಟ್‌ಗಳನ್ನು ಕಿತ್ತುಹಾಕಿದೆ. ಈವರೆಗೆ 14 ಗೇಟ್‌ಗಳ ಅಳವಡಿಕೆ ಕಾರ್ಯಮುಗಿದಿದೆ. ಇನ್ನೂ ಕ್ರಸ್ಟ್ ಗೇಟ್‌ಗಳ ತೆರವು ಕಾರ್ಯವೂ ಬಾಕಿ ಇದೆ. ಎಲ್ಲ ಗೇಟ್ ಅಳವಡಿಕೆಗೆ ಸುಮಾರು 133 ಮಾನವ ದಿನಗಳ ಬೇಕು ಎಂದು ಸಮಸ್ಯೆ ಬಿಚ್ಚಿಟ್ಟರು. ➡ಪುಟ ೪

14 ಗೇಟ್ ಅಳವಡಿಕೆ ಕಾರ್ಯ ಪೂರ್ಣ

ಈಗಾಗಲೇ 25 ಗೇಟ್‌ಗಳ ಫ್ಯಾಬ್ರಿಕೇಶನ್ ಕೆಲಸ ಮುಗಿದಿದ್ದು, 2 ಗೇಟ್‌ಗಳ ಕೆಲಸ ನಡೆಯುತ್ತಿದೆ. 26 ಗೇಟ್‌ಗಳನ್ನು ತೆಗೆಯಲಾಗಿದ್ದು, 2 ಗೇಟ್‌ಗಳ ತೆರವುಕಾರ್ಯ ನಡೆಯುತ್ತಿದೆ. ಇದರಲ್ಲಿ 14 ಗೇಟ್‌ಗಳ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು, 3 ಗೇಟ್‌ಗಳ ಕಾರ್ಯ ಪ್ರಕ್ರಿಯೆಯಲ್ಲಿದೆ. ಮೇ ತಿಂಗಳ ಒಳಗಾಗಿ ಎಲ್ಲಾ ಗೇಟ್ ಬದಲಾವಣೆ ಮುಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಹಾಯಕ ಸಚಿವ ಜಿತಿನ್ ಹೇಳಿಕೆ

ಕಾಳುಮೆಣಸು ಉತ್ಪಾದನೆ ಹೆಚ್ಚಳ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ(2025-26ನೇ) ಸಾಲಿನಲ್ಲಿ ಕಾಳುಮೆಣಸು ಉತ್ಪಾದನೆ ಶೇ.16ರಷ್ಟು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ರಾಜ್ಯ ಸಚಿವ ಜಿತಿನ್ ಪ್ರಸಾದ್ ಹೇಳಿದ್ದಾರೆ.



ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆಯ ಸ್ಥಿತಿ, ರಫ್ತಿನ ಪರಿಣಾಮ, ರೈತರಿಗೆ ಬೆಂಬಲ ಮತ್ತು ಕನಿಷ್ಠ ಆಮದು ಬೆಲೆಯ ಪರಿಷ್ಕರಣೆಯ ಬಗ್ಗೆ ಕೊಡಗು-ಮೈಸೂರು ಸಂಸದ ಯದುವೀರ್ ಒಡೆಯರ್ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವ ಜಿತಿನ್ ಪ್ರಸಾದ್ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ 2025-26ರಲ್ಲಿ ಕೊಡಗಿನಲ್ಲಿ ಕಾಳುಮೆಣಸು ಉತ್ಪಾದನೆಯು ಸುಮಾರು ಶೇ.16 ರಷ್ಟು ಹೆಚ್ಚಾಗಬಹುದು ಎಂದು ಮಾಹಿತಿ ನೀಡಿದ್ದಾರೆ. ➡ಪುಟ ೪



ಬಡ್ಡಿ ಮನ್ನಾಕ್ಕೆ ಯದುವೀರ್ ಮನವಿ

ಮತ್ತೊಂದೆಡೆ ಇತ್ತೀಚೆಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿರುವ ಯದುವೀರ್ ಅವರು, ಕೊಡಗು ಕಾಫಿ ಬೆಳೆಗಾರರ ಸಹಕಾರ ಸಂಘದಿಂದ ಭಾರತೀಯ ಕಾಫಿ ಮಂಡಳಿಗೆ ಪಾವತಿಸಬೇಕಿರುವ ಬಡ್ಡಿಯನ್ನು ಮನ್ನಾ ಮಾಡುವಂತೆ ಕೋರಿ ಮನವಿ ಸಲ್ಲಿಸಿದ್ದಾರೆ. ➡ಪುಟ ೪

ಯುಕೆಪಿ-3ನೇ ಹಂತದ ಆಲಮಟ್ಟಿ ಯೋಜನೆ

ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್



20 ಗ್ರಾಮಗಳಿಗೆ ಪುನರ್ವಸತಿ ಬದಲು ಪರಿಹಾರ ನೀಡಲು ಚಿಂತನೆ

ವಿಧಾನ ಪರಿಷತ್: ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಭೂಮಿ ಖರೀದಿಸುವಾಗ ಅನಗತ್ಯ ವಿವಾದ ಬರಬಾರದು ಎಂಬ ದೂರದೃಷ್ಟಿಯಿಂದ ಯುಕೆಪಿ-3ನೇ ಹಂತದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮ ಗಳಿಗೆ ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಲ್ಪಿಸುವ ಬದಲಾಗಿ ಪರಿಹಾರ ಪ್ಯಾಕೇಜ್ ನೀಡಲು ಚಿಂತಿಸಲಾಗಿದೆ. ಈ ಸಂಬಂಧ ಆಯಾ ಶಾಸಕರು, ಜನಪ್ರತಿನಿಧಿಗಳೊಂದಿಗೆ ಸಮಾಲೋಚಿಸಿ, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು. ➡ಪುಟ ೪

ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಕೆಎಎಸ್ ಪರೀಕ್ಷೆಯಲ್ಲಿ ಅಕ್ರಮ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ, ಆಯ್ಕೆಯಾಗಿದ್ದ ಅಭ್ಯರ್ಥಿಗಳಿಗೆ ನಿಗದಿಯಾಗಿದ್ದ ಸಂದರ್ಶನ ದಿನಾಂಕವನ್ನು ಕೆಪಿಎಸ್‌ಸಿ ಹಿಂಪಡೆದಿದೆ. 2024ರಲ್ಲಿ 384 ಹುದ್ದೆಗಳಿಗೆ ಪರೀಕ್ಷೆ ನಡೆಸಿದ್ದ ಕೆಪಿಎಸ್‌ಸಿ ಕಳೆದ ವಾರವಷ್ಟೇ ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸಂದರ್ಶನಕ್ಕೆ 1:3 ಅನುಪಾತದಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪ್ರಕಟಿಸಿತ್ತು. ➡ಪುಟ ೪



ಕಚ್ಚಾತೈಲ ಪೂರೈಕೆ ವ್ಯವಸ್ಥೆ ಸುರಕ್ಷಿತ

ಚರಿತ್ರೆಯಲ್ಲಿ ಇದೇ ಮೊದಲು

ಹಾರ್ಮುಜ್ ಜಲಸಂಧಿ ವಾಣಿಜ್ಯಿಕ ನೌಕಾಯಾನಕ್ಕೆ ನಿರ್ಬಂಧಿಸಲ್ಪಟ್ಟದ್ದು ದಾಖಲಿತ ಚರಿತ್ರೆಯಲ್ಲಿ ಇದೇ ಮೊದಲು. ಆಧುನಿಕ ಇಂಧನ ಇತಿಹಾಸದಲ್ಲೇ ಜಗತ್ತು ಈ ಪರಿ ವಿದ್ಯಮಾನ ಎದುರಿಸಿದ್ದಿಲ್ಲ ಎಂದು ಸಚಿವ ಪುರಿ ಹೇಳಿದರು.

ರಷ್ಯಾ, ನಾರ್ವೆ, ಸೇರಿ ಇತರ ದೇಶಗಳಿಂದ ಎಲ್‌ಪಿಜಿ ಆಮದು

ಹಾರ್ಮುಜ್ ಬದಲು ಪರ್ಯಾಯ ವ್ಯವಸ್ಥೆ

ಹೊಸದಿಲ್ಲಿ: ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನ್ನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ. ಎಲ್ಲಾ ಇಂಧನ ಪೂರೈಕೆ ವ್ಯವಸ್ಥೆಗಳು ಸುರಕ್ಷಿತವಾಗಿವೆ. ಹಾರ್ಮುಜ್ ಜಲಸಂಧಿ ಮೂಲಕ ಸರಬರಾಜಾಗಲಿದ್ದ ಪ್ರಮಾಣವನ್ನು ಮೀರಿದ ಪ್ರಮಾಣದ ಕಚ್ಚಾತೈಲವನ್ನು ಸರಕಾರ ಈಗಾಗಲೆ ತರಿಸಿಕೊಂಡಿದೆ ಎಂದು ತೈಲ ಸಚಿವ ಹರ್ದೀಪ್ ಪುರಿ ಲೋಕಸಭೆಗೆ ಮಾಹಿತಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಇಂಧನ ಸರಬರಾಜು ವ್ಯವಸ್ಥೆ ಅಸ್ತವ್ಯಸ್ತಗೊಂಡು ಇಂದಿಗೆ 13ದಿನಗಳಾಗುತ್ತಿರುವಂತೆ, ಸಚಿವರು ದೇಶದ ಕಚ್ಚಾತೈಲ ಪೂರೈಕೆ ವ್ಯವಸ್ಥೆ ಸುರಕ್ಷಿತವಾಗಿರುವುದನ್ನು ಸದನದಲ್ಲಿ ದೃಢೀಕರಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಲಭ್ಯತೆಯೂ ಸುರಕ್ಷಿತ: ಹಾರ್ಮುಜ್ ತಪ್ಪಿಸಿ ಅನ್ಯ ದಾರಿಯಿಂದ ಸರಬರಾಜಾಗಿರುವ ಒಟ್ಟು ಸರಕುಗಳ ಪ್ರಮಾಣ ಶೇ.70ನ್ನು ಮೀರಿದೆ. ದೇಶದ ರಿಫೈನರಿಗಳು ಅತ್ಯಧಿಕ ಸಾಮರ್ಥ್ಯ ಬಳಕೆ ನೆಲೆಯಲ್ಲಿ ಕಾರ್ಯತತ್ಪರವಾಗಿವೆ ಮತ್ತು ಪೆಟ್ರೋಲ್, ಡೀಸೆಲ್‌ಗಳ ಲಭ್ಯತೆ ಕೂಡ ತುಂಬು ಸುರಕ್ಷಿತವಾಗಿದೆ ಎಂದು ಹೇಳಿದ್ದಾರೆ.

ರಷ್ಯಾ, ನಾರ್ವೆ, ಅಮೆರಿಕಗಳಿಂದ ಎಲ್‌ಪಿಜಿ ಆಮದು: ಭಾರತವೀಗ ಅಮೆರಿಕ, ರಷ್ಯಾ, ನಾರ್ವೆ, ಕೆನಡಾ, ಅಲ್ಜೀರಿಯಾಗಳಿಂದ ಎಲ್‌ಪಿಜಿ ಆಮದು ಮಾಡಿಕೊಳ್ಳತೊಡಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಪಿಎಂ ನರೇಂದ್ರ ಮೋದಿ ರಾಜತಾಂತ್ರಿಕ ದೂರದರ್ಶಿತ್ವ

ಸಂಘರ್ಷಕ್ಕೆ ಮುನ್ನ ಭಾರತದ ಶೇ.25ರಷ್ಟು ಕಚ್ಚಾತೈಲ ಸರಕು ದೇಶಕ್ಕೆ ಸರಬರಾಜಾಗುತ್ತಿದ್ದುದು ಹಾರ್ಮುಜ್ ಜಲಸಂಧಿ ಮೂಲಕವಾಗಿದೆ. ಈ ಜಲಸಂಧಿ ಮುಚ್ಚಿದ ನೆಲೆಯಲ್ಲಿ, ಕೇಂದ್ರ ಸರಕಾರ ಪೂರೈಕೆ ಹಾದಿಯನ್ನೇ ಬದಲಿಸುವ ಕ್ರಾಂತಿಕಾರಿ ನಿಲುವು ತಳೆದಿದೆ ಮತ್ತು ಹೊರ್ಮುಜ್ ಯೇತರ ಪರ್ಯಾಯ ಮಾರ್ಗಗಳಿಂದ ಇದುವರೆಗೆ ಶೇ.70 ಆಮದುಗಳನ್ನು ನಿರ್ವಹಿಸಲಾಗಿದೆ. ಭಾರತವು ಮಿಂಚಿನ ಗತಿಯಲ್ಲಿ ಕಚ್ಚಾತೈಲ ಖರೀದಿ–ಪೂರೈಕೆ ಹಾದಿ ಬದಲಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರ ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಪ್ರಧಾನ ಕಾರಣವೆಂದು ಸಚಿವ ಪುರಿ ಪ್ರಶಂಸಿಸಿದ್ದಾರೆ.

ಅಸಾಧಾರಣ ರಾಜತಾಂತ್ರಿಕ ದೂರದರ್ಶಿತ್ವ ಮೆರೆದ ಪ್ರಧಾನಿ ಮೋದಿ ಅವರಿಗೆ ಕೃತಜ್ಞತೆಗಳು. ಪ್ರಧಾನಿ ಮೋದಿ ಅವರ ದೂರದರ್ಶಿತ್ವದಿಂದಾಗಿ, ಹೊರ್ಮುಜ್ ಜಲಸಂಧಿ ಮುಖೇನ ತರಿಸಬಹುದಿದ್ದ ಪ್ರಮಾಣವನ್ನು ಬಹುಪಟ್ಟು ಮೀರಿದ ಪ್ರಮಾಣದಲ್ಲಿ ಕಚ್ಚಾತೈಲವನ್ನು ಭಾರತ ಅನ್ಯ ಮಾರ್ಗಗಳಿಂದ ತರಿಸಿಕೊಳ್ಳಲು ಸಾಧ್ಯವಾಗಿದೆ ಎಂದು ಸಚಿವ ಪುರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಗತ್ತಿನ ಅಂದಾಜು ಶೇ.20ರಷ್ಟು ತೈಲ ಮತ್ತು ಶೇ.20ರಷ್ಟು ನೈಸರ್ಗಿಕ ಅನಿಲ ನಿತ್ಯ ಸರಬರಾಜಾಗುತ್ತಿದ್ದುದು ಇರಾನ್, ಅರೇಬಿಯನ್ ದ್ವೀಪ ನಡುವಣ ಇಕ್ಕಟ್ಟಾದ ಜಲಮಾರ್ಗ ಹಾರ್ಮುಜ್ ಜಲಸಂಧಿ ಮುಖೇನವಾಗಿ. ಇರಾನ್, ಇಸ್ರೇಲ್, ಅಮೆರಿಕಗಳ ಸಂಘರ್ಷದಿಂದಾಗಿ ಈ ಜಲಸಂಧಿಯೀಗ ವಾಣಿಜ್ಯಿಕ ನೌಕಾಯಾನಕ್ಕೆ ಮುಚ್ಚುಗಡೆಯಾಗಿ ಬರೋಬ್ಬರಿ 13ದಿನಗಳಾದುವು. ಜಾಗತಿಕವಾಗಿ ಕಚ್ಚಾತೈಲ ಉತ್ಪಾದನೆಯಲ್ಲಿ ಮಹತ್ವದ ಪಾಲು ಹೊಂದಿರುವ ಸೌದಿ ಅರೇಬಿಯಾ, ಇರಾಕ್, ಯುಎಇ, ಕುವೈತ್ ಹಾಗೂ ಸ್ವತ: ಇರಾನ್‌ಗೂ ಹಾರ್ಮುಜ್ ಜಲಸಂಧಿ ಪ್ರಮುಖ ರಫ್ತು ಮಾರ್ಗವಾಗಿದೆ. ಹಾರ್ಮುಜ್ ಮುಚ್ಚುಗಡೆಯಿಂದಾಗಿ ಏಷ್ಯಾದ್ಯಂತ ತೈಲ ಆಮದನ್ನು ನೆಚ್ಚಿಕೊಂಡಿರುವ ರಾಷ್ಟ್ರಗಳು ತುಂಬು ಸಂಕಷ್ಟಕ್ಕೆ ಸಿಲುಕಿವೆ.



ತೈಲ ಟ್ಯಾಂಕರ್‌ಗೆ ದಾಳಿ ಭಾರತೀಯ ಸಿಬ್ಬಂದಿ ಸಾವು

ಹೊಸದಿಲ್ಲಿ: ಇರಾಕ್‌ನ ಬಸ್ರಾ ಬಳಿ ಅಮೆರಿಕ ಒಡೆತನ ಹಡಗಿನ ಮೇಲೆ ಇರಾನ್ ನೀರೊಳಗಿನ ಡ್ರೋನ್ ದಾಳಿಯಲ್ಲಿ ಭಾರತೀಯ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ. ಇರಾಕ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಈ ಸಾವನ್ನು ದೃಢಪಡಿಸಿದ್ದು, ಹಡಗಿನಲ್ಲಿದ್ದ ಇತರ 15 ಭಾರತೀಯ ಸಿಬ್ಬಂದಿಯನ್ನು ಸ್ಥಳಾಂತರಿಸಲಾಗಿದೆ ಎಂದು ಹೇಳಿದೆ. ಪರ್ಷಿಯನ್ ಕೊಲ್ಲಿಯಲ್ಲಿನ ವಾಣಿಜ್ಯ ಹಡಗುಗಳನ್ನು ಕಳೆದ ಕೆಲವು ದಿನಗಳಿಂದ ಇರಾನಿನ ಸೇನೆಯು ಗುರಿಯಾಗಿಸಿಕೊಂಡಿದೆ. ಇರಾಕ್‌ನ ಪ್ರಾದೇಶಿಕ ಜಲಪ್ರದೇಶದಲ್ಲಿ ದಾಳಿಗೆ ಒಳಗಾದ ನಂತರ ಪರ್ಷಿಯನ್ ಕೊಲ್ಲಿಯಲ್ಲಿ ಮತ್ತೊಂದು ತೈಲ ಟ್ಯಾಂಕರ್‌ಗೆ ಬೆಂಕಿ ಹೊತ್ತಿಕೊಂಡಿದೆ. ಇರಾನ್ ದಾಳಿ ಹೊಣೆ ಹೊತ್ತುಕೊಂಡಿದ್ದು, ನೀರೊಳಗಿನ ಡ್ರೋನ್ ದಾಳಿಯು ಪರ್ಷಿಯನ್ ಕೊಲ್ಲಿಯಲ್ಲಿ ಎರಡು ತೈಲ ಟ್ಯಾಂಕರ್‌ಗಳನ್ನು ಸ್ಫೋಟಿಸಿದೆ ಎಂದು ಇರಾನಿನ ರಾಜ್ಯ ಪ್ರಸಾರಕ ಐಆರ್‌ಐಬಿ ತಿಳಿಸಿದೆ. ನೀರೊಳಗಿನ ಡ್ರೋನ್ ದಾಳಿಗಳು ಮಾನವರಹಿತ ಅಂಡರ್‌ವಾಟರ್ ವಾಹನಗಳ (ಯುಯುವಿಗಳು) ಬಳಕೆ ಒಳಗೊಂಡಿರುತ್ತವೆ. ಈ ಡ್ರೋನ್‌ಗಳು ಮಾನವ ನಿರ್ವಾಹಕರಿಲ್ಲದೆ ಕಾರ್ಯನಿರ್ವಹಿಸುತ್ತವೆ.

ಇಬ್ಬರು ಭಾರತೀಯರ ಸಾವು ಓರ್ವ ನಾಪತ್ತೆ

ಯುಎಇಯಿಂದ ಭಾರತಕ್ಕೆ ಆಗಮಿಸುತ್ತಿದ್ದ ಥಾಯ್–ಧ್ವಜದ ಕಾರ್ಗೋ ಹಡುಗಿನ ಮೇಲೆ ಹಾರ್ಮುಜ್ ಜಲಸಂಧಿ ಬಳಿ ಇರಾನ್‌ನ ದಾಳಿಯಲ್ಲಿ ಇಬ್ಬರು ಭಾರತೀಯರು ಮೃತಪಟ್ಟಿದ್ದು, ಮತ್ತೋರ್ವ ಕಾಣೆಯಾಗಿದ್ದಾರೆ. ಅದೇರೀತಿ ಹಡಗಿನಲ್ಲಿದ್ದ ಇಪ್ಪತ್ತು ನಾವಿಕರನ್ನು ರಕ್ಷಿಸಲಾಗಿದೆ.ಇರಾನ್ ಈ ದಾಳಿಯ ಹೊಣೆ ಹೊತ್ತುಕೊಂಡಿದೆ.

700ಕ್ಕೂ ಹೆಚ್ಚು ಭಾರತೀಯರ ಸ್ಥಳಾಂತರ

ಕತಾರ್‌ನಲ್ಲಿ ಸಿಲುಕಿರುವ 700ಕ್ಕೂ ಹೆಚ್ಚು ಭಾರತೀಯರನ್ನು ದಿಲ್ಲಿ ಮತ್ತು ಇತರ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಭಾರತೀಯ ನಿಯೋಗ ಮಾಹಿತಿ ನೀಡಿದೆ. ತಮ್ಮ ಸಮಸ್ಯೆ ಗೊಂದಲಗಳ ಬಗ್ಗೆ ಪ್ರಶ್ನಿಸಲು, ಭಾರತೀಯ ಸಮುದಾಯಕ್ಕೆ ಸಹಾಯವಾಣಿಗಳು ಲಭ್ಯವಿರಲಿದೆ ಎಂದು ಆಯೋಗ ಹೇಳಿದೆ. ಭಾರತೀಯ ಪ್ರಜೆಗಳಿಗೆ ಪಾಸ್‌ಪೋರ್ಟ್ ತ್ವರಿತ ವಿತರಣೆಗೆ ವಿಶೇಷ ಗಮನ ನೀಡುತ್ತಿದೆ ಎಂದು ಹೇಳಿದೆ. ಪ್ರಸ್ತುತ ಪರಿಸ್ಥಿತಿಯಿಂದಾಗಿ, ನಾವು ವಾರದ ಎಲ್ಲಾ ದಿನಗಳಲ್ಲೂ ಪಾಸ್‌ಪೋರ್ಟ್ ಅರ್ಜಿಗಳನ್ನು ತೆಗೆದುಕೊಳ್ಳಲು ಮುಕ್ತರಾಗಿದ್ದೇವೆ. 1–2 ದಿನಗಳಲ್ಲಿ ತತ್ಕಾಲ್ ಪಾಸ್‌ಪೋರ್ಟ್ ವಿತರಿಸಲಾಗುತ್ತಿದೆ ಎಂದು ಹೇಳಿದೆ.

ಸರ್ವೋಚ್ಚ ನಾಯಕನ ಮೊದಲ ಸಂದೇಶ

ಇರಾನ್‌ನ ಸರ್ವೋಚ್ಚ ನಾಯಕನಾಗಿ ಅಧಿಕಾರ ವಹಿಸಿಕೊಂಡ ನಂತರ ತನ್ನ ಮೊದಲ ಸಾರ್ವಜನಿಕ ಸಂದೇಶದಲ್ಲಿ, ಮೊಜ್ತಾಬಾ ಖಮೇನಿ ಸರಣಿ ದಾಳಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ದಾಳಿಗಳಲ್ಲಿ ಮೃತಪಟ್ಟ ಇರಾನಿಯನ್ನರ ಸಾವಿಗೆ ಪ್ರತೀಕಾರ ತೀರಿಸಿಕೊಳ್ಳಲಾಗುತ್ತದೆ. ಇರಾನ್ ತನ್ನ ಮೃತರ ರಕ್ತದ ಸೇಡು ತೀರಿಸಿಕೊಳ್ಳುವುದರಿಂದ ಹಿಂದೆ ಸರಿಯುವುದಿಲ್ಲ. ಇದು ದೇಶಕ್ಕೆ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ಖಮೇನಿ ಹೇಳಿದ್ದಾರೆ. ಖಮೇನಿ ತಮ್ಮ ಹೇಳಿಕೆಯಲ್ಲಿ, ಹಾರ್ಮುಜ್ ಜಲಸಂಧಿಯನ್ನು ಮುಚ್ಚುವ ಒತ್ತಡವನ್ನು ಸಹ ಉಲ್ಲೇಖಿಸಿದ್ದಾರೆ.

ಅಡುಗೆ ಅನಿಲ: ಕಾಳಸಂತೆ ವಿರುದ್ಧ ಕಠಿಣ ಕ್ರಮಕ್ಕೆ ಸೂಚನೆ

ಅನಿಲ ಸಿಲಿಂಡರ್ ಕೊರತೆಯ ಆತಂಕದ ಮಧ್ಯೆ, ಅಡುಗೆ ಅನಿಲ ಸಿಲಿಂಡರ್‌ಗಳ ಸಂಗ್ರಹಣೆ ಅಥವಾ ಕಾಳಸಂತೆಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಾಗ ಎಲ್‌ಪಿಜಿ ಸ್ಥಾವರಗಳು, ವಿತರಣಾ ಜಾಲಗಳು ಮತ್ತು ಸಾರಿಗೆ ವ್ಯವಸ್ಥೆಗಳಲ್ಲಿ ಭದ್ರತೆ ಬಿಗಿಗೊಳಿಸುವಂತೆ ಕೇಂದ್ರ ಗೃಹ ಸಚಿವಾಲಯವು (ಎಂಎಚ್‌ಎ) ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ. ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಅವರು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಮತ್ತು ಡಿಜಿಪಿಗಳೊಂದಿಗೆ ಎರಡು ಗಂಟೆಗಳ ಕಾಲ ಸಭೆ ನಡೆಸಿ ಸನ್ನದ್ಧತೆಯನ್ನು ಪರಿಶೀಲಿಸಿದರು. ನಿರಂತರ ದೇಶೀಯ ಎಲ್‌ಪಿಜಿ ಪೂರೈಕೆಯನ್ನು ಖಚಿತಪಡಿಸಿಕೊಂಡರು. ಸಭೆಯಲ್ಲಿ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮಾಹಿತಿ ಮತ್ತು ಪ್ರಸಾರ ಮತ್ತು ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿಗಳು ಸೇರಿದಂತೆ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಓಮಾನ್‌ನಿಂದ ಅನಿಲ ಖರೀದಿಸಿದ ಗೈಲ್

ದೇಶದಲ್ಲಿ ಹೆಚ್ಚುತ್ತಿರುವ ನೈಸರ್ಗಿಕ ಅನಿಲದ ಬೇಡಿಕೆಯನ್ನು ತಲುಪಲು ಮತ್ತು ಪೂರೈಕೆಯನ್ನು ಸುಸ್ಥಿತಿಯಲ್ಲಿಡಲು ಸರ್ಕಾರಿ ಸ್ವಾಮ್ಯದ ಗೈಲ್ (ಜಿಎಐಎಲ್) ಸಂಸ್ಥೆ, ಓಮಾನ್‌ನಿಂದ ಲಿಕ್ವಿಫೈಡ್ ನ್ಯಾಚುರಲ್ ಗ್ಯಾಸ್ (ಎಲ್‌ಎನ್‌ಜಿ) ಖರೀದಿಸಿದೆ. ಹಾರ್ಮುಜ್ ಜಲಸಂಧಿಯಲ್ಲಿನ ಸಂಘರ್ಷ ಮತ್ತು ಕತಾರ್‌ನಿಂದ



ಪೂರೈಕೆಯಲ್ಲಿ ಆಗಿರುವ ಅಡೆತಡೆಗಳಿಂದಾಗಿ ಸೃಷ್ಟಿಯಾಗಿರುವ ಕೊರತೆ ನೀಗಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಯುರೋಪಿಯನ್ ವ್ಯಾಪಾರಿಯೊಬ್ಬರ ಮೂಲಕ ಪ್ರತಿ ಮಿಲಿಯನ್ ಬ್ರಿಟಿಷ್ ಥರ್ಮಲ್ ಯೂನಿಟ್‌ಗೆ (ಎಂಎಂಬಿಟಿಯು) ಸುಮಾರು 17–20 ರಷ್ಟು ಸ್ಥಿರ ಬೆಲೆಯಲ್ಲಿ ಈ ಅನಿಲವನ್ನು ಖರೀದಿಸಲಾಗಿದೆ. ಓರಿಯನ್ ಹ್ಯೂಗೋ ಎಂಬ ಹಡಗಿನ ಮೂಲಕ ಸಾಗಿಸಲಾಗುತ್ತಿರುವ ಈ ಸರಕು ಮಾರ್ಚ್ 15 ರ ಸುಮಾರಿಗೆ ಭಾರತ ತಲುಪುವ ನಿರೀಕ್ಷೆಯಿದೆ. ಕೊರತೆಯನ್ನು ಸರಿದೂಗಿಸಲು ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಕಾಯ್ದೆಯಡಿ ತುರ್ತು ಅಧಿಕಾರ ಬಳಸಿಕೊಂಡಿದೆ. ಆದ್ಯತೆಯಲ್ಲದ ಕೈಗಾರಿಕೆಗಳಿಗೆ ನೀಡಲಾಗುತ್ತಿದ್ದ ಅನಿಲವನ್ನು ಈಗ ಅಗತ್ಯ ಸೇವೆಗಳಿಗೆ ವರ್ಗಾಯಿಸಲಾಗುತ್ತಿದೆ. ಮನೆಬಳಕೆಯ ಅಡುಗೆ ಅನಿಲ (ಎಲ್‌ಪಿಜಿ), ಸಾರಿಗೆ ಇಂಧನ (ಸಿಎನ್‌ಜಿ) ಮತ್ತು ಆಸ್ಪತ್ರೆಗಳಂತಹ ತುರ್ತು ಸೇವೆಗಳಿಗೆ ಶೇ. 100ರಷ್ಟು ಅನಿಲ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಮುಂದಾಗಿದೆ.

ಯುದ್ಧ ನಿಲ್ಲಿಸಲು ಷರತ್ತು ವಿಧಿಸಿದ ಇರಾನ್

ಅಮೆರಿಕ ಮತ್ತು ಇಸ್ರೇಲ್ ಜತೆಗಿನ ಪ್ರಸ್ತುತ ಯುದ್ಧವನ್ನು ಕೊನೆಗೊಳಿಸಲು ಇರಾನ್ ನಾಲ್ಕು ಪ್ರಮುಖ ಷರತ್ತುಗಳನ್ನು ವಿಧಿಸಿದೆ. ತನ್ನ ಹಕ್ಕುಗಳ ಮಾನ್ಯತೆ, ಯುದ್ಧದ ನಷ್ಟ ಪರಿಹಾರ ಪಾವತಿ ಮತ್ತು ಭವಿಷ್ಯದಲ್ಲಿ ದಾಳಿ ನಡೆಯದಂತೆ ಖಾತರಿ ನೀಡಬೇಕೆಂದು ಇರಾನ್ ಷರತ್ತು ವಿಧಿಸಿದೆ.

ಕದನ ವಿರಾಮದ ಷರತ್ತುಗಳು : ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವ ಪೋಸ್ಟ್‌ನಲ್ಲಿ, ಎಕ್ಸ್ ನಲ್ಲಿ ಈ ಷರತ್ತುಗಳನ್ನು ಹಂಚಿಕೊಂಡಿದ್ದಾರೆ. ಯಾವುದೇ ಶಾಂತಿ ಒಪ್ಪಂದ ಇರಾನ್‌ನ ಕಾನೂನುಬದ್ಧ ಹಕ್ಕುಗಳನ್ನು ಅಂಗೀಕರಿಸಬೇಕು, ಯುದ್ಧದಿಂದ ಉಂಟಾದ ಹಾನಿಗೆ ಪರಿಹಾರ ನೀಡಬೇಕು ಮತ್ತು ಭವಿಷ್ಯದಲ್ಲಿ ಮತ್ತೆ ಆಕ್ರಮಣ ನಡೆಯದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬಲವಾದ ಖಾತರಿ ನೀಡಬೇಕು ಎಂದು ಅವರು ತಿಳಿಸಿದ್ದಾರೆ. ಪ್ರಾದೇಶಿಕ ಶಾಂತಿಗೆ ಇರಾನ್ ಬದ್ಧವಾಗಿದೆ ಎಂದು ಹೇಳಿಕೊಂಡಿದೆ.



ಕಿರುಸುದ್ದಿ

ಫಾರೂಕ್ ಅಬ್ದುಲ್ಲಾ ಹತ್ಯೆಗೆ ಯತ್ನ!

ಶ್ರೀನಗರ: ಜಮ್ಮು–ಕಾಶ್ಮೀರದ ವಿಹಾಹ ಸಮಾರಂಭ ವೊಂದರಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಜಮ್ಮು–ಕಾಶ್ಮೀರ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅದೃಷ್ಟವ ಶಾತ್ ಅಪಾಯದಿಂದ ಪಾರಾಗಿದ್ದಾರೆ. ದೇವರೇ ನನ್ನನ್ನು ಬದುಕಿಸಿದ್ದಾರೆಂದು ಘಟನೆ ಬಳಿಕ ಫಾರೂಕ್ ಅಬ್ದುಲ್ಲಾ ಅವರು ಹೇಳಿದ್ದಾರೆ. ದಾಳಿಗೈದ ಕಮಲ್ ಸಿಂಗ್ ಜಮ್ವಾಲ್ ನಗರದ ಹೊರವಲಯದಲ್ಲಿರುವ ಗ್ರೇಟರ್ ಕೈಲಾಶ್ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಬ್ದುಲ್ಲಾ ಅವರನ್ನು ಗುರಿಯಾಗಿಸಿಕೊಂಡಿದ್ದಾನೆ ಎಂದು ಆರೋಪಿಸಲಾಗಿದೆ.

ಅನಿಲ್ ಅಂಬಾನಿ ಒಡೆತನದ 581 ಕೋಟಿ. ರೂ ಆಸ್ತಿ ಜಪ್ತಿ

ಮುಂಬೈ: ರಿಲಯನ್ಸ್ ಸಮೂಹದ ಅಧ್ಯಕ್ಷ ಅನಿಲ್ ಅಂಬಾನಿಯವರ ಕಂಪನಿಗಳಾದ ಆರ್‌ಎಚ್‌ಎಫ್ ಎಲ್ ಮತ್ತು ಆರ್‌ಸಿಎಫ್‌ಎಲ್‌ನ 581 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ. ಗೋವಾ, ಕೇರಳ, ಕರ್ನಾಟಕ, ಪಂಜಾಬ್, ತಮಿಳುನಾಡು, ಉತ್ತರ ಪ್ರದೇಶ, ಹರಿಯಾಣ, ಜಾರ್ಖಂಡ್, ಮಹಾರಾಷ್ಟ್ರ, ದಿಲ್ಲಿ ಸೇರಿ ಇತರ ಪ್ರದೇಶದಲ್ಲಿರುವ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶ ಹೊರಡಿಸಲಾಗಿದೆ.

ದಶಕಗಳಿಂದ ಉಗ್ರವಾದ ಪೋಷಿಸುತ್ತಿರುವ ಪಾಕ್

ಹೊಸದಿಲ್ಲಿ: ಗಡಿಯಾಚೆಯ ಭಯೋತ್ಪಾದನೆ ವಿಚಾರದಲ್ಲಿ ಪಾಕ್ ಶೂನ್ಯ ವಿಶ್ವಾಸಾರ್ಹತೆ ಹೊಂದಿದೆ ಎಂದು ಭಾರತ ಪಾಕಿಸ್ತಾನವನ್ನು ಕಟುವಾಗಿ ತರಾಟೆಗೆತ್ತಿಕೊಂಡಿದೆ. ಭಾರತ ಭಯೋತ್ಪಾದನೆಯನ್ನು ಪ್ರಾಯೋಜಿಸುತ್ತಿದೆ ಎಂಬ ಪಾಕ್‌ನ ಮಿಥ್ಯಾರೋಪಕ್ಕೆ ಭಾರತ ತಕ್ಕ ತಿರುಗೇಟು ನೀಡಿದೆ. ದಶಕಗಳಿಂದ ಪಾಕಿಸ್ತಾನ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿರುವುದು ಟ್ರ್ಯಾಕ್ ರೆಕಾರ್ಡ್. ವಸ್ತುಸ್ಥಿತಿ ಇದಾಗಿರುವಾಗ ಭಾರತದ ವಿರುದ್ಧ ಆರೋಪ ಮಾಡುವ ಮುಖೇನ ಪಾಕಿಸ್ತಾನ ಯಾರನ್ನೂ ಮೂರ್ಖರಾಗಿಸಲು ಸಾಧ್ಯವಿಲ್ಲ. ಪಾಕ್‌ನ ಆರೋಪಗಳನ್ನು ಭಾರತ ಸಾರಾಸಗಟಾಗಿ ತಿರಸ್ಕರಿಸುತ್ತದೆ ಎಂದು ಭಾರತದ ವಿದೇಶ ವ್ಯವಹಾರಗಳ ಖಾತೆ ಪ್ರತಿಕ್ರಿಯಿಸಿದೆ. ಇಂತಹ ಆಧಾರ ರಹಿತ ಆರೋಪಗಳನ್ನು ನಾವು ತಿರಸ್ಕರಿಸುತ್ತೇವೆ. ತನ್ನದೇ ತಪ್ಪುಗಳಿಗೆ, ಹೊಣೆಗೇಡಿತನಕ್ಕೆ ಭಾರತದ ವಿರುದ್ಧ ಆರೋಪ ಹೊರಿಸುವುದು ಪಾಕಿಸ್ತಾನದ ದ್ವಿತೀಯ ಸ್ವಭಾವವಾಗಿದೆ. ಪಾಕಿಸ್ತಾನ ಏನೇ ಕಥೆ ಹೇಳಿದರೂ, ದಶಕಗಳಿಂದ ಪಾಕಿಸ್ತಾನ ಗಡಿಯಾಚೆಯ ಭಯೋತ್ಪಾದನೆಗೆ ಪ್ರಚೋದನೆ ನೀಡುತ್ತಿರುವ ವಸ್ತುಸ್ಥಿತಿಯನ್ನು ಬದಲಿಸಲಾಗದು ಎಂದು ವಿದೇಶ ವ್ಯವಹಾರಗಳ ಖಾತೆ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ. ತಾನು ನೆರೆರಾಷ್ಟ್ರದೊಂದಿಗೆ ಸಂಘರ್ಷದಲ್ಲಿದ್ದು, ಗಡಿ ವಿಚಾರದಲ್ಲೂ ಸಂಕಷ್ಟಗಳನ್ನು ಎದುರಿಸುತ್ತಿರುವಾಗ, ಭಾರತವು ಅಫ್ಘಾನ್ ನೆಲವನ್ನು ಬಳಸಿಕೊಂಡು ನಡೆಯುವ ಭಯೋತ್ಪಾದಕ ಚಟುವಟಿಕೆಗಳಿಗೆ ಕುಮ್ಮಕ್ಕೀಯುತ್ತಿದೆ ಎಂದು ಪಾಕಿಸ್ತಾನ ನಿರಂತರವಾಗಿ ಆರೋಪಿಸಿದೆ.

16 ದೇಶಗಳ ವಿರುದ್ಧ ಸೆಕ್ಷನ್ 301 ತನಿಖೆ ಪ್ರಾರಂಭ

ವಾಷಿಂಗ್ಟನ್: ಭಾರತ, ಚೀನಾ ಮತ್ತು ಯುರೋಪಿಯನ್ ಯೂನಿಯನ್ ಸೇರಿದಂತೆ 16 ಪ್ರಮುಖ ಆರ್ಥಿಕತೆಗಳ ವಿರುದ್ಧ ಟ್ರಂಪ್ ಆಡಳಿತ 1974ರ ವ್ಯಾಪಾರ ಕಾಯ್ದೆಯ ಸೆಕ್ಷನ್ 301 ಅನ್ವಯದಲ್ಲಿ ಹೊಸ ವ್ಯಾಪಾರ ತನಿಖೆ ಪ್ರಾರಂಭಿಸಿದೆ.ಅಮೆರಿಕದ ಸುಪ್ರೀಂ ಕೋರ್ಟ್ ಇತ್ತೀಚೆಗೆ ಟ್ರಂಪ್ ಅವರ ಪರಸ್ಪರ ಸುಂಕ ನೀತಿ ರದ್ದುಗೊಳಿಸಿದ ಬೆನ್ನಲ್ಲೇ ಈ ಕ್ರಮ ಕೈಗೊಳ್ಳಲಾಗಿದೆ.

ಕಾನೂನು ತಂತ್ರ?: ವಿದೇಶಿ ವ್ಯಾಪಾರ ನೀತಿಗಳು



ಅಮೆರಿಕದ ವ್ಯವಹಾರಗಳಿಗೆ ಅನ್ಯಾಯವಾಗಿ ಅನಾನುಕೂಲವನ್ನು ಉಂಟುಮಾಡುತ್ತಿವೆಯೇ ಎಂದು ಪರೀಕ್ಷಿಸಲು ಈ ತನಿಖೆಯನ್ನು ಪ್ರಬಲ ಕಾನೂನು ಪರ್ಯಾಯವಾಗಿ ಬಳಸಲಾಗುತ್ತಿದೆ. ತನಿಖೆ ಭಾಗವಾಗಿ ಲಿಖಿತ ಸಲ್ಲಿಕೆಗಳನ್ನು ಸಂಗ್ರಹಿಸಲಾಗುತ್ತದೆ ಮತ್ತು ಸಾರ್ವಜನಿಕ ವಿಚಾರಣೆಗಳನ್ನು ನಡೆಸಲಾಗುತ್ತದೆ. ಒಂದು ವೇಳೆ ತಾರತಮ್ಯದ ಪದ್ಧತಿಗಳು ಕಂಡುಬಂದಲ್ಲಿ, ಪ್ರತೀಕಾರವಾಗಿ ಹೆಚ್ಚಿನ ಸುಂಕ ಅಥವಾ ಸೇವಾ ಶುಲ್ಕಗಳನ್ನು ವಿಧಿಸುವ ಸಾಧ್ಯತೆಯಿದೆ.

ಭಾರತದ ಮೇಲೆ ಗಮನ: ಭಾರತದ ಮೇಲಿರುವ ಹೆಚ್ಚಿನ ಆಮದು ಸುಂಕಗಳು, ಸ್ಥಳೀಯ ಮೂಲದ ನಿಯಮಗಳು ಮತ್ತು ಔಷಧ ವಲಯದಲ್ಲಿನ ಬೆಲೆ ನಿಯಂತ್ರಣದ ಕುರಿತಾದ ದೀರ್ಘಕಾಲದ ಕಳವಳಗಳಿಂದಾಗಿ ಭಾರತವನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಸದ್ಯಕ್ಕೆ ಯಾವುದೇ ತಕ್ಷಣದ ಸುಂಕ ವಿಧಿಸದಿದ್ದರೂ, ಐಟಿ, ಹಾರ್ಡ್‌ವೇರ್ ಜವಳಿ ಮತ್ತು ಆಟೋ ಬಿಡಿಭಾಗಗಳಂತಹ ಭಾರತದ ಪ್ರಮುಖ ರಫ್ತು ವಲಯಗಳು ಈಗ ತೀವ್ರ ನಿಗಾದಲ್ಲಿರಲಿವೆ.

ಸಿಇಸಿ ಜ್ಞಾನೇಶ್ ಪದಚ್ಯುತಿಗೆ ವಿಪಕ್ಷದ 200 ಸಂಸದರ ಸಹಿ

ಹೊಸದಿಲ್ಲಿ: ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಜ್ಞಾನೇಶ್ ಕುಮಾರ್ ಅವರ ಪದಚ್ಯುತಿ ಕೋರುವ ಐತಿಹಾಸಿಕ ನೋಟಿಸ್‌ಗೆ ಉಭಯ ಸದನಗಳ ಸುಮಾರು 200 ಸಂಸದರು ಗುರುವಾರ ಸಹಿ ಹಾಕಿದ್ದಾರೆ. ಭಾರತದ ಸಂಸದೀಯ ಇತಿಹಾಸದಲ್ಲಿ ಮುಖ್ಯ ಚುನಾವಣಾ ಆಯುಕ್ತರ ವಿರುದ್ಧ ಇಂತಹ ಕ್ರಮ ಕೈಗೊಳ್ಳುತ್ತಿರುವುದು ಇದೇ ಮೊದಲು. ಲೋಕಸಭೆಯ 130 ಮತ್ತು ರಾಜ್ಯಸಭೆಯ 63 ಸದಸ್ಯರ ಬೆಂಬಲವಿರುವ ಈ ನೋಟಿಸ್‌ನಲ್ಲಿ ಒಟ್ಟು ಏಳು ನಿರ್ದಿಷ್ಟ ಆರೋಪಗಳನ್ನು ಪಟ್ಟಿ ಮಾಡಲಾಗಿದೆ. ಪಕ್ಷಪಾತದ ನಡವಳಿಕೆ, ಚುನಾವಣಾ ವಂಚನೆ ತನಿಖೆಗೆ ಉದ್ದೇಶಪೂರ್ವಕ ಅಡ್ಡಿ ಮತ್ತು ಬೃಹತ್ ಪ್ರಮಾಣದಲ್ಲಿ ಮತದಾನದ ಹಕ್ಕು ಕಸಿದುಕೊಳ್ಳುವುದು ಈ ಪ್ರಮುಖ ಆರೋಪಗಳಾಗಿವೆ. ಪ್ರಸ್ತುತ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆಡಳಿತ ಪಕ್ಷಕ್ಕೆ ಅನುಕೂಲವಾಗುವಂತೆ ಇದೆ ಎಂದು ಇಂಡಿ ಕೂಟ ಮತ್ತು ಆಮ್ ಆದ್ಮಿ ಪಾರ್ಟಿಯ ಸಂಸದರು ಆರೋಪಿಸಿದ್ದಾರೆ.

ಮುಂದಿನ ಪ್ರಕ್ರಿಯೆ: ಮುಖ್ಯ ಚುನಾವಣಾ ಆಯುಕ್ತರ ಪದಚ್ಯುತಿ ಪ್ರಕ್ರಿಯೆ, ಸುಪ್ರೀಂ ಕೋರ್ಟ್ ನ್ಯಾಯಾಧೀಶರ ಪದಚ್ಯುತಿಗೆ ಅನುಸರಿಸುವ ಕಟ್ಟುನಿಟ್ಟಿನ ಮಾನದಂಡಗಳನ್ನೇ ಹೊಂದಿರುತ್ತದೆ. ದೋಷಾರೋಪಣೆ ಸಾಬೀತಾಗಲು ಅಸಭ್ಯ ನಡವಳಿಕೆ ಅಥವಾ ಅಸಮರ್ಥತೆಯನ್ನು ಸಾಬೀತುಪಡಿಸಬೇಕಾಗುತ್ತದೆ. ನೋಟಿಸ್ ಸಲ್ಲಿಸಿದ ನಂತರ, ಎರಡು ಸದನಗಳಲ್ಲಿಯೂ ಈ ಪ್ರಸ್ತಾವನೆಯನ್ನು ಅಂಗೀಕರಿಸಿದರೆ, ಸ್ಪೀಕರ್ ಮತ್ತು ಅಧ್ಯಕ್ಷರು ಜಂಟಿ ಸಮಿತಿಯನ್ನು ರಚಿಸಬಹುದು. ಈ ಪ್ರಸ್ತಾವನೆ ಯಶಸ್ವಿಯಾಗಲು ಸಂಸತ್ತಿನಲ್ಲಿ ವಿಶೇಷ ಬಹುಮತದ (ಮೂರನೇ ಎರಡರಷ್ಟು) ಅಗತ್ಯವಿರುತ್ತದೆ.

ಇಂದು ಮೋದಿ ಅಸ್ಸಾಂಗೆ: ಹಲವು ಯೋಜನೆಗೆ ಚಾಲನೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರದಿಂದ ಎರಡು ದಿನಗಳ ಭೇಟಿಗೆ ಅಸ್ಸಾಂ ಆಗಮಿಸಲಿದ್ದು, ಈ ವೇಳೆ ಅವರು ಕೊಕ್ರಾರ್‌ಝಾರ್, ಗುವಾಹಟಿ ಮತ್ತು ಸಿಲ್ಚಾರ್‌ನಲ್ಲಿ 47,800 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಅನೇಕ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಹಲವು ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಶುಕ್ರವಾರ ತಮ್ಮ ಭೇಟಿಯ ಮೊದಲ ದಿನದಂದು, ಮೋದಿ ಮಧ್ಯಾಹ್ನ 1:30ರ ಸುಮಾರಿಗೆ ಕೊಕ್ರಾರ್‌ಝಾರ್ ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದಾರೆ. 4,570 ಕೋಟಿ ರೂ. ಮೌಲ್ಯದ ಯೋಜನೆಗಳಿಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ಬಳಿಕ ಸಂಜೆ 5 ಗಂಟೆಗೆ ಗುವಾಹಟಿಯಲ್ಲಿ ಅವರು ಭೂಮಿ ಪೂಜೆ ನೆರವೇರಿಸಿ, ಸುಮಾರು 19,680 ಕೋಟಿ ರೂ. ಮೌಲ್ಯದ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಮಾರ್ಚ್ 14ರಂದು ಬೆಳಗ್ಗೆ ಸುಮಾರು 1 ಗಂಟೆಗೆ ಪ್ರಧಾನಮಂತ್ರಿಯವರು ಸಿಲ್ಚಾರ್‌ನಲ್ಲಿ ಭೂಮಿ ಪೂಜೆ ನೆರವೇರಿಸಲಿದ್ದು, ಸುಮಾರು 23,550 ಕೋಟಿ ರೂ. ಮೌಲ್ಯದ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಿದ್ದಾರೆ.

ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಣೆಗೆ ಸಂಘಟಿತ ಕ್ರಮ ಅಗತ್ಯ

ಸಾಧಕ ಮಹಿಳಾ ರೈತರಿಗೆ ಪ್ರಚಾರ ಅಗತ್ಯ: ಮುರ್ಮು

ಹೊಸದಿಲ್ಲಿ: ಕೃಷಿ ಮತ್ತು ಕೃಷಿ–ಆಹಾರ ರಂಗಗಳಲ್ಲಿ ಕಾಯಕ ನಿರತ ಮಹಿಳೆಯರು ನೀತಿ ನಿರೂಪಣೆ, ನಿರ್ಧಾರ ಕೈಗೊಳ್ಳುವಿಕೆ, ನಾಯಕತ್ವ ಸ್ಥಾನವನ್ನೂ ಹೊಂದುವ ಮೂಲಕ ಮಹತ್ವದ ಪಾತ್ರ ವಹಿಸಬೇಕೆಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ ನೀಡಿದ್ದಾರೆ. ಮೌಲ್ಯ ಸರಪಳಿಯಾದ್ಯಂತ ಇರುವ ಲಿಂಗಾಧಾರಿತ ಅಂತರ, ನ್ಯೂನತೆಗಳ ನಿವಾರಿಸಲು ಸಂಘಟಿತ ಕ್ರಮ ಅಗತ್ಯವೆಂದು ಅವರು ಪ್ರತಿಪಾದಿಸಿದ್ದಾರೆ.

ಕೃಷಿರಂಗದಲ್ಲಿ ಯಶಸ್ವಿಯಾಗಿರುವ ಮಹಿಳೆಯರ ಕೊಡುಗೆಗಳ ಬಗ್ಗೆ ಪ್ರಕಟಣೆ–ಪ್ರಚಾರ ಮಾಡುವುದರಿಂದ, ಹೆಚ್ಚೆಚ್ಚು ಜನರಿಗೆ ಈ ಸಾಧಕ ಮಹಿಳೆಯರ ಯಶೋಗಾಥೆಯ ಅರಿವಾಗುತ್ತದೆ. ಮಹಿಳಾ ನೇತೃತ್ವದಲ್ಲಿ ಅಭಿವೃದ್ಧಿ ಸಾಕಾರಗೊಳಿಸುವ ಭಾರತ ಸರಕಾರದ ವ್ಯೂಹಾತ್ಮಕ ಆಯ್ಕೆಯನ್ನು ಪ್ರಶಂಸಿಸಿ, ಕೃಷಿ ರಂಗದ ಎಲ್ಲಾ ಸ್ತರಗಳಲ್ಲೂ ಬೃಹತ್ ಸಂಖ್ಯೆಯಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಲಿಂಗಸಮಾನತೆ–ಎಲ್ಲರ ಒಳಗೊಳ್ಳುವಿಕೆಯ ಕೃಷಿ ಬೆಳವಣಿಗೆಗೆ ಉತ್ತೇಜನವೀಯುವುದು ಎಂದು ರಾಷ್ಟ್ರಪತಿ ಮುರ್ಮು ಹೇಳಿದರು. ಕೃಷಿ–ಆಹಾರ



ವ್ಯವಸ್ಥೆಗಳಲ್ಲಿ ಮಹಿಳೆ ಕುರಿತ ಮೂರು ದಿನಗಳ ಜಾಗತಿಕ ಸಮಾವೇಶದಲ್ಲಿ ರಾಷ್ಟ್ರಪತಿ ಪಾಲ್ಗೊಂಡರು.

ಮಹಿಳಾ ಕೃಷಿಕರಿಗೆ ಬೆಂಬಲ ಅಗತ್ಯ: ಭೂಮಿಯ ಒಡೆತನ–ಹಕ್ಕುಪತ್ರಕ್ಕೆ ಸಂಬಂಧಿತ ವಿವಾದಗಳು, ತಂತ್ರಜ್ಞಾನದಲ್ಲಿ ತಜ್ಞತೆ, ಸಾಂಸ್ಥಿಕ ಹಣಕಾಸು ಸೌಲಭ್ಯ ಪಡೆಯುವುದೇ ಇತ್ಯಾದಿ ವಿಚಾರಗಳಲ್ಲಿ ಮಹಿಳಾ ಕೃಷಿಕರಿಗೆ ಅಗತ್ಯ ಬೆಂಬಲ ನೀಡಬೇಕೆಂದು ರಾಷ್ಟ್ರಪತಿ ಮುರ್ಮು ಸಲಹೆಯಿತ್ತರು. ಕೃತಕ ಬುದ್ಧಿಮತ್ತೆಯು ಮಹಿಳಾ ಕೃಷಿಕರಿಗೆ ಅದ್ಯಾವ ರೀತಿ ಹೊಸ ಅವಕಾಶಗಳ ಕಲ್ಪಿಸುತ್ತಿದೆ ಎಂಬುದಕ್ಕೆ, ಸರಕಾರದ ಜಾನುವಾರುಗಳ ಪೋಷಣೆಯ ದೃಷ್ಟಿಕೋನದಿಂದ ಪ್ರೇರಿತ ಎಐ ಆಧಾರಿತ ಯೋಜನೆ ಸರ್ಲಾಬೆನ್ ಸೂಕ್ತ ನಿದರ್ಶನವಾಗಿದೆ.

ನ್ಯೂನತೆ ನಿವಾರಣೆಗೆ ನೀಡಿದ ಕರೆಯಾಗಿದೆ: ವಿಶ್ವಸಂಸ್ಥೆ 2026ನ್ನು ಅಂತಾರಾಷ್ಟ್ರೀಯ ಮಹಿಳಾ ರೈತರ ವರ್ಷವೆಂದು ಘೋಷಿಸಿರುವುದು ಶ್ಲಾಘನೀಯ. ಇದು ಕೃಷಿ–ಆಹಾರ ರಂಗದಲ್ಲಿನ ಮಹಿಳಾ ರೈತರಿಗೆ ನಾಯಕತ್ವ ಪಾತ್ರವನ್ನೂ ನೀಡಬೇಕು ಮತ್ತು ಆಹಾರ–ಕೃಷಿ ಮೌಲ್ಯ ಸರಪಳಿಯಲ್ಲಿನ ಲಿಂಗಾಧಾರಿತ ನ್ಯೂನತೆ, ಅಂತರಗಳ ನಿವಾರಿಸಲು ನೀಡಿದ ಕರೆಯಾಗಿದೆ ಎಂದು ವಿಶ್ಲೇಷಿಸಿದರು.

ಜನ ಧನ್ ಖಾತೆಗಳಲ್ಲೂ ಮಹಿಳೆಯರ ಮೇಲುಗೈ: ವಿಶ್ವದ ಬೃಹತ್ ಕಾರ್ಯಕ್ರಮ ಖ್ಯಾತಿಯ ಜನ ಧನ್ ಯೋಜನೆಯಡಿ 570ಮಿಲಿಯನ್ ಖಾತೆಗಳು ತೆರೆಯಲ್ಪಟ್ಟಿವೆ ಮತ್ತು ಇದರಲ್ಲಿ ಶೇ.56ಖಾತೆದಾರರು ಮಹಿಳೆಯರು. ಮುದ್ರಾ ಸಾಲ ಫಲಾನುಭವಿಗಳಲ್ಲೂ ಶೇ.68ರಷ್ಟು ಮಹಿಳೆಯರಿದಾರೆ. ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯಗಳು ಬಹುಸಂಖ್ಯೆಯಲ್ಲಿ ಜನರನ್ನು ತಲುಪಿರುವುದನ್ನು ಇದು ಪ್ರತಿಫಲಿಸಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಪ್ರಾಮಾಣಿಕತೆಯಿಂದ ಕಲಾಪ ನಿರ್ವಹಿಸಲಿದ್ದೇನೆ: ಸಭಾಪತಿ ಓಂ ಬಿರ್ಲಾ

ನಿಯಮಾನುಸಾರ ಲೋಕಸಭೆ ಕಾರ್ಯನಿರ್ವಹಣೆ

ಹೊಸದಿಲ್ಲಿ: ಲೋಕಸಭೆಯ ಸಭಾಪತಿಪೀಠ ಯಾರೇ ಒಬ್ಬ ವ್ಯಕ್ತಿಗೆ ಸೇರಿದ್ದಲ್ಲ. ಇದು ಸದನದ ಘನತೆಯ ದ್ಯೋತಕವಾಗಿದೆ. ಸದನವು ನಿಯಮಗಳಿಗೆ ಅನುಸಾರ ಕಾರ್ಯ ನಿರ್ವಹಿಸುತ್ತದೆ. ಯಾರೇ ಸದಸ್ಯರಿಗೆ ತಮಗೆ ಬೇಕೆನಿಸಿದ ಸಮಯದಲ್ಲಿ ತಮಗೆ ಬೇಕಾದ ವಿಚಾರದಲ್ಲಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ ಎಂದು ಸಭಾಪತಿ ಓಂ ಬಿರ್ಲಾ ಹೇಳಿದ್ದಾರೆ. ಸಭಾಪತಿಗಳ ವಿರುದ್ಧ ವಿಪಕ್ಷೀಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯ ತಿರಸ್ಕಾರಗೊಂಡ ಬೆನ್ನಲ್ಲೇ, ಸಭಾಪತಿಗಳು ಸಂಸತ್ತಿನ ನಿಯಮಾವಳಿಗಳನ್ನು ಸದಸ್ಯರಿಗೆ ಮತ್ತೆ ಸ್ಪಷ್ಟ ಮನವರಿಕೆ ಮಾಡಿದ್ದಾರೆ.

ನಿಯಮಗಳ ಮೀರಿ ಮಾತನಾಡುವ ಹಕ್ಕಿಲ್ಲ: ಯಾರೇ ಸದಸ್ಯರಿಗೆ ಇಷ್ಟವಾಗುತ್ತದೋ ಇಲ್ಲವೋ, ಲೋಕಸಭಾ ಕಲಾಪಗಳಂತು ಅಸ್ತಿತ್ವದಲ್ಲಿರೋ ನಿಯಮಗಳು ಹಾಗೂ ಕಾರ್ಯ ವಿಧಾನ ಪ್ರಕಾರವೇ ನಡೆಯುತ್ತದೆ. ತಾನು ಪ್ರಾಮಾಣಿಕತೆಯಿಂದ ನ್ಯಾಯೋಚಿತವಾಗಿ ಕಲಾಪಗಳ ನಿರ್ವಹಿಸಲಿದ್ದೇನೆ. ಈ ನಿಯಮಗಳ



ಚೌಕಟ್ಟನ್ನು ಮೀರಿ ಮಾತನಾಡುವ ಹಕ್ಕನ್ನು ಸದನದ ಯಾರೇ ಸದಸ್ಯರು ಹೊಂದಿಲ್ಲ ಎಂದು ಬಿರ್ಲಾ ಸದನದ ನಿಯಮಗಳ ಪಾವಿತ್ರ್ಯವನ್ನು ಎತ್ತಿಹಿಡಿದರು. ಆಳುವ ಪಕ್ಷೀಯರು ಮೇಜು ಬಡಿದು ಸಭಾಪತಿಗಳ ಹೇಳಿಕೆಯನ್ನು ಬೆಂಬಲಿಸಿದರು.

ಸಭಾಪತಿಗಳ ಸಮ್ಮತಿ ವಿನಾ ಮಾತನಾಡಲಾಗದು: ಎರಡು ದಿನಗಳ ಚರ್ಚೆ ಸಂದರ್ಭ ನನ್ನ ಮೇಲೆ ವಿಶ್ವಾಸವಿರಿಸಿದ ಸಮಸ್ತರಿಗೂ ತಾನು ಕೃತಜ್ಞನಾಗಿರುವೆ. ಹಾಗೆಯೇ ತನ್ನ ಪರವಾಗಿ ಹಾಗೂ ವಿರೋಧವಾಗಿ ಮಾತನಾಡಿದ ಎಲ್ಲರಿಗೂ ಕೃತಜ್ಞತೆಗಳು. ವಿಪಕ್ಷ ನಾಯಕ ರಾಹುಲ್ ಗಾಂಧಿಗೆ ಮಾತನಾಡಲು ಸಾಕಷ್ಟು ಅವಕಾಶ ನೀಡಿಲ್ಲ. ಅವರಿಗೆ ಯಾವುದೇ ಸಂದರ್ಭ ಯಾವುದೇ ವಿಷಯವಾಗಿ ಮಾತನಾಡಲು ಅವಕಾಶ ಕೊಡಬೇಕೆಂದು ಕೆಲವು ಸದಸ್ಯರು ಚರ್ಚೆ ಸಂದರ್ಭ ಆಗ್ರಹಿಸಿದ್ದರು ಎಂದು ಉಲ್ಲೇಖಿಸಿದ ಸಭಾಪತಿ ಬಿರ್ಲಾ, ಪ್ರತಿಯೋರ್ವ ಸದಸ್ಯರಿಗೂ ಸದನದಲ್ಲಿ ಮಾತನಾಡುವ ಹಕ್ಕಿದೆ ಖಂಡಿತ, ಆದರೂ ಯಾರೇ ಸದಸ್ಯರೂ ಸದನದ ನಿಯಮ, ನಿಬಂಧನೆಗಳಿಗೆ ಬದ್ಧವಾಗಿ ಮಾತನಾಡಬೇಕು. ದೇಶದ ಪ್ರಧಾನಿ ಅಥವಾ ಯಾವುದೇ ಸಚಿವರ ಸಹಿತ ಯಾರೇ ಸದಸ್ಯರು ಸಭಾಪತಿಗಳ ಸಮ್ಮತಿ ಪಡೆಯದೆ ಮಾತನಾಡುವ ಹಾಗಿಲ್ಲ. ಸದನದ ಯಾರೇ ಸದಸ್ಯರಿಗೂ ತಮಗೆ ಬೇಕಾದ ಸಮಯದಲ್ಲಿ ಬೇಕಾದ ವಿಚಾರವಾಗಿ ಸ್ವೇಚ್ಛೆಯಿಂದ ಮಾತನಾಡುವ ಹಕ್ಕಿಲ್ಲ. ಸಭಾಪತಿಗಳು ಅವಕಾಶ ಕೊಟ್ಟಾಗಲೇ ಮಾತನಾಡಬಹುದು. ಸದನದಲ್ಲಿ ಭಾಷಣ ಮಾಡಲು ಸಂಸದರಿಗೆ ಸ್ವಾತಂತ್ರ್ಯವಿದೆ ಖಂಡಿತ, ಆದರೆ ನಿಯಮಗಳಿಗೆ ಬದ್ಧವಾಗೇ ಮಾತನಾಡಬೇಕು ಎಂದು ಸ್ಪಷ್ಟಪಡಿಸಿದರು.

ಕಿರುಸುದ್ದಿ

ಅಂತಾರಾಷ್ಟ್ರೀಯ ಈಜು ಸ್ಪರ್ಧೆ: ಶ್ರೀಲಕ್ಷ್ಮೀಗೆ ಚಿನ್ನದ ಪದಕ

ಬಂಟ್ವಾಳ: ಅಬುದಾಬಿಯಲ್ಲಿ ನಡೆದ ಅಂತಾರಾಷ್ಟ್ರೀಯ ಮಟ್ಟದ ಓಪನ್ ಮಾಸ್ಟರ್ಸ್ ಗೇಮ್ಸ್‌ನಲ್ಲಿ ಈಜು ಸ್ಪರ್ಧೆಯಲ್ಲಿ ವಿಟ್ಲದ ಶ್ರೀ ಲಕ್ಷ್ಮೀ ಚಿನ್ನದ ಪದಕ ಪಡೆದಿದ್ದಾರೆ. ಅಲ್ಲದೆ ಎರಡು ಬೆಳ್ಳಿ ,ಒಂದು ಕಂಚಿನ ಪದಕ ಪಡೆದು ವಿಶ್ವ ಮಟ್ಟದಲ್ಲಿ ಅವರ ಪ್ರಥಮ ಸ್ಪರ್ಧೆಯಲ್ಲಿಯೇ ಉತ್ತಮ ಸಾಧನೆ ತೋರಿಸಿದ್ದಾರೆ ಮೂಲತಃ ವಿಟ್ಲದ ಕೋಟಿಕೆರೆಯ ದಿ.ಗೋಪಾಲ ಸಪಲ್ಯ ಮತ್ತು ಲೀಲಾವತಿ ದಂಪತಿಯ ಪುತ್ರಿಯಾಗಿರುವ



ಇವರು ವಿಟ್ಲದ ತುಳಸೀದಾಸ ಶೆಣೈ ಮತ್ತು ಉಮೇಶ ಗಾಣಿಗರಿಂದ ತರಬೇತಿ ಪಡೆದು ಪ್ರಾಥಮಿಕ ಶಾಲಾ ಹಂತದಿಂದಲೇ ತಂದೆಯ ಪ್ರೋತ್ಸಾಹದಿಂದ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಹಲವು ಸ್ಪರ್ಧೆಗಳಲ್ಲಿ ಭಾಗಹಿಸಿ ಪದಕ ಪಡೆದಿದ್ದರು. ಪ್ರಸ್ತುತ ಪಡೀಲ್‌ನಲ್ಲಿರುವ ಅಮೃತ ಕಾಲೇಜು ತೃತೀಯ ವರ್ಷದ ವಾಣಿಜ್ಯ ವಿಭಾಗದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಂಗಳಾದೇವಿ ಕ್ರೀಡಾಂಗಣದ ಈಜುಕೊಳದಲ್ಲಿ ಹಲವಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತಿದ್ದಾರೆ. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗಹಿಸಿ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಆಕಾಂಕ್ಷೆ ಹೊಂದಿದ್ದಾರೆ.

ಕಲ್ಲಡ್ಕ ಶ್ರೀರಾಮ ಸೌಹಾರ್ದ ಸಹಕಾರಿ ಸಂಘಕ್ಕೆ ಅವಿರೋಧ ಆಯ್ಕೆ

ಬಂಟ್ವಾಳ: ಕಲ್ಲಡ್ಕದ ಶ್ರೀರಾಮ ಸೌಹಾರ್ದ ಸಹಕಾರಿ ಸಂಘದ ಚುನಾವಣೆ ಪ್ರಕ್ರಿಯೆ ಚುನಾವಣಾ ಅಧಿಕಾರಿ ಡಾ. ಜ್ಯೋತಿ ಡಿ. ನೇತೃತ್ವದಲ್ಲಿ ನಡೆಯಿತು. ಮಾ. 7ರಂದು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ಮಾ. 9ರಂದು ನಾಮಪತ್ರ ಪರಿಶೀಲಿಸಿ ಡಾ. ಪ್ರಭಾಕರ ಭಟ್ ಕಲ್ಲಡ್ಕ, ನಾರಾಯಣ ಸೋಮಯಾಜಿ, ವಸಂತ ಮಾಧವ, ಸುಜಿತ್ ಕುಮಾರ್, ಕೃಷ್ಣಪ್ರಸಾದ್ ಕೆ. ಎನ್., ವಸಂತ ಬಲ್ಲಾಳ್, ರವಿರಾಜ್ ಕಣಂತೂರು, ಕುಶಾಲಪ್ಪ ಅಮ್ಟೂರು, ಸತೀಶ್ ಕುಮಾರ್ ಶಿವಗಿರಿ, ನಾರಾಯಣ ಶೆಟ್ಟಿ, ನಾಗರಾಜ ಕೆ. ಎಸ್., ಅಜಿತ್ ಎಂ., ಮಲ್ಲಿಕಾ ಆರ್. ಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಲಾಗಿದೆ.

ಅಭಾಸಾಪ ದ.ಕ. ಜಿಲ್ಲಾ ಅಧ್ಯಕ್ಷೆ ವೀಣಾ ಟಿ. ಶೆಟ್ಟಿ ಆಯ್ಕೆ

ಮಂಗಳೂರು: ಅಖಿಲ ಭಾರತೀಯ ಸಾಹಿತ್ಯ ಪರಿಷದ್‌ನ ದ.ಕ.ಜಿಲ್ಲಾ ಘಟಕದ ಅಧ್ಯಕ್ಷೆಯಾಗಿ ವೀಣಾ ಟಿ.ಶೆಟ್ಟಿ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಲತೇಶ ಬಾಕ್ರಬೈಲ್, ಜತೆ ಕಾರ್ಯದರ್ಶಿಗಳಾಗಿ ಗೀತಾ ಲಕ್ಷ್ಮೀಶ, ಶ್ರೀಲಕ್ಷ್ಮೀ ಮಠದಮೂಲೆ, ಕೋಶಾಧಿಕಾರಿಯಾಗಿ ರತ್ನಾವತಿ ಬೈಕಾಡಿ. ಮಾಧ್ಯಮ ಪ್ರಮುಖರಾಗಿ ಚಂದ್ರಶೇಖರ ಕುಳಮರ್ವ, ಮಹಿಳಾ ಪ್ರಕಾರ ಪ್ರಮುಖರಾಗಿ ಸುಮಂಗಲ ರತ್ನಾಕರ, ಮಕ್ಕಳ ಪ್ರಕಾರ ಪ್ರಮುಖರಾಗಿ ರಮೇಶ ಮಯ್ಯ, ಕಾರ್ಯಕಾರಿ ಸಮಿತಿ ಸದಸ್ಯರಾಗಿ ಪಿ.ಬಿ. ಹರೀಶ್ ರೈ, ಡಾ.ಸುರೇಶ ನೆಗಳಗುಳಿ, ಪ್ರಕಾಶ ನಾರಾಯಣ ಚಾರ್ಮಾಡಿ, ರವೀಂದ್ರ ಶೆಟ್ಟಿ ಆಯ್ಕೆಯಾಗಿದ್ದಾರೆ.



ದ.ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ, ಮಾರಾಟ ಮಳಿಗೆಗಳಿಗೆ ಅವಕಾಶ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ 28ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾರ್ಚ್ 26,27 ಮತ್ತು 28ರಂದು ಬಂಟ್ವಾಳ ಬಿಸಿರೋಡ್ ಸ್ಪರ್ಶ ಕಲಾಮಂದಿರದಲ್ಲಿ ನಡೆಯಲಿದೆ. ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ ಮಾರಾಟ ಮಳಿಗೆಗಳಿಗೆ ಅವಕಾಶವಿದೆ. ಮಳಿಗೆಗಳ ವ್ಯವಸ್ಥೆಗೆ ಮಾ. 20ರೊಳಗೆ ಸಮ್ಮೇಳನ ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಅಬೂಬಕ್ಕರ್ ಅಮ್ಮುಂಜೆ (ದೂ. 7619400376) ಅವರನ್ನು ಸಂಪರ್ಕಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಎಂ.ಪಿ.ಶ್ರೀನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಸಮಗ್ರ ಉದ್ಯೋಗ ಅಭಿಯಾನ

ಕಾಸರಗೋಡು: ವಿಜ್ಞಾನ ಕೇರಳ ಜಿಲ್ಲಾ ಮಿಷನ್ ಮತ್ತು ಕಾಸರಗೋಡು ಜಿಲ್ಲಾ ಪಂಚಾಯತ್ ಜಂಟಿಯಾಗಿ ಮಾ.13ರಂದು ಬೆಳಗಗೆ 10ರಿಂದ ಕಾಞಂಗಾಡು ನೆಹರೂ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ದಿವ್ಯಾಂಗ ಅಭ್ಯರ್ಥಿಗಳು, ಕುಟುಂಬ ಸದಸ್ಯರು, ಎಸ್‌ಸಿ, ಎಸ್‌ಟಿ ಮತ್ತು ಕರಾವಳಿ ಭಾಗದ ಅಭ್ಯರ್ಥಿಗಳಿಗಾಗಿ ಸಮಗ್ರ ಉದ್ಯೋಗ ಅಭಿಯಾನವನ್ನು ಆಯೋಜಿಸಿವೆ.



ಮಂಗಳೂರಿನ ಶ್ರೀಮಹತೋಬಾರ ಮಂಗಳಾದೇವಿ ದೇವಸ್ಥಾನದ ವಾರ್ಷಿಕ ಜಾತ್ರೆಯ ಪ್ರಯುಕ್ತ ಗುರುವಾರ ಮಹಾರಥೋತ್ಸವ ಜರಗಿತು. ಅಸಂಖ್ಯ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಪಿವಿಎಸ್ ಸಂಸ್ಥೆಯ ಆಡಳಿತ ನಾನೇ ನಿರ್ವಹಣೆ: ಸರೋಜಿನಿ ಎಂ.ಕುಶೆ

ಮಂಗಳೂರು: ಪಿವಿಎಸ್ ಸಂಸ್ಥೆಯ ಆಡಳಿತವನ್ನು ನಾನು ಸ್ವತಂತ್ರವಾಗಿ ನೋಡಿಕೊಳ್ಳುತ್ತಿದ್ದು, ಇದರಲ್ಲಿ ಯಾರದ್ದೇ ಹಸ್ತಕ್ಷೇಪವಿಲ್ಲ ಎಂದು ಪಿವಿಎಸ್ ಗ್ರೂಪ್‌ನ ಅಧ್ಯಕ್ಷೆ ಹಾಗೂ ಆಡಳಿತ ನಿರ್ದೇಶಕಿ ಸರೋಜಿನಿ ಎಂ. ಕುಶೆ ಹೇಳಿದರು.



'ನಮ್ಮ ಜತೆಯಲ್ಲಿದ್ದು, ಲೆಕ್ಕಪತ್ರ ನೋಡಿಕೊಳ್ಳುತ್ತಿದ್ದ ಕೆಲ ವ್ಯಕ್ತಿಗಳು ನಮ್ಮ ಸಂಸ್ಥೆ ಹಾಗೂ ಆಸ್ತಿ ಪಾಸ್ತಿ ಕಬಳಿಸುವ ದುರುದ್ದೇಶದಿಂದ ಕೃಷ್ಣದತ್ತ ಎಂಬ ವ್ಯಕ್ತಿಯಿಂದ ನಮಗೆ ತೊಂದರೆ ಉಂಟು ಮಾಡಲಾಗುತ್ತಿದೆ. ನಾನು ನ್ಯಾಯಾಲಯದ ಮೊರೆ ಹೋಗಿ ಕೃಷ್ಣದತ್ತ ನನ್ನ ಮಗನಲ್ಲ ಎಂಬ ತಡೆಯಾಜ್ಞೆ ತರಲಾಗಿದೆ. ಸರಕಾರ, ಪೊಲೀಸ್ ಇಲಾಖೆ ಹಾಗೂ ಸಾರ್ವಜನಿಕರು ಕೃಷ್ಣದತ್ತ ಹಾಗೂ ಆತನ ಸಹಚರರ ಸುಳ್ಳು ಸುದ್ದಿಗಳಿಗೆ ಕಿವಿಗೊಡದೆ ನನ್ನ ನ್ಯಾಯಯುತ ಹೋರಾಟದಲ್ಲಿ ಸಹಕಾರ ನೀಡಬೇಕು' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.

'ನನ್ನ ಅಜ್ಜ ದಿ. ಪುತ್ತು ವೈಕುಂಠ ಶೇಟ್ ಅವರ ಪತ್ನಿಯ ತಂಗಿ ಮಗಳಾದ ವಸಂತಿ ಎಚ್.ಅವರು ಅವರ ಬಾಲ್ಯದಿಂದ ನಮ್ಮ ಜತೆಯಲ್ಲಿದ್ದು, ನನ್ನ ಪತಿ ಮೃತಪಟ್ಟ ನಂತರ ನನ್ನ ಹೆಗಲಿಗೆ ಹೆಗಲು ನೀಡಿ ಪಿವಿಎಸ್ ಕಂಪನಿಗಳನ್ನು ನಾವಿಬ್ಬರೂ ಜತೆಗೂಡಿ ಮುನ್ನಡೆಸುತ್ತಾ ಬರುತ್ತಿದ್ದೇವೆ' ಎಂದು ಅವರು ಹೇಳಿದರು.

'ಪಿವಿಎಸ್ ಸಂಸ್ಥೆಯನ್ನು ಕಬಳಿಸಲು ದಶಕಗಳ ಕಾಲದಿಂದ ಸಂಚು ನಡೆಯುತ್ತಿದೆ. ನನಗೆ ಯಾರೂ ದತ್ತುಪುತ್ರರಿಲ್ಲ. ಪಿವಿಎಸ್ ಸಂಸ್ಥೆ ಉತ್ತಮ ರೀತಿಯಲ್ಲಿ ಮುನ್ನಡೆಯುತ್ತಿದ್ದು, ಸಂಸ್ಥೆ ಸ್ಥಿರವಾಗಿದೆ. ಕೃಷ್ಣದತ್ತ ಹಾಗೂ ಆತನ ಸಹಚರರ ಸಂಚಿಗೆ ಸಾರ್ವಜನಿಕರು ಯಾವುದೇ ರೀತಿಯಲ್ಲಿ ಬಲಿಯಾಗಬಾರದು' ಎಂದರು.

ವೈಶ್ಯ ಎಜುಕೇಶನ್ ಸೊಸೈಟಿ ಅಧ್ಯಕ್ಷ ಸಂತೋಷ್‌ಚಂದ್ರ, ಡೊಂಗರಕೇರಿ ವೆಂಕಟರಮಣ ದೇವಸ್ಥಾನ ಮುಖ್ಯ ಅರ್ಚಕ ಜಯರಾಮ ಭಟ್, ಡೊಂಗರಕೇರಿ ವೆಂಕಟರಮಣ ದೇವಸ್ಥಾನ ಮೊಕ್ತೇಸರ ಪ್ರವೀಣ್ ಶೇಟ್ ನಾಗ್ವೇಕರ್, ಪಿವಿಎಸ್ ಲಕ್ಷ್ಮಿ ನಾರಾಯಣಿ ದೇವಸ್ಥಾನ ಮೊಕ್ತೇಸರ ಗೋಪಿ ಶೇಟ್, ಅರ್ಚಕ ಅಶೋಕ್ ಭಟ್ ಉಪಸ್ಥಿತರಿದ್ದರು.

ಉಡುಪಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ | ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪೂರ್ವಸಿದ್ಧತಾ ಸಭೆ

ಭಯ ಮುಕ್ತ ವಾತಾವರಣ ಕಲ್ಪಿಸಿ

ಉಡುಪಿ: ಎಸ್.ಎಸ್.ಎಲ್.ಸಿ ಪರೀಕ್ಷೆಯು ಮಾರ್ಚ್ 18 ರಿಂದ ಏಪ್ರಿಲ್ 22 ವರೆಗೆ ಜಿಲ್ಲೆಯ 51 ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷೆಯಲ್ಲಿ ಯಾವುದೇ ಗೊಂದಲಗಳಿಗೆ ಆಸ್ಪದ ನೀಡದಂತೆ ವಿದ್ಯಾರ್ಥಿಗಳು ಸುಗಮವಾಗಿ ಭಯ ಮುಕ್ತ ವಾತಾವರಣದಲ್ಲಿ ಪರೀಕ್ಷೆ ಬರೆಯಲು ಪೂರಕ ವಾತಾವರಣ ಕಲ್ಪಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಸೂಚನೆ ನೀಡಿದರು.

ಮಣಿಪಾಲ ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಎಸ್.ಎಸ್.ಎಲ್.ಸಿ ಪರೀಕ್ಷೆಯ ಪೂರ್ವಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಲೋಪದೋಷಗಳಾಗದಂತೆ ಪರೀಕ್ಷಾ ಪಾವಿತ್ರ್ಯತೆ ಕಾಪಾಡುವುದರೊಂದಿಗೆ ಸುಲಲಿತವಾಗಿ ನಡೆಸಲು ಅಗತ್ಯವಿರುವ ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಳ್ಳಬೇಕು ಇದಕ್ಕೆ ಜಿಲ್ಲಾಡಳಿತದ ವತಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದ ಅವರು, ಜಿಲ್ಲೆಯು ಪ್ರತಿಶತಃ ನೂರರಷ್ಟು ಫಲಿತಾಂಶವನ್ನು ದಾಖಲಿಸಲು ಅಧಿಕಾರಿಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದರು.

13,516 ವಿದ್ಯಾರ್ಥಿಗಳು ಭಾಗಿ ಜಿಲ್ಲೆಯಲ್ಲಿ ಹೊಸದಾಗಿ 13,516 ವಿದ್ಯಾರ್ಥಿಗಳು, 295 ರೆಗ್ಯೂಲರ್ ಪುನರಾವರ್ತಿತ ಅಭ್ಯರ್ಥಿಗಳು, 293 ಖಾಸಗಿ ಅಭ್ಯರ್ಥಿಗಳು ಹಾಗೂ 47 ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದು, ಇವರಲ್ಲಿ 7353 ಗಂಡು ಮಕ್ಕಳು ಹಾಗೂ 6798 ವಿದ್ಯಾರ್ಥಿನಿಯರು ಸೇರಿದಂತೆ ಒಟ್ಟು 14151 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ ಎಂದರು.



ಉಡುಪಿ ವಲಯದಲ್ಲಿ 15, ಬ್ರಹ್ಮಾವರದಲ್ಲಿ 11, ಕಾರ್ಕಳದಲ್ಲಿ 9, ಬೈಂದೂರು ಮತ್ತು ಕುಂದಾಪುರದಲ್ಲಿ ತಲಾ 8 ಸೇರಿದಂತೆ ಒಟ್ಟು 51 ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ನಡೆಯಲಿದ್ದು, ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಪರೀಕ್ಷಾ ಕೇಂದ್ರದ ಕ್ಯಾಂಪಸ್‌ಗಳಲ್ಲಿ ಸಿಸಿಟಿವಿಯನ್ನು ತಪ್ಪದೇ ಅಳವಡಿಸಬೇಕು. 51 ಪರೀಕ್ಷಾ ಕೇಂದ್ರಗಳಲ್ಲಿ 686 ಕೊಠಡಿಗಳನ್ನು ಪರೀಕ್ಷಾ ಕಾರ್ಯಕ್ಕೆ ನಿಗದಿಪಡಿಸಲಾಗಿದೆ ಎಂದರು.

1350 ಅಧಿಕಾರಿಗಳ ನಿಯೋಜನೆ

ಪರೀಕ್ಷೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಅಧೀಕ್ಷಕರು, ಮೇಲ್ವಿಚಾರಕರು, ಸ್ಥಾನಿಕ ಜಾಗೃತಿ ದಳದ ಅಧಿಕಾರಿಗಳು, ಮೊಬೈಲ್ ಸ್ವಾಧೀನ ಅಧಿಕಾರಿಗಳು, ಜಿಲ್ಲಾ ಹಾಗೂ ತಾಲೂಕು ವಿಚಕ್ಷಣಾ ದಳ, ಪರೀಕ್ಷಾ ನೋಡೆಲ್ ಅಧಿಕಾರಿಗಳು ಸೇರಿದಂತೆ ಈಗಾಗಲೇ 1350 ಅಧಿಕಾರಿ ಸಿಬ್ಬಂದಿಗಳನ್ನು ನಿಯೋಜಿಸಿರುವುದಾಗಿ ತಿಳಿಸಿದರು.

ಪರೀಕ್ಷಾ ಸಂದರ್ಭದಲ್ಲಿ ಪರೀಕ್ಷಾ ಕೇಂದ್ರದ ಸುತ್ತಲೂ 100 ಮೀ. ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಯಲ್ಲಿರುತ್ತದೆ. ಕೇಂದ್ರದ ಸುತ್ತಮುತ್ತಲಿನ ಜೆರಾಕ್ಸ್ ಅಂಗಡಿಗಳನ್ನು ಮುಚ್ಚಲು ಆದೇಶ ಹೊರಡಿಸಲಾಗುವುದು ಎಂದರು.

ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ ಮಾತನಾಡಿ, ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕೆಲವು ನಿಯಮಾವಳಿಗಳನ್ನು ಸಡಿಲಗೊಳಿಸದ್ದು, ವಿದ್ಯಾರ್ಥಿಗಳು ಉತ್ತೀರ್ಣರಾಗುವುದರ ಜೊತೆಗೆ ಉನ್ನತ ಶ್ರೇಣಿ ಪಡೆಯಲು ಪ್ರಯತ್ನಿಸುವಂತೆ ಅವರುಗಳಿಗೆ ಪ್ರೋತ್ಸಾಹ ನೀಡಿ, ಮನವೊಲಿಸಬೇಕು ಎಂದರು.

ಸಭೆಯಲ್ಲಿ ಮಂಗಳೂರು ಸಿ.ಟಿ.ಇ ಪ್ರಾಂಶುಪಾಲೆ ಹಾಗೂ ಸಹ ನಿರ್ದೇಶಕಿ ಪುಷ್ಪಲತಾ, ಸಹಾಯಕ ಕಮೀಷನರ್ ರಶ್ಮಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಲೋಕೇಶ್ ಸಿ., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಬಸವರಾಜ್ ಹುಬ್ಬಳ್ಳಿ, ಡಯಟ್ ಪ್ರಾಂಶುಪಾಲ ಡಾ. ಅಶೋಕ್ ಕಾಮತ್, ಪರೀಕ್ಷಾ ಕೇಂದ್ರದ ಮುಖ್ಯಸ್ಥರುಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಬಸ್‌ಗಳ ವ್ಯವಸ್ಥೆ

ಗ್ರಾಮೀಣ ಪ್ರದೇಶದಿಂದ ಪರೀಕ್ಷಾ ಕೇಂದ್ರಕ್ಕೆ ಆಗಮಿಸುವ ವಿದ್ಯಾರ್ಥಿಗಳಿಗೆ ಸೂಕ್ತ ಸಮಯಕ್ಕೆ ಆಗಮಿಸಲು ಬಸ್‌ಗಳ ಕೊರತೆಯಾಗದಂತೆ ಎಚ್ಚರಿಕೆ ವಹಿಸುವುದರೊಂದಿಗೆ ಸಾಕಷ್ಟು ಬಸ್‌ಗಳನ್ನು ಪರೀಕ್ಷಾ ಸಂದರ್ಭದಲ್ಲಿ ಕಾರ್ಯಾಚರಿಸುವಂತೆ ನೋಡಿಕೊಳ್ಳಬೇಕು. ಪರೀಕ್ಷಾ ಕೇಂದ್ರದ ಬಳಿಯೆ ಬಸ್ ನಿಲುಗಡೆಗೆ ಅವಕಾಶ ಮಾಡಿಕೊಡಬೇಕು ಎಂದು ಜಿಲ್ಲಾಧಿಕಾರಿ ಆರ್.ಟಿ.ಸಿ ನಿಗಮದ ಅಧಿಕಾರಿಗಳಿಗೆ ಸೂಚಿಸಿದರು.

ವಿದ್ಯುತ್ ಸಮಸ್ಯೆ ಆಗದಿರಲಿ

ಪರೀಕ್ಷಾ ಅವಧಿಯಲ್ಲಿ ನಿರಂತರ ವಿದ್ಯುತ್ ಸರಬರಾಜು ಆಗುವಂತೆ ನೋಡಿಕೊಳ್ಳಬೇಕು. ಪರೀಕ್ಷೆ ಆರಂಭದಿಂದ ಎಪ್ರಿಲ್ ಅಂತ್ಯದವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗದಂತೆ ಮುಂಜಾಗ್ರತೆ ವಹಿಸುವಂತೆ ಮೆಸ್ಕಾಂ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಅವರು, ಬಿಸಿಲಿನಿಂದ ಶಾಖಾಘಾತಕ್ಕೆ ಮಕ್ಕಳು ತುತ್ತಾಗುವ ಸಂಭವವಿದ್ದು, ಮಕ್ಕಳಿಗೆ ತೊಂದರೆ ಆಗದಂತೆ ಪರೀಕ್ಷಾ ಕೇಂದ್ರಗಳಲ್ಲಿ ತುರ್ತು ಚಿಕಿತ್ಸೆ ನೀಡಲು ವೈದ್ಯಕೀಯ ಸಿಬ್ಬಂದಿಗಳನ್ನು ನಿಯೋಜಿಸಬೇಕು. ಓ.ಆರ್.ಎಸ್. ದ್ರಾವಣವನ್ನು ಸಹ ಹೆಚ್ಚು ಸಂಗ್ರಹಿಸಿಟ್ಟುಕೊಳ್ಳುವಂತೆ ಕ್ರಮ ವಹಿಸ ಬೇಕು ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೊಬೈಲ್ ನಿರ್ಬಂಧ

ಪರೀಕ್ಷಾ ಕೇಂದ್ರಗಳಿಗೆ ವಿದ್ಯಾರ್ಥಿಗಳು ಮೊಬೈಲ್, ಸ್ಮಾರ್ಟ್ ವಾಚ್‌ಗಳನ್ನು ತರುವುದನ್ನು ನಿರ್ಬಂಧಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಗಡಿಯಾರಗಳನ್ನು ಅಳವಡಿಸಬೇಕು. ಪರೀಕ್ಷಾ ಕೇಂದ್ರಗಳ ಒಳಗೆ ವಿದ್ಯಾರ್ಥಿಗಳಿಗೆ ಕುಡಿಯುವ ನೀರು ಸೇರಿದಂತೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿರುವ ಬಗ್ಗೆ ಪರಿಶೀಲನೆ ನಡೆಸಲು ತಂಡವನ್ನು ನೇಮಿಸಿದ್ದು, ಈಗಾಗಲೇ ಅವರುಗಳು ಪರಿಶೀಲಿಸಿ ಮೂಲಭೂತ ಸೌಲಭ್ಯ ಅಳವಡಿಸಿರುವ ಕುರಿತು ವರದಿ ನೀಡಿದ್ದಾರೆ ಎಂದು ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಸಭೆಗೆ ತಿಳಿಸಿದರು.

ಶೀರೂರು ಮಠದಲ್ಲಿದೆ ಕಟ್ಟಿಗೆ ಕಾಡು: ಅನ್ನ ಪ್ರಸಾದಕ್ಕಿಲ್ಲ ಕಷ್ಟ

ಉಡುಪಿ: ಹಲವೆಡೆ ಗ್ಯಾಸ್ ಸಿಲಿಂಡರ್‌ಗಳ ಕೊರತೆ ಕಂಡು ಬರುತ್ತಿದ್ದರೂ ಉಡುಪಿಯ ಅಜೇಯ ಪರಂಪರೆಯ ತಾಣವಾದ ಶ್ರೀಕೃಷ್ಣ ಮಠದಲ್ಲಿ ಮಾತ್ರ ಅನ್ನ ಸಂತರ್ಪಣೆಯ ಮಹೋತ್ಸವಕ್ಕೆ ಯಾವುದೇ ಅಡ್ಡಿಯಾಗಿಲ್ಲ.

ಶೀರೂರು ಮಠದ ದೂರದೃಷ್ಟಿ – ಕಟ್ಟಿಗೆಯಲ್ಲೇ ಅಡುಗೆ ಪ್ರಸ್ತುತ ಶೀರೂರು ಮಠದ ಪರ್ಯಾಯೋತ್ಸವ ನಡೆಯುತ್ತಿದ್ದು, ಪ್ರತಿದಿನ ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ನಡೆಯುತ್ತಿದೆ. ಆಧುನಿಕ ಇಂಧನಗಳ ಮೇಲೆ ಅವಲಂಬಿತವಾಗುವ ಬದಲು, ಶೀರೂರು ಶ್ರೀಗಳು ಸಾಂಪ್ರದಾಯಿಕ 'ಕಟ್ಟಿಗೆ ಅಡುಗೆ'ಗೆ ಆದ್ಯತೆ ನೀಡಿದ್ದಾರೆ. ಮಠದ ಬೃಹತ್ ಪಾತ್ರೆಗಳಲ್ಲಿ ಕಟ್ಟಿಗೆಯ ಉರಿಯಲ್ಲೇ ಅನ್ನ-ಸಾರು ಸಿದ್ಧವಾಗುತ್ತಿದ್ದು, ಯುದ್ಧದ ಕಾರಣದಿಂದ ಉಂಟಾಗಿರುವ ಗ್ಯಾಸ್ ಅಭಾವ ಮಠದ ಅಡುಗೆಮನೆಗೆ ತಟ್ಟಿಲ್ಲ.

ಸ್ವಾವಲಂಬನೆಯ ಮಂತ್ರ: ಬೆಳೆದು ನಿಂತಿದೆ 'ಕಟ್ಟಿಗೆ ಕಾಡು'

ಕಟ್ಟಿಗೆಯ ಬಳಕೆ ಅರಣ್ಯ ನಾಶಕ್ಕೆ ಕಾರಣವಾಗಬಾರದು ಎಂಬ ಉನ್ನತ ಉದ್ದೇಶದಿಂದ ಶೀರೂರು ಮಠವು ತನ್ನದೇ ಆದ ದೂರದೃಷ್ಟಿಯ ಯೋಜನೆಯನ್ನು ಹೊಂದಿದೆ. ಮಠದ ಅಡುಗೆಗೆ ಬೇಕಾದ ಕಟ್ಟಿಗೆಯನ್ನು ಸಂಗ್ರಹಿಸಲು



ಮಠದ ವತಿಯಿಂದಲೇ ಪ್ರತ್ಯೇಕವಾಗಿ 'ಕಾಡುಗಳನ್ನು' ಬೆಳೆಸಲಾಗಿದೆ. ಸುಸ್ಥಿರ ಅಭಿವೃದ್ಧಿಯ ಮಾದರಿಯಲ್ಲಿ ಮಠದ ಭೂಮಿಯಲ್ಲಿ ಬೆಳೆಸಲಾದ ಗಿಡ-ಮರಗಳ ಒಣ ಕಟ್ಟಿಗೆಗಳನ್ನು ಬಳಸುವ ಮೂಲಕ ಪರಿಸರ ಸಮತೋಲನವನ್ನೂ ಕಾಯ್ದುಕೊಳ್ಳಲಾಗುತ್ತಿದೆ.

ಬ್ರಹ್ಮಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ನಿರ್ಲಕ್ಷ್ಯ: ಸರಕಾರದ ಗಮನಸೆಳೆದ ಶಾಸಕ ನಾಯ್ಕ್

ಬಂಟ್ವಾಳ: ಬ್ರಹ್ಮಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮ ಸ್ಥಾಪನೆಯಾದ ಬಳಿಕ ಬಿಲ್ಲವ- ಈಡಿಗ ಸೇರಿದಂತೆ 26 ಸಮುದಾಯಗಳು ಈ ನಿಗಮದಿಂದ ಸಿಗಬೇಕಾದ ಸೌಲಭ್ಯಗಳು ದೊರಕದೆ ನಿರ್ಲಕ್ಷ್ಯಕ್ಕೊಳಗಾಗಿರುವ ಕುರಿತಾಗಿ ಬಂಟ್ವಾಳ ಶಾಸಕರಾದ ರಾಜೇಶ್ ನಾಯ್ಕ್ ಉಳಿಪಾಡಿಯವರು ಬುಧವಾರ ವಿಧಾನಮಂಡಲದಲ್ಲಿ ಸರಕಾರದ ಗಮನ ಸೆಳೆದರು.

ಅವರ ಚುಕ್ಕೆ ಗುರುತಿನ ಪ್ರಶ್ನೆಗೆಲಿಖಿತ ಉತ್ತರ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಶಿವರಾಜ ತಂಗಡಗಿ ಅವರು ಶ್ರೀ ನಾರಾಯಣಗುರು ಅಭಿವೃದ್ಧಿ ನಿಗಮವನ್ನು 2026ರ ಜನವರಿಯಲ್ಲಿ ನೋಂದಾಯಿಸಲಾಗಿದೆ. ಈ ಸಮುದಾಯದಡಿ ಬರುವ ಜನರಿಗೆ ಇದುವರೆಗೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ನೀಡಲಾಗಿದ್ದು, ಈ ನಿಗಮವನ್ನು ಹೊಸದಾಗಿ ಸ್ಥಾಪಿಸಿರುವುದರಿಂದ ಪ್ರತ್ಯೇಕವಾಗಿ ಕಾರ್ಯಕ್ರಮಗಳ ಮಾರ್ಗಸೂಚಿಗಳನ್ನು ರಚಿಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಯೋಜನೆ, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈವರೆಗೆ ಎಷ್ಟು ಅನುದಾನ ಬಿಡುಗಡೆಗೊಳಿಸಲಾಗಿದೆ ಎಂಬ ಶಾಸಕರ ಉಪಪ್ರಶ್ನೆಗೆ 2026 ಜನವರಿಯಲ್ಲಿ ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮವು ನೋಂದಣಿ ಆಗಿರುವುದರಿಂದ 2025-26ನೇ ಸಾಲಿಗೆ ನಿಗಮಕ್ಕೆ ಪ್ರತ್ಯೇಕವಾದ ಅನುದಾನ ಬಿಡುಗಡೆಯಾಗಿರುವುದಿಲ್ಲ, 2026-27 ಸಾಲಿಗೆ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಬೇಕಾಗಿರುವುದರಿಂದ ಮಾರ್ಗಸೂಚಿಗಳನ್ನು ರಚಿಸುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ ಎಂದು ಸಚಿವ ತಂಗಡಗಿ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



ನೋಂದಣಿಯಾಗದೆ ಅಧ್ಯಕ್ಷರ ನೇಮಕ

ಶಾಸಕ ವಿ.ಸುನೀಲ್ ಕುಮಾರ್ ಇದಕ್ಕೆ ಧ್ವನಿಗೂಡಿಸಿ ಸಚಿವರ ಉತ್ತರದಲ್ಲಿ ಕೆಲವೊಂದು ವ್ಯತ್ಯಾಸ ಕಂಡುಬಂದಿದೆ ಎಂದು ಗಮನಸೆಳೆದರಲ್ಲದೆ ನಿಗಮ ನೋಂದಣಿಯಾಗದೆ ಅಧ್ಯಕ್ಷರನ್ನು ನೇಮಕಗೊಳಿಸಿರುವುದನ್ನು ಪ್ರಶ್ನಿಸಿದರು. ನಾರಾಯಣಗುರು ಅಭಿವೃದ್ಧಿ ಕೋಶ ಇದ್ದ ಸಂದರ್ಭ ಒದಲಾಗಿಸಲಾಗಿದ್ದ 10 ಕೋ.ರೂ.ಅನುದಾನ ಸೇರಿಸಿ 100 ರಿಂದ 500 ಕೋ.ರೂ.ಅನುದಾನ ಒದಗಿಸಬೇಕೆಂದು ಸಚಿವರನ್ನು ಒತ್ತಾಯಿಸಿದರು.

ಕರಾವಳಿಯ ಶಾಸಕರಾದ ಉಮಾನಾಥ ಕೋಟ್ಯಾನ್, ಸುರೇಶ್ ಶೆಟ್ಟಿ ಗುರ್ಮೆ ಅವರು ಚರ್ಚೆಯಲ್ಲಿ ಪಾಲ್ಗೊಂಡರು.

ಇದು ಮಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ- 8

ನೀರಿನ ಸಂಗ್ರಹಣೆ ಇದ್ದರೂ ಇಲ್ಲಿ ನೀರಿಲ್ಲ!

ದಿಗಂತ ವಾಟರ್ ಚೆಕ್

ಮಂಗಳೂರು: ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ಇಲ್ಲ ಎಂದು ಅಧಿಕಾರಿಗಳು ಹೇಳಿದರೆ, ಇತ್ತ ಹೊಸಬೆಟ್ಟು ವಾರ್ಡ್ ವ್ಯಾಪ್ತಿಯಲ್ಲಿ ಮಾತ್ರ ಸಮರ್ಪಕ ವ್ಯವಸ್ಥೆಯ ದೋಷಗಳಿಂದಾಗಿ ಕುಡಿಯುವ ನೀರಿಗಾಗಿ ದಿನನಿತ್ಯ ಸಂಕಷ್ಟ ಅನುಭವಿಸಬೇಕಿದೆ.

ಹಳೆಯ ಟ್ಯಾಂಕ್ ಕಳೆದ ಮಳೆಗಾಲದಲ್ಲಿ ಒಡೆದು ಹೋದ ಕಾರಣ ಈ ಹಿಂದಿನಂತೆ ನೀರು ಸಂಗ್ರಹಣೆ ಸಾಧ್ಯವಾಗುತ್ತಿಲ್ಲ. ಹೊಸ ಸಂಗ್ರಹಣಾ ವ್ಯವಸ್ಥೆಗಳು ನಿರ್ಮಾಣವಾಗಿದ್ದರೂ ಪೈಪ್‌ಲೈನ್ ಜಾಲದ ದುರಸ್ತಿ ಕೊರತೆ ಮತ್ತು ಪಂಪ್ ಹೌಸ್‌ಗಳ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ನೀರು ಮನೆಮನೆಗೂ ತಲುಪುತ್ತಿಲ್ಲ.

ಸರ್ಕಾರ ಜಲಸಿರಿ ಕುಡಿಯುವ ನೀರಿನ ಯೋಜನೆ ಮೂಲಕ ಮನೆ ಮನೆಗೆ ನಿರಂತರ ನೀರು ಪೂರೈಕೆಯ ಉದ್ದೇಶ ಇಟ್ಟುಕೊಂಡಿದೆ. ಆದರೆ ಒಂದೆರಡು ವರ್ಷದಿಂದ ಯೋಜನೆ ಅನುಷ್ಠಾನ, ನಿರ್ವಹಣೆಯಲ್ಲಿ ನಿರ್ಲಕ್ಷ್ಯ ಉಂಟಾಗಿರುವುದರಿಂದ ಕಾಮಗಾರಿ ವಿಳಂಬವಾಗುತ್ತಿದೆ.

ನೀರು ವ್ಯರ್ಥ

ಒಂದೆಡೆ ಪೂರ್ಣಗೊಳ್ಳದ ಜಲಸಿರಿ ಯೋಜನೆ ಮತ್ತೊಂದಿಡೆ ಹಳೆಯ ನೀರಿನ ಜಾಲದಲ್ಲಿ ಸಮರ್ಪಕವಾಗಿ ನೀರು ಪೂರೈಕೆಯಾಗದಿರುವುದರಿಂದ ಜನತೆ ಸಂಕಷ್ಟಕ್ಕೊಳಗಾಗುವಂತಾಗಿದೆ. ಪ್ರಸ್ತುತ ಪೈಪ್‌ಲೈನ್‌ಜಾಲದ ದೋಷಗಳಿಂದಾಗಿ ನೀರು ಹಲವು ಮನೆಗಳಿಗೆ ತಲುಪುವುದಿಲ್ಲ. ಕೆಲವೆಡೆ ಪೈಪ್‌ಲೈನ್‌ಗಳು ಹಳೆಯದಾಗಿ ಹೋಗಿದ್ದು, ಕೆಲವೆಡೆ ಒಡೆದು ಹೋಗಿರುವುದರಿಂದ ನೀರು ಮಧ್ಯದಲ್ಲೇ ಸೋರಿಕೆ ಆಗುತ್ತಿದೆ. ಇದರಿಂದ ಒಂದು ಕಡೆ ನೀರು ವ್ಯರ್ಥವಾಗುತ್ತಿದ್ದು, ಮತ್ತೊಂದೆಡೆ ಜನರಿಗೆ ತಲುಪಬೇಕಾದ ನೀರಿನ ಪ್ರಮಾಣ ಕಡಿಮೆಯಾಗುತ್ತಿದೆ.

ಇದಲ್ಲದೆ ಸ್ಥಳೀಯ ಪಂಪ್ ಹೌಸ್‌ಗಳಲ್ಲಿಯೂ ಹಲವು ಸಮಸ್ಯೆಗಳು ಎದುರಾಗುತ್ತಿವೆ. ಪಂಪ್ ಮೋಟಾರ್‌ಗಳು ಸರಿಯಾಗಿ ಕಾರ್ಯನಿರ್ವಹಿಸದಿರುವುದು, ವಿದ್ಯುತ್ ಸಂಪರ್ಕದ ಸಮಸ್ಯೆಗಳು ಹಾಗೂ ನಿರ್ವಹಣಾ ಕೊರತೆಯಿಂದಾಗಿ ಹಲವಾರು ಬಾರಿ ನೀರಿನ ಪೂರೈಕೆ ಸಂಪೂರ್ಣವಾಗಿ ಸ್ಥಗಿತಗೊಳ್ಳುತ್ತದೆ. ಕೆಲವೊಮ್ಮೆ ಮೋಟಾರ್ ದೋಷ ಉಂಟಾದರೆ ಅದನ್ನು ದುರಸ್ತಿ ಮಾಡಲು ಹಲವು ದಿನಗಳು ಬೇಕಾಗುತ್ತದೆ. ಈ ಅವಧಿಯಲ್ಲಿ ಗ್ರಾಮಸ್ಥರು ಕುಡಿಯುವ ನೀರಿಗಾಗಿ ಪರದಾಡಬೇಕಾಗುತ್ತದೆ. ಕೆಲವೊಮ್ಮೆ ನೀರು ಬಂದರೂ ಒತ್ತಡ ಕಡಿಮೆಯಿರುವುದರಿಂದ ಎಲ್ಲ ಮನೆಗಳಿಗೆ ತಲುಪುವುದಿಲ್ಲ. ಇದರಿಂದ ಜನರು ನೀರು ಸಂಗ್ರಹಿಸಲು ಗಂಟೆಗಳ ಕಾಲ ಕಾಯಬೇಕಾದ ಪರಿಸ್ಥಿತಿ ಎದುರಿಸುತ್ತಿದ್ದಾರೆ. ನೀರಿನ ಸಮಸ್ಯೆಯಿಂದಾಗಿ ಮಹಿಳೆಯರು ಹಾಗೂ ಹಿರಿಯ ನಾಗರಿಕರು ಹೆಚ್ಚು ತೊಂದರೆ ಅನುಭವಿಸುತ್ತಿದ್ದಾರೆ. ಪ್ರಸ್ತುತ ಬೇಸಿಗೆ ಕಾಲದ ಹಿನ್ನೆಲೆಯಲ್ಲಿ ಸಮಸ್ಯೆ ಇನ್ನಷ್ಟು ಗಂಭೀರವಾಗುವ ಭೀತಿ ಹೆಚ್ಚಾಗಿದೆ



ಚರಂಡಿ ವ್ಯವಸ್ಥೆ ಸರಿಯಾಗಲಿ



ಹೊಸಬೆಟ್ಟು ಪ್ರದೇಶದಲ್ಲಿ ಸರಿಯಾದ ಚರಂಡಿ ಇಲ್ಲದೆ ಕುಡಿಯುವ ನೀರಿನ ಬಾವಿಗಳು ಹಾಳಾಗಿ ಮಹಾನಗರ ಪಾಲಿಕೆಯ ನೀರಿಗೆ ಕಾಯುವ ಸ್ಥಿತಿ ಬಂದಿದೆ. ಮೊದಲು ಒಳಚರಂಡಿ ಸಂಪರ್ಕವನ್ನು ಸರಿಪಡಿಸಬೇಕು. ಜೊತೆಗೆ ಕುಡಿಯುವ ನೀರಿನ ಪೂರೈಕೆ ಜಾಲವನ್ನು ಸರಿಮಾಡಿದಲ್ಲಿ ನೀರಿನ ಬವಣೆಯನ್ನು ಸ್ವಲ್ಪಮಟ್ಟಿಗೆ ತಗ್ಗಿಸಬಹುದು.

■ ಶಿವಪ್ರಸಾದ್ ಶೆಟ್ಟಿ, ವೃಂದಾವನ ನಗರ

ಟ್ಯಾಂಕರ್ ನೀರು

ನೀರಿನ ಸಮಸ್ಯೆ ಇದೆ. ಸದ್ಯದ ಮಟ್ಟಿಗೆ ಅಗತ್ಯ ಇದ್ದ ಕಡೆಗೆ ಜನರ ಮನವಿಯ ಮೇರೆಗೆ ಪಾಲಿಕೆ ಟ್ಯಾಂಕರ್ ಮೂಲಕ ನೀರು ಒದಗಿಸಲು ಪ್ರಯತ್ನ ಮಾಡುತ್ತಿದ್ದೇವೆ. ಜಲಸಿ ಯೋಜನೆ ಪೂರ್ಣಗೊಳಿಸಲು ಅಧಿಕಾರಿಗಳು ಮುತುವರ್ಜಿ ವಹಿಸಬೇಕು.

■ ವರುಣ್ ಚೌಟ, ಮಾಜಿ ಕಾರ್ಪೊರೇಟರ್

ಜಲಸಿರಿ ತ್ವರಿತವಾಗಲಿ



ಜಲಸಿರಿ ಕಾಮಗಾರಿ ತ್ವರಿತಗೊಳಿಸಬೇಕು, ಸರ್ಕಾರ ಹೇಳಿದಂತೆ ಜನರಿಗೆ ನಿತ್ಯ ಯಾವುದೇ ಅಡಚಣೆ ಇಲ್ಲದೆ ನೀರು ಪೂರೈಕೆ ಮಾಡುವಂತೆ ಎಲ್ಲಾ ಸೌಲಭ್ಯ ಕಲ್ಪಿಸಬೇಕು. ಸ್ಥಳೀಯ ಜಲ ಸಮೃದ್ಧ ಕೆರೆಗಳನ್ನು ಗುರುತಿಸಿ ಯೋಗ್ಯ ಕೆರೆಗಳನ್ನಾಗಿಸಬೇಕು.

■ ಕೆ.ಪಿ.ಚಂದ್ರಶೇಖರ್, ಕುಳಾಯಿ

ಈ ಭಾಗದಲ್ಲಿ ಹೆಚ್ಚು ಸಮಸ್ಯೆ

ವಾರ್ಡ್ ನಂಬರ್ ಎಂಟರಲ್ಲಿ ಎನ್ ಎಂಪಿ ಟಿ ಕಾಲೋನಿ, ಗ್ರೀನ್ ಪಿಟ್ ಏರಿಯಾ, ಗೋವಿಂದ ದಾಸ ಕಾಲೇಜು ಹಿಂಭಾಗದ ಬಡಾವಣೆ, ಮತ್ತಿತರ ಕಡೆ ನೀರಿನ ಸಮಸ್ಯೆ ಹೆಚ್ಚಾಗಿದೆ. ಇಲ್ಲಿನ ಒಳಚರಂಡಿ ವ್ಯವಸ್ಥೆ ವೈಫಲ್ಯ ಅನುಭವಿಸಿರುವುದರಿಂದ ಬಹುತೇಕ ಕುಡಿಯುವ ನೀರಿನ ಬಾವಿಗಳು ನೀರು ಸೇರಿ ಹಾಳಾಗಿವೆ. ಇದರಿಂದಾಗಿ ಸ್ಥಳೀಯ ಮಂಗಳೂರು ಮಹಾನಗರ ಪಾಲಿಕೆಯ ನೀರಿಗಾಗಿ ಕಾಯುವಂತ ಸ್ಥಿತಿ ಉಂಟಾಗಿದೆ. ಒಳಚರಂಡಿ ವ್ಯವಸ್ಥೆ ಇಲ್ಲಿನ ರಾಘವೇಂದ್ರ ಮಠ, ಸುರತ್ಕಲ್ ಜಂಕ್ಷನ್, ಹೊಸಬೆಟ್ಟು ಮುಂತಾದ ತಗ್ಗು ಪ್ರದೇಶದಲ್ಲಿ ಅಂತರ್ಜಲ ಕಲುಷಿತ ಆಗುವಂತೆ ಆಗಿದೆ.

ನಾಳೆ ವಾರ್ಡ್ 9, ಕುಳಾಯಿ ಪರಿಸರದ ಸ್ಥಿತಿಗತಿ

ಜೀವರಕ್ಷಕ ಔಷಧಿ ಖರೀದಿ: ದಿನೇಶ್ ಗುಂಡೂರಾವ್

ವಿಧಾನಸಭೆ: ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ಉಚಿತವಾಗಿ ವಿತರಿಸಲು ಅನುವಾಗುವಂತೆ ಕೆಎಸ್‌ಎಂಎಸ್‌ಸಿಎಲ್ ವತಿಯಿಂದ ತ್ವರಿತವಾಗಿ ಖರೀದಿ ಹಾಗೂ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ದೊಡ್ಡನಗೌಡ ಹನುಮಗೌಡ ಪಾಟೀಲ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಜೀವ ರಕ್ಷಕ ಔಷಧಿಗಳನ್ನು ಖರೀದಿಸಿ, ರೋಗಿಗಳಿಗೆ ವಿತರಿಸಲು ಸರ್ಕಾರದ ವಿವಿಧ ಅನುದಾನಗಳನ್ನು ಬಳಸಿಕೊಳ್ಳಲು ಸೂಚನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಔಷಧಿ ಕೊರತೆ ಉಂಟಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.

ತಾತ್ಕಾಲಿಕವಾಗಿ ಅಗತ್ಯ ಔಷಧಿಗಳನ್ನು ಕೆಎಸ್‌ಎಂಎಸ್‌ಸಿಎಲ್ ಬ್ಯಾಂಕ್ ಖಾತೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಿ ಬಳಸಲು ಅನುಮತಿ ನೀಡಿ ಎಲ್ಲಾ ಆರೋಗ್ಯ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ರೋಗಿಗಳಿಗೆ ಉಚಿತವಾಗಿ ಔಷಧಿಗಳನ್ನು ವಿತರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕುಷ್ಟಗಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಕೆಕೆಆರ್‌ಡಿಬಿ ಅನುದಾನದಡಿ ಸರಬರಾಜಾಗಿರುವ ಸಿ.ಟಿ. ಸ್ಕ್ಯಾನ್ ಕಾರ್ಯನಿರ್ವಹಿಸುತ್ತಿದೆ. ಬಡರೋಗಿಗಳಿಗೆ ಉಚಿತವಾಗಿ ಸೌಲಭ್ಯವನ್ನು ನೀಡಲಾಗುತ್ತಿದ್ದು, ಸಿ.ಟಿ. ಸ್ಕ್ಯಾನ್ ವಿಭಾಗದಲ್ಲಿ ಆಪರೇಟರ್ ಕೊರತೆಯಾಗದಂತೆ ತಂತ್ರಜ್ಞರಿಂದ ಸೇವೆಯನ್ನು ಒದಗಿಸಲಾಗುತ್ತಿದೆ. ಕುಷ್ಟಗಿಯಲ್ಲಿ ತಾಯಿ – ಮಕ್ಕಳ ಆಸ್ಪತ್ರೆ ಉದ್ಘಾಟಣೆಯಾಗಿದ್ದು, ಆಸ್ಪತ್ರೆಗೆ ಬೇಕಾದ ಅಗತ್ಯ ಸಿಬ್ಬಂದಿ ನೇಮಕ ಹಾಗೂ ಪರಿಕರಗಳನ್ನು ಒದಗಿಸುವ ವ್ಯವಸ್ಥೆಯಾಗುತ್ತಿದೆ ಎಂದು ವಿವರಿಸಿದರು.

ರಾಮ ಬಾಣ



ವಂಚನೆ ಪ್ರಕರಣದಲ್ಲಿ ವಿದ್ಯಾವಂತರೇ ಹೆಚ್ಚು ಸಂತ್ರಸ್ತರು: ಪರಮೇಶ್ವರ್

ವಿಧಾನಪರಿಷತ್: ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಸೈಬರ್ ವಂಚನೆಗಳ ಸಂಬಂಧ ನನ್ನ ಬ್ಯಾಂಕ್ ಖಾತೆ ಕೂಡ ಸುರಕ್ಷಿತವಲ್ಲ. ಇಂದಿನ ಯುಗದಲ್ಲಿ ಕಂಪೆನಿಯೊಂದರಲ್ಲಿ ಉನ್ನತ ಸ್ಥಾನದಲ್ಲಿದ್ದ ಪ್ರಮುಖ ಮಹಿಳೆಯೊಬ್ಬರಿಗೆ ಸೈಬರ್ ವಂಚನೆ ಮಾಡಿ 32 ಕೋಟಿ ರೂ. ವಂಚನೆ ಪ್ರಕರಣ ನಡೆದಿದೆ. ವಿದ್ಯಾವಂತರು, ಬುದ್ಧಿವಂತರು ಸಹ ಈ ಜಾಲದಲ್ಲಿ ಸಿಲುಕಿಕೊಂಡ ಪ್ರಕರಣಗಳಿವೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಗೋವಿಂದ ರಾಜು ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕರ್ನಾಟಕದಲ್ಲಿ ಕಳೆದ ಮೂರು ವರ್ಷಗಳಲ್ಲಿ 59,632 ಸೈಬರ್ ಅಪರಾಧ ಪ್ರಕರಣಗಳಲ್ಲಿ ಜನರು 5,473.97 ಕೋಟಿ ರೂ. ಕಳೆದುಕೊಂಡು ವಂಚನೆಗೊಳಗಾಗಿದ್ದಾರೆ ಎಂದರು. ಇದರಲ್ಲಿ ಪೊಲೀಸರು ಒಟ್ಟು 730 ಕೋಟಿ ರೂ. (ಶೇ. 12) ಮಾತ್ರ ಪಡೆಯಲು ಸಾಧ್ಯವಾಗಿದೆ. 2024 ರಲ್ಲಿ 22,483 ಸೈಬರ್ ಪ್ರಕರಣ ದಾಖಲಾಗಿದ್ದು, 2025ರಲ್ಲಿ 14,899 ಪ್ರಕರಣ ದಾಖಲಾಗಿವೆ. 2020–21ರಲ್ಲಿ 446 ಕೋಟಿ ವಂಚನೆಯಾದರೆ ಈ ಪೈಕಿ 97 ಕೋಟಿ ರೂ. ವಾಪಸ್ ಪಡೆಯಲಾಗಿದೆ. 2024ರಲ್ಲಿ 2,399 ಕೋಟಿ ಪೈಕಿ 390 ಕೋಟಿ ರೂ. ವಾಪಸ್ ವಶಕ್ಕೆ ಪಡೆಯಲಾಗಿದೆ. ಅದೇ ರೀತಿ 2025ರಲ್ಲಿ 2,200 ಕೋಟಿಯಲ್ಲಿ 231 ಕೋಟಿ ರೂ. ವಾಪಸ್ ಪಡೆಯಲಾಗಿದೆ ಎಂದು ಸಚಿವರು ತಿಳಿಸಿದರು.

ಡಿಜಿಟಲ್ ಅರೆಸ್ಟ್ ಪ್ರಕರಣಗಳು ಕಡಿಮೆಯಾಗಿದ್ದು, ಕಳೆದ ವರ್ಷ 345 ಪ್ರಕರಣಗಳಲ್ಲಿ 215 ಕೋಟಿ ರೂ. ವಂಚನೆಯಾಗಿದೆ. ಅಮಾಯಕರ ಬ್ಯಾಂಕ್ ಖಾತೆಗಳನ್ನು ಬಳಸಿ ರಾಜ್ಯದಲ್ಲಿ ಸೈಬರ್ ಅಪರಾಧಗಳಿಗೆ ಬಳಸಲಾಗುತ್ತಿದ್ದ ಸುಮಾರು 42 ಸಾವಿರ ಮ್ಯೂಲ್ ಬ್ಯಾಂಕ್ ಖಾತೆಗಳನ್ನು ಪತ್ತೆ ಹಚ್ಚಿದೆ. ಇದುವರೆಗೂ 500ಕ್ಕೂ ಅಧಿಕ ಮಂದಿಯನ್ನು ಬಂಧಿಸಲಾಗಿದೆ ಎಂದು ಹೇಳಿದರು. ಭಾರತದಲ್ಲೇ ಪ್ರಪ್ರಥಮವಾಗಿ ಬೆಂಗಳೂರು ನಗರದಲ್ಲಿ ವಿಶೇಷ 43 ಸೈಬರ್ ಪೊಲೀಸ್ ಠಾಣೆಯನ್ನು ಸ್ಥಾಪಿಸುವ ಮೂಲಕ ರಾಜ್ಯದ ಪೊಲೀಸ್ ಇಲಾಖೆ ಮುಂಚೂಣಿಯಲ್ಲಿದೆ. ಪ್ರತಿದಿನ ದಾಖಲಾಗುವ ಪ್ರಕರಣಗಳನ್ನು ಶೀಘ್ರವಾಗಿ ವಿಚಾರಣೆ ನಡೆಸಲು ರಾಜ್ಯದಲ್ಲಿ ಡಿಜಿಪಿ ಸೈಬರ್ ಕಮಾಂಡ್ ಹುದ್ದೆ ಸೃಜಿಸಲಾಗಿದೆ ಎಂದು ಹೇಳಿದರು.

ಕಿಡಿ ನುಡಿ

ವಾಸುದೇವರಾವ್ ಕಕ್ಕೆನೇಜಿ

ಸಿದ್ದರಾಮಯ್ಯ ಮಂಡಿಸಿದ ಬಜೆಟ್ ನಲ್ಲಿ ಅಂಕಿ ಅಂಶ ದೊಡ್ಡದಾಗಿದೆ, ಒಳಗೆ ತಿರುಳಿಲ್ಲ
– ಆರ್.ಅಶೋಕ್
– ಪರ್ಸ್ ದೊಡ್ಡದು, ಒಳಗೆ ಪೈಸೆಯೂ ಇಲ್ಲ ಎಂಬಂತೆ!

ದಿನ ಭವಿಷ್ಯ

ಮೇಷ ಉದ್ಯೋಗ ಬದಲಾವಣೆಗೆ ಈಗ ಕಾಲ ಅಪಕ್ವ. ಆಪ್ತರ ಕುರಿತಂತೆ ಭಾವುಕ ಪ್ರಸಂಗ ಎದುರಿಸುವಿರಿ. ಹಣದ ಬಿಕ್ಕಟ್ಟು ಪರಿಹಾರ.

ವೃಷಭ ವೃತ್ತಿ ಒತ್ತಡ ಕಡಿಮೆ. ಆದರೆ ಖಾಸಗಿ ಬದುಕಲ್ಲಿ ಹೊಸ ಸವಾಲು ಉದ್ಭವ. ದಿನದಂತ್ಯಕ್ಕೆ ಸಂತೋಷ ಪಡುವ ಬೆಳವಣಿಗೆ. ಆಪ್ತ ಸಂಗದಿಂದ ನೆಮ್ಮದಿ.

ಮಿಥುನ ಖಾಸಗಿ ಮತ್ತು ವೃತ್ತಿ ಬದುಕಲ್ಲಿ ಪೂರಕ ದಿನ. ಸಂಕೀರ್ಣ ಕಾರ್ಯವನ್ನು ಸುಲಭದಲ್ಲಿ ಮುಗಿಸುವಿರಿ. ವಿವಾಹಿತರ ಪಾಲಿಗೆ ಶುಭ ಬೆಳವಣಿಗೆ ಸಂಭವ.

ಕಟಕ ಇಂದು ಸಕಾಲದಲ್ಲಿ ಕಾರ್ಯ ಮುಗಿಯದು. ಕೆಲ ವಿದ್ಯಮಾನಗಳಿಗೆ ಭಾವಾವೇಶ ತೋರುವಿರಿ. ಶಾಂತಚಿತ್ತರಾಗಿ ಪ್ರತಿಕ್ರಿಯೆ ತೋರುವುದು ಅವಶ್ಯ.

ಸಿಂಹ ಎಲ್ಲ ಇದ್ದೂ ಅಸಂತೃಪ್ತಿಯ ಭಾವ. ಕೆಲ ವಿಷಯ ಅಗತ್ಯಕ್ಕಿಂತ ಗಂಭೀರ ತೆಗೆದುಕೊಳ್ಳದಿರಿ. ನೆಮ್ಮದಿ ಕೆಡಿಸಲು ಅವಕಾಶ ಕೊಡದಿರಿ.

ಕನ್ಯಾ ಏರಿಳಿತಗಳ ದಿನ. ವೃತ್ತಿಯಲ್ಲಿ ಹೊಣೆ ಹೆಚ್ಚು. ಹೊಸ ಉದ್ಯೋಗ ಅವಕಾಶ. ಪ್ರೀತಿಯಲ್ಲಿ ಅಪಸ್ವರ ಎದ್ದೀತು. ವಿವೇಕದಿಂದ ವ್ಯವಹರಿಸಿ.

ತುಲಾ ಸಂಬಂಧದಲ್ಲಿ ಉಂಟಾಗಿದ್ದ ಸಮಸ್ಯೆ ನಿವಾರಣೆ. ಹಣದ ವಿಚಾರದಲ್ಲಿ ಎಚ್ಚರವಿರಲಿ. ಸಾಲ ನೀಡಿದರೆ ಮರಳಿ ಬಾರದ ಪರಿಸ್ಥಿತಿ.

ವೃಶ್ಚಿಕ ಇನ್ನಷ್ಟು ವಿಳಂಬ ಬೇಡ, ಪ್ರಮುಖ ನಿರ್ಧಾರ ಇಂದೇ ತಾಳಿ. ಅದರಿಂದ ಉತ್ತಮ ಫಲಿತಾಂಶ. ಹಿರಿಯರಿಗೆ ದೈಹಿಕ ನೋವು.

ಧನು ವೃತ್ತಿಯ ಒತ್ತಡ ನಿಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ವೃತ್ತಿ ಮಾತ್ಸರ್ಯ ನೆಮ್ಮದಿ ಕಲಕಬಹುದು.

ಮಕರ ವೃತ್ತಿಯ ಹೆಚ್ಚುವರಿ ಹೊಣೆಯನ್ನು ಸರಿಯಾಗಿ ನಡೆಸುವಿರಿ. ಶೇರು ವ್ಯವಹಾರ ಲಾಭ ತರಲಿದೆ. ಮನೆಯ ಕಾರ್ಯ ಸುಗಮವಾಗಿ ಸಾಗಲಿದೆ.

ಕುಂಭ ಪ್ರತಿಯೊಬ್ಬರ ವಿಷಯವನ್ನೂ ನೀವೇ ನಿರ್ಧರಿಸುವವರು ಎಂಬಂತೆ ವರ್ತಿಸದಿರಿ. ನಿಮ್ಮ ನಡೆಗೆ ಕೆಲವರ ವಿರೋಧ ಸಂಭವ.

ಮೀನ ಪ್ರೀತಿಯಲ್ಲಿ ಗುಣಾತ್ಮಕ ಬೆಳವಣಿಗೆ. ಆತ್ಮೀಯರ ಬೆಂಬಲ. ಮನದ ಒತ್ತಡ ನಿವಾರಣೆ. ವೃತ್ತಿಯಲ್ಲಿ ಇತರರ ಸಹಕಾರ ಪಡೆಯುವಿರಿ.

ರಾಹುಕಾಲ: 10.30–12.00
ಗುಳಿಕಕಾಲ: 7.30–9.00

ಅದೃಷ್ಟ ಸಂಖ್ಯೆ : 3,5,9,2

56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಜಾರಿಯಾಗಲಿ

ಒಳ ಮೀಸಲಿಗೆ ಮಾದಿಗರ ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ಬಾಕಿ ಇರುವ 56,432 ಹುದ್ದೆಗಳ ನೇಮಕಾತಿಯಲ್ಲಿ ತಕ್ಷಣವೇ ಒಳ ಮೀಸಲಾತಿ ಜಾರಿಗೊಳಿಸಬೇಕು ಹಾಗೂ ಈ ಬಗ್ಗೆ ಶುಕ್ರವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಅಂತಿಮ ತೀರ್ಮಾನ ಕೈಗೊಳ್ಳಬೇಕೆಂದು ಆಗ್ರಹಿಸಿ ಸಾವಿರಾರು ದಲಿತ ಹೋರಾಟಗಾರರು ಬೃಹತ್ ಪ್ರತಿಭಟನೆ ನಡೆಸಿದರು.

ಒಳಮೀಸಲಾತಿ ಹೋರಾಟ ಸಮಿತಿ ನೇತೃತ್ವದಲ್ಲಿ ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಜಮಾವಣೆಗೊಂಡ ಸಾವಿರಾರು ಜನರು, ರಾಜ್ಯ ಸರಕಾರದ ವಿರುದ್ಧ ಅಸಮಾಧಾನ ಹೊರಹಾಕಿದರು. ಒಳ ಮೀಸಲಾತಿ ಜಾರಿಯಾಗುವವರೆಗೆ ಯಾವುದೇ ನೇಮಕಾತಿ ಪ್ರಕ್ರಿಯೆ ನಡೆಸಬಾರದು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದಿದ್ದರು.

ಒಳ ಮೀಸಲಾತಿಯನ್ನು ತಪ್ಪಿಸಲು ರಾಜ್ಯ ಸರ್ಕಾರ ವ್ಯವಸ್ಥಿತ ಸಂಚು ರೂಪಿಸುತ್ತಿದೆ. ತರಾತುರಿಯಲ್ಲಿ ಹೊರಡಿಸಿರುವ ನೇಮಕಾತಿ ಆದೇಶಗಳನ್ನು ಹಿಂಪಡೆಯಬೇಕು. ಬಡ್ತಿ, ಬ್ಯಾಕ್ ಲಾಗ್ ಹುದ್ದೆ ಹಾಗೂ ಅನುದಾನಿತ ಸಂಸ್ಥೆಗಳಲ್ಲೂ ಒಳ ಮೀಸಲಾತಿ ಅನ್ವಯಿಸಬೇಕು, ಎಂದು ಹೋರಾಟಗಾರರು ಒತ್ತಾಯಿಸಿದರು. ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯಂತೆ ಎಸ್ಸಿ ಮೀಸಲಾತಿಯನ್ನು ಶೇ.17ಕ್ಕೆ ಹೆಚ್ಚಿಸಿರುವುದನ್ನು ಸಂವಿಧಾನದ 9ನೇ ಅನುಸೂಚಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಬೇಕೆಂದು ಆಗ್ರಹಿಸಿದರು.

ತೆಲಂಗಾಣದಲ್ಲಿ ಒಳಮೀಸಲಾತಿ ಅನುಷ್ಠಾನದ ನೇತಾರ, ಮಂದಕೃಷ್ಣ ಮಾದಿಗ ಮಾತನಾಡಿ, ಕಾಂಗ್ರೆಸ್ ಹೈಕಮಾಂಡ್ ಅನ್ನು ನಿಯಂತ್ರಿಸುತ್ತಿರುವ ಮಲ್ಲಿಕಾರ್ಜುನ ಖರ್ಗೆ ಅವರು ಒಳ ಮೀಸಲಾತಿ ಜಾರಿಗೆ ಅಡ್ಡಿಯಾಗಿದ್ದಾರೆ. ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿ ಜಾರಿಯಾದರೂ ಕರ್ನಾಟಕದಲ್ಲಿ ಯಾಕೆ ಸಾಧ್ಯವಾಗುತ್ತಿಲ್ಲ? ಎಂದು ಪ್ರಶ್ನಿಸಿದರು.

ಮಾದರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕೂಡಲೇ ನಿರ್ಧಾರ ಕೈಗೊಳ್ಳಬೇಕು. ಇಲ್ಲದಿದ್ದರೆ ಹೋರಾಟವು ಫ್ರೀಡಂ ಪಾರ್ಕ್‌ನಿಂದ ವಿಧಾನಸೌಧಕ್ಕೆ ಸ್ಥಳಾಂತರಗೊಳ್ಳಲಿದೆ, ಎಂದು ಎಚ್ಚರಿಕೆ ನೀಡಿದರು.



ಸಚಿವರ ಭರವಸೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವರಾದ ಕೆ.ಎಚ್. ಮುನಿಯಪ್ಪ, ಸತೀಶ್ ಜಾರಕಿಹೊಳಿ, ಈಶ್ವರ್ ಖಂಡ್ರೆ, ದಿನೇಶ್ ಗುಂಡೂರಾವ್ ಹಾಗೂ ಮಾಜಿ ಸಚಿವ ಎಚ್. ಆಂಜನೇಯ ಅವರು ಪ್ರತಿಭಟನಾಕಾರರ ಅಹವಾಲು ಸ್ವೀಕರಿಸಿದರು. ಮಾ.27 ರಂದು ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಸಮಗ್ರವಾಗಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಒಳ ಮೀಸಲಾತಿ ಜಾರಿಯಾಗುವವರೆಗೂ ಯಾವುದೇ ಹೊಸ ನೇಮಕಾತಿ ಪ್ರಕ್ರಿಯೆ ನಡೆಸುವುದಿಲ್ಲ, ಎಂಬ ಭರವಸೆಯನ್ನು ಸಚಿವರು ನೀಡಿದರು.

ಪ್ರತಿಭಟನೆಯ ಧಗಧಗ: ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಜನರು ಆನಂದ್ ರಾವ್ ವೃತ್ತದಿಂದ ಕೆ.ಆರ್. ವೃತ್ತದವರೆಗೆ ಜಮಾಯಿಸಿದ್ದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ಅಲೆಮಾರಿ ಸಮುದಾಯದವರು ಮೈಮೇಲೆ ಚಾವಟಿಯಿಂದ ಹೊಡೆದುಕೊಂಡು ನ್ಯಾಯಕ್ಕಾಗಿ ಆಗ್ರಹಿಸಿದ ದೃಶ್ಯ ಮನಕಲಕುವಂತಿತ್ತು. ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಅವರನ್ನು ತಕ್ಷಣವೇ ಬದಲಾಯಿಸಬೇಕೆಂದು ಘೋಷಣೆ ಕೂಗಿದರು. ಪ್ರತಿಭಟನೆಯಲ್ಲಿ ಮಾದರ ಚೆನ್ನಯ್ಯ ಸ್ವಾಮೀಜಿ, ಮಂದಕೃಷ್ಣ ಮಾದಿಗ, ಮಾರಸಂದ್ರ ಮುನಿಯಪ್ಪ, ಹನುಮೇಗೌಡ ಬೀರರಕಲ್ಲು, ಎಸ್.ಮಾರಪ್ಪ, ಬಸವರಾಜ್ ಕೌತಾಳ್, ಅಂಬಣ್ಣ ಅರೋಲಿಕರ್, ನರಸಪ್ಪ ದಂಡೋರ, ಬಿ.ಆರ್. ಭಾಸ್ಕರ್‌ಪ್ರಸಾದ್, ಹರಿರಾಮ್, ಡಾ. ಪಿ.ಮೂರ್ತಿ ಇದ್ದರು.

ಕ್ರೀಡಾಂಗಣ ನಿರ್ಮಾಣಕ್ಕೆ ಆಡಳಿತಾತ್ಮಕ ಒಪ್ಪಿಗೆ

ಬೆಂಗಳೂರು: ಆನೇಕಲ್ ತಾಲೂಕಿನ ಸೂರ್ಯ ನಗರದಲ್ಲಿ 813 ಕೋಟಿ ರೂ. ವೆಚ್ಚದಲ್ಲಿ ಅಂತಾರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಆಡಳಿತಾತ್ಮಕ ಒಪ್ಪಿಗೆ ನೀಡಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಪ್ರಕರಣದಿಂದ ಕ್ರೀಡಾಂಗಣವನ್ನು ನಗರದಿಂದ ದೂರದಲ್ಲಿ ಹೊಸ ಕ್ರೀಡಾಂಗಣ ನಿರ್ಮಿಸಬೇಕೆನ್ನುವ ಸಲಹೆಗೆ ಸರ್ಕಾರ ಮಣೆ ಹಾಕಿದ್ದು, ಸೂರ್ಯನಗರದಲ್ಲಿ 75 ಎಕರೆ ಜಮೀನಿನಲ್ಲಿ ನೂತನ ಕ್ರೀಡಾಂಗಣ ನಿರ್ಮಾಣವಾಗಲಿದೆ.

ಕ್ರೀಡಾಂಗಣದ ಸುತ್ತ ವಾಣಿಜ್ಯ ಮಳಿಗೆ ಮತ್ತು ಇತರೆ ಕಟ್ಟಡ ಕಾಮಗಾರಿಗಳ ಪರಿಷ್ಕೃತ ವೆಚ್ಚದ ಮಾಹಿತಿ ನೀಡಲು ಸಂಪುಟ ಸಭೆಯು ಸಂಬಂಧಿಸಿದ ಇಲಾಖೆಗೆ ಸೂಚನೆ ನೀಡಿದೆ. ಸೂರ್ಯನಗರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಕ್ರಿಕೆಟ್ ಸ್ಟೇಡಿಯಂ ಮತ್ತು ಕ್ರೀಡಾ ಸಂಕೀರ್ಣ ನಿರ್ಮಿಸಲು ಕರ್ನಾಟಕ ಗೃಹ ಮಂಡಳಿ ಮುಂದಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

ಮಂಡ್ಯ ವಿಧಾನಸಭಾ ಕ್ಷೇತ್ರದ 4 ಕಾವೇರಿ ನಾಲೆಗಳಿಗೆ ವಿತರಣಾ ನಾಲೆ ಹಾಗೂ ಪಿಕಪ್ ನಾಲೆಗಳ ಆಧುನೀಕರಣಕ್ಕೆ 100 ಕೋಟಿ ಅನುದಾನ ನೀಡಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದ್ದು, ಕಾವೇರಿ ಶಾಖಾ ನಾಲೆ, ಕೆರೆಗೋಡು ಶಾಖಾ ನಾಲೆ, ಶಿಂಸಾ ಶಾಖಾ ನಾಲೆಗಳ ಆಧುನೀಕರಣಗೊಳ್ಳಲಿವೆ. ಮೈ ಶುಗರ್ ಸಕ್ಕರೆ ಕಾರ್ಖಾನೆ ದುರಸ್ತಿಗೆ ಸಂಪುಟ ಸಭೆಯಲ್ಲಿ ಒಪ್ಪಿಗೆ ಸಿಕ್ಕಿದ್ದು, 5 ಸಾವಿರ ಟಿಸಿಡಿ ಕಬ್ಬು ನುರಿಯುವ ಹೊಸ ಯಂತ್ರೋಪಕರಣ ಅಳವಡಿಕೆಗೆ ಸಂಪುಟ ಅನುಮೋದನೆ ನೀಡಿದೆ.

ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣ: 683 ಕೋಟಿ ವೆಚ್ಚದಲ್ಲಿ ಕೆಪಿಎಸ್ ಶಾಲೆಗಳನ್ನಾಗಿ ಉನ್ನತೀಕರಿಸಲು ಸಂಪುಟ ಒಪ್ಪಿಗೆ ನೀಡಿದ್ದು, 76 ಮೌಲಾನಾ ಆಝಾದ್ ಆಂಗ್ಲ ಮಾದರಿ ಶಾಲೆಗಳು ಮತ್ತು 41 ಉರ್ದು ಮಾಧ್ಯಮ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಣಕ್ಕೆ ಸಂಪುಟದಲ್ಲಿ ನಿರ್ಧರಿಸಲಾಗಿದೆ.

ನೂತನ ಜಾಹಿರಾತು ನೀತಿ

ಸರ್ಕಾರಕ್ಕೆ ಆದಾಯ ತರುವ ನಿಟ್ಟಿನಲ್ಲಿ ನೂತನ ಜಾಹಿರಾತು ನೀತಿಗೆ ಸಚಿವ ಸಂಪುಟ ಸಭೆ ಅಸ್ತು ಎಂದಿದ್ದು, ಜಾಹಿರಾತು ನೀತಿ–2026ಕ್ಕೆ ಒಪ್ಪಿಗೆ ಸಿಕ್ಕಿದೆ.

ಭಾರತಕ್ಕೆ ತೈಲ, ಅನಿಲ ಸರಾಗ

ಪುಟ ೧➡ ಶೆನ್ ಲಾಂಗ್ ಎಂಬ ಸೂಯೆಜ್‌ಮ್ಯಾಕ್ಸ್ ವರ್ಗದ ಈ ಹಡಗು ಮಾ.1ರಂದು ಸೌದಿ ಅರೇಬಿಯಾದ ರಾಸ್ ತನುರಾ ಬಂದರಿನಿಂದ ಕಚ್ಚಾ ತೈಲವನ್ನು ಹೊತ್ತು ಭಾರತತ್ತ ಪ್ರಯಾಣ ಆರಂಭಿಸಿತ್ತು. ಇದೇ ಸಮಯದಲ್ಲಿ ಅಮೆರಿಕ ಮತ್ತು ಇಸ್ರೇಲ್ ದಾಳಿಗಳ ಹಿನ್ನೆಲೆಯಲ್ಲಿ ಇರಾನ್ ಹಾರ್ಮುಜ್ ಜಲಸಂಧಿಯನ್ನು ತಾತ್ಕಾಲಿಕವಾಗಿ ಬಂದ್ ಮಾಡಿತ್ತು. ಇದರಿಂದಾಗಿ ಹಡಗು ಕೆಲ ದಿನಗಳು ಸಮುದ್ರದಲ್ಲೇ ನಿಂತಿತ್ತು. ಯುದ್ಧ ಆರಂಭವಾದ ನಂತರವೂ ಹಾರ್ಮುಜ್ ಜಲಮಾರ್ಗದಲ್ಲಿ ಇನ್ನೂ 28 ಭಾರತೀಯ ಧ್ವಜ ಹೊಂದಿರುವ ಹಡಗುಗಳು ಸಿಲುಕಿಕೊಂಡಿವೆ ಎಂದು ಭಾರತದ ಹಡಗು ನಿರ್ದೇಶನಾಲಯದ ಮಹಾನಿರ್ದೇಶಕರು ಮಾಹಿತಿ ನೀಡಿದ್ದಾರೆ.

ಅನುಮತಿ ಪಡೆಯದ ಹಡಗುಗಳಿಗೆ ಎಚ್ಚರಿಕೆ

ಪುಟ ೧➡ ಅಮೆರಿಕ ಮತ್ತು ಇಸ್ರೇಲ್ ಜತೆ ಉದ್ವಿಗ್ನತೆ ಹೆಚ್ಚಾದ ನಂತರ, ಇರಾನ್ ಹಾರ್ಮುಜ್ ಜಲಸಂಧಿಯಲ್ಲಿ ಸಾಗುವ ಸಮುದ್ರ ಸಂಚಾರದ ಮೇಲೆ ಕಟ್ಟುನಿಟ್ಟಿನ ನಿಯಂತ್ರಣ ಹೇರಿದೆ. ವಾಷಿಂಗ್ಟನ್ ಅಥವಾ ಟೆಲ್ ಅವೀವ್ ಹಿತಾಸಕ್ತಿಗೆ ಸೇವೆ ಸಲ್ಲಿಸದ ಹಡಗುಗಳು ಸುರಕ್ಷಿತವಾಗಿ ಜಲಸಂಧಿಯನ್ನು ದಾಟಬಹುದು ಎಂದು ಇರಾನ್ ಅಧಿಕಾರಿಗಳು ಸೂಚಿಸಿದ್ದಾರೆ.



ಭಾರತದ ಕಚ್ಚಾತೈಲ ಪೂರೈಕೆ ಸ್ಥಿತಿ ಸುರಕ್ಷಿತವಾಗಿದೆ. ದೇಶಕ್ಕೆ ಅಗತ್ಯ ಶೇ.70 ಕಚ್ಚಾತೈಲ ಸಹಿತ ಆಮದುಗಳನ್ನು ಹಾರ್ಮುಜ್ ಜಲಸಂಧಿ ಬಿಟ್ಟು ಬೇರೆ ದಾರಿಯಿಂದ ತರಿಸಿಕೊಳ್ಳಲು ಭಾರತ ಸೂಕ್ತ ವ್ಯವಸ್ಥೆ ಮಾಡಿದೆ.
■ ಹರ್ದೀಪ್ ಸಿಂಗ್ ಪುರಿ,
ಕೇಂದ್ರ ಇಂಧನ ಸಚಿವ

ಯುದ್ಧದ ನೆರಳಲ್ಲಿ ‘ಕತ್ತಲ ದಾರಿ’ ಪಯಣ!

ಪುಟ ೧➡ ಆದರೆ ಅಪಾಯಕರ ಪ್ರದೇಶಗಳಲ್ಲಿ ಕೆಲವೊಮ್ಮೆ ಹಡಗುಗಳು ಈ ವ್ಯವಸ್ಥೆಯನ್ನು ಆಫ್ ಮಾಡಿ ‘ಡಾರ್ಕ್’ ಆಗುತ್ತವೆ. ಅಂದರೆ ರಾಡಾರ್ ಟ್ರ್ಯಾಕಿಂಗ್‌ನಲ್ಲಿ ಕಾಣಿಸಿಕೊಳ್ಳುವುದಿಲ್ಲ. ಈ ಟ್ಯಾಂಕರ್ ಕೂಡ ಹಾರ್ಮುಜ್ ಜಲಸಂಧಿಯಲ್ಲಿ ಪ್ರವೇಶಿಸಿದ ಬಳಿಕ ಎಐಎಸ್ ಸಿಗ್ನಲ್ ನಿಲ್ಲಿಸಿ ಕೆಲವು ಸಮಯ ‘ಕಣ್ಮರೆಯಾಯಿತು’. ನಂತರ ಸುರಕ್ಷಿತವಾಗಿ ಮಾರ್ಗ ದಾಟಿದ ಬಳಿಕ ಮತ್ತೆ ಟ್ರ್ಯಾಕಿಂಗ್ ವ್ಯವಸ್ಥೆ ಚಾಲನೆ ಮಾಡಿತು.

ಸಂದರ್ಶನ ದಿನಾಂಕ ಹಿಂಪಡೆದ ಆಯೋಗ

ಪುಟ ೧➡ ಅಲ್ಲದೇ, ಮಾ.23ರಿಂದ ಮೇ 4ರವರೆಗೆ ವ್ಯಕ್ತಿತ್ವ ಪರೀಕ್ಷೆ ಹಾಗೂ ದಾಖಲೆ ಪರಿಶೀಲನೆ ನಡೆಸಲು ಮುಂದಾಗಿತ್ತು. ಆದರೆ, ಈ ಮುಖ್ಯ ಪರೀಕ್ಷೆಯಲ್ಲಿ ಒಂದೇ ಕೊಠಡಿಯಲ್ಲಿ 11ಕ್ಕೂ ಹೆಚ್ಚು ಅಭ್ಯರ್ಥಿಗಳು ಪಾಸ್ ಆಗಿದ್ದರು. ಈ ವಿಚಾರ ಸಾಕಷ್ಟು ಅನುಮಾನಗಳಿಗೆ ಎಡೆಮಾಡಿಕೊಟ್ಟಿತ್ತು. ಅಲ್ಲದೇ ಕೆಲವು ಅಭ್ಯರ್ಥಿಗಳು ಮುಖ್ಯಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿದ್ದವು. ಅಲ್ಲದೇ ಸಂದರ್ಶನದ ಆಯ್ಕೆ ಪಟ್ಟಿ ವಾಪಸ್ ಪಡೆಯುವಂತೆ ಹಾಗೂ ಇನ್ನೊಮ್ಮೆ ಮುಖ್ಯ ಪರೀಕ್ಷೆ ನಡೆಸುವಂತೆ ಹಾಗೂ ಈ ಬಗ್ಗೆ ತನಿಖೆ ನಡೆಸುವಂತೆ ಆಗ್ರಹಿಸಿದ್ದರು. ಅಲ್ಲದೇ, ಈ ವಿಚಾರ ವಿಧಾನಮಂಡಲ ಅಧಿವೇಶದಲ್ಲಿಯೂ ಪ್ರತಿಧ್ವನಿಸಿತ್ತು. ಅಕ್ರಮದ ಬಗ್ಗೆ ತನಿಖೆಗೆ ವಿಪಕ್ಷಗಳು ಒತ್ತಾಯಿಸಿದ್ದವು. ಈಗ ಕರ್ನಾಟಕ ಲೋಕಸೇವಾ ಆಯೋಗ ಸಂದರ್ಶನ ದಿನಾಂಕ ಹಾಗೂ ದಾಖಲೆ ಪರಿಶೀಲನೆ ವಾಪಸ್ ಪಡೆದಿದ್ದು, ನೂತನ ದಿನಾಂಕವನ್ನು ಮುಂದೆ ತಿಳಿಸಲಾಗುತ್ತೆ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಜ್ಯೋತಿ ತಿಳಿಸಿದ್ದಾರೆ.

ಗೊಂದಲ ಬಗೆಹರಿಸಲು ಸರ್ಕಾರಕ್ಕೆ ಒತ್ತಾಯ

ವಿಧಾನಸಭೆ: ಇತ್ತೀಚೆಗೆ ನಡೆದ ಕೆಪಿಎಸ್‌ಸಿ ಪರೀಕ್ಷೆ ಗೊಂದಲಗಳ ಬಗ್ಗೆ ವಿಪಕ್ಷದಿಂದ ಸದನದಲ್ಲಿ ಪ್ರಸ್ತಾಪಿಸಲಾಯಿತು. ಕೆಪಿಎಸ್‌ಸಿ ಪರೀಕ್ಷೆ ಗೊಂದಲ ಕುರಿತು ನಿಯಮ 69ರ ಮೇಲೆ ವಿಷಯ ಪ್ರಸ್ತಾಪಿಸಿ ಮಾತನಾಡಿದ ಶಾಸಕ ಸುನೀಲ್ ಕುಮಾರ್ ಅವರು, ಒಂದೇ ಕೊಠಡಿಯಲ್ಲಿ 11 ಅಭ್ಯರ್ಥಿಗಳು ಆಯ್ಕೆಯಾಗಿರುವ ಬಗ್ಗೆ ಅನುಮಾನ, ಗೊಂದಲಗಳಿದ್ದು, ಇದನ್ನು ಸರ್ಕಾರ ಬಗೆಹರಿಸಬೇಕೆಂದರು ಒತ್ತಾಯಿಸಿದ್ದರು. ಕೆಪಿಎಸ್‌ಸಿ ಗೊಂದಲಗಳಿಗೆ ಕಾರ್ಯದರ್ಶಿ, ಅಧ್ಯಕ್ಷರೆ ಹೊಣೆಗಾರರು ಎಂದು ಗೃಹ ಸಚಿವರು ಹೇಳಿದ್ದು, ಈ ಹೊಣೆಗಾರಿಕೆಗೆ ಸರ್ಕಾರ ಬದ್ಧವಾಗಬೇಕು. ಈ ಕುರಿತು ತನಿಖೆ ಆಗಬೇಕು. ಒಂದು ಪರೀಕ್ಷೆ ಮುಗಿಯುವವರೆಗೆ ಒಬ್ಬ ಕಾರ್ಯದರ್ಶಿ ಇರಬೇಕು, ಕೆಪಿಎಸ್‌ಸಿ ಸುಧಾರಣೆಗೆ ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಬೇಕು, ಮಾ.23 ರಂದು ನಡೆಯುವ ಸಂದರ್ಶನಕ್ಕೆ ತಡೆಹಿಡಿಯಬೇಕು ಎಂದು ಮನವಿ ಮಾಡಿದ್ದರು. ಶಾಸಕ ಸುರೇಶ್‌ಕುಮಾರ್ ಮಾತನಾಡಿ, ಕೆಪಿಎಸ್‌ಸಿ ಬಗ್ಗೆ ಎಲ್ಲಾ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಕೆಪಿಎಸ್‌ಸಿಯಲ್ಲಿ ರಾಜಕೀಯ ಕುಟುಂಬಸ್ಥರು, ಪ್ರಭಾವಿಗಳ ಸಂಬಂಧಿಕರು ಇದ್ದಾರೆ. ಈ ಸಂಸ್ಥೆ ಶುದ್ಧೀಕರಣ ಆಗಬೇಕು. ಉದ್ಯೋಗಸೌಧ ಈಗ ನಿರುದ್ಯೋಗಸೌಧ ಆಗಿದೆ. ಯುವಕರು ಹತಾಶರಾಗಿದ್ದಾರೆ ಎಂದು ಕಿಡಿಕಾರಿದ್ದರು.



ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ ಅಂತ್ಯಕ್ರಿಯೆ

ಮೈಸೂರು: ತೀವ್ರ ಹೃದಯಾಘಾತದಿಂದ ಬುಧವಾರ ಸಂಜೆ ನಿಧನರಾದ ಹಿರಿಯ ಸಿನಿ ಪತ್ರಕರ್ತ ಕೆ.ಜಿ. ಕುಮಾರ್ (74) ಅವರು ಅಂತ್ಯಕ್ರಿಯೆ ಗುರುವಾರ ನಗರದ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ವಿಧಿವಿಧಾನದಂತೆ ನಡೆಯಿತು. ಇಂದು ಬೆಳಗ್ಗೆ ಮೃತರ ಪಾರ್ಥಿವ ಶರೀರವನ್ನು ಯಾದವಗಿರಿಯ ಎ.ರಾಮಣ್ಣ ವೃತ್ತದಲ್ಲಿರುವ ಅವರ ನಿವಾಸಕ್ಕೆ ತಂದು ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಹಿರಿಯ ಚಿತ್ರನಟಿ ಭಾರತಿ ವಿಷ್ಣುವರ್ಧನ್, ಅನಿರುದ್ಧ, ಚಿತ್ರ ನಟ ಕೋಮಲ್ ಸೇರಿದಂತೆ ಅನೇಕ ಚಿತ್ರರಂಗದ ಗಣ್ಯರು ಆಗಮಿಸಿ ಕೆ.ಜಿ. ಕುಮಾರ್ ಅವರ ಅಂತಿಮ ದರ್ಶನ ಪಡೆದರು. ರಾಜಕಾರಣಿಗಳು, ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಪ್ರಮುಖರು ಆಗಮಿಸಿ ಅಂತಿಮ ದರ್ಶನ ಪಡೆದರು. ಬಳಿಕ ಸಂಜೆ ಪಾರ್ಥಿವ ಶರೀರವನ್ನು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರಘಾಟ್‌ಗೆ ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಯಿತು.

30 ಕೈದಿಗಳ ಬಿಡುಗಡೆಗೆ ಒಪ್ಪಿಗೆ

ಬೆಂಗಳೂರು: ರಾಜ್ಯದ ವಿವಿಧ ಕೇಂದ್ರ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿದ್ದ 30 ಜೀವಾವಧಿ ಬಂಧಿಗಳನ್ನು ಸನ್ನಡತೆಯ ಆಧಾರದ ಮೇಲೆ ಬಿಡುಗಡೆಗೊಳಿಸಿ ರಾಜ್ಯ ಸರ್ಕಾರ ಗುರುವಾರ ಅಧಿಕೃತ ಆದೇಶ ಹೊರಡಿಸಿದೆ. ಭಾರತ ಸಂವಿಧಾನದ ಅನುಚ್ಛೇದ 161ರ ಅಡಿಯಲ್ಲಿ ರಾಜ್ಯಪಾಲರು ನೀಡಿದ ಅನುಮೋದನೆಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಬಂದಿಗಳ ಹಾಗೂ ಅವರ ಕುಟುಂಬದ ಪುನರ್ವಸತಿಗೆ ಅವಕಾಶ ಕಲ್ಪಿಸುವ ಸರ್ಕಾರದ ನೀತಿಯಂತೆ, ಒಟ್ಟು 54 ಪ್ರಕರಣಗಳನ್ನು ಎಲ್‌ಸಿಆರ್ ಸಮಿತಿಯು ಕೂಲಂಕುಷವಾಗಿ ಪರಿಶೀಲಿಸಿತ್ತು.

ಬಜೆಟ್ ಸಮಾಧಾನ ತಂದಿಲ್ಲ: ಇಕ್ಬಾಲ್

ರಾಮನಗರ: ರಾಜ್ಯ ಬಜೆಟ್ ನನಗೆ ಸಮಾಧಾನ ತಂದಿಲ್ಲ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ತಾಲೂಕಿನ ಮೊಟ್ಟೆದೊಡ್ಡಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಜೆಟ್ ನನಗೆ ಸಮಾಧಾನ ತಂದಿಲ್ಲ. ನನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಸಿಎಂಗೆ ಮನವಿ ಮಾಡಿದ್ದೆ. ಭಕ್ಷೆಕೆರೆ ಒಡೆದು ಪ್ರವಾಹದಿಂದ ಉಂಟಾದ ಸಮಸ್ಯೆ ಬಗ್ಗೆ ಫೋಟೋ ತೋರಿಸಿ ಮಾಹಿತಿ ಕೊಟ್ಟಿದ್ದೆ. ಹಿಂದೆ ಇದ್ದವರು ಕ್ಷೇತ್ರದಲ್ಲಿ ಯಾವುದೇ ಅಭಿವೃದ್ಧಿ ಮಾಡಿಲ್ಲ ಎಂದು ತಿಳಿಸಿದರು.ರಸ್ತೆ, ಚರಂಡಿ ಹಾಗೂ ನೀರಾವರಿ ಬಗ್ಗೆ ನಾಲ್ಕೈದು ಬಾರಿ ಮನವಿ ಮಾಡಿದ್ದೆ. ವಿಶೇಷ ಅನುದಾನ ನೀಡುವಂತೆ ಮನವಿ ಮಾಡಿದ್ದೆ. ಆದರೆ ಸಿಎಂ ಏನೂ ಮಾಡಲಿಲ್ಲ, ನನಗೆ ನೋವಾಗಿದೆ. ಪಾರದರ್ಶಕವಾಗಿ ಅನುದಾನ ಕೊಡುತ್ತಾರೆ ಎನ್ನುವ ನಂಬಿಕೆ ಇತ್ತು. ಈಗ ಆ ನಂಬಿಕೆ ಹುಸಿಯಾಗಿದೆ ಎಂದು ತಿಳಿಸಿದರು. ಈಗ ನಾವು ಡಿಸಿಎಂ ಹಿಂದೆಯೇ ಹೋಗಬೇಕು.

ನಮ್ಮ ಕಷ್ಟ–ಸುಖವನ್ನು ಅವರ ಮೇಲೆಯೇ ಹಾಕಬೇಕು. ಹಿಂದೆ ಅವರಿಂದಲೇ ಅಭಿವೃದ್ಧಿ ಕೆಲಸ ಮಾಡಿಸಿಕೊಂಡಿದ್ದೆ. ಇದು ಅವರ ಜಿಲ್ಲೆ, ಮುಂದೆಯೂ ಅವರ ಮೇಲೆಯೇ ಭಾರ ಹಾಕಬೇಕಾಗುತ್ತೆ. ಕ್ಷೇತ್ರದ ಜವಾಬ್ದಾರಿ ಡಿಸಿಎಂ ಅವರ ಮೇಲೂ ಇದೆ ಎಂದರು. ಡಿ.ಕೆ. ಶಿವಕುಮಾರ್ ಸಿಎಂ ಆಗುವ ವಿಚಾರವಾಗಿ ಮಾತನಾಡಿದ ಅವರು, ನಮ್ಮ ಗುರುಗಳು ಜಪದಿಂದ ಇನ್ನೂ ಎದ್ದಿಲ್ಲ ಎಂದರು.

ತುಂಗಭದ್ರಾ ಡ್ಯಾಂಗೆ ಹೊಸ ಕ್ರಸ್ಟ್‌ಗೇಟ್ ಶೀಘ್ರ

ಪುಟ ೧➡ ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಡಿ.ಕೆ.ಶಿವಕುಮಾರ್ ಅವರು, ಕ್ರಸ್ಟ್‌ಗೇಟ್‌ಗಳನ್ನು ತುಂಡರಿಸಿದಾಗ, ಅಣೆಕಟ್ಟು ಸಂಪೂರ್ಣ ಅಲ್ಲಾಡಿದಂತೆ ಭಾಸವಾಗಿತ್ತು. ನಾವು ಕೇವಲ 7 ದಿನಗಳಲ್ಲಿ ಸರಿಪಡಿಸಿದ್ದೇವೆ.

ರಾಜ್ಯದ ಎಲ್ಲಾ ಅಣೆಕಟ್ಟುಗಳ ಅಧ್ಯಯನ ನಡೆಸಿ ಹಳೇ ಗೇಟ್‌ಗಳ ಬದಲಾವಣೆಗೆ ತೀರ್ಮಾನ ಮಾಡಿದೆವು. ಮೊದಲ ಹಂತದಲ್ಲಿ ಟಿಬಿ ಡ್ಯಾಂ ಗೇಟ್ ಬದಲಿಸುತ್ತಿದ್ದೇವೆ. ಈಗಾಗಲೇ ಹಲವು ಗೇಟ್‌ಗಳ ಅಳವಡಿಕೆ ಕಾರ್ಯ ನಡೆದಿದೆ. ಈ ಪ್ರಕ್ರಿಯೆ ನಿಗದಿತ ಸಮಯದಲ್ಲಿ ಪೂರ್ಣಗೊಳ್ಳಲಿದೆ ಎಂದು ತಿಳಿಸಿದರು. ಅಣೆಕಟ್ಟಿನ ಎಲ್ಲಾ ಗೇಟ್‌ಗಳ ಬದಲಿಸುವ ತೀರ್ಮಾನ ಮಾಡಲಾಗಿದ್ದು, 19ನೇ ಸ್ಟಾಪ್‌ಲಾಗ್ ಗೇಟ್ ತೆರವುಗೊಳಿಸಿ ಸ್ಟಿಲ್ ಗೇಟ್ ಅಳವಡಿಕೆಗೆ 2025ರ ಏ.24ರಂದು ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ ಆ್ಯಂಡ್ ಮಷಿನರಿ ಪ್ರಾಜೆಕ್ಟ್ ಸಂಸ್ಥೆ ಜತೆ ಒಪ್ಪಂದ ಮಾಡಿಕೊಳ್ಳಲಾಗಿದೆ. 34.48 ಕೋಟಿ ರೂ. ವೆಚ್ಚದಲ್ಲಿ ಉಳಿದ 32 ಸ್ಟಿಲ್ ವೇ ಗೇಟ್ ಅಳವಡಿಕೆಯನ್ನು 15 ತಿಂಗಳ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಇದೇ ಸಂಸ್ಥೆಯೊಂದಿಗೆ 2025ರ ಜೂ.10 ರಲ್ಲಿ ಒಪ್ಪಂದ ಮಾಡಿಕೊಂಡಿದ್ದೇವೆ ಎಂದರು.

ಕಾಳುಮೆಣಸು ಉತ್ಪಾದನೆ ಹೆಚ್ಚಳ: ಕೇಂದ್ರ ಸಚಿವ

ಪುಟ ೧➡ ಭಾರತದ ಕಾಳುಮೆಣಸು ರಫ್ತು ಶೇ.14.72 ರಷ್ಟು ಹೆಚ್ಚಾಗಿ 101.45 ಮಿಲಿಯನ್ ಡಾಲರ್ ತಲುಪಿದೆ ಮತ್ತು ಎಸ್‌ಪಿಐಸಿಇಡಿ ಯೋಜನೆಯಲ್ಲಿ ಕಾಳುಮೆಣಸು ಬೆಳೆಗಾರರಿಗೆ ಉಪಕರಣಗಳು, ತರಬೇತಿ ಮತ್ತು ಮಾರುಕಟ್ಟೆ ಸಂಪರ್ಕಗಳೊಂದಿಗೆ ಬೆಂಬಲ ನೀಡಲಾಗುತ್ತಿದೆ. ದೇಶೀಯ ರೈತರನ್ನು ರಕ್ಷಿಸಲು ಕಾಳುಮೆಣಸು ಆಮದಿಗೆ ಪ್ರತಿ ಕೆಜಿಗೆ 500 ರೂ. ಕನಿಷ್ಠ ಆಮದು ಬೆಲೆ ಜಾರಿಯಲ್ಲಿದೆ ಎಂದು ಸಚಿವರು ವಿವರಿಸಿದ್ದಾರೆ.

ಬಡ್ಡಿ ಮನ್ನಾಕ್ಕೆ ಯದುವೀರ್ ಮನವಿ

ಪುಟ ೧➡ ಸಣ್ಣ ಕಾಫಿ ಬೆಳೆಗಾರರನ್ನು, ಈ ಪ್ರಮುಖ ಸಹಕಾರಿ ಸಂಸ್ಥೆಯನ್ನು ಸಂರಕ್ಷಿಸುವ ಹಿತದೃಷ್ಟಿಯಿಂದ 2015ರಲ್ಲಿ ನೀಡಿದ ಭರವಸೆಗೆ ಅನುಗುಣವಾಗಿ, ಸಚಿವರು ಮಧ್ಯಪ್ರವೇಶಿಸಿ ಕಾಫಿ ಮಂಡಳಿಗೆ ಸಂಘವು ಪಾವತಿಸಬೇಕಾದ ಬಡ್ಡಿಯನ್ನು ಮನ್ನಾ ಮಾಡಲು ಶಿಫಾರಸು ಮಾಡುವಂತೆ ಅವರು ಕೋರಿದ್ದಾರೆ. ಸಚಿವರ ಸಕಾಲಿಕ ಕ್ರಮವು ಕೊಡಗಿನ ಸಾವಿರಾರು ಕಾಫಿ ಬೆಳೆಗಾರರು ಮತ್ತು ಕಾರ್ಮಿಕರ ಜೀವನೋಪಾಯವನ್ನು ಕಾಪಾಡುತ್ತದೆ, ಸುಮಾರು 7 ದಶಕಗಳಿಂದ ಸಮುದಾಯಕ್ಕೆ ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಯನ್ನು ಉಳಿಸಿಕೊಳ್ಳಲು ಸಹಾಯ ಮಾಡಿದಂತಾಗುತ್ತದೆ ಎಂದು ಯದುವೀರ್ ಗಮನಸೆಳೆದಿದ್ದಾರೆ.

ಸಂತ್ರಸ್ತರಿಗೆ ಪರಿಹಾರ ಪ್ಯಾಕೇಜ್

ಪುಟ ೧➡ ನಿಯಮ 330ರ ಅನ್ವಯ ವಿಷಯ ಪ್ರಸ್ತಾಪಿಸಿದ ಬಿಜೆಪಿ ಸದಸ್ಯ ಹಣಮಂತ ನಿರಾಣಿ, ಕೃಷ್ಣಾ ಮೇಲ್ದಂಡೆ ಯೋಜನೆಗೆ ಒಳಪಡುವ ಸಂತ್ರಸ್ತ ರೈತ ಕುಟುಂಬಗಳಿಗೆ ಪುನರ್ ವಸತಿ ಮತ್ತು ಮೂಲಸೌಕರ್ಯವನ್ನು ಒದಗಿಸಲು ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಪ್ರಶ್ನಿಸಿದರು. ಈ ವಿಷಯಕ್ಕೆ ಲಿಖಿತವಾಗಿ ಉತ್ತರಿಸಿದ ಅವರು, ಕೃಷ್ಣಾ ಒಪ್ಪಂದದ ತೀರ್ಪು ರಚಿಸಲು ಏಕರೂಪದ ದರ ನಿಗದಿಗೆ ಆದೇಶಿಸಲಾಗಿದೆ. ಹೊಸ ಭೂ–ಸ್ವಾಧೀನ ನಿಯಮಾವಳಿಯಂತೆ 8 ಪುನರ್ವಸತಿ ಕೇಂದ್ರಗಳಲ್ಲಿ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದ್ದು ಕುಂದರಗಿ, ಬಾವಲತ್ತಿಗಳಿಗಾಗಿ ಅವಶ್ಯವಿರುವ ಜಮೀನುಗಳ ತೀರ್ಪು ನ್ಯಾಯಾಲಯದಲ್ಲಿ ಅಸಿಂಧುಗೊಂಡಿದೆ. ಇನ್ನು ಬಾಕಿ ಉಳಿದ 13 ಪುನರ್ವಸತಿ ಕೇಂದ್ರಗಳಿಗೆ ಜಮೀನು ಭೂ–ಸ್ವಾಧೀನ ಪ್ರಕ್ರಿಯೆ ವಿವಿಧ ಹಂತಗಳಲ್ಲಿದೆ. ಗದ್ದನಕೇರಿ ಗ್ರಾಮದ ಭೂ–ಸ್ವಾಧೀನ ಪ್ರಕ್ರಿಯೆ ತಾಂತ್ರಿಕವಾಗಿ ಪರಿಶೀಲಿಸಿ ತೀರ್ಮಾನಿಸಬೇಕಿದೆ. ಭೂ–ಸ್ವಾಧೀನ ಪ್ರಕ್ರಿಯೆಯನ್ನು ಒಂದೇ ಹಂತದಲ್ಲಿ ತ್ವರಿತವಾಗಿ ಕೈಗೆತ್ತಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು. ಆಲಮಟ್ಟಿ ಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್. 510.60 ಮೀ.ನಿಂದ 524.256 ಮೀ. ಎತ್ತರಿಸುವಂತೆ ಕೃಷ್ಣಾ ನ್ಯಾಯಾಧೀಕರಣ–2ರ ಅಂತಿಮ ತೀರ್ಪು ಕೇಂದ್ರ ಸರ್ಕಾರದ ಅಧಿಸೂಚನೆಗೆ ಒಳಪಟ್ಟಿದೆ. ಆದರೆ, ಆಂಧ್ರ ಸರ್ಕಾರವು ಆಲಮಟ್ಟಿ ಜಲಾಶಯ ಎತ್ತರಿಸುವ ಸಂಬಂಧ ಮತ್ತೆ ತಗಾದೆ ತೆಗೆದು ಯಾವುದೇ ಭೂ–ಸ್ವಾಧೀನ, ಪರಿಹಾರ ನೀಡದಂತೆ ಕೇಂದ್ರಕ್ಕೆ ಆಕ್ಷೇಪಣೆ ಸಲ್ಲಿಸಿದೆ.

ಪೊಲೀಸರ ವರ್ಗಾವಣೆ: ಸಚಿವ




ವಿಧಾನಪರಿಷತ್: ಕಳೆದ ಮೂರು ವರ್ಷಗಳಲ್ಲಿ ಒಟ್ಟು 1,189 ಅರ್ಹ ಪೊಲೀಸ್ ಕಾನ್ಸ್ಟೇಬಲ್‌ಗಳನ್ನು ಅಂತರಜಿಲ್ಲಾ ವರ್ಗಾವಣೆ ಮಾಡಲಾಗಿದೆ. ಸೇವಾ ಹಿರಿತನ ಹಾಗೂ ಪತಿ–ಪತ್ನಿ ಪೊಲೀಸ್ ಪ್ರಕರಣಗಳಿಗೆ ವರ್ಗಾವಣೆಗೆ ಮೊದಲ ಆದ್ಯತೆ ನೀಡುತ್ತಿದ್ದು, ಈ ಪ್ರಮಾಣ ಶೇ.15 ರಷ್ಟು ಮೀರದಂತೆ ಎಚ್ಚರ ವಹಿಸಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಹೇಳಿದರು.

ಸದಸ್ಯ ಕಿಶೋರ್ ಕುಮಾರ್ ಪುತ್ತೂರ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಸರ್ಕಾರ 56 ಸಾವಿರಕ್ಕಿಂತ ಹೆಚ್ಚು ಹುದ್ದೆಗಳನ್ನು ತುಂಬಲು ತೀರ್ಮಾನಿಸಲಾಗಿದೆ. ಈ ಪೈಕಿ ಪೊಲೀಸ್ ಇಲಾಖೆಯಲ್ಲಿ ಖಾಲಿಯಿರುವ 8 ಸಾವಿರ ಹುದ್ದೆಗಳನ್ನು ತುಂಬಲು ಸರ್ಕಾರ ಅನುಮತಿ ನೀಡಿದೆ. ಈ ಹಿಂದಿನ 545 ಪಿಎಸ್ಐ ಅಭ್ಯರ್ಥಿಗಳು ತರಬೇತಿ ಮುಗಿದು ಇನ್ನೊಂದು ವಾರದಲ್ಲಿ ಕರ್ತವ್ಯಕ್ಕೆ ನಿಯೋಜನೆಯಾಗಲಿದ್ದಾರೆ. ಜತೆಗೆ 402 ಪೊಲೀಸ್ ಪಿಎಸ್ಐ ಸಹ ಇನ್ನೆರಡು ತಿಂಗಳಿನಲ್ಲಿ ತರಬೇತಿ ಮುಗಿಯಲಿದೆ ಎಂದು ತಿಳಿಸಿದರು. ರಾಜ್ಯ ಪೊಲೀಸ್ ಇಲಾಖೆ (ವರ್ಗಾವಣೆ) ನಿಯಮ ಅಡಿಯಲ್ಲಿ ಕೇಂದ್ರ ಸ್ಥಾನದಿಂದ ಪೊಲೀಸ್ ವರ್ಗಾವಣೆ ಪ್ರಮಾಣ ಶೇ.15 ಕ್ಕಿಂತ ಹೆಚ್ಚಿರಬಾರದು. ಇದಕ್ಕೆ ವಿಶೇಷ ನಿಯಮಗಳನ್ನು ಜಾರಿಗೆ ತರಲಾಗಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರ ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಉತ್ತರ ಕರ್ನಾಟಕದ ಸಿಬ್ಬಂದಿಯನ್ನು ಆ ಜಿಲ್ಲೆಯಲ್ಲಿ ನಿಯೋಜಿಸಲಾಗಿದೆ. ಅವರು ಇಲ್ಲಿ ನಿಯೋಜನೆ ನಂತರ ತುಳು ಭಾಷೆ ಕಲಿಯುವಷ್ಟರಲ್ಲಿ ವರ್ಗಾವಣೆ ಸಿದ್ಧವಾಗಿರುತ್ತದೆ ಎಂದು ಮಾಹಿತಿ ನೀಡಿದರು.

ಈ ಮೊದಲು ಕಿಶೋರ್ ಕುಮಾರ್ ಪುತ್ತೂರ್ ಅವರು, ಮಂಗಳೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈಗಾಗಲೇ ಪೊಲೀಸ್ ಸಿಬ್ಬಂದಿ ಕೊರತೆ ಇದೆ. 63 ಸಿಬ್ಬಂದಿ ವರ್ಗಾವಣೆಗೂ ಡಿಜಿಪಿ ಆದೇಶ ನೀಡಿದ್ದಾರೆ. ಇದರಿಂದ ಶೇ. 22 ರಷ್ಟು ಸಿಬ್ಬಂದಿ ಕೊರತೆ ಇದೆ. ಸರ್ಕಾರ ಕೂಡಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಒತ್ತಾಯಿಸಿದರು.

ಚೆಕ್ ವಿತರಣೆ



ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್‌ವತಿಯಿಂದ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ 15.00 ಕೋಟಿ ರೂ.ಗಳ ಚೆಕ್ ಅನ್ನು ಗಣಿ ಮತ್ತೂ ಭೂ ವಿಜ್ಞಾನ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಿದರು. ಶಾಸಕ ಜಿ.ಎಸ್.ಪಾಟೀಲ್, ಇಲಾಖೆ ಕಾರ್ಯದರ್ಶಿ ರೋಹಿಣಿ ಸಿಂಧೂರಿ ಇದ್ದರು.

ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಬಿಜೆಪಿ ನಾಯಕರು ಧ್ವನಿ ಎತ್ತುತ್ತಿಲ್ಲ: ಡಿಕೆಶಿ



ವಿಧಾನಪರಿಷತ್: ಕೃಷ್ಣಾ ಮೇಲ್ದಂಡೆ ಯೋಜನೆ ವಿಚಾರದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಂಧ್ರಪ್ರದೇಶ ಕೇಂದ್ರ ಸರ್ಕಾರಕ್ಕೆ ಆಕ್ಷೇಪಣೆ ಸಲ್ಲಿಸಿದೆ. ಆದರೂ ಬಿಜೆಪಿ ನಾಯಕರು ಈ ಬಗ್ಗೆ ಧ್ವನಿ ಎತ್ತುತ್ತಿಲ್ಲ. ನಾನು, ಸಚಿವರಾದ ಹೆಚ್.ಕೆ ಪಾಟೀಲ್ ಹಾಗೂ ಎಂ.ಬಿ. ಪಾಟೀಲ್ ಅವರು ಮಂಗಳವಾರ ದಿಲ್ಲಿಗೆ ಹೋಗುತ್ತಿದ್ದು, ಎಲ್ಲಾ ಸಂಸದರನ್ನು ಭೇಟಿ ಮಾಡಿ ನಮ್ಮ ರಾಜ್ಯದ ವಿಚಾರಗಳನ್ನು ಪ್ರಸ್ತಾಪಿಸುತ್ತೇವೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ್ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ನಿಯಮ 330 ಅಡಿಯಲ್ಲಿ ನಡೆದ ಚರ್ಚೆ ವೇಳೆ ಹನುಮಂತ ನಿರಾಣಿ ಅವರು ಕೃಷ್ಣಾ ಮೇಲ್ದಂಡೆ ಯೋಜನೆಯಡಿ ಮುಳುಗಡೆಯಾಗುವ 20 ಗ್ರಾಮಗಳ ಪುನರ್ ವಸತಿ ವಿಚಾರವಾಗಿ ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಕುಮಾರ್ ಅವರು, ಈ ಯೋಜನೆ ಭೂ ಸಂತ್ರಸ್ತ ರೈತರಿಗೆ ಪರಿಹಾರ ನೀಡುವ ಬಗ್ಗೆ ಸರ್ಕಾರ ಈಗಾಗಲೇ ತೀರ್ಮಾನ ಮಾಡಿದ್ದು, ಪುನರ್ವಸತಿ ಕಾರ್ಯವನ್ನು ಬಾಕಿ ಉಳಿಸಿದ್ದೇವೆ. ಈ ಯೋಜನೆಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಲಿ, ನ್ಯಾಯಬದ್ಧವಾಗಿ ಸಂತ್ರಸ್ತರಿಗೆ ಪರಿಹಾರ ನೀಡಲಾಗುವುದು ಎಂದು ಉತ್ತರಿಸಿದರು. ಆಂಧ್ರಪ್ರದೇಶದವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಭೂಸ್ವಾಧೀನ ಪ್ರಕ್ರಿಯೆ ಮಾಡಬಾರದು, ಪರಿಹಾರ ನೀಡಬಾರದು ಎಂದು ಆಕ್ಷೇಪಣೆ ಹಾಕಿದ್ದಾರೆ. ನಿಮ್ಮೆಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಚಾರವಾಗಿ ಪರಿಹಾರ ಕಂಡುಕೊಳ್ಳಲಾಗುವುದು ಎಂದು ತಿಳಿಸಿದರು. ಪ್ರಶೋತ್ತರ ವೇಳೆಯಲ್ಲಿ ಕಾಂಗ್ರೆಸ್ ಸದಸ್ಯರಾದ ತಿಪ್ಪಣ್ಣ ಕಮಕನೂರು ಅವರು ನ್ಯಾಯಾಲಯದ ತೀರ್ಪಿನಿಂದ ಸರ್ಕಾರಕ್ಕೆ ಸುಮಾರು 10 ಸಾವಿರ ಕೋಟಿ ರೂ. ಉಳಿತಾಯವಾಗಿದ್ದು, ಇದನ್ನು ಎತ್ತಿನಹೊಳೆ, ಕೃಷ್ಣಾ ಮೇಲ್ದಂಡೆ ಯೋಜನೆಗೆ ವಿನಿಯೋಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ಎಂದು ಕೇಳಿದರು, ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಾನು ನೀರಾವರಿ ಸಚಿವನಾದ ಬಳಿಕ ರಾಜ್ಯದ ಹಿತದೃಷ್ಟಿಯಿಂದ ನ್ಯಾಯಾಲಯದಲ್ಲಿ ಎರಡು ಪ್ರಮುಖ ತೀರ್ಪುಗಳು ಸಿಕ್ಕಿವೆ ಎಂದು ತಿಳಿಸಿದರು.

ಕಿರುಸುದ್ದಿ

ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ



ವಿಧಾನಪರಿಷತ್: ಬೆಳಗಾವಿಯನ್ನು ರಾಜ್ಯದ ಪ್ರಮುಖ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರವನ್ನಾಗಿ ರೂಪಿಸಲು ಹಾಗೂ ಉತ್ತರ ಕರ್ನಾಟಕದ ಯುವಜನತೆಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರವು ಹಲವಾರು ಮಹತ್ವದ ಯೋಜನೆಗಳನ್ನು ಜಾರಿಗೆ ತರುತ್ತಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು. ನಿಯಮ 72 ರ ಅಡಿ ಸದಸ್ಯ ಎಂ. ನಾಗರಾಜ್ ಅವರ ಗಮನ ಸೆಳೆಯುವ ಸೂಚನೆ ಮೇರೆಗೆ ಉತ್ತರಿಸಿದ ಅವರು, ಬೆಳಗಾವಿಯಲ್ಲಿ ತಕ್ಷಣದ ಬೇಡಿಕೆ ಪೂರೈಸಲು ಕಲಾ ಮಂದಿರದಂತಹ ಸ್ಥಳಗಳಲ್ಲಿ ಐಟಿ ಪ್ಲಗ್–ಆ್ಯಂಡ್–ಪ್ಲೇ ಕೇಂದ್ರಗಳನ್ನು ಸ್ಥಾಪಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ. ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಕೆಎಲ್‌ಇ ಟೆಕ್ನಾಲಾಜಿಕಲ್ ಯೂನಿವರ್ಸಿಟಿ ಮತ್ತು ಮರಾಠ ಮಂಡಲ್ ಇಂಜನಿಯರಿಂಗ್ ಕಾಲೇಜುಗಳಲ್ಲಿ ಮೂರು ಟೆಕ್ನಾಲಜಿ ಬಿಸಿನೆಸ್ ಇನ್ಕ್ಯುಬೇಟರ್‌ಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದರು. ವಿದ್ಯಾರ್ಥಿಗಳಲ್ಲಿ ಉದ್ಯಮಶೀಲತೆ ಬೆಳೆಸಲು ಕೆಎಲ್‌ಇ ಫಾರ್ಮಸಿ ಕಾಲೇಜು ಮತ್ತು ಎಸ್‌ಜಿ ಬಾಳೆಕುಂದ್ರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗಳಲ್ಲಿ ನ್ಯೂ ಏಜ್ ಇನ್ನೋವೇಶನ್ ನೆಟ್ವರ್ಕ್ ಕೇಂದ್ರಗಳನ್ನು ಆರಂಭಿಸಲಾಗಿದೆ. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಇದೇ ಮೊದಲ ಬಾರಿಗೆ ಬೃಹತ್ ತಂತ್ರಜ್ಞಾನ ಶೃಂಗಸಭೆ ಟೆಕ್ಸಿಲರೇಷನ್–2025 ಅನ್ನು ಆಗಸ್ಟ್‌ನಲ್ಲಿ ಆಯೋಜಿಸಲಾಗಿದೆ. ಈ ಶೃಂಗಸಭೆಯಲ್ಲಿ 700ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ವಿದೇಶಿ ನಿಯೋಗಗಳು ಭಾಗವಹಿಸಿದ್ದವು ಎಂದು ಮಾಹಿತಿ ನೀಡಿದರು.

ಬಿಯರ್ ಮಾರಾಟದಲ್ಲಿ ಕುಸಿತ

ವಿಧಾನಪರಿಷತ್: ಆಂಧ್ರ ಪ್ರದೇಶದ ನೂತನ ಅಬಕಾರಿ ನೀತಿಯಿಂದಾಗಿ ಆಂಧ್ರ ಪ್ರದೇಶದ ಗಡಿ ಭಾಗಕ್ಕೆ ಹೊಂದಿಕೊಂಡಿರುವ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹೊರ ರಾಜ್ಯದ ಗ್ರಾಹಕರು ನಮ್ಮ ರಾಜ್ಯದ ಮದ್ಯವನ್ನು ಖರೀದಿಸಲು ಬರುವುದು ಕಡಿಮೆಯಾಗಿದೆ. ಇದರಿಂದ ಬಿಯರ್ ಮಾರಾಟ ಕುಸಿತವಾಗಿದೆ ಎಂದು ಸರ್ಕಾರ ಹೇಳಿದೆ.

ಸದಸ್ಯ ಎಂ. ನಾಗರಾಜ್ ಯಾದವ್ ಅವರ ಪ್ರಶ್ನೆಗೆ ಅಬಕಾರಿ ಸಚಿವರ ಪರವಾಗಿ ಸಭಾನಾಯಕ ಭೋಸರಾಜು ಪ್ರತಿಕ್ರಿಯಿಸಿದರು. ಕಳೆದ ವರ್ಷಕ್ಕೆ ಹೋಲಿಸಿದ್ದಲ್ಲಿ 2025–26ರ ಜನವರಿ ಅಂತ್ಯಕ್ಕೆ ಬಿಯರ್ ಮಾರಾಟ ಶೇ. 14.59 ಕಡಿಮೆಯಾಗಿದೆ. ಕೆಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದಾಗಿ ಮತ್ತು ಹವಾಮಾನ ಬದಲಾವಣೆಯಿಂದಾಗಿ ಅತಿ ಹೆಚ್ಚು ಶೀತದ ವಾತಾವರಣ ಇದ್ದುದ್ದರಿಂದ ಬಿಯರ್ ಮಾರಾಟದಲ್ಲಿ ಕುಸಿತ ಉಂಟಾಗಿದೆ ಎಂದು ಸಚಿವರು ತಿಳಿಸಿದರು. ಗೋವಾ ರಾಜ್ಯದಿಂದ ಅಕ್ರಮವಾಗಿ ರಾಜ್ಯಕ್ಕೆ ಮದ್ಯ ತರುವುದನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ. ಅಬಕಾರಿ ಇಲಾಖೆಯಿಂದ ಗಡಿಭಾಗದಲ್ಲಿ 3 ಖಾಯಂ ಅಬಕಾರಿ ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದ್ದು, ತನಿಖಾ ಠಾಣೆಗಳಲ್ಲಿರುವ ಸಿಬ್ಬಂದಿಯನ್ನು 15 ದಿನಗಳಿಗೊಮ್ಮೆ ಸರದಿ ಆಧಾರದಲ್ಲಿ ಬದಲಾಯಿಸಲಾಗುತ್ತದೆ ಎಂದು ತಿಳಿಸಿದರು. ರಾಜ್ಯದಲ್ಲಿ ನಿಷೇಧವಿರುವ ಈ ವಸ್ತು ಯಾವ ರೀತಿಯಿಂದಲೂ ನಮ್ಮ ರಾಜ್ಯಕ್ಕೆ ಪೂರೈಕೆಯಾಗದಂತೆ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, 2 ವರ್ಷಗಳ ಅವಧಿಯಲ್ಲಿ ಸಿ.ಎಚ್. ಪೌಡರ್ ಸಾಗಾಟಕ್ಕೆ ಸಂಬಂಧಿಸಿದಂತೆ 1,117 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದ್ದು, 771 ಆರೋಪಿಗಳನ್ನು ಬಂಧಿಸಲಾಗಿದೆ.

ಬಜೆಟ್‌ನಲ್ಲಿ ಜನರ ನಿರೀಕ್ಷೆಗಳು ಹುಸಿ: ಬಿ.ವೈ.ವಿಜಯೇಂದ್ರ

ಆರ್ಥಿಕ ದಿವಾಳಿ ಪ್ರದರ್ಶನ

ವಿಧಾನಸಭೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ 2026–27ನೇ ಸಾಲಿನ ಬಜೆಟ್‌ನಲ್ಲಿ ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿದ್ದಾರೆ. ಈ ಆಯವ್ಯಯದಲ್ಲಿ ಆರ್ಥಿಕ– ಬೌದ್ಧಿಕ ದಿವಾಳಿತನವು ಕೂಡ ಪ್ರದರ್ಶನಗೊಂಡಿದೆ ಎಂದು ಬಿಜೆಪಿ ಶಾಸಕ ಬಿ.ವೈ.ವಿಜಯೇಂದ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈ ಬಜೆಟ್ ಗಮನಿಸಿದರೆ ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿಗಳು ತಮ್ಮ ರಾಜಕೀಯ ಸಂಧ್ಯಾಕಾಲದಲ್ಲಿರುವ ಈ ಸಂದರ್ಭದಲ್ಲಿ 17ನೇ ಬಜೆಟ್ ಮಂಡಿಸಿದ್ದಾರೆ. ಅವರಿಗೆ ಒಂದು ಸುವರ್ಣಾವಕಾಶ ಇತ್ತು. ತಮ್ಮ ರಾಜಕೀಯ ಜೀವನದ ಸುದೀರ್ಘ ಅನುಭವದ ಆಧಾರದ ಮೇಲೆ ರಾಜ್ಯದ ಸಂಕಷ್ಟಗಳಿಗೆ ನಾಡಿನ ಜನರ ಅಪೇಕ್ಷೆಗೆ ತಕ್ಕಂತೆ ಉತ್ತರ ಕಂಡುಕೊಳ್ಳುವ ಅವಕಾಶ ಇತ್ತು. ಆದರೆ, ಈ ಬಜೆಟ್ ನೋಡಿದಾಗ ಅಸಹಾಯಕರಾಗಿ ಕೈಚೆಲ್ಲಿದ್ದಾರೆಂಬ ಭಾವನೆ ರಾಜ್ಯದ ಜನರಲ್ಲಿ ಮೂಡಿದೆ ಎಂದು ವಿಶ್ಲೇಷಿಸಿದರು.

ಒಟ್ಟಾರೆಯಾಗಿ ಈ ಮುಂಗಡ ಪತ್ರದಲ್ಲಿ ಸಿಎಂ ಅವರು, ತಮ್ಮ ವೈಫಲ್ಯಗಳನ್ನು ಮುಚ್ಚಿ ಹಾಕಿಕೊಳ್ಳಲು ಕೇಂದ್ರದ ಮೇಲೆ ಆರೋಪ ಮಾಡಿ ಕೈ ತೊಳೆದುಕೊಳ್ಳುವ ಕುತಂತ್ರಕ್ಕೆ ಸೀಮಿತ ಮಾಡಿದ್ದಾರೆ ಎನ್ನುವುದು ಮೇಲ್ನೋಟಕ್ಕೆ ಗೊತ್ತಾಗುತ್ತದೆ. ಆದಾಯ ಸಂಗ್ರಹದಲ್ಲಿ ರಾಜ್ಯ ಸರಕಾರ ವಿಫಲವಾಗಿದೆ. ಅತಿ ಹೆಚ್ಚು ಸಾಲ ಮಾಡುವ ಮೂಲಕ ಈ ನಾಡಿನ ಜನರನ್ನು ಸಾಲದ ಸುಳಿಗೆ ಸಿಲುಕಿ ಹಾಕಿಸಿರುವುದು ಸುಳ್ಳಲ್ಲ ಎಂದರು.

ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರ: ಸಾಲದ ಭಾರ ಒಂದು ಕಡೆಯಾದರೆ, ಅಸಲು,ಬಡ್ಡಿ ಕಟ್ಟುವುದೇ ರಾಜ್ಯಕ್ಕೆ ದೊಡ್ಡ ಹೊರೆಯಾಗಿದೆ. ವಿತ್ತೀಯ ಕೊರತೆ ಹೆಚ್ಚಾಗಿ ರಾಜ್ಯದ ಜನರ ಮೇಲೆ ಪದೇಪದೇ ಬೆಲೆ ಏರಿಕೆಯ ಬ್ರಹ್ಮಾಸ್ತ್ರವನ್ನು ರಾಜ್ಯ ಸರಕಾರ ಪ್ರಯೋಗ ಮಾಡುತ್ತಿರುವುದು ಈ ನಾಡಿನ ದುರಂತ ಎಂದರು. ಸಿಎಂ ಅವರು ಬಜೆಟ್‌ನ್ನು ಸುದೀರ್ಘವಾಗಿ ಓದುತ್ತಿರುವಾಗ ಆಡಳಿತ ಪಕ್ಷದ ಸದಸ್ಯರನ್ನು ಗಮನಿಸುತ್ತಿದ್ದೆ. ಆಡಳಿತ ಪಕ್ಷದ ಸದಸ್ಯರಿಗೂ ಈ ಬಜೆಟ್ ಬಗ್ಗೆ ಆಸಕ್ತಿ ಇರಲಿಲ್ಲ; ಅವರು ಅಸಹಾಯಕರಾಗಿ ಸದನದಿಂದ ಹೊರಹೋದ ಘಟನೆಯನ್ನೂ ನಾನು ಗಮನಿಸಿದ್ದೇನೆ ಎಂದು ತಿಳಿಸಿದರು.

ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ: ಬಜೆಟ್ ಮಂಡಿಸಿದ ಈ ಆಯವ್ಯಯವು ನಾಡಿನ ರೈತರು, ದಮನಿತರ, ಮಹಿಳೆಯರ, ಅಶಕ್ತರ, ಅಲ್ಪಸಂಖ್ಯಾತರ, ವಿದ್ಯಾರ್ಥಿ ಯುವಜನರ, ವ್ಯಾಪಾರ ಮತ್ತು ಕೈಗಾರಿಕೋದ್ಯಮದಲ್ಲಿ ತೊಡಗಿಕೊಂಡವರ ಕನಸನ್ನು ಮತ್ತು ಆತ್ಮವಿಶ್ವಾಸವನ್ನು ಪ್ರತಿನಿಧಿಸುವ ಜೀವಂತ ದಾಖಲೆ ಆಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ, ಈ ಬಜೆಟ್ ಹಸಿ ಸುಳ್ಳಿನಿಂದ ಕೂಡಿದೆ. ಸರಕಾರಿ ಹುದ್ದೆಗಳನ್ನು ಭರ್ತಿ ಮಾಡುವುದರ ಜೊತೆಯಲ್ಲಿ ರಾಜ್ಯದ ರಸ್ತೆ, ಸೇತುವೆ, ಕಟ್ಟಡ ನಿರ್ಮಾಣಕ್ಕೂ ನಮ್ಮ ಸರಕಾರ ಆದ್ಯತೆ ನೀಡಿದೆ ಎಂದಿದ್ದಾರೆ. ಹಾಗಿದ್ದರೆ, ಕಳೆದ 3 ವರ್ಷದಲ್ಲಿ ಈ ಸರಕಾರ ಎಷ್ಟು ರಸ್ತೆಗಳನ್ನು ಮಾಡಿದೆ? ಎಷ್ಟು ಸೇತುವೆಗಳನ್ನು ಕಟ್ಟಿದೆ? ಎಷ್ಟು ಸರಕಾರಿ ಹುದ್ದೆಗಳನ್ನು ನೇಮಕ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ಒಂದು ರೀತಿ ಕಟ್ಟುಕಥೆ



ವಸತಿರಹಿತರಿಗೆ ಮನೆಗಳು, ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗಗಳನ್ನು ಕಲ್ಪಿಸಿಕೊಡಲು ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದೇವೆ ಎಂದು ಇನ್ನೊಂದು ಸುಳ್ಳು ಹೇಳುತ್ತಾರೆ. ಬಜೆಟ್ಟನ್ನು ಸಂಪೂರ್ಣವಾಗಿ ನೋಡುತ್ತ ಹೋದರೆ ಒಂದು ರೀತಿ ಕಟ್ಟುಕಥೆ, ಸುಳ್ಳಿನ ಅಂಶಗಳಿಂದ ಇದು ಕೂಡಿದೆ ಎಂದು ಗಮನ ಸೆಳೆದರು. ಮಹಾರಾಷ್ಟ್ರ, ಕರ್ನಾಟಕ, ತಮಿಳುನಾಡು ಅತಿ ಹೆಚ್ಚು ಆದಾಯ ನೀಡುವ ರಾಜ್ಯಗಳಾಗಿದ್ದರೂ ಇಲ್ಲಿ ಬರುವ ಆದಾಯವನ್ನು ಕೇಂದ್ರ ಸರಕಾರದ ಮೂಲಕ ಇತರ ರಾಜ್ಯಗಳು ಅತಿ ಹೆಚ್ಚು ಜನಸಂಖ್ಯೆ ಇರುವ– ಅತಿ ಹೆಚ್ಚು ಹಿಂದುಳಿದ ರಾಜ್ಯಗಳಿಗೆ ಇದರ ಹಣವನ್ನು ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಭಾರತ ಮುಂಚೂಣಿಯಲ್ಲಿ ಬರಲು ಎಲ್ಲ ರಾಜ್ಯಗಳು ಕೂಡ ಅಭಿವೃದ್ಧಿಯ ಪಥದಲ್ಲಿ ಮುಂದೆ ಸಾಗಬೇಕಿದೆ ಎಂದು ವಿಜಯೇಂದ್ರ ಹೇಳಿದರು.

ಗೃಹ ಬಳಕೆ ಸಿಲಿಂಡರ್ ಅಭಾವವಿಲ್ಲ: ಮುನಿಯಪ್ಪ



ವಿಧಾನಪರಿಷತ್: ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಉಂಟಾಗಿರುವ ಯುದ್ಧ ಪರಿಸ್ಥಿತಿಯಿಂದಾಗಿ ಕರ್ನಾಟಕ ಮಾತ್ರವಲ್ಲದೇ ದೇಶಾದ್ಯಂತ ಅಡುಗೆ ಅನಿಲ ಅಭಾವ ಉಂಟಾಗಿದೆ. ಆದರೆ, ಗೃಹ ಬಳಕೆ ಸಿಲಿಂಡರ್‌ಗಳಿಗೆ ರಾಜ್ಯದಲ್ಲಿ ಕೊರತೆಯಿಲ್ಲ. 10– 12 ದಿನಗಳಲ್ಲಿ ವಾಣಿಜ್ಯ ಸಿಲಿಂಡರ್‌ಗಳೂ ಪೂರೈಕೆಯಾಗಲಿವೆ. ರಾಜ್ಯದ ಜನತೆ ಆತಂಕ ಪಡುವ ಅಗತ್ಯವಿಲ್ಲ ಎಂದು ಆಹಾರ ಮತ್ತು ನಾಗರಿಕ ಸಬರಾಜು ಇಲಾಖೆ ಸಚಿವ ಕೆ.ಎಚ್.ಮುನಿಯಪ್ಪ ಅವರು ಹೇಳಿದರು.

ವಿಧಾನ ಪರಿಷತ್‌ನಲ್ಲಿ ನಿಯಮ 330ರ ಅಡಿಯಲ್ಲಿ ಸದಸ್ಯರಾದ ರಮೇಶ್ ಬಾಬು, ಐವನ್ ಡಿಸೋಜಾ, ಶಿವಕುಮಾರ್ ಕೆ. ಪ್ರಸ್ತಾಪಿಸಿದ ಸಿಲಿಂಡರ್ ಸಮಸ್ಯೆ ಕುರಿತು ಪ್ರಶ್ನೆಗೆ ಉತ್ತರಿಸಿದ ಸಚಿವರು, ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿ.(ಐಒಸಿಎಲ್) ಮಾಹಿತಿ ಪ್ರಕಾರ ದೇಶದ ಒಟ್ಟಾರೆ ಬೇಡಿಕೆಯಲ್ಲಿ ಶೇ.70 ರಷ್ಟು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದು, ಶೇ.30 ರಷ್ಟು ಭಾರತದಲ್ಲೇ ಗ್ಯಾಸ್ ಉತ್ಪಾದಿಸಲಾಗುತ್ತದೆ. ದೇಶದಲ್ಲಿ ಉತ್ಪಾದನೆಯಾಗುವ ಎಲ್‌ಪಿಜಿಯನ್ನು ಗೃಹ ಬಳಕೆಗೆ ಪೂರೈಸಲು ಯಾವುದೇ ಸಮಸ್ಯೆಯಿಲ್ಲ ಎಂದರು.

ಸದ್ಯ ವಾಣಿಜ್ಯ ಉದ್ದೇಶಗಳಿಗೆ ಬಳಕೆಯಾಗುವ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಆದರೆ, ವಿದೇಶಾಂಗ ಸಚಿವಾಲಯದ ಮಾಹಿತಿ ಪ್ರಕಾರ ಹಾರ್ಮುಜ್ ಕಣಿವೆಯಲ್ಲಿ ಸಿಲುಕಿದ್ದ ಹಡಗುಗಳ ಪೈಕಿ ಭಾರತಕ್ಕೆ ಅನಿಲ ಪೂರೈಸುವ ಎರಡು ಹಡಗುಗಳಿಗೆ ಇರಾನ್ ಅವಕಾಶ ಕಲ್ಪಿಸಿದೆ ಎಂದು ಹೇಳಿದರು.

ಕೇಂದ್ರ ಸರ್ಕಾರದ ವೈಫಲ್ಯ: ಆರೋಪ

ಬಳಿಕ ಮಾತನಾಡಿದ ಕಾಂಗ್ರೆಸ್ ಸದಸ್ಯರು ದೇಶದಲ್ಲಿ ಅಡುಗೆ ಅನಿಲ ಕೊರತೆಯಾಗಿರುವುದು ಕೇಂದ್ರ ಸರ್ಕಾರದ ವೈಫಲ್ಯ ಎಂದು ಟೀಕಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಭಾರತಿ ಶೆಟ್ಟರ್, ಭೋಜೇಗೌಡ ಅವರು ಮೋದಿ ಹೈ ತೋ ಸಬ್ಕುಚ್ ಹೈ ಎಂದು ತಿರುಗೇಟು ನೀಡಿದರು. ಈ ವೇಳೆ ಸದನದಲ್ಲಿ ಗದ್ದಲ ಉಂಟಾಗಿದ್ದರಿಂದ ಸಭಾಪತಿಗಳು 15 ನಿಮಿಷ ಕಲಾಪವನ್ನು ಮುಂದೂಡಿದರು.

ಆದ್ಯತಾ ಕುಟುಂಬಗಳಿಗಿರುವ ಮಿತಿ ಮತ್ತೊಮ್ಮೆ ಸರ್ಕಾರ ಪರಿಶೀಲನೆ

ವಾರ್ಷಿಕ ಆದಾಯ ಮಿತಿ 3 ಲಕ್ಷಕ್ಕೆ ಹೆಚ್ಚಳ?



ವಿಧಾನಸಭೆ: ರಾಜ್ಯದಲ್ಲಿ ಆದ್ಯತಾ ಕುಟುಂಬಗಳಿಗೆ (ಪಿಎಚ್‌ಎಚ್) ನೀಡಲಾಗುವ ಪಡಿತರ ಚೀಟಿಗಳ ವಾರ್ಷಿಕ ಆದಾಯ ಮಿತಿಯನ್ನು ಪ್ರಸ್ತುತ ಇರುವ 1.20 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸಲು ರಾಜ್ಯ ಸರ್ಕಾರ ಪರಿಶೀಲನೆ ನಡೆಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರ ಪ್ರಶ್ನೆಗೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ಪರವಾಗಿ ಅವರು ಉತ್ತರಿಸಿದರು.

ಡಾ. ಅಶ್ವತ್ಥನಾರಾಯಣ ವಿಷಯ ಪ್ರಸ್ತಾಪಿಸಿ, ಪ್ರಸ್ತುತ ಜಾರಿಯಲ್ಲಿರುವ ಆದಾಯ ಮಿತಿಯು ಎಂಟು ವರ್ಷಗಳಷ್ಟು ಹಳೆಯದಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಜನರ ಜೀವನ ವೆಚ್ಚ ಮತ್ತು ಆದಾಯದ ಪ್ರಮಾಣದಲ್ಲಿ ಗಣನೀಯ ಏರಿಕೆಯಾಗಿದೆ. ಹಳೆಯ ಮಾನದಂಡಗಳನ್ನೇ ಇಂದಿಗೂ ಮುಂದುವರಿಸುವುದು ವೈಜ್ಞಾನಿಕವಲ್ಲ. ಅಲ್ಲದೆ, ನಗರ ಮತ್ತು ಗ್ರಾಮೀಣ ಭಾಗಗಳಿಗೆ ಒಂದೇ ರೀತಿಯ ಆದಾಯ ಮಿತಿಯನ್ನು ನಿಗದಿಪಡಿಸಿರುವುದು ಸರಿಯಾದ ಕ್ರಮವಲ್ಲ ಎಂದು ಹೇಳಿದರು.

ಬಿಜೆಪಿ ಶಾಸಕ ಗೋಪಾಲಯ್ಯ ಅವರು, ಪಡಿತರ ಚೀಟಿಗಳ ರದ್ದತಿಯಿಂದಾಗುತ್ತಿರುವ ಅನ್ಯಾಯವಾಗಲಿದೆ. ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 8–10 ಸಾವಿರ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದೆ. ಯಾವುದೇ ಮನೆಮನೆ ಸಮೀಕ್ಷೆ ನಡೆಸದೆ ಏಕಾಏಕಿ ಕಾರ್ಡ್‌ಗಳನ್ನು ರದ್ದುಗೊಳಿಸುವುದು ಬಡವರಿಗೆ ಮಾಡುತ್ತಿರುವ ಅನ್ಯಾಯ. ತಾಂತ್ರಿಕ ಕಾರಣಗಳನ್ನು ನೀಡಿ ಬಡವರ ಅನ್ನವನ್ನು ಕಸಿದುಕೊಳ್ಳಬಾರದು ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು, ಪಡಿತರ ಚೀಟಿಯು ಕೇವಲ ಅಕ್ಕಿ ಪಡೆಯಲು ಮಾತ್ರ ಸೀಮಿತವಾಗಿಲ್ಲ. ಚಾಲಕ ವೃತ್ತಿ ಮಾಡುವವರು ಅಥವಾ ಸಣ್ಣ ಪುಟ್ಟ ಕೆಲಸ ಮಾಡುವವರ ಆದಾಯ ಹೆಚ್ಚಿಲ್ಲದಿದ್ದರೂ ಅವರ ಕಾರ್ಡ್‌ಗಳನ್ನು ರದ್ದು ಮಾಡಲಾಗುತ್ತಿದೆ. ಬಿಪಿಎಲ್ ಕಾರ್ಡ್ ಕೇವಲ ಆಹಾರಕ್ಕಷ್ಟೇ ಅಲ್ಲದೆ, ಉಚಿತ ಆರೋಗ್ಯ ಸೇವೆಗಳು ಮತ್ತು ಮಕ್ಕಳ ಶಿಕ್ಷಣ ಸೇರಿದಂತೆ ಸರ್ಕಾರದ ವಿವಿಧ ಸೌಲಭ್ಯಗಳನ್ನು ಪಡೆಯಲು ಅತ್ಯಗತ್ಯವಾಗಿದೆ ಎಂದರು.

ಸಚಿವ ದಿನೇಶ್ ಗುಂಡೂರಾವ್, ಹಿರಿಯ ಸದಸ್ಯ ಆರ್.ವಿ. ದೇಶಪಾಂಡೆ ಅಧ್ಯಕ್ಷತೆಯ ಆಡಳಿತ ಸುಧಾರಣಾ ಆಯೋಗವು ಈ ಕುರಿತು ಈಗಾಗಲೇ ವರದಿ ನೀಡಿದೆ. ಆ ವರದಿಯಲ್ಲಿ ಬಿಪಿಎಲ್ ಕಾರ್ಡ್ ಪಡೆ ಯಲು ಇರುವ ವಾರ್ಷಿಕ ಆದಾಯದ ಮಿತಿಯನ್ನು 3 ಲಕ್ಷ ರೂ.ಗೆ ಏರಿಸಬೇಕು ಎಂದು ಶಿಫಾರಸ್ಸು ಮಾಡಲಾಗಿದೆ. ಈ ಶಿಫಾರಸ್ಸನ್ನು ಸರ್ಕಾರವು ಸಕಾರಾತ್ಮಕವಾಗಿ ಪರಿಶೀಲಿಸುತ್ತಿದೆ ಎಂದರು.

ಬಡವರಿಗೆ ಸಿಗದ ಪಡಿತರ

ಕೇಂದ್ರ ಸರ್ಕಾರದ ಆಹಾರ ಭದ್ರತಾ ಕಾಯ್ದೆಯ ನಿಯಮಗಳ ಪ್ರಕಾರ, ಗ್ರಾಮೀಣ ಭಾಗದಲ್ಲಿ ಶೇ.75 ರಷ್ಟು ಮತ್ತು ನಗರ ಪ್ರದೇಶದಲ್ಲಿ ಶೇ.50 ರಷ್ಟು ಬಿಪಿಎಲ್ ಕಾರ್ಡ್‌ಗಳನ್ನು ಹೊಂದಲು ಅವಕಾಶವಿದೆ. ಆದರೆ, ಪ್ರಸ್ತುತ ನಗರ ಪ್ರದೇಶಗಳಲ್ಲಿ ಅರ್ಹ ಬಡವರಿಗೆ ಆದ್ಯತಾ ಪಡಿತರ ಚೀಟಿಗಳು ಸಿಗುತ್ತಿಲ್ಲ ಎಂಬ ಆತಂಕವನ್ನು ಡಾ. ಅಶ್ವತ್ಥನಾರಾಯಣ ವ್ಯಕ್ತಪಡಿಸಿದರು.

ಆರೋಗ್ಯ ತುರ್ತು ಪರಿಸ್ಥಿತಿ: ಆಕ್ರೋಶ

ವಿಧಾನಸಭೆ: ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ, ಔಷಧಿಗಳ ಅಭಾವ ಹಾಗೂ ಆ್ಯಂಬುಲೆನ್ಸ್ ಸೇವೆಗಳ ವೈಫಲ್ಯದಿಂದಾಗಿ ರಾಜ್ಯದಲ್ಲಿ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರತಿಪಕ್ಷದ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಗುರುವಾರ ಕಲಾಪದಲ್ಲಿ ಪ್ರಶ್ನೋತ್ತರ ಅವಧಿ ಮುಗಿಯುತ್ತಿದ್ದಂತೆಯೇ ಪ್ರತಿಪಕ್ಷ ನಾಯಕ ಆರ್. ಅಶೋಕ, ರಾಜ್ಯದ ಆರೋಗ್ಯ ಇಲಾಖೆಯು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳ ಬಗ್ಗೆ ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಮನವಿ ಮಾಡಿದರು.

ಸಾರ್ವಜನಿಕವಾಗಿ ಅತ್ಯಂತ ಮಹತ್ವದ ಮತ್ತು ತುರ್ತು ಚರ್ಚೆಯ ಅಗತ್ಯವಿರುವ ವಿಷಯಗಳನ್ನು ನಿಲುವಳಿ ಸೂಚನೆಯ ಅಡಿಯಲ್ಲೇ ಚರ್ಚಿಸಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಇಂತಹ ಗಂಭೀರ ವಿಷಯಗಳನ್ನು ಏಕಾಏಕಿ ಸಾರ್ವಜನಿಕ ಮಹತ್ವದ ವಿಚಾರವನ್ನಾಗಿ (ನಿಯಮ 69ರ ಅಡಿ) ಪರಿವರ್ತಿಸಲಾಗುತ್ತಿದೆ. ಹೀಗೆ ಮಾಡುವುದರಿಂದ ವಿಷಯದ ತೀವ್ರತೆ ಮತ್ತು ಗಂಭೀರತೆ ಕಡಿಮೆಯಾಗುತ್ತದೆ. ಮುಖ್ಯಮಂತ್ರಿಯವರು ಅಥವಾ ಸಂಬಂಧಪಟ್ಟ ಸಚಿವರು ಯಥಾರೀತಿ ಉತ್ತರ ನೀಡಿ ಹೋಗುತ್ತಾರೆ. ಇದರಿಂದ ಬಡವರಿಗೆ ಯಾವುದೇ ನ್ಯಾಯ ಸಿಗುವುದಿಲ್ಲ ಎಂದವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜಕೀಯ ಪ್ರೇರಿತ ಅಥವಾ ಒತ್ತಡದ ವಿಚಾರಗಳಿದ್ದರೆ ಬೇಕಿದ್ದರೆ ಅಂತಹವುಗಳನ್ನು ಪರಿವರ್ತನೆ ಮಾಡಿ. ಆದರೆ, ಬಡವರ ಪ್ರಾಣಕ್ಕೆ ಸಂಬಂಧಿಸಿದ, ಆರೋಗ್ಯ ಇಲಾಖೆಯ ಹದಗೆಟ್ಟ ಸ್ಥಿತಿಯಂತಹ ಜನರ ನೇರ ಸಮಸ್ಯೆಗಳಿದ್ದಾಗ ಅದನ್ನು ಪ್ರಾಥಮಿಕ ವಿಷಯ ಮಂಡನೆಗೆ ಅವಕಾಶ ಮಾಡಿಕೊಡಿ, ಎಂದು ಕೋರಿದರು. ಇಂದು ರಾಜ್ಯದ ಯಾವುದೇ ಸರ್ಕಾರಿ ಆಸ್ಪತ್ರೆಗೆ ಹೋದರೂ ಅಲ್ಲಿ ಅಗತ್ಯ ಔಷಧಿಗಳು ಸಿಗುತ್ತಿಲ್ಲ. ವೈದ್ಯರ ಕೊರತೆ ಎದ್ದುಕಾಣುತ್ತಿದೆ. ಕೇವಲ ಪ್ರತಿಪಕ್ಷದವರು ಮಾತ್ರವಲ್ಲ, ಸ್ವತಃ ವೈದ್ಯಕೀಯ ಸಂಘದ ಪದಾಧಿಕಾರಿಗಳೇ ಔಷಧಿಗಳ ಕೊರತೆ ಇರುವುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಆಸ್ಪತ್ರೆಗಳಲ್ಲಿ ಪ್ಯಾರಸಿಟಮಾಲ್‌ನಂತಹ ಪ್ರಾಥಮಿಕ ಮಾತ್ರೆಗಳಿಗೂ ರೋಗಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ದೂರಿದರು.

ಸಕಾಲಕ್ಕಿಲ್ಲ ಆ್ಯಂಬುಲೆನ್ಸ್ ಸೇವೆ



ಬಿಜೆಪಿಯ ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ ಮಾತನಾಡಿ, ರಾಜ್ಯದಲ್ಲಿ ಪ್ರಸ್ತುತ ಆರೋಗ್ಯ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಆ್ಯಂಬುಲೆನ್ಸ್ ಸೇವೆಗಳು ಸಕಾಲಕ್ಕೆ ಸಿಗುತ್ತಿಲ್ಲ. ಡಯಾಲಿಸಿಸ್ ಕೇಂದ್ರಗಳಲ್ಲಿ ಸಮಸ್ಯೆಗಳಿವೆ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ ಅನುದಾನದ ಕೊರತೆಯಿದೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸದಿದ್ದರೆ ಸಾವು–ನೋವುಗಳ ಸಂಖ್ಯೆ ಹೆಚ್ಚಾಗಲಿದೆ, ಎಂದು ಆತಂಕ ವ್ಯಕ್ತಪಡಿಸಿದರು. ಪ್ರತಿಪಕ್ಷಗಳ ವಾಗ್ದಾಳಿಗೆ ಉತ್ತರಿಸಿದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಸರ್ಕಾರವು ಈ ವಿಷಯದ ಬಗ್ಗೆ ಚರ್ಚೆ ನಡೆಸಲು ಯಾವುದೇ ಸಮಯದಲ್ಲೂ ಸಿದ್ಧವಿದೆ. ಇಲಾಖೆಯಲ್ಲಿ ಆಗಿರುವ ಸುಧಾರಣೆಗಳು ಮತ್ತು ಎದುರಿಸುತ್ತಿರುವ ಸವಾಲುಗಳ ಬಗ್ಗೆ ನಾವು ಮುಕ್ತವಾಗಿ ಮಾತನಾಡುತ್ತೇವೆ. ಈ ವಿಷಯದ ಗಂಭೀರತೆಯನ್ನು ಗಮನಿಸಿ ಪ್ರತ್ಯೇಕವಾಗಿ ಸುದೀರ್ಘ ಚರ್ಚೆಗೆ ಸಮಯ ನಿಗದಿಪಡಿಸುವಂತೆ ಸಭಾಧ್ಯಕ್ಷರಲ್ಲಿ ಮನವಿ ಮಾಡಿದರು.

ಹಾಸನದಲ್ಲಿ ಗರಿಷ್ಠ 788 ಮಾದರಿಗಳಲ್ಲಿ ಪತ್ತೆ

ಕೆಲವು ಡೇರಿಗಳಲ್ಲಿ ಹಾಲು ಕಲಬೆರಕೆ



ವಿಧಾನಪರಿಷತ್: ಒಂದು ವರ್ಷದಲ್ಲಿ ಡೇರಿಗಳಿಗೆ ಪೂರೈಕೆಯಾದ ಹಾಲಿನ ಘಟಕಗಳ 15,15,575 ಮಾದರಿಗಳನ್ನು ಪರೀಕ್ಷಿಸಲಾಗಿದೆ. ಅದರಲ್ಲಿ 3,049 ಮಾದರಿಗಳಲ್ಲಿ ಮಾತ್ರ ಕಲಬೆರಕೆ ಕಂಡು ಬಂದಿದೆ ಎಂದು ಸಭಾನಾಯಕ ಭೋಸರಾಜು ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಮಧು ಜಿ. ಮಾದೇ ಗೌಡ ಕೇಳಿದ ಪ್ರಶ್ನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಉತ್ತರಿಸಿದ ಅವರು, ಹಾಸನದಲ್ಲಿ ರಾಜ್ಯದಲ್ಲೇ ಗರಿಷ್ಠ 788 ಮಾದರಿಗಳಲ್ಲಿ ಕಲಬೆರಕೆ ಪತ್ತೆಯಾಗಿದೆ. ಉಳಿದಂತೆ ಬಳ್ಳಾರಿಯಲ್ಲಿ – 588, ಶಿವಮೊಗ್ಗ– 434, ಮಂಡ್ಯ –418 ಮತ್ತು ಕಲಬುರಗಿ –315 ಯಲ್ಲಿ ಹೆಚ್ಚು ಕಲಬೆರಕೆ ಪತ್ತೆಯಾಗಿದೆ. ಇನ್ನು ಹಾಲಿನಲ್ಲಿ ಕಲಬೆರಕೆ ಅಂಶ ಪತ್ತೆ ಹಚ್ಚಲು ಎಲ್ಲ ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಅಡಲ್ಟರೇಷನ್ ಟೆಸ್ಟ್ ಕಿಟ್ (ಸಕ್ಕರೆ, ಉಪ್ಪು, ನ್ಯೂಟ್ರಲೈಸರ್, ಯೂರಿಯಾ ಇತ್ಯಾದಿ) ಅನ್ನು ಒದಗಿಸಲಾಗಿದ್ದು, ಕಲಬೆರಕೆ ಅಂಶವನ್ನು ಪರೀಕ್ಷಿಸಲಾಗುತ್ತಿದೆ ಹಾಗೂ ಸಂಘಗಳಲ್ಲಿ ಸ್ವೀಕರಿಸಿದ ಹಾಲನ್ನು ಡೇರಿ ಹಂತದಲ್ಲಿಯೂ ಸಹ ಎಲ್ಲ ರೀತಿಯ ಪರೀಕ್ಷೆಗೊಳಪಡಿಸಿ ಸ್ವೀಕರಿಸಲಾಗುತ್ತಿದೆ. ಇದರೊಂದಿಗೆ ಡೋಡ್ಲಾ ಕಂಪನಿಯ ಹಾಲಿನಲ್ಲೂ ಕಲಬೆರಕೆ ಅಂಶ ಪತ್ತೆಯಾಗಿದೆ ಎಂದು ಸದನಕ್ಕೆ ಮಾಹಿತಿ ನೀಡಿದರು. ಇದೇ ವೇಳೆ ಕೋಲಾರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ನಂದಿನಿ ಹೈಟೆಕ್ ಪ್ರಾಡಕ್ಟ್ ಪ್ಲಾಂಟ್ ಚನ್ನರಾಯಪಟ್ಟಣ, ನಂದಿನಿ ಹೈಟೆಕ್ ಮೆಗಾ ಪೌಡರ್ ಪ್ಲಾಂಟ್, ಕಣ್ವ ರಾಮನಗರ ಮತ್ತು ಮದರ್ ಡೇರಿಯಲ್ಲಿ ಕಲಬೆರಕೆಯ ಒಂದೇ ಒಂದು ಪ್ರಕರಣ ಪತ್ತೆಯಾಗಿಲ್ಲ ಎಂದು ತಿಳಿಸಿದರು.

ಉತ್ಪಾದಕರಿಗೆ ಅರಿವು ಮೂಡಿಸಿ

ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಸುವ ಹಾಲಿನಲ್ಲಿ ಕಲಬೆರಕೆ ಅಂಶ ಕಂಡುಬಂದರೆ ಆ ಹಾಲನ್ನು ತಿರಸ್ಕರಿಸಿ, ಉತ್ಪಾದಕರಿಗೆ ಅರಿವು ಮೂಡಿಸಿ, ಸಂಘದ ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿಗೆ ಕಲಬೆರಕೆ ಮತ್ತೆ ಈ ರೀತಿಯಾಗದಂತೆ ಎಚ್ಚರಿಕೆ ನೀಡಲಾಗಿದೆ ಎಂದು ಭರವಸೆ ನೀಡಿದ್ದಾರೆ.

ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಕ್ರಮ: ಸಚಿವ ಈಶ್ವರ ಖಂಡ್ರೆ

ಕಾಡು ಪ್ರಾಣಿಗಳ ಸಂಘರ್ಷ ತಡೆಗೆ ಸಫಾರಿ ಸ್ಥಗಿತ

ವಿಧಾನಸಭೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ 314 ಕಿ.ಮೀ. ಗಡಿ ಇದೆ. ಅದರಲ್ಲಿ 100 ಕಿಮೀ ಗಡಿ ಹೆಚ್ಚಿನ ಸಂಘರ್ಷ ಪ್ರದೇಶವಾಗಿದೆ ಎಂದು ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು, ಸಫಾರಿ ಸ್ಥಗಿತಗೊಳಿಸಿದ್ದರಿಂದ 4 ಸಾವಿರಕ್ಕೂ ಹೆಚ್ಚು ಜನರು ಉದ್ಯೋಗ ಕಳೆದುಕೊಂಡಿದ್ದರು. ಸಫಾರಿ ದೇಶಾದ್ಯಂತ ಹಲವು ವರ್ಷದಿಂದ ನಡೆಯುತ್ತಿದೆ. ಒಂದು ಸಮೀಕ್ಷೆಯನ್ನೂ ನಡೆಸದೆ ಏಕಾಏಕಿ ಸಫಾರಿ ನಿಲ್ಲಿಸಿದ್ದು ಮತ್ತು ಪುನರ್ ಆರಂಭಿಸಿದ್ದು ಸರಿಯಲ್ಲ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಫಾರಿಯನ್ನು ಏಕಾಏಕಿ ನಿಲ್ಲಿಸಲಿಲ್ಲ. ಕಳೆದ ನವೆಂಬರ್ ತಿಂಗಳಲ್ಲಿ 15 ದಿನಗಳ ಅಂತರದಲ್ಲಿ ಮೂರು ಜೀವಹಾನಿಯಾಗಿತ್ತು, ಒಬ್ಬರು ಶಾಶ್ವತವಾಗಿ ಅಂಗವಿಕಲರಾದರು. ಹುಲಿಗಳು ಕಾಡಿನಿಂದ ಹೊರಗೆ ಬಂದು ದಾಳಿ ಮಾಡುತ್ತಿದ್ದವು. ಜನರ ಅಮೂಲ್ಯ ಜೀವ ರಕ್ಷಣೆ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಯಿತು ಎಂದು ಸ್ಪಷ್ಟಪಡಿಸಿದರು. ನವೆಂಬರ್‌ನಲ್ಲಿ ತಾವು ಚಾಮರಾಜನಗರದಲ್ಲಿ ಈ ಸಂಬಂಧ ಸಭೆ ನಡೆಸಿದಾಗ ಹಲವು ರೈತ ಸಂಘಟನೆಗಳು ಸಫಾರಿ ರಾತ್ರಿಯವರೆಗೂ ನಡೆಯುತ್ತಿದೆ. ಹೆಚ್ಚಿನ ವಾಹನಗಳ ಸಂಚಾರ ಏದೆ. ಹೆಚ್ಚು ಪ್ರವಾಸಿಗರು ಆಗಮಿಸುತ್ತಿದ್ದಾರೆ ಎಂದರು.

ಕುಮಾರ ಪರ್ವತ ಚಾರಣಕ್ಕೆ ಆನ್‌ಲೈನ್ ಟಿಕೆಟ್



ವಿಧಾನಸಭೆ: ಕುಕ್ಕೆ ಸುಬ್ರಹ್ಮಣ್ಯ ಬಳಿಯ ಕುಮಾರ ಪರ್ವತ ಚಾರಣಕ್ಕೆ ಆಗಮಿಸುವವರು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಮಾತ್ರ ಟಿಕೆಟ್ ಖರೀದಿಸಬೇಕಾಗುತ್ತದೆಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು. ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಭಾಗೀರಥಿ ಮುರುಳ್ಯ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಒಂದೇ ದಿನ 2–3 ಸಾವಿರ ಜನರು ಒಂದೇ ಕಡೆ ಸೇರಿದರೆ ಸಮಸ್ಯೆ ಆಗುತ್ತದೆ. ಆದ್ದರಿಂದ ನಿಯಂತ್ರಣ ಕ್ರಮ ಕೈಗೊಂಡು ಪ್ರತಿನಿತ್ಯ 150 ಜನರಿಗೆ ಮಾತ್ರ ಚಾರಣಕ್ಕೆ ಅವಕಾಶ ನೀಡಲಾಗುತ್ತಿದೆ. ಮಳೆಗಾಲದಲ್ಲಿ ಜಾರುವ ಹಾಗೂ ಬೇಸಗೆಯಲ್ಲಿ ಕಾಡ್ಗಿಚ್ಚಿನ ಭೀತಿ ಎದುರಾಗುವ ಕಾರಣ ಚಾರಣ ಇರುವುದಿಲ್ಲ ಎಂದು ವಿವರಿಸಿದರು. ಸುಬ್ರಹ್ಮಣ್ಯದಿಂದ ಕುಮಾರ ಪರ್ವತಕ್ಕೆ 24 ಕಿ.ಮೀ. ಚಾರಣ ಪಥವಿದ್ದು, ಅಲ್ಲಿ ಹೋಗಿ, ಮರಳಿ ಬರಲು 2 ದಿನ ಆಗುತ್ತಿತ್ತು. ರಾತ್ರಿ ಅಲ್ಲೇ ಉಳಿಯಬೇಕಿತ್ತು ಎಂದು ಹೇಳಿದರು.

ಬಂಡೀಪುರದಲ್ಲಿವೆ 175 ಹುಲಿಗಳು

1972ರಲ್ಲಿ ಬಂಡೀಪುರದಲ್ಲಿ ಕೇವಲ 12 ಹುಲಿಗಳಿದ್ದವು. ಕಳೆದ 3 ವರ್ಷದ ಹಿಂದೆ ಗಣತಿ ನಡೆದಾಗ ಅಲ್ಲಿ 150 ಹುಲಿ ಇದ್ದವು. ಈಗ ಹುಲಿಗಳ ಸಂಖ್ಯೆ 175 ಹುಲಿ ಇವೆ. ಕಾಡಿನ ಧಾರಣಾ ಸಾಮರ್ಥ್ಯ ತಿಳಿಯಲು ತಜ್ಞರ ಸಮಿತಿಯಿಂದ ವರದಿ ತರಿಸಿಕೊಳ್ಳುತ್ತಿದ್ದೇವೆ. ಕಾಡು ಹೆಚ್ಚುತ್ತಿಲ್ಲ, ಬದಲಾಗಿ ಕ್ಷೀಣಿಸುತ್ತಿದೆ. ಸಫಾರಿ ಮತ್ತೆ ಆರಂಭಿಸಿದ ನಂತರ ಪ್ರತಿಷ್ಠಾನಕ್ಕೆ ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35 ರಷ್ಟನ್ನು ಕಾಡಿನಂಚಿನ ಗ್ರಾಮದಲ್ಲಿ ಜನ ಸಂಪರ್ಕ ಸಭೆ ಮಾಡಲು, ಶಿಕ್ಷಣ, ಮೂಲ ಸೌಕರ್ಯ ಹೆಚ್ಚಳಕ್ಕೆ, ಉದ್ಯೋಗ ಸೃಷ್ಟಿಗೆ ಬಳಸಲು ಸೂಚಿಸಲಾಗಿದೆ ಎಂದರು.

ಸಂಪಾದಕೀಯ

ಎರಡು ತೈಲ ಹಡಗುಗಳ ಆಗಮನ ಸ್ವಾಗತಾರ್ಹ

ಮಧ್ಯಪ್ರಾಚ್ಯದ ಯುದ್ಧದ ನೆರಳಿನಲ್ಲೇ, ಹಾರ್ಮೂಜ್ ಜಲಸಂಧಿಯಿಂದ ಭಾರತ ಕಚ್ಚಾ ತೈಲ ಹೊತ್ತ ಎರಡು ಹಡಗುಗಳನ್ನು ತರಿಸಿಕೊಳ್ಳಲು ಯಶಸ್ವಿಯಾಗಿದ್ದು, ಈ ಮೂಲಕ ದೇಶದಲ್ಲಿ ಹಬ್ಬುತ್ತಿರುವ ಎಲ್‌ಪಿಜಿ ಮತ್ತು ತೈಲ ಕೊರತೆ ವದಂತಿಗಳನ್ನು ನಿವಾರಿಸಲು ಮುಂದಾಗಿದೆ.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ, ಪೆಟ್ರೋಲಿಯಂ ಸಚಿವರು ಮತ್ತು ತೈಲ ಕಂಪನಿಗಳೂ ತೈಲ ಮತ್ತು ಎಲ್‌ಪಿಜಿಗೆ ಯಾವುದೇ ಸಮಸ್ಯೆ ಇಲ್ಲ. ನಮ್ಮಲ್ಲಿ ಕೊರತೆಯುಂಟಾಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಜತೆಗೆ, ದೇಶದ ಶೇ.70ರಷ್ಟು ತೈಲವನ್ನು ಹಾರ್ಮೋಜ್ ಜಲಸಂಧಿಯಿಂದ ಹೊರತಾದ ಬೇರೆ ಮಾರ್ಗಗಳಿಂದ ತರಿಸಿಕೊಳ್ಳುತ್ತಿದ್ದೇವೆ ಎಂದೂ ಸ್ಪಷ್ಟವಾಗಿ ಕೇಂದ್ರ ಸರ್ಕಾರ ಹೇಳಿದೆ. ಇರಾನ್‌ನ ವಿದೇಶಾಂಗ ಸಚಿವ ಮತ್ತು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಸತತವಾಗಿ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಭಾರತದ ಹಡಗುಗಳಿಗೆ ಅವಕಾಶ ಮಾಡಿಕೊಡುವ ಬಗ್ಗೆ ಒಂದು ನಿರ್ಧಾರಕ್ಕೆ ಬರಲಿದ್ದಾರೆ. ಇದರ ಮೊದಲ ಹಂತವಾಗಿ ತೈಲ ಹೊತ್ತ ಎರಡು ಹಡಗುಗಳು, ಹಾರ್ಮೋಜ್ ಜಲಸಂಧಿಯಿಂದಲೇ ರಹಸ್ಯವಾಗಿ ಹೊರಟು, ಮುಂಬೈಗೆ ಬಂದಿವೆ. ಇದೊಂದು ರೀತಿಯಲ್ಲಿ ದೊಡ್ಡ ರಹಸ್ಯ ಕಾರ್ಯಾಚರಣೆಯಂತೆಯೇ ನಡೆದಿದ್ದು, ದೇಶದ ಜನರ ಹಿತಾಸಕ್ತಿಗಾಗಿ ದೊಡ್ಡ ಮಟ್ಟದ ಅಪಾಯವನ್ನೇ ತೆಗೆದುಕೊಂಡಿದೆ. ಹೀಗಾಗಿ ಮುಂದಿನ ದಿನಗಳಲ್ಲೂ ಯಾವುದೇ ಕಾರಣಕ್ಕೂ ತೈಲ ಮತ್ತು ಎಲ್‌ಪಿಜಿ ಕೊರತೆಯಾಗಲು ಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರವೂ ಹೇಳುತ್ತಿದ್ದು, ಇದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕಾಗಿದೆ.

ಈ ಮೊದಲೇ ಹೇಳಿದಂತೆ ಯುದ್ಧ ಕಾಲದಲ್ಲಿ ಎಲ್ಲವೂ ಸರಾಗವಾಗಿ ನಡೆಯಬೇಕು ಎಂದು ಆಶಿಸುವುದು ತಪ್ಪಾಗುತ್ತದೆ. ಕೆಲವೊಮ್ಮೆ ದೂರದಲ್ಲಿ ಎಲ್ಲೋ ನಡೆಯುವ ಯುದ್ಧಗಳೂ ನಮ್ಮ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಹೊಡೆತ ನೀಡಬಹುದು. ಆದರೆ, ಈಗ ಯುದ್ಧದಲ್ಲಿ ಭಾಗಿಯಾಗಿರುವ ಎಲ್ಲ ದೇಶಗಳೂ ಒಂದಲ್ಲ, ಒಂದು ನಿಟ್ಟಿನಲ್ಲಿ ಭಾರತದ ಜತೆ ಉತ್ತಮ ಸಂಬಂಧ ಹೊಂದಿವೆ. ಹೀಗಾಗಿ, ಕೆಲ ಮಟ್ಟಿಗೆ ಗೊಂದಲಗಳಾದರೂ, ಸಹನೆಯಿಂದ ಕಾಯಬೇಕಾದ ಅನಿವಾರ್ಯತೆಯೂ ಜನರಿಗೆ ಇದೆ. ಈಗ ಸರ್ಕಾರವೂ ಕಣ್ಣು ಮುಚ್ಚಿ ಕುಳಿತಿಲ್ಲ. ತನ್ನ ಎಲ್ಲ ಲಭ್ಯ ಮಾರ್ಗಗಳ ಮೂಲಕ ದೇಶದಲ್ಲಿ ಯಾವುದೇ ವಸ್ತುಗಳಿಗೆ ಕೊರತೆಯಾಗದಂತೆ ನೋಡಿಕೊಳ್ಳಲು ಶ್ರಮಿಸುತ್ತಿದೆ. ಇದು ಮುಂಬೈ ಬಂದರಿಗೆ ಬಂದ ಹಡಗುಗಳಿಂದಲೇ ಸಾಬೀತಾಗಿದೆ. ಇಂಥ ಹೊತ್ತಲ್ಲಿ ನಾವು ರಾಜಕೀಯದ ದಾಳಗಳಿಗೆ ಬಲಿಯಾಗದೆ, ವ್ಯವಸ್ಥೆಯ ಜತೆಗೆ ನಿಲ್ಲಬೇಕಾದ ಜವಾಬ್ದಾರಿಯನ್ನೂ ಹೊಂದಿದ್ದೇವೆ. ಇದರಲ್ಲಿ ನಾವು ಮಾಡಬೇಕಾಗಿದ್ದುದು, ಸರ್ಕಾರದ ಮೇಲೆ ನಂಬಿಕೆ ಇಟ್ಟು, ಯಾವುದೇ ಕಾರಣಕ್ಕೂ ಗಾಬರಿಗೆ ಅಥವಾ ಆತಂಕಕ್ಕೆ ಬೀಳದೇ ಸಮಚಿತ್ತದಿಂದ ಇರಬೇಕು. ಆಗಷ್ಟೇ ಎಲ್ಲ ಗೊಂದಲಗಳು, ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ. ಯುದ್ಧದ ಹೊತ್ತಲ್ಲಿ ನಮ್ಮ ಸಮಚಿತ್ತದ ನಡೆಗಳು,ಅಪಾರವಾದ ಅನುಕೂಲ ಮಾಡಿಕೊಡುತ್ತವೆ ಎಂಬುದನ್ನು ಮರೆಯಬಾರದು.

ಗುರುಗಳ ಮಾರ್ಗದರ್ಶನ ಬೇಕು

ಗುರೂಣಾಂ ವಚನಂ ಗ್ರಾಹ್ಯಂ ಪ್ರಾಪ್ತೇ ಲಕ್ಷ್ಯೇ ತು ದೂರತಃ ।
ಸಮೀಪಸ್ಥಂತು ಯತ್ ಕಿಂಚಿತ್ ಸ್ವಯಂ ಪ್ರಾಪ್ನೋತಿ ಮಾನವಃ ॥ -ಸುವಚನಶತಕಂ

ದೂರದಲ್ಲಿರುವ ಲಕ್ಷ್ಯವನ್ನು ಭೇದಿಸಲು ಗುರುಗಳ ಮಾರ್ಗದರ್ಶನದ ಮಾತು ಬೇಕು. ಹತ್ತಿರದಲ್ಲೇ ಇರುವುದನ್ನು ಮನುಷ್ಯನು ತಾನೇ ಪಡೆಯಬಹುದು – ಎಂಬುದು ಶ್ಲೋಕಾರ್ಥ.



ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

ಸನಾತನ ಪರಂಪರೆಯಲ್ಲಿ ಗುರುವಿನದು ಅತ್ಯಂತ ಮಹತ್ವದ ಸ್ಥಾನ. ಯಾವುದೇ ಕೆಲಸವನ್ನು ಆರಂಭಿಸುವ ಪೂರ್ವದಲ್ಲಿ ಗುರುವನ್ನು ನೆನಪಿಸಬೇಕು. ಧಾರ್ಮಿಕ ಪೂಜಾದಿಗಳಲ್ಲಂತೂ ಗುರು-ಗಣಪತಿಯರನ್ನು ಪೂಜಿಸಿ ಮುಂದಿನ ವಿಧಿ ವಿಧಾನವನ್ನು ನೆರವೇರಿಸುತ್ತಾರೆ. ಗುರುವಿಲ್ಲದೇ ಬದುಕು ಸಾಗುವುದಿಲ್ಲ. ಇಹಪರಗಳ ಸಾಧನೆಯಲ್ಲೂ ಗುರುವಿಗೆ ಪ್ರಥಮ ಪ್ರಾಶಸ್ತ್ಯ. ಇದನ್ನೆ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ದಾಸವಾಣಿ ಎಚ್ಚರಿಸುತ್ತದೆ. "ಹರ ಮುನಿದರೂ ಗುರು ಕಾಯ್ವ" ಎಂಬ ನುಡಿಗಟ್ಟು ಗುರುವಿನ ಗುರುತ್ವಕ್ಕೆ ಹಿಡಿದ ಕನ್ನಡಿ.

ಆದ್ದರಿಂದಲೇ ಉಪನಿಷತ್ತು ತಾಯಿ ತಂದೆಯರ ನಂತರ "ಆಚಾರ್ಯ ದೇವೋಭವ" ಎಂದು ಗುರುವಿನ ಹಿರಿಮೆಯನ್ನು ಸಾರಿದೆ. ಗುರು ವ್ಯಕ್ತಿಯೇ ಆಗಬೇಕಿಲ್ಲ. ಸಂಕೇತವೂ ಆಗುತ್ತದೆ. ಪ್ರಕೃತಿಯಲ್ಲಿರುವ ವಿವಿಧ ವಸ್ತುಗಳೂ ಆಗುತ್ತವೆ. ಏಕಲವ್ಯನಿಗೆ ದ್ರೋಣರ ಮಣ್ಣಿನ ಮೂರ್ತಿ ಪ್ರೇರಣೆ ನೀಡಿ ಅಸದೃಶ ಬಿಲ್ಲುಗಾರನನ್ನಾಗಿ ರೂಪಿಸಿತು.

ಶ್ರೀಮದ್ ಭಾಗವತದಲ್ಲಿ ಬರುವ ಅವಧೂತನೇ ಪ್ರಕೃತಿಯಲ್ಲಿರುವ ಒಂದೊಂದು ವಸ್ತುವೂ ಗುರುವಾಗುವುದನ್ನು ನಿಂತು ಧೈರ್ಯ ತುಂಬಿತು ಎಂಬ ವಿಚಾರ ವಿಸ್ತೃತವಾಗಿ ನಿರೂಪಿಸಲ್ಪಟ್ಟಿದೆ. ತ್ರಿಲೋಕ್ಯಾಗೂ ಗುರು ತಲುಪಲು ಗುರು ಬೇಕು. ಗುರು ತ್ರಿಮೂರ್ತಿ ಸ್ವರೂಪಿಯಾಗಿ ತಾನೊಬ್ಬನೇ ತ್ರಿಮೂರ್ತಿಗಳ ಕೆಲಸ ಮಾಡಬಲ್ಲ. ಬ್ರಹ್ಮನು ಸೃಷ್ಟಿ ಕಾರ್ಯ ಮಾಡುವಂತೆ ಗುರುವು ಹೊಸ ಬಗೆಯ ಚಿಂತನೆಯ ಹುಟ್ಟಿಗೆ ಕಾರಣನಾಗಿ ಬ್ರಹ್ಮನಾಗುತ್ತಾನೆ. ಒಳ್ಳೆಯತನವನ್ನು ಉಳಿಸಿ ಬೆಳೆಸಿ ಕೊಳ್ಳುವ ಸಂದರ್ಭದಲ್ಲಿ ವಿಷ್ಣುವಾಗಿ ಸ್ಥಿತಿ ಕೆಲಸ ಮಾಡಬಲ್ಲ. ಜನರಲ್ಲಿರುವ ಅಜ್ಞಾನವನ್ನು, ದೋಷವನ್ನು ದೂರೀಕರಿಸಿ (ನಾಶಪಡಿಸಿ) ಮಹೇಶ್ವರನಾಗಿ ಸ್ಥಾನವನ್ನು ಧರಿಸಬಲ್ಲ. ಒಂದು ಪರಿಪೂರ್ಣ ವ್ಯಕ್ತಿತ್ವ ಅರಳುವಲ್ಲಿ ಗುರುವಿನ ಪಾತ್ರ ಅತ್ಯಂತ ಮಹತ್ವದ್ದು.

ಎಲ್ಲ ಸಂದರ್ಭದಲ್ಲಿಯೂ ಗುರು ಅನುಗ್ರಹ ಬೇಕೇಬೇಕು. ಗುರುವಿನ ಅನುಗ್ರಹ ಸಿಗದಿದ್ದರೆ ಬದುಕು ಸಹ್ಯವೆನಿಸದು. ಆದ್ದರಿಂದಲೇ ಗುರುಗಳ ಪಾದಗಳಿಗೆರಗಿ ಆಶೀರ್ವಚನವನ್ನೂ, ಅನುಗ್ರಹ ಮಂತ್ರಾಕ್ಷತೆಯನ್ನೂ ಪಡೆಯಲು ಹಂಬಲಿಸುತ್ತೇವೆ.

ಹೆಚ್ಚಿನ ಸಂದರ್ಭದಲ್ಲಿ ವಿವೇಕದಿಂದ ವ್ಯವಹರಿಸಿ ತನ್ನ ಹತ್ತಿರದಲ್ಲಿ, ಸುತ್ತುಮುತ್ತಲಿನ ಜ್ಞಾನವನ್ನು ತಾನೇ ಪಡೆಯಬಹುದು. ಆ ವಿವೇಕವನ್ನು ಒರೆಗೆ ಹಚ್ಚಿ ತಿಳಿದುಕೊಂಡರೆ ಇದು ಸಾಧ್ಯ, ಪ್ರಯತ್ನದಿಂದ ಪಡೆದುಕೊಳ್ಳಬಹುದು. ಸುಲಭವಾದದ್ದನ್ನು ತಾನೇ ಓದಿ ಜ್ಞಾನವನ್ನು ಪಡೆದುಕೊಳ್ಳಬಹುದು. ಆದರೆ ದೂರದ ಲಕ್ಷ್ಯವನ್ನು ಭೇದಿಸಲು ಗುರೂಪದೇಶ ಬೇಕು, ಗುರುವಿನ ಮಾರ್ಗದರ್ಶನ ಬೇಕು. ದೂರದ ಲಕ್ಷ್ಯವನ್ನು ಭೇದಿಸಲು ಸಾಮರ್ಥ್ಯವನ್ನೂ ಉಪಾಯವನ್ನೂ ಗುರುವು ಹೊಂದಿರುತ್ತಾನೆ. ಅದನ್ನು ನಮ್ಮದಾಗಿಸಿಕೊಳ್ಳಲು ಗುರುವಿನ ಸಹಕಾರ ಬೇಕೇಬೇಕು. ಕಠಿಣ ವಿಷಯವನ್ನು, ಗೊಂದಲಮಯ ವಿಚಾರವನ್ನು, ರಹಸ್ಯ ನಿರೂಪಣೆಯನ್ನು ತಿಳಿಯಲು ಗುರು ಬೇಕಾಗುತ್ತದೆ. ಆದ್ದರಿಂದ ಪ್ರತಿಯೊಬ್ಬರ ಜೀವನದಲ್ಲಿಯೂ ಗುರುವಿನ ಪಾತ್ರ ದೊಡ್ಡದಿರುತ್ತದೆ. ಈ ಕಾರಣಕ್ಕಾಗಿಯೇ ಗುರುವನ್ನು ಗೌರವಿಸುವ, ಗುರುಸೇವೆ ಮಾಡುವ, ಪದ್ಧತಿ ನಮ್ಮ ಸಮಾಜದಲ್ಲಿ ಅನುಸ್ಯೂತವಾಗಿ ಸಾಗಿ ಬಂದಿದೆ. ಇದನ್ನು ಸರಿಯಾಗಿ ಅರಿತು ನಮ್ಮದಾಗಿಸಿಕೊಳ್ಳಬೇಕು.

ಯುದ್ಧಕಾಲದಲ್ಲೊಂದು ಅಕಾಲಿಕ ಚಿಂತೆ!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಇದು ಅರೆಬಿಯನ್ ನೈಟ್ಸ್ ಕತೆಯಲ್ಲ. ಆದರೆ ಹೆಚ್ಚುಕಡಿಮೆ ಹಾಗೆಯೇ ಇದೆ.

ಒಂಬತ್ತನೆಯ ಶತಮಾನದ ಇಥಿಯೋಪಿಯಾದಲ್ಲಿ ಕಲ್ದಿ ಎಂಬ ಕುರಿಗಾಹಿಯಿದ್ದ. ಒಂದು ದಿನ ಆತ ಪೊದೆಯಂತಿದ್ದ ಗಿಡವೊಂದರಲ್ಲಿ ಹೊಳೆಯುತ್ತಿದ್ದ ಹಣ್ಣನ್ನು ಕಂಡು ಕುತೂಹಲಗೊಂಡು ಕಿತ್ತು ತಿಂದ. ವಿಚಿತ್ರ ರುಚಿಯ ಹಣ್ಣು ಕಲ್ದಿಗೆ ಚೈತನ್ಯದಾಯಕ ಅನುಭವವನ್ನು ನೀಡಿತು. ಆ ಗಿಡ ಮುಸ್ಲಿಂ ಮತಪ್ರಚಾರಕ ಸಂತನ ಸುಪರ್ದಿಯಲ್ಲಿತ್ತು. ಇನ್ನೊಂದಿಷ್ಟು ಹಣ್ಣುಗಳನ್ನು ಕಿತ್ತುಕೊಂಡ ಕಲ್ದಿ ಅದನ್ನು ಮನೆಗೆ ಕೊಂಡೊಯ್ಯಲು ಆತನ ಅನುಮತಿ ಕೇಳಿದ. ಅನುಮತಿ ನಿರಾಕರಿಸಿದ ಮುದುಕ ಸಂತ ಕಲ್ದಿಯ ಕೈಯಲ್ಲಿದ್ದ ಹಣ್ಣುಗಳನ್ನು ಕಿತ್ತು ಬೆಂಕಿಗೆಸೆದ. ಸುಡತೊಡಗಿದ ಹಣ್ಣುಗಳು ಆಕರ್ಷಕ ಸುವಾಸನೆಯನ್ನು ಬೀರತೊಡಗಿತು. ಅದರ ಪರಿಮಳಕ್ಕೆ ಅಕ್ಕಪಕ್ಕದಲ್ಲಿದ್ದವರು ನೆರೆದರು. ಸುಟ್ಟ ಬೀಜಗಳನ್ನು ಬೆಂಕಿಯಿಂದ ಹೆಕ್ಕಿ ತೆಗೆದರು. ಕಚ್ಚಿ ನೋಡಿದರು. ಏನನ್ನಿಸಿತೋ ಏನೋ ಸುಟ್ಟಬೀಜಗಳನ್ನು ಪುಡಿಮಾಡಿ ನೀರಿನಲ್ಲಿ ಕರಗಿಸಿ ಕುಡಿದರು. ಕುಡಿದವರಿಗೆ ಆ ಕಷಾಯ ಮುದ ನೀಡಿತು.

ಜಗತ್ತಿನ ಮೊದಲ ಕಾಫಿ ಹೀಗೆ ತಯಾರಾಯಿತು ಎಂದು ಈ ದಂತಕತೆ ಹೇಳುತ್ತದೆ. ಇದರ ಸತ್ಯಾಸತ್ಯತೆಯ ಬಗ್ಗೆ ಅನೇಕ ಸಂಶೋಧನೆಗಳಾಗಿವೆ. ಕೊನೆಗೆ ಇಂಥ ಕತೆಗಳು ಅರಬ್ ನೆಲದ ಅಲ್ಲಲ್ಲಿ, ಬೇರೆಬೇರೆ ಸ್ವರೂಪದಲ್ಲಿ ಆಚರಣೆಯಲ್ಲಿರುವುದರಿಂದ ಅವು apocryphal ಆಗಿರಬಹುದು, 1671ಕ್ಕೆ ಮುನ್ನ ಇಂಥ ಯಾವ ಕತೆಗಳೂ ಅಸ್ತಿತ್ವದಲ್ಲಿರಲಿಲ್ಲ ಎಂದು ತೀರ್ಮಾನಿಸಿದ ವಿದ್ವಾಂಸರು ಚರ್ಚೆಯನ್ನು ಕೊನೆಗೊಳಿಸಿದರು. ಆದರೆ ಹೀಗೆ ತೀರ್ಮಾನಿಸಿದ ದೊಡ್ಡದೊಡ್ಡ ಸಂಶೋಧಕರು ದಂತಕತೆಗಳಲ್ಲಿ ಉಲ್ಲೇಖಿತ ಕಾಫಿಯ ಸ್ವಾದದ ಬಗ್ಗೆ ಮಾತ್ರ ಎಲ್ಲೂ ಅನುಮಾನ ವ್ಯಕ್ತಪಡಿಸಲಿಲ್ಲ. ಕಾಫಿ ಇತಿಹಾಸದ ಆರಂಭದ ಕಾಲದ ಈ ಗೊಂದಲಗಳನ್ನು ಬಿಟ್ಟರೆ ಈ ಕ್ಷಣದವರೆಗೆ ಜಗತ್ತು ಕಾಫಿಯಿಂದ ಹೇಗೆ ಅವಲಂಬಿತವಾಗಿದೆ, ಪ್ರೇರಿತವಾಗಿದೆ ಮತ್ತು ನಾಗರಿಕತೆಯಲ್ಲಿ ಕಾಫಿ ಹೇಗೆ ಪ್ರಭಾವ ಬೀರಿದೆ ಎನ್ನುವುದರ ಸಂಪೂರ್ಣ ಮಾಹಿತಿಯನ್ನು ಜಗತ್ತು ಅಧಿಕೃತವಾಗಿ ದಾಖಲಿಸಿದೆ. ಅದನ್ನು ಪಾನೀಯವೊಂದಕ್ಕೆ ಕೊಟ್ಟ ಪ್ರಾಮುಖ್ಯತೆ ಎನ್ನಬೇಕೋ ಅಥವಾ ನಾಗರಿಕತೆಗೆ ಸಲ್ಲಿಸುವ ಕೃತಜ್ಞತೆ ಎನ್ನಬೇಕೋ ತಿಳಿಯದು. ಆದರೆ ಆ ಸ್ವಾದದ ಮೂಲಕ ಕಾಫಿ ಇಂದು ಇಡೀ ಜಗತ್ತಿನ ಬಹುತೇಕ ಎಲ್ಲಾ ದೇಶಗಳ ಮೇಲೆ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಪ್ರಭಾವ ಬೀರಿದೆ ಎನ್ನುವುದಂತೂ ಸತ್ಯ.

ದೇಶದಲ್ಲಿ ಅತಿ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕದ ಕೊಡಗು-ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲೀಗ ಕಾಫಿ ಕುಯ್ಲು ಮುಗಿದು, ಗಿಡಗಳು ಹೂವು ಬಿಟ್ಟಿವೆ. ಇಲ್ಲಿ ಹೂವು ಬಿಡುವುದಕ್ಕೂ ದೂರದ ಮಧ್ಯಪ್ರಾಚ್ಯದಲ್ಲಿ ಕದನವಾದನ ತಾರಕಕ್ಕೇರುವುದಕ್ಕೂ ಸರಿಹೋಗಿದೆ. ಹಾಗಾಗಿ ಕಾಫಿ ಹೂವಿನ ಪರಿಮಳಕ್ಕಿಂತ ದಟ್ಟವಾಗಿ ಕಾಫಿ ಬೆಲೆಯ ಚರ್ಚೆಯಾಗುತ್ತಿದೆ. ಹಡಗುಗಳು ಸಂಚರಿಸದೆ ಕಾಫಿ ಹೊರದೇಶಕ್ಕೆ ಸಾಗುವುದು ಹೇಗೆ? ಇದರಿಂದ ಬೆಲೆ ಏರಬಹುದೇ ಅಥವಾ ಇಳಿಯಬಹುದೇ ಎಂಬಿತ್ಯಾದಿ ಚರ್ಚೆಗಳು ಬೆಳೆಗಾರರಲ್ಲಿ ನಡೆದು ಖಮೇನಿಯ ಹತ್ಯೆಯೇ ಮರೆತುಹೋಗಿದೆ! ಯುದ್ಧವು ಅಡುಗೆಮನೆಯ ಅನಿಲ ಸಿಲಿಂಡರ್ ಮೇಲೆ ಪರಿಣಾಮ ಬೀರುವುದಾದರೆ ಕಾಫಿ ಬೆಲೆಯ ಮೇಲೆ ಬೀರಲಾರದೆ ಎಂಬ ಪ್ರಶ್ನೆ ಬೆಳೆಗಾರರನ್ನು ಕಾಡುತ್ತಿದೆ. ಯುದ್ಧಕ್ಕೆ ಯಾವುದೇ ರಾಜಕೀಯ ಕಾರಣಗಳನ್ನು ನೀಡಲಾಗಿದ್ದರೂ, ಮೂಲ ಕಾರಣ ಯಾವಾಗಲೂ ಆರ್ಥಿಕವಾಗಿರುತ್ತದೆ ಎಂಬುದೆಷ್ಟು ನಿಜವೋ ತಿಳಿಯದು. ಆದರೆ ಎಲ್ಲಾ ಯುದ್ಧಗಳ ಅಂತಿಮ ಪರಿಣಾಮ ಆರ್ಥಿಕತೆಯ ಮೇಲಾಗುತ್ತದೆ ಎಂಬುದು ಮಾತ್ರ ಸತ್ಯ. ಜಗತ್ತಿಗೆ ತೈಲೋತ್ಪನ್ನಗಳ ಕೊರತೆಯ ಭೀತಿ ಹುಟ್ಟಿರುವುದೇ ಅದಕ್ಕೆ ಸಾಕ್ಷಿ. ಪ್ರತಿ ಕದನವಿರಾಮಗಳ ನಂತರ ಯುದ್ಧಗ್ರಸ್ತ, ಯುದ್ಧಸಂತ್ರಸ್ತ ಮತ್ತು ಯುದ್ಧದಿಂದ ದೂರ ಉಳಿದ ದೇಶಗಳೆಲ್ಲವೂ ಒಂದಲ್ಲಾ ಒಂದು ಸ್ಥಿತ್ಯಂತರಕ್ಕೆ ಒಳಗಾಗುತ್ತವೆ. ಯುದ್ಧದ ನಂತರ ಯಾವುದೋ ಒಂದು ಪಾಠವನ್ನು ಪ್ರತೀ ದೇಶವೂ ಕಲಿಯುತ್ತದೆ. ಆದ್ದರಿಂದ ಯುದ್ಧಾನಂತರದ ಇತಿಹಾಸವನ್ನು ಗಮನಿಸಿದರೆ ಅನೇಕ ಕುತೂಹಲಕರ ಸಂಗತಿಗಳು ಇಣುಕುತ್ತವೆ. ಯುದ್ಧ ಯಾವುದೇ ಕಾರಣಕ್ಕಾಗಿ ನಡೆದಿರಲಿ, ಕೆಲವು ಸಂಗತಿಗಳು ಯುದ್ಧದ ಹೊರತಾಗಿಯೂ ಎದ್ದು ಕಾಣುತ್ತವೆ. ಯುದ್ಧಕಾಲದ ಚಿಂತನೆಗಳು ಭ್ರಮೆಯೂ ಆಗಬಹುದೆಂಬುದನ್ನು ತೋರಿಸುತ್ತವೆ.

ಅದಕ್ಕೆ ಕಾಫಿಗಿಂತ ಉತ್ತಮ ಉದಾಹರಣೆ ಬಹುಶಃ ಬೇರೆ ಇಲ್ಲ. ಬೆಲೆಯಲ್ಲಿ ವ್ಯತ್ಯಾಸವಾಗಬಹುದೇ ಎಂಬ ಪ್ರಶ್ನೆ ಬೆಳೆಗಾರರ ಕುತೂಹಲವೇ ಇರಬಹುದು. ಆದರೆ ಕಾಫಿ ಸಹಿತ ಎಲ್ಲಾ ವ್ಯವಹಾರಗಳು ಯುದ್ಧದಿಂದ ಒಂದು ಕ್ಷಣ ಗೊಂದಲಗೊಂಡಿರುವುದಂತೂ ಸತ್ಯ. ಅದು ಶಾಶ್ವತ ಸ್ಥಿತಿಯಲ್ಲ. ಕಾಫಿ ಸಾಗಿಸುವ ಹಡಗು ನಿಂತಂತೆ ಕಾಂಡೋಮ್ ಸಾಗಿಸುವ ಹಡಗೂ ಇಂಥ ಸ್ಥಿತಿಯಲ್ಲಿ ನಿಲ್ಲಲೇಬೇಕು! ಕಾಫಿ ಜಗತ್ತಿನ ಜೀವನಾವಶ್ಯಕ ಸರಕೇನಲ್ಲ. ಆದರೆ ಶತಮಾನದಿಂದಲೂ ಜಗತ್ತು ಕಠಿಣ ಪರಿಸ್ಥಿತಿಗಳಲ್ಲಿ ಕಾಫಿಯನ್ನು ಬಿಟ್ಟು ಬದುಕಿಲ್ಲ. ಪರಿಸ್ಥಿತಿ ಮತ್ತು ಮನುಷ್ಯನ ಚಟದ ಕಾರಣಗಳೆರಡಕ್ಕೂ ಕಾಫಿಯನ್ನು ಹೊತ್ತ ಹಡಗುಗಳು ಲಂಡನ್, ನ್ಯೂಯಾರ್ಕ್‌ಗೆ ಶೀಘ್ರ ಸಂಚರಿಸಲೇಬೇಕು! ಒಂದು ವೇಳೆ ಕಾಫಿಯ ಆಮದು-ರಫ್ತು, ಯುದ್ಧ-ಕ್ರಾಂತಿಗಳಿಗೆ ನೇರಾನೇರ ಪರಿಣಾಮ ಬೀರುವುದಾಗಿದ್ದರೆ ಕಾಫಿ ಸರ್ವನಾಶವಾಗಿ ಅದೆಷ್ಟೋ ಶತಮಾನಗಳಾಗಿರುತ್ತಿತ್ತು. ಇಂಥ ಎಷ್ಟೋ ಯುದ್ಧ-ಕ್ರಾಂತಿಗಳನ್ನು ನೋಡಿದ ಕಾಫಿ ಈಗಿನ ಮಧ್ಯಪ್ರಾಚ್ಯದ ಯುದ್ಧಕ್ಕೂ ಹೆದರುವುದಿಲ್ಲ. ಅಷ್ಟೇಕೆ ಕಾಫಿ ಮಾರ್ಗಕ್ಕೂ ಮಧ್ಯಪ್ರಾಚ್ಯ ಯುದ್ಧದಿಂದ ಸ್ತಬ್ದವಾಗಿರುವ ಸಮುದ್ರಮಾರ್ಗಕ್ಕೂ ಏನೇನೂ ಸಂಬಂಧವಿಲ್ಲ. ಹರ್ಮುಜ್ ಜಲಸಂಧಿ, ಪರ್ಷಿಯನ್ ಕೊಲ್ಲಿಯಲ್ಲೆಂದೂ ಭಾರತದ ಕಾಫಿ ಸಾಗಿಲ್ಲ. ಅಲ್ಲದೆ ಜಗತ್ತಿನಲ್ಲಿ ಸಂಘರ್ಷಗಳೆಷ್ಟೇ ಸಂಭವಿಸಿದರೂ ಕಾಫಿ ಎಂದೂ ಸೋತಿಲ್ಲ. ಗಡಿಗಳು ಬದಲಾದರೂ ಕಾಫಿಯ ಹುಚ್ಚು ಬಿಟ್ಟಿಲ್ಲ. ಯಾವ ಬಾಂಬುಗಳೂ ಕಾಫಿಯನ್ನು ಕದಲಿಸಿಲ್ಲ. ಕ್ಷಿಪಣಿಗಳು ಕಾಫಿಗೆ ಭಯ ತರಿಸಿಲ್ಲ. ಕಾಫಿಯ ಇತಿಹಾಸವನ್ನು ನೋಡಿದರೆ ಯುದ್ಧ ಕಾಲದಲ್ಲೇ ಕಾಫಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಂಡಿದೆ.

1526ರಲ್ಲಿ ಹಂಗೇರಿಯ ರಾಜ ಎರಡನೆಯ ಲೂಯಿಸ್ ಮತ್ತು ಒಟ್ಟೋಮನ್ ಸುಲ್ತಾನ್ ಸುಲೈಮಾನ್ ನಡುವೆ ನಡೆದ ಐತಿಹಾಸಿಕ 'ಮೊಹಾಕ್ಸ್ ಯುದ್ಧ'ದಲ್ಲಿ ಒಟ್ಟೋಮನ್ನರು ಹಂಗೇರಿಯನ್ನು ಆಕ್ರಮಿಸಿಕೊಂಡರು. ಗೆದ್ದ ಒಟ್ಟೋಮನರು ಹಂಗೇರಿಯಲ್ಲಿ ಕಾಫಿಯನ್ನು ಪರಿಚಯಿಸಿದರು. ಕೆಲವೇ ಸಮಯದಲ್ಲಿ ಹಂಗೇರಿಯಲ್ಲಿ ಕಾಫಿ ಜನಪ್ರಿಯವಾಯಿತು ಮತ್ತು ಹಂಗೇರಿಯ ಮೂಲಕ ಇಡೀ ಯುರೋಪಿಗೆ ಹರಡಿತು. ಆ ಮೂಲಕ ಕಾಫಿಯ ವಾಣಿಜ್ಯೀಕರಣದ ಹೊಸ ಶಕೆ ಆರಂಭವಾಯಿತು. 1529ರಲ್ಲಿ ಅದೇ ಒಟ್ಟೋಮನ್ನರು ಆಸ್ಟ್ರೀಯಾದ ರಾಜಧಾನಿ ವಿಯೆನ್ನಾಕ್ಕೆ ಮುತ್ತಿಗೆ ಹಾಕಿದರು. ಇಲ್ಲಿ ಒಟ್ಟೋಮನ್ ಟರ್ಕರು ಗೆಲ್ಲದಿದ್ದರೂ ಅವರ ಕಾಫಿ ವಿಯೆನ್ನಾದಲ್ಲಿ ಗೆದ್ದಿತು. ಆಸ್ಟ್ರಿಯಾದ ಜನ ಕಾಫಿಯನ್ನು ಯುದ್ಧದ ಕೊಡುಗೆ ಎಂದು ಸ್ವಾಗತಿಸಿ ಕಾಫಿ ಸಂಸ್ಕೃತಿಯನ್ನು ಬೆಳೆಸಿದರು. ಆಸ್ಟ್ರೀಯಾದ ಮೂಲಕ ಜರ್ಮನಿ, ಫ್ರಾನ್ಸ್‌ಗಳಿಗೂ ಹರಡಿತು. 1565ರಲ್ಲಿ ಇದೇ ಟರ್ಕರು ಮಾಲ್ಟಾ ದ್ವೀಪಗಳ ಮೇಲೆ ದಂಡೆತ್ತಿಹೋದಾಗಲೂ ಕಾಫಿ ಬೀಜಗಳನ್ನು ಕೊಂಡೊಯ್ದರು. ಗುಲಾಮರಿಂದ ಕಾಫಿ ತೋಟಗಳನ್ನು ನಿರ್ಮಿಸಿದರು. ಇದೇ ರೀತಿ ವೆನಿಸ್ ಗಣರಾಜ್ಯ, ಉತ್ತರ ಆಫ್ರಿಕಾ, ಈಜಿಪ್ಟ್‌ಗೂ ಕಾಫಿ ಆಕ್ರಮಕರಿಂದಲೇ ಸಾಗಿತು. ಕ್ರಮೇಣ ಅವೆಲ್ಲವೂ ಕಾಫಿ ಬೆಳೆಯುವ ದೇಶಗಳಾಗಿ ರಫ್ತುಮಾಡುವ ದೇಶಗಳೂ ಆದವು. ಯುದ್ಧದ ಕಾರಣದಿಂದ ಪರಿಚಯವಾದ ಕಾಫಿ ಸಂತ್ರಸ್ತ ದೇಶಗಳಿಗೆ ಆರ್ಥಿಕ ಮೂಲವಾದ ಕೌತುಕ ಕಾಫಿ ಬಿಟ್ಟರೆ ಬೇರೆ ಬೆಳೆಗಳಲ್ಲಿ ಕಾಣದು. 19ನೇ ಶತಮಾನದಲ್ಲಿ ಕಾಫಿ ಸಂಸ್ಕೃತಿ ಮಧ್ಯ ಯುರೋಪಿನಾದ್ಯಂತ ಹರಡಿ ಕವಿ-ಸಾಹಿತಿಗಳು, ಕಲಾವಿದರು, ಬುದ್ಧಿಜೀವಿಗಳು ಕಾಫಿಯ ನೆಪದಿಂದ ಭೇಟಿಯಾಗಲಾರಂಭಿಸಿದರು. ಕಾಫಿ ಹೌಸ್‌ಗಳು ನಿರ್ಮಾಣಗೊಂಡವು. ಬ್ರಿಟಿಷ್, ಡಚ್, ಫ್ರೆಂಚರ ಪ್ರಭಾವದಿಂದ ಕಾಫಿ ಸೇವನೆ ಪ್ರತಿಷ್ಠೆಯ ಸಂಕೇತವಾಯಿತು. ಇದರಿಂದ ಯುರೋಪಿನಲ್ಲಿ ಕಾಫಿ ಕುಡಿಯುವವರ ಮೇಲೆ ಹೆಚ್ಚುವರಿ ತೆರಿಗೆ ವಿಧಿಸುವ ನಿಯಮಗಳೂ ಬಂದವು. ಮುಂದೆ ಐರೋಪ್ಯರು ತಮ್ಮ ವಸಾಹತುಗಳಿಗೆ ಸಸ್ಯಶಾಸ್ತ್ರಜ್ಞರನ್ನು ಅಟ್ಟಿ ಕಾಫಿ ಬೆಳೆಯ ಸಾಧ್ಯತೆಯನ್ನು ಪರಿಶೀಲಿಸತೊಡಗಿದರು. ಭಾರತದಲ್ಲಿ ಕಾಫಿ ವಾಣಿಜ್ಯ ಬೆಳೆಯಾಗಿ ಆರಂಭವಾಗಿದ್ದು ಇದೇ ಅವಧಿಯಲ್ಲಿ. ಭಾರತದಲ್ಲಿಂದು ವಸಾಹತುಶಾಹಿಯ ಅಂಶಗಳು ಒಂದೊಂದಾಗಿ ಕಳಚುತ್ತಿವೆ. ಆದರೆ ಕಾಫಿ ಸ್ವದೇಶಿಯಾಗಿ ಬದಲಾಗಿದೆ! ಇಂದು ಜಗತ್ತಿನ ಬಹುಪಾಲು ದೇಶಗಳು ಒಂದೋ ಕಾಫಿ ಬೆಳೆಗಾರ ದೇಶವಾಗಿದೆ ಅಥವಾ ಕಾಫಿಯ ಗ್ರಾಹಕನಾಗಿದೆ. ಅಂಥ ಕಾಫಿ ಯುದ್ಧದ ಕಾರಣಕ್ಕೆ ಕುಗ್ಗುವುದೆಂದರೇನು?

ಹದಿನಾರನೇ ಶತಮಾನದ ಇಸ್ಲಾಮಿಕ್ ಔಷಧ ತಜ್ಞರು ಕಾಫಿಯ ಪರಿಣಾಮವು ಹಶಿಶ್ ಅಥವಾ ಆಲ್ಕೋಹಾಲ್‌ನಂತಿದೆ ಎಂದು ಸಾರಿದ್ದರು. ಅದನ್ನು ನಂಬಿದ ಮತೀಯ ನಾಯಕರು ಅಮಲು ಪದಾರ್ಥವಿರುವ ಕಾಫಿ ಇಸ್ಲಾಮಿನ ತತ್ತ್ವಾದರ್ಶಗಳಿಗೆ ವಿರುದ್ಧವಾದದ್ದು ಎಂದು ಫತ್ವಾಗಳನ್ನು ಹೊರಡಿಸಲಾರಂಭಿಸಿದರು. ಆ ಹೊತ್ತಿಗಾಗಲೇ ಇಸ್ಲಾಮಿನ ಪ್ರಮುಖ ಕ್ಷೇತ್ರಗಳಾದ ಮೆಕ್ಕಾ, ಯೆಮನ್ ಮತ್ತು ಕೈರೋದಲ್ಲಿನ ಕಾಫಿಹೌಸ್‌ಗಳು ಜನಪ್ರಿಯಗೊಂಡಿದ್ದವು. ಈ ಕಾಫಿಹೌಸ್‌ಗಳು ಮದರಸಾಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಸಂಪ್ರದಾಯಸ್ಥ ಮತಗುರುಗಳಿಗೆ ಇದು ಹಿಡಿಸಲಿಲ್ಲ. ಇಸ್ಲಾಂ ಸಂಸ್ಕೃತಿ ಕಾಫಿ ಸಂಸ್ಕೃತಿಯಾಗಿ ಬದಲಾಗುವ ಮುನ್ನ ಎಚ್ಚರ ವಹಿಸುವುದು ಸೂಕ್ತವೆಂದು ಕಾಫಿ ಮತ್ತು ಕಾಫಿ ಹೌಸ್‌ಗಳ ಮೇಲೆ ಕಠಿಣ ಕ್ರಮಗಳನ್ನು ಕೈಗೊಳ್ಳಲಾಯಿತು. ಹಲವು ದೇಶಗಳಲ್ಲಿ ಕಾಫಿಯನ್ನೂ ನಿಷೇಧಿಸಲಾಗಿತ್ತು! 1511ರಲ್ಲಿ ಮೆಕ್ಕಾದ ದೇವತಾಶಾಸ್ತ್ರದ ನ್ಯಾಯಾಲಯದಲ್ಲಿ ಸಂಪ್ರದಾಯವಾದಿ ಇಮಾಮ್‌ಗಳು ಕಾಫಿಯನ್ನು ನಿಷೇಧಿಸಿದ್ದರು. ಮುಂದೆ 1524ರಲ್ಲಿ ಒಟ್ಟೋಮನ್ ಒಂದನೆಯ ಸುಲೇಮಾನ್ ಆದೇಶದ ಮೇರೆಗೆ ಮುಫ್ತಿ ಮೆಹ್ಮತ್ ಎಬುಸ್ಸುದ್ ಎಲ್-ಇಮಾದಿ ಆ ನಿಷೇಧವನ್ನು ರದ್ದುಗೊಳಿಸಿದರು. 1532ರಲ್ಲಿ ಕೈರೋ ಕೂಡ ಕಾಫಿಯನ್ನು ನಿಷೇಧಿಸಿತು. ಕಾಫಿ ಬೀಜಗಳನ್ನು ಹೊಂದಿರುವ ಕಾಫಿಹೌಸ್‌ಗಳು ಮತ್ತು ಗೋದಾಮುಗಳ ಪರವಾನಗಿಯನ್ನು ರದ್ದುಗೊಳಿಸಿತು. 1532ರಿಂದ 1533ರ ನಡುವೆ ಕಟ್ಟರ್ ಇಸ್ಲಾಮಿಕ್ ಸಾಮ್ರಾಜ್ಯವಾಗಿದ್ದ ಸಫಾವಿಡ್ ಕೂಡ ಕಾಫಿಯು ತಂಬಾಕು ಮತ್ತು ಮದ್ಯಕ್ಕಿಂತ ಭಿನ್ನವಲ್ಲ ಎಂದು ಕಾಫಿಯ ವಿರುದ್ಧ ಫತ್ವಾ ಹೊರಡಿಸಿತು. ಇಸ್ಲಾಂ ಮತಗುರುಗಳಿಂದ ಬಿದ್ದ ಈ ಯಾವ ಫತ್ವಾಗಳು ಹೆಚ್ಚು ಕಾಲ ಬಾಳಿಕೆ ಬರಲಿಲ್ಲ. ಕಾಫಿ ಫತ್ವಾವನ್ನೂ ಮೀರಿ ಬೆಳೆಯಿತು. ಇಸ್ಲಾಮಿನಿಂದ ವಿಷೇಧಕ್ಕೊಳಗಾದ ಕಾಫಿಯನ್ನು ಕ್ರೈಸ್ತ ಮತಗುರುಗಳೂ ನಿಷೇಧಿಸಿದರು. ಇಟಲಿಯಲ್ಲಿ ಕಾಫಿ ಪರಿಚಯವಾದ ಆರಂಭದ ದಿನಗಳಲ್ಲಿ ಕ್ಯಾಥೋಲಿಕ್ ಚರ್ಚ್ ಅದನ್ನು ವಿರೋಧಿಸಿತು. ಪಾದ್ರಿಗಳು ಅದನ್ನು 'ಸೈತಾನನ ಪಾನೀಯ' ಎಂದು ಕರೆದರು. ಆದರೆ ಚರ್ಚ್ ಸಮಾಜದ ವಿರೋಧವನ್ನು ಎದುರಿಸಬೇಕಾಯಿತು. ಒತ್ತಡಕ್ಕೆ ಮಣಿದ ಪೋಪ್ ಎಂಟನೇ ಕ್ಲೆಮೆಂಟ್ ಸ್ವತಃ ಕಾಫಿಯನ್ನು ಸವಿದು ಪರೀಕ್ಷಿಸಿ "ಈ ಸೈತಾನನ ಪಾನೀಯವು ತುಂಬಾ ರುಚಿಕರವಾಗಿದೆ. ನಾಸ್ತಿಕರಿಗೆ ಮಾತ್ರ ಇದನ್ನು ಬಳಸಲು ಬಿಡುವುದು ವಿಷಾದಕರ" ಎಂದು ಘೋಷಿಸಿದರು. 1675ರಲ್ಲಿ ಕಾಫಿ ಹೌಸ್‌ಗಳು ರಾಜಕೀಯ ವಿಮರ್ಶೆಯ ಕೇಂದ್ರಗಳೆಂದು ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್ ಕಾಫಿಯನ್ನು ನಿಷೇಧಿಸಿದ! ನಂತರ ಒತ್ತಡಕ್ಕೆ ಸಿಲುಕಿ ನಿಷೇಧ ರದ್ದುಗೊಳಿಸಿದ. 1777ರಲ್ಲಿ ಪ್ರಷ್ಯಾ ಕಾಫಿಯಿಂದ ಜನರಲ್ಲಿ ಬೀಯರ್ ಕುಡಿಯುವ ಪ್ರವೃತ್ತಿ ಕಡಿಮೆಯಾಗುತ್ತಿದೆ ಎಂಬ ಕಾರಣ ನೀಡಿ ಕಾಫಿಯನ್ನು ನಿಷೇಧಿಸಿತು. ಹಿಂದೆ ಮತೀಯ ಕಾರಣಕ್ಕೆ ಕಾಫಿಯನ್ನು ನಿಷೇಧಿಸಿದ್ದ ಟರ್ಕಿ 1640ರಲ್ಲಿ ಕಾಫಿ ಕೇಂದ್ರಗಳು ಅರಸೊತ್ತಿಗೆ ವಿರೋಧಿ ಯೋಜನೆಯನ್ನು ಹಾಕಬಹುದೆಂಬ ಕಾರಣಕ್ಕೆ ನಿಷೇಧಿಸಿತು. 1750ರಿಂದ 1820ರವರೆಗೆ ಸ್ವೀಡನ್, ಕಾಫಿ ಹೌಸ್‌ಗಳು ರಾಜಕೀಯ ಹುನ್ನಾರದ ತಾಣವಾಗುತ್ತಿವೆ ಮತ್ತು ಜನರ ಆರೋಗ್ಯವನ್ನು ಕೆಡಿಸುತ್ತಿವೆ ಎಂಬ ಕಾರಣ ನೀಡಿ ನಿಷೇಧಿಸಿತು. ಆದರೆ ಕೆಲವೇ ದಿನಗಳಲ್ಲಿ ನಿಷೇಧ ತೆರವಾಯಿತು. ಇಷ್ಟೆಲ್ಲಾ ನಿಷೇಧಗಳ ತರುವಾಯ ಕಾಫಿ ಉಳಿಯಿತು, ಮಾತ್ರವಲ್ಲ ಜಗತ್ತಿನಾದ್ಯಂತ ಜನಪ್ರಿಯವೂ ಆಯಿತು. 1674ರಲ್ಲಿ ಲಂಡನಿನ ಮಹಿಳೆಯರು, ಕಾಫಿಯು ಪುರುಷರ ಲೈಂಗಿಕ ಶಕ್ತಿಯನ್ನು ಕಡಿಮೆ ಮಾಡುತ್ತದೆ, ಇದು ಬಲಹೀನ ಇಂಗ್ಲೆಂಡಿನ ಸೃಷ್ಟಿಗೆ ಕಾರಣವಾಗುತ್ತದೆ ಎಂದು ಅಭಿಯಾನವನ್ನೇ ಕೈಗೊಂಡರು (The Women's Petition Against Coffee). ನಂತರ ಮಹಿಳೆಯರಿಗೂ ಕಾಫಿಯ ರುಚಿ ಹತ್ತಿತು. ಹೀಗೆ ಹಲವು ಬಾರಿ ಹಲವು ಕಾರಣಗಳಿಂದ ಜಗತ್ತಿನ ನಾನಾ ಮೂಲೆಗಳಲ್ಲಿ ಸಂಕಷ್ಟಕ್ಕೊಳಗಾದರೂ ಕಾಫಿ ನಾಶವಾಗಲಿಲ್ಲ, ರಫ್ತು ನಿಲ್ಲಲಿಲ್ಲ. ಎರಡೆರಡು ಮಹಾಯುದ್ಧಗಳ ಗದ್ದಲದಲ್ಲೂ ವಿಶ್ವದ ಕಾಫಿ ವಹಿವಾಟು ಸರಾಗವಾಗಿ ನಡೆಯಿತೆಂದರೆ ಈ ಮಧ್ಯಪ್ರಾಚ್ಯದ ಯುದ್ಧ ಕಾಫಿಗ್ಯಾವ ಲೆಕ್ಕ?

ಇಂದು ಯಾವುದೋ ಸಮುದ್ರದಲ್ಲಿ ನಾಲ್ಕು ಹಡಗುಗಳು ನಿಂತ ಮಾತ್ರಕ್ಕೆ ಕಾಫಿಯ ಬೆನ್ನುಮೂಳೆಯೇನೂ ಮುರಿಯುವುದಿಲ್ಲ. ಯುದ್ಧಗ್ರಸ್ತ ದೇಶಗಳೂ ಕಾಫಿ ಇಲ್ಲದೆ ಬದುಕುವುದಿಲ್ಲ. ಆರ್ಥಿಕ ವಹಿವಾಟಿನಲ್ಲೂ ಕಾಫಿಯದ್ದು ರಕ್ತಸಗಾತ್ರ. ಅಪ್ಪರಮಟ್ಟಿಗೆ ಕಾಫಿ ಜಗತ್ತನ್ನಾಳುತ್ತಿದೆ. ಆದರೆ ಅತ್ತ ಯುದ್ಧ, ಇತ್ತ ಅಂಗಳಕ್ಕೆ ಬಂದುಬಿದ್ದ ಕಾಫಿ, ಹರಡುತ್ತಿರುವ ಗಾಳಿಸುದ್ದಿಗಳು ಬೆಳೆಗಾರನನ್ನು ಸಹಜವಾಗಿ ಹೆದರಿಸುತ್ತವೆ. ಜೊತೆಗೆ ಬೆಲೆಗಳ ಏರಿಳಿತ ಗಾಳಿಸುದ್ದಿಗಳಿಗೆ ರೆಕ್ಕೆಪುಕ್ಕಗಳನ್ನು ಮೂಡಿಸುತ್ತವೆ. ಇತರ ಸರಕುಗಳ ಬೆಲೆ ವೈಪರೀತ್ಯಕ್ಕೆ ಏನು ಕಾರಣಗಳಿರುತ್ತವೋ ಕಾಫಿಗೂ ಅಂಥದ್ದೇ ಕಾರಣಗಳಿರುತ್ತವೆಯೇ ಹೊರತು ಯುದ್ಧ ಕಾಫಿಯನ್ನು ಸರ್ವನಾಶವನ್ನಂತೂ ಮಾಡುವುದಿಲ್ಲ. ಕಾಫಿ ಸಾಗಿಸುವ ಹಡಗುಗಳು ಯುದ್ಧಕ್ಕೆ ಹೆದರಿ ದೀರ್ಘಾವಧಿಯವರೆಗೆ ಲಂಗರು ಹಾಕುವುದಿಲ್ಲ.

ಸರಕಾರದ ವಿರುದ್ಧ ಸೋನಿಯಾ ಟೀಕೆಗೆ ಅರ್ಥವಿಲ್ಲ

▸ ರಾಮ್ ಮಾಧವ್

ಇರಾನಿನ ಮುಖಂಡ ಅಯತೊಲ್ಲಾ ಖಮೇನಿ ಹತರಾದುದಕ್ಕೆ ಭಾರತವು ಖಂಡಿಸಲಿಲ್ಲವೇಕೆ ಎಂದು ಟೀಕಿಸಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಲೇಖನವೊಂದನ್ನು ಬರೆದಿದ್ದಾರೆ. 'ನಿಷ್ಪಕ್ಷಪಾತತನ'ವನ್ನು ಭಾರತ ತ್ಯಜಿಸಿದೆ ಎಂದು ಆರೋಪಿಸಿದ ಅವರು, ದೇಶದ ವಿದೇಶಾಂಗ ನೀತಿಯ ವಿಶ್ವಾಸಾರ್ಹತೆ ಮತ್ತು ಅದು ಸಾಗುತ್ತಿರುವ ದಿಕ್ಕನ್ನು ಪ್ರಶ್ನಿಸಿದ್ದಾರೆ.

ಆದರೆ ಇರಾನ್ ಸಂಘರ್ಷವನ್ನು ಇಂತಹ ಸಂಕುಚಿತ ಮಾದರಿಯಲ್ಲಿ ವಿಶ್ಲೇಷಿಸುವ ಬದಲಾಗಿ ವಿಸ್ತರಿತ ಆಯಾಮದಲ್ಲಿ ವಿಶ್ಲೇಷಿಸಬೇಕಾಗಿದೆ. ವಾಸ್ತವಾಂಶಗಳನ್ನು ಅರಿತುಕೊಂಡು ಪ್ರತಿಕ್ರಿಯಿಸಬೇಕಾಗುತ್ತದೆ. ಹಲವು ಪ್ರಸಂಗಗಳಲ್ಲಿ ಭಾರತವು ಉದ್ವಿಗ್ನತೆಯನ್ನು ಹೆಚ್ಚಿಸುವ ಬದಲಿಗೆ ಸಂಧಾನ ಮತ್ತು ರಾಜತಾಂತ್ರಿಕ ಕ್ರಮದಿಂದ ಪರಿಸ್ಥಿತಿ ನಿಭಾಯಿಸಬೇಕೆಂದು ಕರೆ ಕೊಟ್ಟಿತ್ತು. ಭಾರತ ಮತ್ತು ಇರಾನ್ ಸರಕಾರಿ ಮಟ್ಟದಲ್ಲಿ ಹಾಗೂ ಜನರ ಮಟ್ಟದಲ್ಲಿ ಸೌಹಾರ್ದ ಸಂಬಂಧ ಹೊಂದಿದೆ. ಆದರೆ ಭಾವನೆಗಳಿಗೆ ದಾಸರಾಗಿ ಹಿತಾಸಕ್ತಿಗಳನ್ನು ಬಲಿಕೊಡಲಾಗುವುದಿಲ್ಲ. ಇರಾನ್‌ನ ಆಡಳಿತವು ಜಗತ್ತು ಕಂಡಿರುವ ಆಡಳಿತ ವ್ಯವಸ್ಥೆಗಿಂತ ಭಿನ್ನವಾದ ವ್ಯವಸ್ಥೆಯನ್ನು ಹೊಂದಿದೆ. ಅಲ್ಲಿ ಇರುವುದು ವಿಭಿನ್ನ ರೀತಿಯ ಧಾರ್ಮಿಕ ಪ್ರಭುತ್ವ. 9ನೇ ಶತಮಾನದ ವಿಲಾಯತ್-ಇ-ಫಕಿ ಮಾದರಿಯನ್ನು ಅಲ್ಲಿ ಅನುಸರಿಸಲಾಗುತ್ತದೆ. 1979ರಲ್ಲಿ ಇರಾನಿನಲ್ಲಿ ಇಸ್ಲಾಮಿಕ್ ಕ್ರಾಂತಿ ನಡೆದ ಬಳಿಕ ಅಯತೊಲ್ಲಾ ಖೊಮೇನಿ ತಮ್ಮನ್ನು ವಲಿ-ಇ-ಫಕಿ ಎಂದು ಘೋಷಿಸಿಕೊಂಡರು ಹಾಗೂ ಈ ವ್ಯವಸ್ಥೆಯನ್ನು ಸಂವಿಧಾನದಲ್ಲಿ ಅಡಕಗೊಳಿಸಿದರು. ಇದರ ಪ್ರಕಾರ ಎಲ್ಲಾ ಅಧಿಕಾರಗಳು ಸರ್ವೋಚ್ಚ ನಾಯಕನ ಕೈಯಲ್ಲಿದ್ದು, ಚುನಾಯಿತ ಸರಕಾರವು ಅವರ ಅಧೀನದಲ್ಲಿರುತ್ತದೆ. 1989ರಲ್ಲಿ ಖೊಮೇನಿ ನಿಧನಾನಂತರ ಅವರ ಪುತ್ರ ಖಮೇನಿ ಈ ಹುದ್ದೆಗೇರಿದರು.

ಈ ಆಡಳಿತ ಮಾದರಿಯು ಅಸಹಜವಾಗಿದ್ದು, ಕೆಲವು ಸಂದರ್ಭಗಳಲ್ಲಿ ರಾಜತಾಂತ್ರಿಕ ಬಿಕ್ಕಟ್ಟುಗಳನ್ನು ಸೃಷ್ಟಿಸುತ್ತವೆ. ಖಮೇನಿಯವರ ಸ್ಥಾನಮಾನವನ್ನು ಗಮನಿಸಿದರೆ ಸೋನಿಯಾ ಗಾಂಧಿಯವರು ಅವರನ್ನು ಇರಾನಿನ ಆಡಳಿತದ ಮುಖ್ಯಸ್ಥ ಎಂದು ಬಣ್ಣಿಸುವುದು ಸರಿ ಕಾಣುವುದಿಲ್ಲ. ಇಬ್ಬರು ಪರಮೋಚ್ಚ ನಾಯಕರೂ (ಖೊಮೇನಿ ಮತ್ತು ಖಮೇನಿ) ಧಾರ್ಮಿಕ ಮುಖಂಡರಾಗಿದ್ದು, ತಮ್ಮ ದೇಶದಿಂದ ಹೊರಗೆ ಪ್ರಯಾಣ ಮಾಡಿದವರೇ ಅಲ್ಲ. ವಿದೇಶಗಳಲ್ಲಿ ಇರಾನನ್ನು ಪ್ರತಿನಿಧಿಸುವುದು ಇರಾನಿನ ಅಧ್ಯಕ್ಷರು. ಇರಾನಿನ ಅಧ್ಯಕ್ಷರು ವಿದೇಶಗಳಿಗೆ ಭೇಟಿ ಮಾಡಿದಾಗ ಅವರಿಗೆ ಒಬ್ಬ ರಾಷ್ಟ್ರ ಮುಖಂಡನಿಗೆ ನೀಡುವ ಗೌರವಾದರಗಳನ್ನು ಸಲ್ಲಿಸಲಾಗುತ್ತದೆ. ಇರಾನಿನ ಮೂವರು ರಾಷ್ಟ್ರಾಧ್ಯಕ್ಷರು ಭಾರತಕ್ಕೆ ಭೇಟಿ ನೀಡಿದಾಗ (ಮೊಹಮ್ಮದ್ ಕಟಾನಿ 2003, ಅಹಮದಿ ನೇಜಾದ್ 2008, ಹಸನ್ ರೌಹಾನಿ 2018) ಭಾರತವು ಅವರಿಗೆ ರಾಷ್ಟ್ರದ ಒಬ್ಬ ಮುಖಂಡರಿಗೆ ಸಲ್ಲಬೇಕಾದ ರೀತಿಯ ಗೌರವ ಸಲ್ಲಿಸಿದೆ. ಎಲ್ಲಾ ಬಗೆಯ ಶಿಷ್ಟಾಚಾರಗಳನ್ನು ಪಾಲಿಸಿದೆ. ಈ ಬಾರಿ ಖಮೇನಿ ನಿಧನರಾದಾಗ ಭಾರತದ ಸಂತಾಪವನ್ನು ಸೂಚಿಸಲು ಇರಾನ್ ರಾಯಭಾರ ಕಚೇರಿಗೆ ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಶ್ರಿ ಅವರನ್ನು ಕಳಿಸಿರುವುದು ಅದಕ್ಕಾಗಿಯೇ.

ಇರಾನ್ ಒಐಸಿಯಲ್ಲಿ ಕಾಶ್ಮೀರ ವಿರೋಧಿ ನಿರ್ಣಯವನ್ನು ಬೆಂಬಲಿಸಲಿಲ್ಲ ಹಾಗೂ ವಿಶ್ವಸಂಸ್ಥೆ ಮಾನವ ಹಕ್ಕುಗಳ ಮಂಡಳಿಯಲ್ಲಿ ಅಂತಹ ನಿರ್ಣಯವನ್ನು ವಿರೋಧಿಸಿತ್ತು ಎಂದು ಸೋನಿಯಾಗಾಂಧಿ ಹೇಳಿರುವುದು ನಿಜ. ಇರಾನ್ ಸರಕಾರವು ಪಾಕಿಸ್ತಾನಿ ಪ್ರಯೋಜಿತ ಕಾಶ್ಮೀರದ ಮೇಲಿನ ನಿರ್ಣಯವನ್ನು ಬೆಂಬಲಿಸದಿರಲು ತನ್ನದೇ ಆದ ಭೌಗೋಳಿಕ ಮತ್ತು ಆರ್ಥಿಕ ಕಾರಣಗಳಿದ್ದವು. ಆದರೆ ಇರಾನ್ ಸರಕಾರದ ನಿಲುವನ್ನು ಅಲ್ಲಿನ ಪರಮೋಚ್ಚ ನಾಯಕ ಖಮೇನಿ ಕೂಡಾ ಪಾಲಿಸಿದ್ದಾರೆ ಎಂದು ಹೇಳಲು ಬರುವುದಿಲ್ಲ. ಕಳೆದ 10 ವರ್ಷಗಳಲ್ಲಿ ಖಮೇನಿ ಹಲವಾರು ಸಂದರ್ಭಗಳಲ್ಲಿ ಕಾಶ್ಮೀರಕ್ಕೆ ಸಂಬಂಧಿಸಿ ಮತ್ತು ಮುಸ್ಲಿಮರಿಗೆ ಸಂಬಂಧಿಸಿ ಭಾರತವನ್ನು ಟೀಕಿಸಿದ್ದಾರೆ.

ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ ಸಂವಿಧಾನದ 370ನೇ ವಿಧಿ ರದ್ದುಪಡಿಸಿದಾಗ ಖಮೇನಿ ಅದನ್ನು ವಿರೋಧಿಸಿ ಟ್ವೀಟ್ ಮಾಡಿದ್ದರು. 2020ರಲ್ಲಿ ಸಿಎಎ ವಿರೋಧಿಸಿ ದಿಲ್ಲಿಯಲ್ಲಿ ಪ್ರತಿಭಟನೆ ನಡೆದಾಗಲೂ ಭಾರತವು ಮುಸ್ಲಿಮರ ನರಮೇಧ ನಡೆಸುತ್ತದೆ ಎಂದು ಆರೋಪಿಸಿದ್ದರು. ಭಾರತವು ತನ್ನ ಉಗ್ರವಾದಿ ಹಿಂದುಗಳನ್ನು ನಿಯಂತ್ರಿಸಬೇಕು, ಇಲ್ಲದಿದ್ದರೆ ಇಸ್ಲಾಮಿಕ್ ಜಗತ್ತು ಭಾರತವನ್ನು ನಿಷೇಧಿಸಲಿದೆ ಎಂದು ಅವರು ಬೆದರಿಸಿದ್ದರು. 2024ರಲ್ಲಿ ಭಾರತವನ್ನು ಗಾಝಾ ಮತ್ತು ಮ್ಯಾನ್ಮಾರ್‌ನೊಂದಿಗೆ ಸಮೀಕರಿಸಿದ್ದ ಖಮೇನಿ, ಮ್ಯಾನ್ಮಾರ್, ಗಾಝಾ ಮತ್ತು ಭಾರತದಲ್ಲಿ ಮುಸ್ಲಿಮರನ್ನು ಶೋಷಿಸಲಾಗುತ್ತಿದೆ ಎಂದಿದ್ದರು. ಭಾರತವು ಇದನ್ನು ತನ್ನ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ಎಂದು ಬಣ್ಣಿಸಿ ಇಂತಹ ಅಪಪ್ರಚಾರವು ಸ್ವೀಕಾರಾರ್ಹವಲ್ಲ ಎಂದು ಪ್ರತಿಕ್ರಿಯಿಸಿತ್ತು.

ವಿವಾದವೆಂಬುದು ಖಮೇನಿಗೆ ಹೊಸದೇನೂ ಅಲ್ಲ. 2015ರಲ್ಲಿ ಅವರು ಸೌದಿ ಅರೇಬಿಯಾ ಜನಾಂಗ ನಾಶದಲ್ಲಿ ತೊಡಗಿದೆ ಎಂದು ಆರೋಪಿಸಿದ್ದರು. ಇದು ಸೌದಿಗೆ ರೋಷ ಬರಿಸಿತ್ತು. ಅದೇ ಖಮೇನಿಯವರು ಇಸ್ರೇಲ್ ಮತ್ತು ಅಮೆರಿಕಗಳ ನಾಶಕ್ಕೂ ಆಗಾಗ ಕರೆ ಕೊಟ್ಟಿದ್ದರು. ಟ್ರಂಪ್‌ರನ್ನು ಹತ್ಯೆ ಮಾಡುವಂತೆಯೂ ಕರೆ ನೀಡಿದ್ದರು. ಖಮೇನಿ ಹತ್ಯೆಯಾದಾಗ ಸಂತಾಪ ಸೂಚಿಸದಿರುವುದು ಭಾರತವಷ್ಟೇ ಅಲ್ಲ. ಹಲವಾರು ರಾಷ್ಟ್ರಗಳುಸಂತಾಪ ಸೂಚಿಸದೆ ಉಳಿದಿವೆ. ಜಿ-7 ರಾಷ್ಟ್ರಗಳು, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್, ಬಹ್ರೇನ್, ಮೊರಾಕ್ಕೊ ಮತ್ತು ಇಂಡೋನೇಷಿಯಾ ಸೇರಿದಂತೆ ಹಲವಾರು ಇಸ್ಲಾಮಿಕ್ ದೇಶಗಳು ಸಂತಾಪ ಸೂಚಿಸಲಿಲ್ಲ. ಹಲವಾರು ಪ್ರಚೋದನಾ ಹೇಳಿಕೆಗಳ ಹೊರತಾಗಿಯೂ ಭಾರತ ಸರಕಾರವು ಇರಾನ್‌ನೊಂದಿಗೆ ಸೌಹಾರ್ದ ಸಂಬಂಧವನ್ನೇ ಕಾಯ್ದುಕೊಂಡು ಬಂದಿತ್ತು. ಇರಾನಿನ ಅಧ್ಯಕ್ಷ ಇಬ್ರಾಹಿಂ ರೈಸಿ ಹೆಲಿಕಾಪ್ಟರ್ ದುರಂತದಲ್ಲಿ ಮೃತಪಟ್ಟಾಗ ಭಾರತವು ಒಂದು ದಿನದ ಶೋಕಾಚಾರಣೆ ಘೋಷಿಸಿತ್ತು. ಹಾಗಾಗಿ ಭಾರತ ಸರಕಾರವು ತನ್ನ ಪರಂಪರೆಯನ್ನು ಮುರಿದಿದೆ ಎಂಬ ಸೋನಿಯಾ ಅವರ ಟೀಕೆಗೆ ಆಧಾರವಿಲ್ಲ. ಹೆಚ್ಚೆಂದರೆ ಅವರ ಲೇಖನವು ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ಓಲೈಕೆ ರಾಜಕಾರಣದ ಚಾಳಿಯನ್ನು ಮತ್ತೊಮ್ಮೆ ಬಹಿರಂಗಗೊಳಿಸಿದೆಯಷ್ಟೆ.

ಪತ್ರ ಮಿತ್ರ

ನಾಯಕತ್ವ ಗುಣ ಹೀಗಿದ್ದರೇ ಚೆನ್ನ

ತಂಡವೊಂದರ ನಾಯಕ ಅನಿಸಿಕೊಂಡವನಿಗೆ ತನ್ನ ತಂಡದ ಸದಸ್ಯರೆಲ್ಲರಲ್ಲಿ ಹುದುಗಿರುವ ಶಕ್ತಿಯ ಪರಿಚಯ ಇರಲೇ ಬೇಕು. ಒಬ್ಬಾತ ಕೆಲವೊಮ್ಮೆ ಪರಿಸ್ಥಿತಿಯ ಒತ್ತಡ ಅಥವಾ ಇನ್ನಾವುದೋ ಕಾರಣಗಳಿಂದ ನಾಯಕ ನಿರೀಕ್ಷಿಸಿದ ಫಲಿತಾಂಶ ನೀಡಲು ಶಕ್ಯನಾಗದೇ ಇರಲೂಬಹುದು. ಹಾಗಂತ, ಆ ವ್ಯಕ್ತಿಯ ಶಕ್ತಿಯೇ ಕುಂದಿ ಹೋಗಿದೆ ಅಂದುಕೊಂಡು, ಅವಕಾಶಗಳನ್ನೇ ಕಲ್ಪಿಸದೇ ಇದ್ದರೆ, ಬಹು ದೊಡ್ಡ ನಷ್ಟ ಆಗುವ ಸಾಧ್ಯತೆಗಳೇ ಹೆಚ್ಚು.

ಈ ಮಾತಿಗೆ ತಾಜಾ ಉದಾಹರಣೆ ಕ್ರಿಕೆಟಿಗ ಅಭಿಷೇಕ್ ಶರ್ಮಾ. ಟಿ20 ವಿಶ್ವಕಪ್‌ನ ಕೆಲ ಪಂದ್ಯಗಳಲ್ಲಿ ಅತ್ಯಂತ ಕಳಪೆ ಪ್ರದರ್ಶನ ನೀಡಿದ್ದರಿಂದ ತಂಡದಲ್ಲಿ ಆತ ತನ್ನ ಸ್ಥಾನವನ್ನೇ ಕಳೆದುಕೊಂಡುಬಿಟ್ಟ ಅಂದವರೇ ಹೆಚ್ಚು. ಫೈನಲ್‌ನ ಮುನ್ನಾ ದಿನದ 'ಸಂಭಾವ್ಯರ' ಪಟ್ಟಿಯಲ್ಲೂ ಆತನ ಹೆಸರು ಇದ್ದಿರಲಿಲ್ಲ. ಆದರೂ ನಾಯಕ ಸೂರ್ಯಕುಮಾರ್‌ಗೆ ಅಭಿಷೇಕ್ ಮೇಲಿನ ವಿಶ್ವಾಸ ಕುಂದಿರದಿದ್ದ ಕಾರಣ, ಅಂತಿಮ ಪಂದ್ಯದಲ್ಲೂ ಅವಕಾಶ ಕೊಟ್ಟ ಪರಿಣಾಮವನ್ನು ನಾವೆಲ್ಲ ಕಂಡಿದ್ದೇವೆ. ಕೇವಲ 21 ಎಸೆತಗಳಲ್ಲಿ 52 ರನ್ ಗಳಿಸಿ, ತಂಡದ ಗೆಲುವಿಗೆ ಸಹಕಾರಿಯಾಗಿದ್ದನ್ನು ಯಾರೂ ಮರೆಯಲಾರರು. ಅಭಿಷೇಕ್‌ನ ಹಿಂದಿನ ವೈಫಲ್ಯವನ್ನೇ ಮುಖ್ಯವಾಗಿರಿಸಿಕೊಳ್ಳದೆ, ಆತನಲ್ಲೂ ಆತ್ಮ ವಿಶ್ವಾಸ ಹೆಚ್ಚಿಸುವ ಕೆಲಸ ಮಾಡಿ, ಮತ್ತೆ ಅವಕಾಶ ಕೊಟ್ಟದ್ದು ನಾಯಕನ ಗುಣ.

ಇದು ನಮ್ಮ ಮನೆಗಳಲ್ಲೂ ನಿಜ. ಯಜಮಾನ ಎಂದುಕೊಂಡವ ತನ್ನ ಕುಟುಂಬದ ಸದಸ್ಯರೆಲ್ಲರ ಗುಣ, ಅವರಲ್ಲಿರುವ ವಿಶೇಷ ಅಭಿರುಚಿ, ತಾಕತ್ತು ಇವೆಲ್ಲವುಗಳ ಸಂಪೂರ್ಣ ಪರಿಚಯ ಉಳ್ಳವನಾದಾಗ, ಕುಟುಂಬದ ಸಣ್ಣ- ಪುಟ್ಟ ಅಡೆತಡೆಗಳನ್ನು ಅತ್ಯಂತ ಸಲೀಸಾಗಿ ನಿಭಾಯಿಸಿಕೊಂಡು ಹೋಗಬಹುದು.

ಈ ಗುಣ, ರಾಜಕಾರಣದಲ್ಲಂತೂ ಸದಾ ಕೆಲಸ ಮಾಡುವಂತಹುದು. ಕೆಲವು ಮುಖಂಡರು ಎಷ್ಟೇ ಬುದ್ಧಿಮತ್ತೆ, ಜ್ಞಾನ, ತಿಳುವಳಿಕೆ ಇದ್ದರೂ, ಕೆಲವೊಮ್ಮೆ ಪರಿಸ್ಥಿತಿಯ ಒತ್ತಡದಿಂದಾಗಿ ಅತ್ಯಂತ ನೇರ, ನಿಷ್ಠುರ ಮಾತುಗಳಿಂದ ತನ್ನ ಪಕ್ಷಕ್ಕೇ ಮುಜುಗರ ತಂದೊಡ್ಡುತ್ತಾರೆ. ಹಾಗಂತ ಅವರನ್ನು ತಕ್ಷಣ ಮೂಲೆಗುಂಪು ಮಾಡುವುದು ಸರಿಯೆನಿಸದು. ತಪ್ಪು ಸಂಭವಿಸಿದೆ ಅಥವಾ ಸಂಭವಿಸಲಿದೆ ಎಂಬುದು ತಿಳಿದಾಕ್ಷಣ, ಹತ್ತಿರ ಕರೆದು ತಿಳಿಹೇಳುವ ಪ್ರಯತ್ನ ಮಾಡಬೇಕು. ಇಲ್ಲೂ ಪಕ್ಷದ ಅಧ್ಯಕ್ಷ ಅಥವಾ ಮುಖ್ಯಮಂತ್ರಿಯೋ ಅಥವಾ ಪ್ರಧಾನಿಯೋ, ಮಾತಲ್ಲಿ ಹಿಡಿತ ತಪ್ಪುತ್ತಿದ್ದವರನ್ನು ತಮ್ಮ ಹಿಡಿತಕ್ಕೆ ತಂದು ಅವರನ್ನು ಸುಧಾರಿಸಿದಲ್ಲಿ ಎಲ್ಲವೂ ಸರಿಯಾಗಿ ನಡೆದೀತು. ನಿರ್ಲಕ್ಷ್ಯಕ್ಕೆ ಒಳಗಾದ ವ್ಯಕ್ತಿಗೂ, ಮುಂದೊಂದು ದಿನ ಮತ್ತೆ ಅವಕಾಶ ಕೊಡುವ ಸಂದರ್ಭ ಬರಲೂ ಬಹುದು ಎಂಬುದೂ ಗೋಚರವಾಗುತ್ತಿದೆ. ಹೀಗಾಗಿ, ಗುಂಪಿನ ನಾಯಕ ಅತ್ಯಂತ ಕಾಳಜಿಯಿಂದ ವ್ಯವಹರಿಸಲೇ ಬೇಕು. ಇದೇ ಅಲ್ಲವೇ ನಾಯಕತ್ವ ? ಇಲ್ಲವೆಂದರೆ ಯಾರು ಬೇಕಾದರೂ ನಾಯಕರಾಗಬಹುದಿತ್ತು.

ಈ ವರ್ಷದ ಕ್ರಿಕೆಟ್ ಮತ್ತು ಕೆಲ ರಾಜಕೀಯ ಬೆಳವಣಿಗೆಗಳು ಒಬ್ಬ ನಾಯಕ ಹೇಗಿದ್ದರೆ ಚೆನ್ನ ಎಂಬುದನ್ನು ಸ್ಪಷ್ಟ ಪಡಿಸಿದಂತಿದೆ !

-ಶಂಕರನಾರಾಯಣ ಭಟ್, ಮಾಡಗೇರಿ

ಡೇಟಾ ಸೆಂಟರ್‌ಗಳ ಸ್ಥಾಪನೆಗೆ ಹಿಂಜರಿಕೆ ಬೇಕಿಲ್ಲ

ಇತ್ತೀಚೆಗೆ ವಿಧಾನ ಸಭೆಯ ಕಲಾಪದಲ್ಲಿ ಮಾತನಾಡಿದ ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆಯವರು ಪ್ರಮುಖ ಎಐ ಸಂಸ್ಥೆಯಾದ ಚಾಟ್‌ಜಿಪಿಟಿಯಲ್ಲಿ ಐದು ಪ್ರಶ್ನೆ ಕೇಳಿದರೆ ಸುಮಾರು ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂದು ಹೇಳಿದರು. ಚಾಟ್ ಜಿಪಿಟಿಯಲ್ಲಿ ಪ್ರಶ್ನೆ ಕೇಳುವುದು ಸುಲಭ. ಅದರ ಹಿಂದೆ ಇಂಥದೊಂದು ಗಂಭೀರ ನೀರಿನ ಸಮಸ್ಯೆ ಇದೆಯೆಂದು ಗೊತ್ತಿರಲಿಲ್ಲ. ಆದರೆ ಸಚಿವರು ಡೇಟಾ ಸೆಂಟರ್‌ಗಳ ಬಳಕೆಗೆ ನೀರು ಮತ್ತು ಇಂಧನ ಬಳಕೆಯಾಗುತ್ತದೆಯೆಂಬುದರ ಬಗ್ಗೆ ವಿವರಣೆ ನೀಡುವಾಗ ಐದು ಪ್ರಶ್ನೆಗಳಿಗೆ ಅರ್ಧ ಲೀಟರ್ ನೀರಿನ ಬಳಕೆಯಾಗುತ್ತದೆ ಎಂಬುದು ತೀರಾ ಉತ್ಪ್ರೇಕ್ಷೆಯ ಮಾತೆನ್ನಿಸಿತು.

ಕುಂದಾಪುರ ಡಿಸಿಎಫ್ ರುಥ್ರನ್, ಎಸಿಎಫ್ ಪ್ರಕಾಶ್ ಪೂಜಾರಿ ನಿರ್ದೇಶನದಂತೆ ಕುಂದಾಪುರ ಆರ್‌ಎಫ್‌ಒ ರಾಘವೇಂದ್ರ ನಾಯ್ಕ್, ಡಿವೈಆರ್‌ಎಫ್‌ಒಗಳಾದ ಸೆಲ್ವ ಮುರುಗನ್, ಬಸವರಾಜ್, ಗುರುರಾಜ್ ನಾಯ್ಕ್, ವಿನಯ್ ನಾಯ್ಕ್, ಬೀಟ್ ಫಾರೆಸ್ಟರ್ ಗಂಗಾಧರ್, ಚಾಲಕ ಸತೀಶ್ ಕುಲಾಲ್ ಕಾರ್ಯಾಚರಣೆ ನಡೆಸಿದ್ದರು.

ಪುತ್ತೂರು ಮಾರುಕಟ್ಟೆ ಧಾರಣೆ

12-03-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 460
ಚೋಲ್ ಅಡಿಕೆ	505 - 530
ಡಬಲ್ ಚೋಲ್	505 - 530
ಹೊಸ ಪಠೋರ	340 - 390
ಹಳೆ ಪಠೋರ	380 - 410
ಹೊಸ ಉಳ್ಳಿ	115 - 290
ಹಳೆ ಉಳ್ಳಿ	105 - 290
ಹೊಸ ಕೋಕಾ	325 - 345
ಹಳೆ ಕೋಕಾ	330 - 350
ಹೊಸ ಕರಿಗೋಟು	230 - 260
ಹಳೆ ಕರಿಗೋಟು	230 - 260
ಹಸಿ ಕೊಕ್ಕೋ	75 - 105
ಒಣ ಕೊಕ್ಕೋ	280 - 310

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	211.00
ಆರ್‌ಎಸ್‌ಎಸ್ 2	197.00
ಸ್ಕ್ರಾಪ್ 1	130.00
ಸ್ಕ್ರಾಪ್ 2	120.00

ಹೊಸ ದಿಗಂತ 10
ಪ್ರಾದೇಶಿಕ
ಶುಕ್ರವಾರ 13 ಮಾರ್ಚ್ 2026
ಮಂಗಳೂರು

ಕಿರುಸುದ್ದಿ

ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದಾತನ ಸೆರೆ, ಶಿಕ್ಷೆ ಪ್ರಕಟ

• **ಸುಳ್ಯ:** ಬೆಳ್ಳಾರೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಮನೆಕಳ್ಳತನ ಪ್ರಕರಣದಲ್ಲಿ ಆರೋಪಿಯಾಗಿ ಬಳಿಕ, ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡಿದ್ದ ಬೆಳ್ತಂಗಡಿ ನೆರಿಯ ನಿವಾಸಿ ಶರತ್ ಎಸ್. (24) ಎಂಬಾತನನ್ನು ಬೆಳ್ಳಾರೆ ಠಾಣಾ ಪಿ.ಎಸ್.ಐ. ಅವರು ಹಾಗೂ ಸಿಬ್ಬಂದಿಗಳು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಧೀಶರಾದ ಶಿವಣ್ಣ ಎಚ್.ಆರ್. ಅವರು ಪ್ರಕರಣದಲ್ಲಿ ಆರೋಪಿಗೆ 6 ತಿಂಗಳ ಸಾಧಾರಣ ಸಜೆ ಹಾಗೂ ರೂ.500 ದಂಡ, ಕಲಂ 380 ಐಪಿಸಿಯಲ್ಲಿ 10 ತಿಂಗಳ ಸಾಧಾರಣ ಸಜೆ ಹಾಗೂ ರೂ.500 ದಂಡವನ್ನು ವಿಧಿಸಿದ್ದು, ದಂಡ ಪಾವತಿಸದಿದ್ದರೆ 10 ದಿನಗಳ ಸಜೆಯನ್ನು ನೀಡಿ ಆದೇಶಿಸಿದ್ದಾರೆ. ಪ್ರಕರಣದ ತನಿಖಾಧಿಕಾರಿಯಾಗಿ ಪಿಎಸ್ಐ ಸಂತೋಷ್ ಬಿ.ಪಿ., ಅಗತ್ಯ ಸಾಕ್ಷಿಗಳನ್ನು ಕಲೆ ಹಾಕಿ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದು, ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಶ್ರೀ ಎಂ.ಸಿ. ವಾದ ಮಂಡಿಸಿದ್ದು ಪ್ರಕರಣದಲ್ಲಿ ನ್ಯಾಯಾಲಯವು ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಂಡ ಹಿನ್ನೆಲೆಯಲ್ಲಿ ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ 269ರ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಈ ಪ್ರಕರಣದಲ್ಲಿ ನ್ಯಾಯಾಲಯವು ರೂ.1000 ದಂಡ ಅಥವಾ 10 ದಿನಗಳ ಕಾರಾಗೃಹ ವಾಸ ವಿಧಿಸಿ ಆದೇಶಿಸಿದ್ದಾರೆ.

ನಾಳೆ ಕಟೀಲಿನಲ್ಲಿ ರಾಶಿ ಪೂಜೆ

• **ಕಟೀಲು:** ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಮಾ.14ರಂದು ರಾಶಿ ಪೂಜೆ ನಡೆಯಲಿದೆ. ಮೇಷಾದಿ ದ್ವಾದಶ ರಾಶಿಗಳಲ್ಲಿ ಕೇಶವಾದಿ ಮಹಾವಿಷ್ಣುವಿನ ಸ್ವರೂಪಗಳನ್ನು ಹಾಗೂ ರಾಶಿ ಮಂಡಲದ ಮಧ್ಯದಲ್ಲಿ ಲಕ್ಷ್ಮೀ ನಾರಾಯಣರನ್ನು ಪೂಜಿಸುವ ವಿಶಿಷ್ಟ ಆರಾಧನಾ ವಿಧಾನವೇ 'ರಾಶಿಪೂಜೆ'. ದಿನ ಪೂರ್ತಿ ನೆರವೇರುವ ರಾಶಿಪೂಜಾ ವಿಧಿಯು ಒಂದು ಸೂರ್ಯೋದಯದಿಂದ ಆರಂಭವಾಗಿ ಮುಂದಿನ ಸೂರ್ಯೋದಯದ ಪರ್ಯಂತ ಅವಿಚ್ಛಿನ್ನವಾಗಿ ನಾರಾಯಣ ಸಂಕೀರ್ತನೆಯೊಂದಿಗೆ ನೆರವೇರುತ್ತದೆ. ಮೀನ ಸಂಕ್ರಮಣದ ದಿನ ಕಟೀಲು ಕ್ಷೇತ್ರದಲ್ಲಿ ರಾಶಿಪೂಜೆ ನೆರವೇರುತ್ತದೆ. ನಾರಾಯಣ ಸಂಕೀರ್ತನೆಗೆ ಕಟೀಲಿನಲ್ಲಿ ಹನ್ನೆರಡು ತಾಳದ ಮನೆಯವರು ಇದ್ದಾರೆ. ಅನ್ನ ಸಂತರ್ಪಣೆಯು ರಾಶಿಪೂಜೆಯ ಪ್ರಧಾನವಾದ ಅಂಗವಾಗಿರುವುದರಿಂದ ಅಂದು ಮಧ್ಯಾಹ್ನ ವಿಶೇಷವಾಗಿ ಸಂತರ್ಪಣೆ ಮೊದಲು ಪಲ್ಲಪೂಜೆ ನಡೆಯುತ್ತದೆ. ಸಂತರ್ಪಣೆಗಾಗಿ ಸಿದ್ಧಗೊಳ್ಳುವ ಅನ್ನದ ರಾಶಿ (ಪಲ್ಲ). ಅನ್ನಸಂತರ್ಪಣೆಯ ಮೊದಲು ಮಾರಿ ಓಡಿಸುವ ಪದ್ಧತಿ ಇದೆ. ಊರಿನ ದುಷ್ಟಾರಿಷ್ಟಗಳನ್ನು ನಿವಾರಿಸುವುದು ಎಂಬುದು ಆಶಯ. ರಾತ್ರಿ ದೊಡ್ಡ ರಂಗಪೂಜೆ, ಉತ್ಸವ ಬಲಿ, ಬಳಿಕ ಚಂದ್ರಮಂಡಲದಲ್ಲಿ ದೇವರನ್ನು ಕುಳ್ಳಿರಿಸಿ ದೇವಳಕ್ಕೆ ಒಂದು ಸುತ್ತು ಬರಲಾಗುತ್ತದೆ. ಅಂದರೆ ಒಂದು ಹಂತದ ಎಲ್ಲಾ ಉತ್ಸವವಿಧಿ ನೆರವೇರುವುದು.


ಮಾ. 15ಕ್ಕೆ ವಿಶ್ವಬ್ರಾಹ್ಮಣ ಸೇವಾ ಸಂಘದ ಅಮೃತ ಮಹೋತ್ಸವ ಸಮಾರೋಪ

ಉಡುಪಿ: ರಾಷ್ಟ್ರೀಯ ವಿಶ್ವಬ್ರಾಹ್ಮಣ ಸಮಾಜ ಸೇವಾ ಸಂಘದ ಅಮೃತ ಮಹೋತ್ಸವದ ಸಮಾರೋಪ ಸಮಾರಂಭ ಹಾಗೂ ಉ.ಕಾ. ಸುಬ್ರಾಯ ಆಚಾರ್ಯ ಅಧ್ಯಯನ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವು ಮಾ. 15ರಂದು ಕುಂಜಿಬೆಟ್ಟಿನ ಗಾಯತ್ರಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ. ವೆಂಕಟೇಶ ಆಚಾರ್ಯ ತಿಳಿಸಿದ್ದಾರೆ.

ಗುರುವಾರ ನಗರದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 9 ಗಂಟೆಯಿಂದ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಬೆಳಿಗ್ಗೆ 10.45ಕ್ಕೆ ಸಂಘದ ವಾರ್ಷಿಕ ಮಹಾಸಭೆ ನಡೆಯಲಿದ್ದು, ಕಾಪು ಕಾಳಿಕಾಂಬಾ ದೇವಸ್ಥಾನದ ಆಡಳಿತ ಮೊಕ್ತೇಸರ ಗಣೇಶ್ ಆಚಾರ್ಯ ಹಾಗೂ ಉದ್ಯಮಿ ದಯಾನಂದ ಆಚಾರ್ಯ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು. ಮಧ್ಯಾಹ್ನ 2.30ಕ್ಕೆ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮಿಗಳು ಉ.ಕಾ. ಸುಬ್ರಾಯ ಆಚಾರ್ಯ ಅಧ್ಯಯನ ಕೇಂದ್ರವನ್ನು ಉದ್ಘಾಟಿಸಿ ಆಶೀರ್ವಚನ ನೀಡಲಿದ್ದಾರೆ. ಇದೇ ಸಂದರ್ಭದಲ್ಲಿ 'ಸಹಚಿಂತನ' ಮಾಸಪತ್ರಿಕೆಯ ಸಂಪಾದಕ ಪ್ರಕಾಶ್ ಆಚಾರ್ಯ ಕಾರ್ಕಳ ಅವರು ಅಮೃತ ಮಹೋತ್ಸವದ ಸ್ಮರಣ ಸಂಚಿಕೆ 'ಅಮೃತವಾಣಿ'ಯನ್ನು ಬಿಡುಗಡೆಗೊಳಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಯಶ್‌ಪಾಲ್ ಸುವರ್ಣ, ಉದ್ಯಮಿ ಹರಿಶ್ಚಂದ್ರ ಎನ್. ಆಚಾರ್ಯ ಸೇರಿದಂತೆ ಸಮಾಜದ ಗಣ್ಯರು ಉಪಸ್ಥಿತರಿರಲಿದ್ದಾರೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ನಾಗರಾಜ ಆಚಾರ್ಯ, ಕಾರ್ಯದರ್ಶಿ ಹರೀಶ ಎಂ. ಆಚಾರ್ಯ, ಕೋಶಾಧಿಕಾರಿ ದಿವಾಕರ ವಿ. ಆಚಾರ್ಯ ಹಾಗೂ ಬಿ. ಅನಂತಯ್ಯ ಆಚಾರ್ಯ ಉಪಸ್ಥಿತರಿದ್ದರು.

ನಿಧನ ಸುದ್ದಿ

ಪತ್ರಿಕಾ ಏಜೆಂಟ್ ಲೋಕಯ್ಯ ಮೂಲ್ಯ




ಪಡುಬಿದ್ರಿ: ನಿವೃತ್ತ ಪೋಸ್ಟ್ ಮ್ಯಾನ್, ಹೊಸದಿಗಂತ ಪತ್ರಿಕಾ ವಿತರಕ ಲೋಕಯ್ಯ ಮೂಲ್ಯ ಕುಂಜೂರು (72) ಅವರು ಅಸೌಖ್ಯದಿಂದಾಗಿ ದುರ್ಗಾ ನಗರದಲ್ಲಿರುವ ಸ್ವಗೃಹದಲ್ಲಿ ಮಾ. 12ರಂದು ನಿಧನ ಹೊಂದಿದರು. ಸುಮಾರು ನಲ್ವತ್ತು ವರ್ಷಗಳ ಕಾಲ ಪಣಿಯೂರು ಅಂಚೆ ಕಚೇರಿಯಲ್ಲಿ ಪೋಸ್ಟ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸಿದ್ದ ಅವರು ಹೊಸದಿಗಂತ ಸಹಿತ ಪತ್ರಿಕೆಯ ವಿತರಣೆ ಕಾಯಕದಲ್ಲಿಯೂ ತೊಡಗಿಸಿಕೊಂಡು ಲೋಕಯ್ಯಣ್ಣ ಎಂದೇ ಜನಾನುರಾಗಿ ಆಗಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಶೈಲಜಾ

ಕಾಸರಗೋಡು: ಪೆರಿಯ ಆಯಂಬಾರ, ಕಾಸ್ತನ್ ಚಂದನ್ ಎಂಬವರ ಪತ್ನಿ ಶೈಲಜಾ (50) ನಿಧನ ಹೊಂದಿದರು. ಅಸೌಖ್ಯ ಬಾಧಿಸಿ ಚಿಕಿತ್ಸೆಯಲ್ಲಿದ್ದರು. ಮೃತರು ಮಕ್ಕಳಾದ ಶ್ರೆಮಾ, ದೇವರಾಜ್, ದೇವಿಕಾ ಅವರನ್ನು ಅಗಲಿದ್ದಾರೆ.

ಜಲಜಮ್ಮ



ಕೋಟ: ಇಲ್ಲಿನ ಸಾಸ್ತಾನ ಪ್ರಸಿದ್ಧ ಮನೆತನದ ಚಂದು ಪೂಜಾರಿ ಇವರ ಪುತ್ರಿ ಜಲಜಮ್ಮ 71ವ.ಅಲ್ಪ ಕಾಲದ ಅಸೌಖ್ಯದಿಂದ ನಿಧನರಾದರು. ಇವರು ಮಾಜಿ ಶಾಸಕ ಬಸವರಾಜ್ ಇವರ ಸಹೋದರಿಯಾಗಿದ್ದು ಮೂವರು ಪುತ್ರರನ್ನು ಅಗಲಿದ್ದಾರೆ.



ಕೊಡಗರಹಳ್ಳಿ ಗ್ರಾಮ ಪಂಚಾಯತ್ ಮತ್ತು ಸಂಜೀವಿನಿ ಒಕ್ಕೂಟದ ವತಿಯಿಂದ ಬುಧವಾರ ಮತ್ತು ಗುರುವಾರ ನಡೆದ 2 ದಿನಗಳ ಮಾಸಿಕ ಸಂತೆಯಲ್ಲಿ 17 ಕ್ಕೂ ಹೆಚ್ಚು ಮಳಿಗೆಗಳು ಪಾಲ್ಗೊಂಡಿದ್ದವು. ಇದರಲ್ಲಿ ಮಹಿಳೆಯರು ತಾವೇ ಬೆಳೆದ ಸೊಪ್ಪು ತರಕಾರಿ ಮನೆಯಲ್ಲಿ ಮಾಡಿದ ತಿಂಡಿ ತಿನಸು, ಮಜ್ಜಿಗೆ ಪಾನಕ ಮೊದಲಾದವುಗಳು ಗಮನಸೆಳೆದವು.

ಅನೈತಿಕ ಸಂಬಂಧವೇ ಕೊಲೆಗೆ ಕಾರಣ ಎಂದು ತಪ್ಪೊಪ್ಪಿಕೊಂಡ ಆರೋಪಿ

ಕುಂದಚೇರಿ ಜೋಡಿ ಕೊಲೆ ಆರೋಪಿ ಸೆರೆ

• **ಮಡಿಕೇರಿ:** ಭಾಗಮಂಡಲ ಪೊಲೀಸ್ ಠಾಣೆ ವ್ಯಾಪ್ತಿಯ ಕುಂದಚೇರಿ ಗ್ರಾಮದಲ್ಲಿ ಬುಧವಾರ ನಡೆದ ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಕುಂದಚೇರಿ ನಿವಾಸಿ ಹೆಚ್.ಕೆ.ಚಂದು (64) ಎಂಬಾತನೇ ಬಂಧನಕ್ಕೊಳಗಾದ ಆರೋಪಿಯಾಗಿದ್ದು, ತನ್ನ ತಂಗಿಗೆ ಇದ್ದ ಅನೈತಿಕ ಸಂಬಂಧವೇ ಕೊಲೆಗೆ ಕಾರಣ ಎಂದು ಆರೋಪಿ ತಪ್ಪೊಪ್ಪಿಕೊಂಡಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ತಿಳಿಸಿದ್ದಾರೆ.



ಕುಂದಚೇರಿ ಗ್ರಾಮದ ಅಡಿಯರ ಯಶೋದಾ (45) ಹಾಗೂ ಕುಂಞಿರಾಮ (47) ಎಂಬವರನಡುವೆ ಕಳೆದ ಎರಡು ವರ್ಷಗಳಿಂದ ಅನೈತಿಕ ಸಂಬಂಧವಿತ್ತೆಂದು ಹೇಳಲಾಗಿದ್ದು, ಈ ಸಂಬಂಧ ಯಶೋದಾಳ ಅಣ್ಣ ಚಂದುವಿಗೆ ಅಸಮಾಧಾನವಿತ್ತೆನ್ನಲಾಗಿದೆ.

ಬುಧವಾರ ಸಂಜೆ ಈ ವಿಚಾರವಾಗಿ ಚಂದ್ರು ತನ್ನ ತಂಗಿ ಯಶೋದಾ ಹಾಗೂ ಕುಂಞಿರಾಮ ಅವರೊಂದಿಗೆ ಜಗಳವಾಡಿದ್ದು, ಪರಿಸ್ಥಿತಿ ವಿಕೋಪಕ್ಕೆ ತೆರಳಿದಾಗ ಚಂದ್ರು ಕತ್ತಿಯಿಂದ ಕಡಿದು ಇಬ್ಬರನ್ನೂ ಕೊಲೆ ಮಾಡಿರುವುದಾಗಿ ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ, ಮಡಿಕೇರಿ ವಿಭಾಗದ ಡಿವೈಎಸ್ಪಿ ಪಿ.ಎ.ಸೂರಜ್, ಮಡಿಕೇರಿ ಗ್ರಾಮಾಂತರ ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಠಾಣಾಧಿಕಾರಿ ಪಿ.ಜಿ.ರಾಘವೇಂದ್ರ, ವೃತ್ತ ಮಟ್ಟದ ಅಪರಾಧ ಪತ್ತೆ ಸಿಬ್ಬಂದಿಗಳು, ಅಪರಾಧ ಕೃತ್ಯ ಪರಿಶೀಲನಾತಜ್ಞರ ತಂಡದೊಂದಿಗೆ ಭೇಟಿ ನೀಡಿ ಕೃತ್ಯಕ್ಕೆ ಸಂಬಂಧಿಸಿದ ಮಾಹಿತಿ ಹಾಗೂ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿ ಆರೋಪಿಯನ್ನು ಬಂಧಿಸಿದ್ದಾರೆ.

ಪ್ರಕರಣದ ಆರೋಪಿಯನ್ನು ಪತ್ತೆ ಮಾಡುವಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಅಧಿಕಾರಿ ಹಾಗೂ ಸಿಬ್ಬಂದಿಗಳ ಕಾರ್ಯವನ್ನು ಜಿಲ್ಲಾ ಪೊಲೀಸ್ ಅಧೀಕ್ಷಕಿ ಕು. ಬಿಂದುಮಣಿ ಆರ್.ಎನ್. ಅವರು ಶ್ಲಾಘಿಸಿದ್ದಾರೆ.

ನಿಯಮ 377ರಡಿ ಸಂಸತ್ತಿನಲ್ಲಿ ಸಮಸ್ಯೆ ಬಗ್ಗೆ ಮಂಡನೆ

ಕಡಲ್ಕೊರೆತದ ಗಂಭೀರತೆ ಬಗ್ಗೆ ಧ್ವನಿಯೆತ್ತಿದ ಸಂಸದ ಕ್ಯಾ.ಚೌಟ

• **ಮಂಗಳೂರು:** ಉಳ್ಳಾಲ–ಸೋಮೇಶ್ವರ ಸೇರಿದಂತೆ ದಕ್ಷಿಣ ಕನ್ನಡದಲ್ಲಿ ಹೆಚ್ಚಾಗುತ್ತಿರುವ ಕಡಲ್ಕೊರೆತ ಸಮಸ್ಯೆಯನ್ನು ಗಂಭೀರವಾಗಿ ಕರಾವಳಿ ತೀರದ ಸಂರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಲೋಕಸಭೆಯಲ್ಲಿ ಧ್ವನಿಯೆತ್ತಿದ್ದಾರೆ.

ನಿಯಮ 377ರಡಿ ಗುರುವಾರ ಈ ಗಂಭೀರ ವಿಷಯ ಪ್ರಸ್ತಾಪಿಸಿರುವ ಸಂಸದರು, ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು 36.66 ಕಿ.ಮೀ ಕರಾವಳಿ ತೀರದ ಪೈಕಿ ಸುಮಾರು 17.74 ಕಿ.ಮೀ ಅಂದರೆ ಶೇ.48.40ರಷ್ಟು ಭಾಗವು ಕೊರೆತಕ್ಕೆ ಒಳಗಾಗುತ್ತಿದೆ. ಇದು ಕರ್ನಾಟಕ ರಾಜ್ಯದ ಸರಾಸರಿ ಶೇ. 24ರಷ್ಟು ಮತ್ತು ರಾಷ್ಟ್ರೀಯ ಸರಾಸರಿಗಿಂತ ಅಂದರೆ ಶೇ.33.6ಕ್ಕಿಂತಲೂ ಗಣನೀಯವಾಗಿ ಜಾಸ್ತಿಯಿದೆ.



ಹೀಗಿರುವಾಗ, ಜಿಲ್ಲೆಯ ಕೇವಲ ಶೇ.21.9 ರಷ್ಟು ಕರಾವಳಿ ಮಾತ್ರ ಸದ್ಯಕ್ಕೆ ಸುರಕ್ಷಿತವಾಗಿದ್ದು, ಇದು ನೆರೆಯ ಜಿಲ್ಲೆಗಳಿಗೆ ಹೋಲಿಸಿದರೆ ಅತ್ಯಂತ ಕಡಿಮೆ ಪ್ರಮಾಣವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ನಿರಂತರವಾಗಿ ಮುಂಗಾರಿನಲ್ಲಿ ಉಂಟಾಗುವ ಅಲೆಗಳ ಅಬ್ಬರ, ಬದಲಾಗುತ್ತಿರುವ ಹವಾಮಾನ ವೈಪರೀತ್ಯ ಮತ್ತು ಕರಾವಳಿಯಲ್ಲಿನ ಕೆಲವು ಅವೈಜ್ಞಾನಿಕ ಕಾಮಗಾರಿಗಳಿಂದಾಗಿ ಕಡಲ ತೀರವು ಸವಕಳಿಗೆ ಒಳಗಾಗಿ ಭೂಪ್ರದೇಶವು ಸಮುದ್ರಪಾಲಾಗುತ್ತಿದೆ. ಇದರಿಂದಾಗಿ ಕರಾವಳಿ ತೀರ ಭಾಗದ ಮನೆಗಳು,



ರಸ್ತೆಗಳು ಮತ್ತು ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹೆಚ್ಚಿನ ಹಾನಿಯಾಗುತ್ತಿದೆ. ಹೀಗಾಗಿ, ಇದು ಕೇವಲ ಭೌಗೋಳಿಕ ಸಮಸ್ಯೆಯಲ್ಲ; ಬದಲಾಗಿ ಸಮುದ್ರವನ್ನೇ ನಂಬಿ ಬದುಕುತ್ತಿರುವ ಮೀನುಗಾರ ಸಮುದಾಯದ ಜೀವನೋಪಾಯಕ್ಕೆ ಉಂಟಾಗುತ್ತಿರುವ ದೊಡ್ಡ ಅಪಾಯವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಸಮಸ್ಯೆ ಪರಿಹಾರಕ್ಕೆ ಕಾರ್ಯೋನ್ಮುಖರಾಗಿ

ದಕ್ಷಿಣ ಕನ್ನಡದ ಕರಾವಳಿ ತೀರವು ಪ್ರತಿ ವರ್ಷವೂ ತೀವ್ರ ಸ್ವರೂಪದ ಕಡಲ್ಕೊರೆತಕ್ಕೆ ಒಳಗಾಗುತ್ತಿರಬೇಕಾದರೆ ಮತ್ತೆ ಮುಂಗಾರು ಮಳೆ ಪ್ರವೇಶ ಸಮೀಪಿಸುತ್ತಿದೆ. ಈ ಹಿನ್ನಲೆಯಲ್ಲಿ ತುರ್ತಾಗಿ ಮಳೆಯ ಅಬ್ಬರಕ್ಕೂ ಮೊದಲೇ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆಯಿದೆ. ಆದರಂತೆ, ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಹಾಗೂ ಭೂ ವಿಜ್ಞಾನ ಸಚಿವಾಲಯಗಳ ಪರಸ್ಪರ ಸಮನ್ವಯದೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ವಿಶೇಷವಾದ ಕರಾವಳಿ ಸಂರಕ್ಷಣಾ ಯೋಜನೆಯನ್ನು ರೂಪಿಸ ಬೇಕು. ಜತೆಗೆ, ಕರಾವಳಿ ಸಂರಕ್ಷಣೆಗೆ ತುರ್ತಾಗಿ ಕೈಗೊಳ್ಳಬೇಕಾದ ಮೀಸಲಾಗಿರುವ ಹಣಕಾಸಿನ ನೆರವನ್ನು ತಕ್ಷಣವೇ ಬಿಡುಗಡೆಗೊಳಿಸಬೇಕು. ಆ ಮೂಲಕ ಕರಾವಳಿ ತೀರದ ಕಡಲ್ಕೊರೆತಕ್ಕೆ ಶಾಶ್ವತ ಪರಿಹಾರ ಕೈಗೊಳ್ಳುವ ಮೂಲಕ ಮೀನುಗಾರರ ಬದುಕನ್ನು ಸುರಕ್ಷಿತಗೊಳಿಸಬೇಕು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಈ ಕೂಡಲೇ ಮಧ್ಯೆ ಪ್ರವೇಶ ಮಾಡಿ ಸಮಸ್ಯೆ ಪರಿಹಾರಕ್ಕೆ ಕಾರ್ಯೋನ್ಮುಖವಾಗಬೇಕೆಂದು ಸಂಸದರು ಸದನದಲ್ಲಿ ಆಗ್ರಹಿಸಿದ್ದಾರೆ.

ಕರಾವಳಿ ಜನತೆಯ ಪಾಲಿಗೆ ಕರಾಳ ಬಜೆಟ್

ಮಾ.14ರಂದು ಬಿಜೆಪಿಯಿಂದ ಪ್ರತಿಭಟನೆ: ದಿನೇಶ್ ಅಮೀನ್

• **ಉಡುಪಿ:** ಕರಾವಳಿ ಜನತೆಯ ಪಾಲಿಗೆ ಕರಾಳ ಬಜೆಟ್ ಆಗಿದ್ದು, ಕರಾವಳಿ ಜಿಲ್ಲೆಯನ್ನು ಸಂಪೂರ್ಣ ಹೊರಗಿಟ್ಟು, ಜಿಲ್ಲೆಯ ನಿರಂತರ ಕಡೆಗಣನೆ ಮುಂದುವರಿದಿದೆ. ಇದರ ವಿರುದ್ಧ ಉಡುಪಿ ನಗರ ಬಿಜೆಪಿ ವತಿಯಿಂದ ಉಡುಪಿ ಹಳೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಮಾರ್ಚ್ 14 ರಂದು ಸಂಜೆ 4.30ಕ್ಕೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ನಗರ ಬಿಜೆಪಿ ಅಧ್ಯಕ್ಷ ದಿನೇಶ್ ಅಮೀನ್ ಹೇಳಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಉಡುಪಿ ಶಾಸಕರ ಕಚೇರಿಯಿಂದ ಹಳೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದವರೆಗೆ ಪಾದಯಾತ್ರೆ ನಡೆಯಲಿದೆ. ಈ ಪ್ರತಿಭಟನೆಯಲ್ಲಿ ಒಂದು ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸುವ ನಿರೀಕ್ಷೆ ಇದೆ ಎಂದರು.



ಪ್ರಸ್ತುತ ಸಾಲಿನ ರಾಜ್ಯ ಬಜೆಟ್‌ನಲ್ಲಿ ಉಡುಪಿ ಜಿಲ್ಲೆಗೆ ಯಾವುದೇ ಅನುದಾನ ನೀಡದೆ ಸರ್ಕಾರವು ಜಿಲ್ಲೆಯ ಅಭಿವೃದ್ಧಿಯನ್ನು ತೀವ್ರವಾಗಿ ಕಡೆಗಣಿಸಿದೆ. ಕರಾವಳಿ ಭಾಗದ ಜನರು ಆರೋಗ್ಯ, ಶಿಕ್ಷಣ. ಮೀನುಗಾರಿಕೆ, ಪ್ರವಾಸೋದ್ಯಮ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ನಿರೀಕ್ಷೆ ಇಟ್ಟುಕೊಂಡಿದ್ದರೂ, ಈ ಬಾರಿ ಬಜೆಟ್‌ನಲ್ಲಿ ಉಡುಪಿ ಜಿಲ್ಲೆಗೆ ಯಾವುದೇ ವಿಶೇಷ ಯೋಜನೆಗಳು ಅಥವಾ ಮಹತ್ವದ ಅನುದಾನ ಘೋಷಣೆ ಆಗದಿರುವುದು ಜನರಲ್ಲಿ ತೀವ್ರ ನಿರಾಶೆ ಮೂಡಿಸಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ಉಡುಪಿ ಜಿಲ್ಲೆಯ ಅಸ್ತಿತ್ವವನ್ನೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮರೆತಿದ್ದು, ಉಡುಪಿ ಜಿಲ್ಲೆಯ ಜನರ ದೀರ್ಘಕಾಲದ ಬೇಡಿಕೆಗಳಾದ ಜಿಲ್ಲಾಸ್ಪತ್ರೆ ಕಾಮಗಾರಿ, ಸರ್ಕಾರಿ ಮೆಡಿಕಲ್ ಕಾಲೇಜು ಸ್ಥಾಪನೆ, ನೂತನ ವಿದ್ಯಾರ್ಥಿನಿಲಯಗಳ ಮಂಜೂರಾತಿ. ಕೃಷಿ ಡಿಗ್ರಿ ಕಾಲೇಜು ಆರಂಭಿಸುವುದು. ಕರಾವಳಿಗೆ ಪ್ರತ್ಯೇಕ ಮರಳು ನೀತಿ, ನೀರಾವರಿ ಯೋಜನೆಗಳು, ಸಮುದ್ರ ಕೊರೆತ ಪ್ರತಿಬಂಧಕ ಕಾಮಗಾರಿಗಳು, ಸರಕಾರಿ ಬಸ್ ವ್ಯವಸ್ಥೆ ಸದೃಢ ಪಡಿಸುವುದು, ಪ್ರವಾಸೋದ್ಯಮಕ್ಕೆ ಉತ್ತೇಜನ, ಸುಸಜ್ಜಿತ ಕ್ರೀಡಾಂಗಣಗಳ ನಿರ್ಮಾಣ. ನಾರಾಯಣಗುರು ಅಭಿವೃದ್ಧಿ ನಿಗಮಕ್ಕೆ ವಿಶೇಷ ಅನುದಾನ ಮೀಸಲಿರಿಸುವುದೂ ಸೇರಿದಂತೆ ಹಲವು ಪ್ರಮುಖ ಅಭಿವೃದ್ಧಿ ಯೋಜನೆಗಳ ಕುರಿತು ಸರ್ಕಾರದಿಂದ ಯಾವುದೇ ಅನುದಾನ ಘೋಷಣೆ ಆಗದಿರುವುದು ತೀವ್ರ ಅನ್ಯಾಯವಾಗಿದ್ದು, ಜಿಲ್ಲೆಯ ಜನತೆಯ ನಿರೀಕ್ಷೆಗೆ ಈ ಬಾರಿಯ ಬಜೆಟ್‌ನಲ್ಲಿ ತಣ್ಣೀರು ಎರಚಿದಂತಾಗಿದೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ರಾದಕಿರಣ್‌ಕುಮಾರ್, ಪ್ರಭಾಕರಪೂಜಾರಿ, ದಿವಾಕರ ಶೆಟ್ಟಿ, ಶ್ರೀವತ್ಸ ಜಗದೀಶ್ ಆಚಾರ್ಯ ಉಪಸ್ಥಿತರಿದ್ದರು.

ಸಿ.ಎ. ಫೌಂಡೇಶನ್ ಪರೀಕ್ಷೆ ಫಲಿತಾಂಶ:

ಆಳ್ವಾಸ್‌ನ 14 ವಿದ್ಯಾರ್ಥಿಗಳು ಉತ್ತೀರ್ಣ



ರಾಷ್ಟ್ರೀಯ ಮಟ್ಟದಲ್ಲಿ ಈ ವಿಭಾಗದಲ್ಲಿ ಶೇಕಡಾ 19.23 ಫಲಿತಾಂಶ

• **ಮೂಡುಬಿದಿರೆ:** ಜನವರಿಯಲ್ಲಿ ನಡೆದ ಸಿ.ಎ. ಫೌಂಡೇಶನ್ ಪರೀಕ್ಷೆಯಲ್ಲಿ ಆಳ್ವಾಸ್ ಪದವಿ ಕಾಲೇಜಿನ ಒಟ್ಟು 14 ವಿದ್ಯಾರ್ಥಿಗಳು ಉತ್ತೀರ್ಣರಾಗಿ ಸಾಧನೆ ಮೆರೆದಿದ್ದಾರೆ.

ರಾಷ್ಟ್ರೀಯ ಮಟ್ಟದಲ್ಲಿ ಈ ವಿಭಾಗದಲ್ಲಿ ಶೇಕಡಾ 19.23 ಫಲಿತಾಂಶ ದಾಖಲಾಗಿದ್ದರೆ, ಆಳ್ವಾಸ್ ಕಾಲೇಜು ಶೇಕಡಾ 31 ಫಲಿತಾಂಶ ಪಡೆದಿದೆ.

ಕಾಲೇಜಿನ ಬಿ.ಕಾಂ. ವಿದ್ಯಾರ್ಥಿಗಳಾದ ಶ್ರೇಯಾ ಬಂಗೇರ, ಪ್ರೀಶಾ ಎಸ್, ಜೊವಿಟಾ, ಸೀಮಾ, ಸಚಿನ್, ಪವಿತ್ರಾ, ಸಿಂಚನಾ ಕೆ., ಅನನ್ಯಾ, ಕುಶಲ್, ಶಿಬಾನಿ, ದೇಕಿ, ಪಲ್ಲವಿ ಮುಧೋಳ ಮತ್ತು ಆದಿತ್ಯ ಸಿ.ಎ. ಫೌಂಡೇಶನ್ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶದೊಂದಿಗೆ ಉತ್ತೀರ್ಣರಾಗಿರುತ್ತಾರೆ.

ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಪ್ರಾಂಶುಪಾಲ ಡಾ.ಕುರಿಯನ್ ಅಭಿನಂದಿಸಿದ್ದಾರೆ.

ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯ ವಾರ್ಷಿಕ ಮನ್ಮಹಾರಥೋತ್ಸವ

ರಥ ಎಳೆದು ಪುನೀತವಾದ ಭಕ್ತಗಡಣ

• **ಬೈಂದೂರು:** ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಿಯ ವಾರ್ಷಿಕ ಮನ್ಮಹಾರಥೋತ್ಸವ ಗುರುವಾರ ಸಡಗರ ಸಂಭ್ರಮದಿಂದ ಜರುಗಿತು. ದೇವಳದ ತಂತ್ರಿ, ಅರ್ಚಕ ಕೆ. ಎನ್. ಸುಬ್ರಹ್ಮಣ್ಯ ಅಡಿಗ ನೇತೃತ್ವದಲ್ಲಿ ಮುಹೂರ್ತ ಮಂಗಳಾರತಿ, ಪಂಚಾಮೃತ ಅಭಿಷೇಕ, ಕ್ಷಿಪ್ರಬಲಿ, ವಿಶೇಷ ಭೂತ ಬಲಿ, ರಥಾರೋಹಣ ಸೇರಿದಂತೆ ಹಲವು ಧಾರ್ಮಿಕ ವಿಧಿ–ವಿಧಾನ ನಡೆಯಿತು. ವಿವಿಧ ಭಾಗಗಳಿಂದ ಕ್ಷೇತ್ರಕ್ಕೆ ಆಗಮಿಸಿದ ಸಹಸ್ರಾರು ಭಕ್ತರು ಮಧ್ಯಾಹ್ನ ದೇವಳದ ಭೋಜನಶಾಲೆಯಲ್ಲಿ ಅನ್ನಪ್ರಸಾದ ಸ್ವೀಕರಿಸಿದರು. ಸಂಜೆ ನಡೆದ ರಥೋತ್ಸವದಲ್ಲಿ ಸಾವಿರಾರು ಭಕ್ತರು ರಥ ಎಳೆದು ಸಂಭ್ರಮಿಸಿದರು.



ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ. ಕೆ. ಮಾರ್ಗದರ್ಶನದಲ್ಲಿ ದೇವಳದ ಕಾರ್ಯನಿರ್ವಹಣಾಧಿಕಾರಿ ಪ್ರಶಾಂತ ಕುಮಾರ್ ಶೆಟ್ಟಿ, ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೆ. ಬಾಬು ಶೆಟ್ಟಿ ತಗ್ಗರ್ಸೆ, ಸದಸ್ಯರಾದ ಕೆ. ನಿತ್ಯಾನಂದ ಅಡಿಗ, ರಘುರಾಮ ದೇವಾಡಿಗ, ಯು. ರಾಜೇಶ ಕಾರಂತ್, ಅಭಿಲಾಷ್ ಪಿ. ವಿ., ಸುರೇಂದ್ರ ಶೆಟ್ಟಿ, ಮಹಾಲಿಂಗ ನಾಯ್ಕ್, ಧನಾಕ್ಷಿ ವಿಶ್ವನಾಥ, ಸುಧಾ ಕೆ. ಉಸ್ತುವಾರಿ ವಹಿಸಿದ್ದು, ಅರ್ಚಕ ವೃಂದ, ದೇವಳದ ಸಿಬ್ಬಂದಿ ವರ್ಗ ಹಾಗೂ ಸ್ಥಳೀಯಾಡಳಿತ ಜಾತ್ರೆಯ ಯಶಸ್ಸಿಗೆ ಸಹಕರಿಸಿದ್ದರು. ಶುಕ್ರವಾರ ರಾತ್ರಿ ದೇವರ ಅವಭೃತಸ್ನಾನ ನಡೆಯಲಿದೆ. ಶನಿವಾರ ಬೆಳಿಗ್ಗೆ ಮಹಾಪೂರ್ಣಾಹುತಿ, ಧ್ವಜಾವರೋಹಣ, ಪೂರ್ಣಕುಂಭಾಭಿಷೇಕದ ನಂತರ ಅಂಕುರ ಪ್ರಸಾದ ವಿತರಿಸಲಾಗುತ್ತದೆ. ಸಂಜೆ ನಗರೋತ್ಸವ ಜರುಗಲಿದೆ.

ವಾರ್ಷಿಕ ಉತ್ಸವದ ಸಂಭ್ರಮದಲ್ಲಿ ಶ್ರೀಮೂಕಾಂಬಿಕೆಯದೇವಸ್ಥಾನಹಾಗೂಕೊಲ್ಲೂರು ಪೇಟೆ ತುಂಬಾ ಬಗೆಬಗೆಯ ವಿದ್ಯುದ್ದೀಪ, ತಳಿರುತೋರಣಗಳಿಂದ ಅಲಂಕೃತ ಗೊಳಿಸಲಾಗಿತ್ತು. ಅಲ್ಲಲ್ಲಿ ಸ್ವಾಗತ ಫಲಕಗಳು ಮೇಳೈಸಿದರೆ, ಜಾತ್ರೆಗಾಗಿ ಹತ್ತು ಹಲವು ಬಗೆಯ ಅಂಗಡಿ ಮುಂಗಟ್ಟುಗಳು ವ್ಯಾಪಾರಕ್ಕಾಗಿ ಸಿದ್ಧಗೊಂಡಿತ್ತು. ಜನದಟ್ಟಣೆ ಹಾಗೂ ವಾಹನ ಸಾಂದ್ರತೆ ನಿಯಂತ್ರಿಸುವ ನಿಟ್ಟಿನಲ್ಲಿ ಎಲ್ಲೆಡೆ ಅಚ್ಚುಕಟ್ಟಾದ ಪಾರ್ಕಿಂಗ್ ವ್ಯವಸ್ಥೆ ಹಾಗೂ ಜಾತ್ರಾ ಮಹೋತ್ಸವದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಬಿಗು ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ರಾಜ್ಯ, ಹೊರರಾಜ್ಯಗಳಲ್ಲದೇ ದೇಶ–ವಿದೇಶಗಳಿಂದ ಅಪಾರ ಪ್ರಮಾಣದ ಭಕ್ತರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.


19 ಅಡಿ ಶ್ರೀ ಮುಖ್ಯಪ್ರಾಣ ಶಿಲಾಮೂರ್ತಿ ಪ್ರತಿಷ್ಠಾ ಬ್ರಹ್ಮಕಲಶೋತ್ಸವ

ಮಾ.31ರಿಂದ ವಿವಿಧ ಧಾರ್ಮಿಕ ಕಾರ್ಯಕ್ರಮ

• **ಮಂಗಳೂರು:** ಉಡುಪಿ ಜಿಲ್ಲೆಯ ಶ್ರೀ ಕ್ಷೇತ್ರ ಶಂಕರಪುರ, ಶ್ರೀ ಸಾಯಿ ಸಾಂತ್ವಾನ ಮಂದಿರ ಟ್ರಸ್ಟ್ ಮತ್ತು ಶ್ರೀ ದ್ವಾರಕಾಮಾಯಿ ಮಠದ ವತಿಯಿಂದ 19 ಅಡಿ ಎತ್ತರದ ಶ್ರೀ ಮುಖ್ಯಪ್ರಾಣ ಶಿಲಾಮೂರ್ತಿಯ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮಾ. 31ರಿಂದ ಏ.3ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಕ್ಷೇತ್ರದಲ್ಲಿ ನಡೆಯಲಿದೆ.

ಹಿಂದೂ ಸಮಾಜ ಒಗ್ಗಟ್ಟಾಗಬೇಕು. ಮತಾಂತರ, ದ್ವೇಷ ದೂರವಾಗಬೇಕು ಎಂಬ ಆಶಯದೊಂದಿಗೆ 19 ಅಡಿ ಎತ್ತರದ ಶ್ರೀ ಮುಖ್ಯಪ್ರಾಣ ಏಕಶಿಲಾ ಮೂರ್ತಿ ಸ್ಥಾಪಿಸಲಾಗುತ್ತಿದೆ. ಮಾ. 14ರಂದು ಸಂಜೆ 3.30ಕ್ಕೆ ಉಡುಪಿ ಜೋಡುಕಟ್ಟೆಯಿಂದ ಶಂಕರಪುರಕ್ಕೆ 'ಭಜರಂಗಿ ಪ್ರವೇಶ್' ಮೆರವಣಿಗೆಯ ಮೂಲಕ ಮೂರ್ತಿ ಕೊಂಡೊಯ್ಯಲಾಗುತ್ತದೆ ಎಂದು ಶ್ರೀ ಕ್ಷೇತ್ರ ಶಂಕರಪುರದ ಶ್ರೀ ಸಾಯಿ ಈಶ್ವರ್ ಗುರೂಜಿ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಉಡುಪಿ ನಗರ ಸಭಾ ಸದಸ್ಯ ವಿಜಯ ಕೊಡವೂರು ಮಾತನಾಡಿ, ಮಾ. 26ರಂದು ಹನುಮ ಜನ್ಮ ಭೂಮಿಯಿಂದ ರಾಮ ನವಮಿಯಂದು ಹನುಮ ಜ್ಯೋತಿ ಹಾಗೂ ಹನುಮ ಧ್ವಜ ಹೊರಟು ಮಾ. 29ಕ್ಕೆ ಉಡುಪಿ ತಲುಪಲಿದೆ. ಉಡುಪಿ ಜೋಡುಕಟ್ಟೆಯಿಂದ ಭವ್ಯ ಮೆರವಣಿಗೆ ಮೂಲಕ ಹನುಮಜ್ಯೋತಿ, ಹನುಮಧ್ವಜ ಹಾಗೂ ಅವಧೂತ ಭಗವಾನ್ ನಿತ್ಯಾನಂದ ಸ್ವಾಮಿ ಅವರ 200 ಕೆಜಿ ತೂಕದ ಪಂಚಲೋಹದ ಮೂರ್ತಿ ಕ್ಷೇತ್ರಕ್ಕೆ ಆಗಮಿಸಲಿದೆ ಎಂದರು.



ಮಾ. 31ರಿಂದ ಏ.2ರ ವರೆಗೆ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಏ. 2ರಂದು ಮಧ್ಯಾಹ್ನ 12.30ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಬೆಂಗಳೂರಿನ ಸಿದ್ಧಿ ವಿನಾಯಕ ಶರಭೇಶ್ವರ ಪೀಠದ ಪೀಠಾಧಿಪತಿ ಡಾ. ಮಹರ್ಷಿ ಜಯ ಶ್ರೀನಿವಾಸನ್ ಗುರೂಜಿ, ಶ್ರೀ ಕ್ಷೇತ್ರ ಮಾಣಿಲದ ಶ್ರೀ ಮೋಹನ್ ದಾಸ ಸ್ವಾಮೀಜಿ, ಮಂಗಳೂರು ಶ್ರೀ ಆದಿಶಕ್ತಿ ಭುವನೇಶ್ವರಿ ಆದಿನಾಥ ಸಿದ್ಧಿ ಪೀಠದ ಶ್ರೀ ಪ್ರವೀಣ್ ರಾಜ್ ಮಚ್ಚೇಂದ್ರನಾಥ್ ಬಾಬಾ ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಉದ್ಯಮಿ ಶಶಿಧರ್ ಶೆಟ್ಟಿ ಉದ್ಘಾಟಿಸಲಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಸುರೇಶ್ ಶೆಟ್ಟಿ ಗುರ್ಮೆ, ಯಶ್ ಪಾಲ್ ಸುವರ್ಣ, ಮಾಜಿ ಸಚಿವರಾದ ವಿನಯ್ ಕುಮಾರ್ ಸೊರಕೆ, ಪ್ರಮೋದ್ ಮಧ್ವರಾಜ್ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಶ್ರೀ ದ್ವಾರಕಾಮಾಯಿ ಮಠದ ಟ್ರಸ್ಟಿಗಳಾದ ಕಿರಣ್ ಜೋಗಿ, ಗೀತಾಂಜಲಿ ಸುವರ್ಣ ಹಾಗೂ ಪ್ರಮುಖರಾದ ಸುಧಾಕರ್ ರಾವ್ ಪೇಜಾವರ ಉಪಸ್ಥಿತರಿದ್ದರು.

ವಿಧಾನಸಭೆ: ಪ್ರತಿ ಜಿಲ್ಲೆಗೊಂದು ಸರ್ಕಾರಿ

ವೈದ್ಯಕೀಯ ಕಾಲೇಜು ಸರಕಾರದ ಆಶಯ

• **ವಿಧಾನಸಭೆ:** ರಾಜ್ಯದಲ್ಲಿ ಪ್ರತಿ ಜಿಲ್ಲೆಗೊಂದು ಸರ್ಕಾರಿ ವೈದ್ಯಕೀಯ ಕಾಲೇಜನ್ನು ಪ್ರಾರಂಭಿಸಬೇಕೆಂಬುದು ಸರ್ಕಾರದ ಆಶಯವಾಗಿದೆ. ಹಣದ ಲಭ್ಯತೆ ಅನುಸಾರ ಸರ್ಕಾರಿ ವೈದ್ಯಕೀಯ ಕಾಲೇಜುಗಳನ್ನು ಹೊಂದಿರದ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಪರಿಶೀಲಿಸಲಾಗುವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಆರ್. ಪಾಟೀಲ ತಿಳಿಸಿದರು.



ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಯಶಪಾಲ್ ಸುವರ್ಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಪ್ರಸ್ತುತ ಕನಕಪುರ, ಬಾಗಲಕೋಟೆ ಹಾಗೂ ರಾಮನಗರ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ ವಹಿಸಲಾಗಿದೆ. ಆದರಂತೆ ಆಯವ್ಯಯದಲ್ಲಿ ಘೋಷಣೆಯಾದಂತೆ ಹಣದ ಲಭ್ಯತೆ ಅನುಸಾರ ಕೋಲಾರ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಕ್ರಮ ವಹಿಸಿ ಮುಂದಿನ ಹಂತದಲ್ಲಿ ಉಳಿದ ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಲು ಹಂತ ಹಂತವಾಗಿ ಕ್ರಮ ವಹಿಸಲಾಗುವುದು ಎಂದು ವಿವರಿಸಿದರು.

ಉಡುಪಿ ಜಿಲ್ಲೆಯೂ ಸೇರಿದಂತೆ ವೈದ್ಯಕೀಯ ಕಾಲೇಜುಗಳು ಇಲ್ಲದ ಜಿಲ್ಲೆಗಳಲ್ಲಿ ಪಿಪಿಪಿ ಮಾದರಿಯಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸುವ ಬಗ್ಗೆ ಪೂರ್ವಭಾವಿ ಸಭೆಯನ್ನು ನಡೆಸಲಾಗಿದ್ದು, ಐಡೆಕ್ ಸಂಸ್ಥೆಯನ್ನು ವರ್ಗಾವಣೆ ಸಲಹೆಗಾರ ಆಗಿ ನೇಮಿಸಲಾಗಿದೆ. ವರದಿ ಬಂದ ಕೂಡಲೇ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಸಚಿವ ಸಂಪುಟದಲ್ಲಿ ಚರ್ಚಿಸಿ ಅನುಮತಿ ಪಡೆದು ಮುಂದಿನ ಕ್ರಮ ವಹಿಸಲಾಗುವುದು ಎಂದು ಸಚಿವರು ತಿಳಿಸಿದರು.

ಭಾರತೀಯ ಕ್ರಿಕೆಟ್‌ಗೆ ನೀಡಿದ ಅಪಾರ ಕೊಡುಗೆಗಾಗಿ ದ್ರಾವಿಡ್‌ಗೆ ಜೀವಮಾನದ ಪ್ರಶಸ್ತಿ

ಜೀವಮಾನದ ಗೋಡೆಗೆ ಬಿಸಿಸಿಐ ಗರಿ



ಮುಂಬೈ: ಭಾರತೀಯ ಕ್ರಿಕೆಟ್ ತಂಡದ ಮಾಜಿ ನಾಯಕ, ಕ್ರಿಕೆಟ್ ಗೋಡೆ (ವಾಲ್) ಮತ್ತು ಟಿ20 ವಿಶ್ವಕಪ್ ಗೆಲ್ಲಿಸಿದ ಕೋಚ್ ರಾಹುಲ್ ದ್ರಾವಿಡ್ ಅವರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸಿ.ಕೆ. ನಾಯ್ಡು ಜೀವಮಾನದ ಸಾಧನೆ ಪ್ರಶಸ್ತಿಯನ್ನು ಘೋಷಿಸಿದ್ದು, ಮಾ.15ರಂದು ತನ್ನ ವಾರ್ಷಿಕ ನಮನ ಪ್ರಶಸ್ತಿ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಿದೆ. ಭಾರತ ಟೆಸ್ಟ್ ಮತ್ತು ಏಕದಿನ ತಂಡಗಳ ನಾಯಕ ಶುಭ್ಮನ್ ಗಿಲ್ ಅವರಿಗೆ ವರ್ಷದ ಕ್ರಿಕೆಟಿಗ ಪ್ರಶಸ್ತಿಯನ್ನು ಬುಧವಾರ ಘೋಷಿಸಿದೆ.

ಭಾರತೀಯ ಕ್ರಿಕೆಟ್‌ಗೆ ರಾಹುಲ್ ದ್ರಾವಿಡ್ ನೀಡಿದ ಅಪಾರ ಕೊಡುಗೆಯನ್ನು ಗುರುತಿಸಿ ಬಿಸಿಸಿಐ ಈ ಪ್ರಶಸ್ತಿಯನ್ನು ನೀಡಲಿದೆ. ದ್ರಾವಿಡ್ ಅವರನ್ನು ಹಿರಿಯ ಭಾರತೀಯ ಪುರುಷರ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಲಾಗಿತ್ತು. ಆ ಸಮಯದಲ್ಲಿ ಅವರು ನಾಯಕ ರೋಹಿತ್ ಶರ್ಮಾ ಜತೆಗೂಡಿ ಟಿ20 ವಿಶ್ವಕಪ್ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 1990ರ ದಶಕದ ಕೊನೆಯ ಭಾಗದಿಂದ 2000ರ ದಶಕದ ಬಹುತೇಕ ಅವಧಿಯಲ್ಲಿ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ, ವಿ.ವಿ.ಎಸ್. ಲಕ್ಷ್ಮಣ್ ಹಾಗೂ ವಿರೇಂದ್ರ ಸೆಹ್ವಾಗ್ ಸೇರಿದಂತೆ ಬಲಿಷ್ಠ ಬ್ಯಾಟಿಂಗ್ ಕ್ರಮಾಂಕವನ್ನು ಕಟ್ಟುವುದರಲ್ಲಿ ಪ್ರಮುಖ ಪಾತ್ರವಹಿಸಿದ್ದ ದ್ರಾವಿಡ್ ತಮ್ಮ ಪೀಳಿಗೆಯ ಅತ್ಯುತ್ತಮ ಆಟಗಾರರಲ್ಲಿ ಒಬ್ಬರಾಗಿ ವಿಶ್ವವಿಖ್ಯಾತರಾಗಿದ್ದರು.

36 ಟೆಸ್ಟ್ ಶತಕ

ಬೆಂಗಳೂರು ಮೂಲದ ಈ ಬ್ಯಾಟ್ಸ್‌ಮನ್ ಲಾರ್ಡ್ಸ್‌ನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ತಮ್ಮ ಮೊದಲ ಪಂದ್ಯದಲ್ಲೇ 95 ರನ್ ಗಳಿಸಿ ಶತಕವನ್ನು ಕೇವಲ 5 ರನ್‌ಗಳಿಂದ ತಪ್ಪಿಸಿಕೊಂಡಿದ್ದರು. ಆದರೆ ಮುಂದಿನ 16 ವರ್ಷಗಳಲ್ಲಿ 164 ಟೆಸ್ಟ್ ಪಂದ್ಯಗಳಲ್ಲಿ 36 ಶತಕಗಳನ್ನು ಬಾರಿಸಿ 52.31ರ ಅದ್ಭುತ ಸರಾಸರಿಯಲ್ಲಿ ಒಟ್ಟು 13,288 ರನ್ ಕಲೆಹಾಕಿದ್ದರು.

ಏಕದಿನದಲ್ಲೂ 10,000 ರನ್

ಏಕದಿನ ಕ್ರಿಕೆಟ್‌ನಲ್ಲಿ 53 ವರ್ಷದ ದ್ರಾವಿಡ್ ಅವರು 344 ಪಂದ್ಯಗಳಲ್ಲಿ 10,889 ರನ್ ಗಳಿಸಿದ್ದು, ಅದರಲ್ಲಿ 12 ಶತಕಗಳು ಮತ್ತು 83 ಅರ್ಧಶತಕಗಳು ಸೇರಿವೆ. ಟೆಸ್ಟ್ ಮತ್ತು ಏಕದಿನ ಎರಡರಲ್ಲೂ 10,000ಕ್ಕಿಂತ ಹೆಚ್ಚು ರನ್ ಗಳಿಸಿದ ಕೆಲವೇ ಆಟಗಾರರಲ್ಲಿ ದ್ರಾವಿಡ್ ಒಬ್ಬರು. ಏಕದಿನಗಳಲ್ಲಿ ಭಾರತ ಪರ ಎರಡನೇ ಅತಿ ವೇಗದ ಅರ್ಧಶತಕ ದಾಖಲೆಯನ್ನೂ ಅವರು ಹಂಚಿಕೊಂಡಿದ್ದಾರೆ.

ನಿವೃತ್ತಿಗೆ ಮುನ್ನ ಏಕೈಕ ಟಿ20!

2011ರಲ್ಲಿ ಮ್ಯಾಂಚೆಸ್ಟರ್‌ನಲ್ಲಿ ನಡೆದ ಪಂದ್ಯದಲ್ಲಿ ಭಾರತ ಪರ ಏಕೈಕ ಟಿ20 ಅಂತಾರಾಷ್ಟ್ರೀಯ ಪಂದ್ಯವನ್ನೂ ಆಡಿದ ಅವರು ಸತತ ಮೂರು ಸಿಕ್ಸರ್‌ಗಳನ್ನು ಬಾರಿಸಿದ್ದರು.

ಗಂಭೀರ್ ಕೃತಜ್ಞತೆ

ಇತ್ತೀಚೆಗೆ ಅವರ ಉತ್ತರಾಧಿಕಾರಿ ಗೌತಮ್ ಗಂಭೀರ್, ಭಾರತ ಸಾಧಿಸಿದ ಐತಿಹಾಸಿಕ ಮೂರನೇ ಟಿ20 ವಿಶ್ವಕಪ್ ಗೆಲುವನ್ನು ದ್ರಾವಿಡ್ ಮತ್ತು ಲಕ್ಷ್ಮಣ್‌ರಿಗೆ ಅರ್ಪಿಸಿದ್ದು, ಅವರಿಬ್ಬರ ಅಪಾರ ಕೊಡುಗೆಗೆ ಕೃತಜ್ಞತೆ ಸಲ್ಲಿಸಿದ್ದರು. ಮೊದಲು ಈ ಟ್ರೋಫಿಯನ್ನು ರಾಹುಲ್ ಭಾಯ್ ಅವರಿಗೆ ಸಮರ್ಪಿಸಬೇಕು ಎಂದು ಭಾವಿಸುತ್ತೇನೆ. ಭಾರತೀಯ ಕ್ರಿಕೆಟ್ ಉತ್ತಮ ಸ್ಥಿತಿಯಲ್ಲಿ ಇರಲು ಅವರು ಕಾರಣ, ಅವರಿಗೆ ಕೃತಜ್ಞತೆಗಳು ಎಂದು ಗಂಭೀರ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದರು.



ವರ್ಷದ ಅಂ. ಕ್ರಿಕೆಟಿಗ ಗಿಲ್

ಭಾರತ ಟೆಸ್ಟ್ ಮತ್ತು ಏಕದಿನ ತಂಡದ ನಾಯಕ ಶುಬ್ಮನ್ ಗಿಲ್ ಅವರಿಗೆ ಬಿಸಿಸಿಐ ಪಾಲಿ ಉಮ್ರಿಗರ್ ವರ್ಷದ ಅಂತಾರಾಷ್ಟ್ರೀಯ ಕ್ರಿಕೆಟರ್ (ಪುರುಷ) ಪ್ರಶಸ್ತಿಯನ್ನು ಮಾ.15ರಂದು ಪ್ರದಾನ ಮಾಡಲಿದೆ. ಕಳೆದ ತಿಂಗಳು ತವರಿನಲ್ಲೇ ನಡೆಯಲಿರುವ ಟಿ20 ವಿಶ್ವಕಪ್‌ಗಾಗಿ ತಂಡದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದ ಶುಬ್ಮನ್, ಎಲ್ಲಾ ವಿಭಾಗಗಳಲ್ಲಿ ರನ್ ಬರ ಅನುಭವಿಸುತ್ತಿದ್ದರು. 2025ರ ಇಂಗ್ಲೆಂಡ್ ಪ್ರವಾಸದಲ್ಲಿ 70ಕ್ಕೂ ಹೆಚ್ಚಿನ ಸರಾಸರಿಯಲ್ಲಿ 754 ರನ್ ಸೇರಿ ಕ್ಯಾಲೆಂಡರ್ ವರ್ಷದಲ್ಲಿ 983 ರನ್ ಕಲೆಹಾಕಿದ್ದಾರೆ. ಏಕದಿನ ಕ್ರಿಕೆಟ್‌ನಲ್ಲಿ ಚಾಂಪಿಯನ್ ಟ್ರೋಫಿ ಗೆದ್ದ ಭಾರತ ತಂಡಕ್ಕಾಗಿ 188 ರನ್ ಸೇರಿ ಒಟ್ಟು 490 ರನ್ ಕಲೆಹಾಕಿದ್ದಾರೆ. ಒಟ್ಟಾರೆ 49ರ ಸರಾಸರಿಯಲ್ಲಿ 1,764 ರನ್ ಕಲೆಹಾಕಿದ್ದು, ಇದರಲ್ಲಿ 7 ಶತಕಗಳು ಮತ್ತು 3 ಅರ್ಧಶತಕಗಳನ್ನು ಒಳಗೊಂಡಿವೆ.

ಲಕ್ಷ್ಮಣ್ ಜತೆಗೂಡಿ ಶ್ರೇಷ್ಠ ಟೆಸ್ಟ್ ಇನ್ನಿಂಗ್ಸ್

ದ್ರಾವಿಡ್ ಶ್ರೇಷ್ಠ ಇನ್ನಿಂಗ್ಸ್‌ಗಳಲ್ಲಿ 2001ರಲ್ಲಿ ಕೋಲ್ಕತ ಟೆಸ್ಟ್‌ನಲ್ಲಿ ದಾಖಲಾಗಿದ್ದು, ಆಸ್ಟ್ರೇಲಿಯಾ ವಿರುದ್ಧ ಸೌರವ್ ಗಂಗೂಲಿ ನೇತೃತ್ವದ ಭಾರತ ಐತಿಹಾಸಿಕ ಗೆಲುವು ಸಾಧಿಸುವಲ್ಲಿ ರೂವಾರಿ ಆಗಿದ್ದರು. ಈಡನ್‌ನಲ್ಲಿ ದ್ರಾವಿಡ್ ಮತ್ತು ಲಕ್ಷ್ಮಣ್ 376 ರನ್‌ಗಳ ಭಾರೀ ಜತೆಯಾಟದಿಂದ ಭಾರತ, ಸ್ಟೀವ್ ವಾ ನೇತೃತ್ವದ ಆಸ್ಟ್ರೇಲಿಯಾದ 16 ಪಂದ್ಯಗಳ ಗೆಲುವಿನ ನಾಗಾಲೋಟವನ್ನು ಮುರಿದಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ ಆರನೇ ಕ್ರಮಾಂಕದಲ್ಲಿ ಬ್ಯಾಟಿಂಗ್‌ಗೆ ಬಂದಿದ್ದ ದ್ರಾವಿಡ್ 180 ರನ್ ಕಲೆಹಾಕುವ ಮೂಲಕ ಆಸ್ಟ್ರೇಲಿಯನ್ನರನ್ನು ಕಂಗೆಡಿಸಿದರು.



ಕೋಚಿಂಗ್ ವೃತ್ತಿಜೀವನ

2015ರಲ್ಲಿ ಭಾರತ ಅಂಡರ್-19 ಹಾಗೂ ಭಾರತ ಎ ತಂಡಗಳ ಕೋಚ್ ಆಗಿ ನೇಮಕಗೊಂಡ ಅವರು 2016ರಲ್ಲಿ ವಿಶ್ವಕಪ್ ಫೈನಲ್‌ಗೆ ಮತ್ತು 2018ರಲ್ಲಿ ವಿಶ್ವಕಪ್ ಪ್ರಶಸ್ತಿ ಗೆಲುವಿನತ್ತ ತಂಡ ಮುನ್ನಡೆಸಿದ್ದರು. 2019ರಲ್ಲಿ ಆ ಹುದ್ದೆಯಿಂದ ನಿವೃತ್ತರಾದ ನಂತರ ಕುಟುಂಬಕ್ಕೆ ಹೆಚ್ಚಿನ ಸಮಯ ನೀಡುವ ಉದ್ದೇಶದಿಂದ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. 2021ರಲ್ಲಿ ಭಾರತೀಯ ಹಿರಿಯ ಪುರುಷರ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡರು. ಈ ಅವಧಿಯಲ್ಲಿ ಭಾರತ 2023ರ ಕ್ರಿಕೆಟ್ ವಿಶ್ವಕಪ್ ಫೈನಲ್‌ಗೆ ತಲುಪಿತು ಮತ್ತು 2024ರ ಐಸಿಸಿ ಪುರುಷರ ಟಿ20 ವಿಶ್ವಕಪ್ ಗೆದ್ದು 17 ವರ್ಷಗಳ ಟಿ20 ವಿಶ್ವಕಪ್ ಟ್ರೋಫಿ ಬರವನ್ನು ನೀಗಿಸಿತ್ತು.

ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಸೆಮಿಫೈನಲ್ ಪ್ರವೇಶ

ಇಂಡಿಯನ್ ವೆಲ್ಸ್ ಸೆಮಿಗೇರಿದ ಭಾಂಬ್ರಿ

ಕ್ಯಾಲಿಫೋರ್ನಿಯಾ: ಭಾರತೀಯ ಟೆನಿಸ್ ತಾರೆ ಯೂಕಿ ಭಾಂಬ್ರಿ ಅವರು ಚೊಚ್ಚಲ ಎಟಿಪಿ ಮಾಸ್ಟರ್ಸ್ 1000 ಸೆಮಿಫೈನಲ್‌ಗೇರಿದ ವೈಯಕ್ತಿಕ ದಾಖಲೆ ಬರೆದಿದ್ದಾರೆ. ಇಂಡಿಯನ್ ವೆಲ್ಸ್ ಪುರುಷರ ಡಬಲ್ಸ್‌ನಲ್ಲಿ ಸ್ವೀಡನ್ ಟೆನಿಸಿಗ ಆಂಡ್ರೆ ಗೊರಾನ್ಸನ್ ಜತೆಗೂಡಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಅಲೆಗ್ಸಾಂಡರ್ ಎರ್ಲರ್ ಮತ್ತು ಆಂಡ್ರಿಯಾ ವವಸ್ಸೋರಿ ಅವರ ಆಸ್ಟ್ರಿಯಾ-ಇಟಲಿ ಜೋಡಿಯನ್ನು ನೇರ ಸೆಟ್‌ಗಳಲ್ಲಿ ಸೋಲಿಸಿ ಇಂಡಿಯನ್ ವೆಲ್ಸ್ ನಲ್ಲಿ ನಡೆಯುತ್ತಿರುವ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯ ಸೆಮಿಫೈನಲ್‌ಗೆ ಮೊದಲ ಬಾರಿಗೆ ಪ್ರವೇಶಿಸಿದರು. 33 ವರ್ಷದ ಭಾರತೀಯ ಆಟಗಾರ ಇದಕ್ಕೂ ಮೊದಲು ಎಟಿಪಿ ಮಾಸ್ಟರ್ಸ್ 1000 ಮಟ್ಟದಲ್ಲಿ ಎರಡು ಬಾರಿ ಡಬಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಇದರಲ್ಲಿ ಕಳೆದ ವರ್ಷದ ಇಂಡಿಯನ್ ವೆಲ್ಸ್ ಕ್ವಾರ್ಟರ್ ಫೈನಲ್ ಸೇರಿದೆ. ಕ್ವಾರ್ಟರ್ ಫೈನಲ್‌ನಲ್ಲಿ ಭಾಂಬ್ರಿ ಮತ್ತು ಗೋರಾನ್ಸನ್ ಆಸ್ಟ್ರಿಯಾ-ಇಟಲಿ ಜೋಡಿಯನ್ನು 6-3, 7-6 ನೇರ ಸೆಟ್‌ಗಳಿಂದ ಸೋಲಿಸಿದರು. ಒಂದು ಗಂಟೆ 30 ನಿಮಿಷಕ್ಕಿಂತ ಹೆಚ್ಚು ಕಾಲ ನಡೆದ ಈ ಪಂದ್ಯದಲ್ಲಿ ಭಾರತ-ಸ್ವೀಡನ್ ಪುರುಷರ ಜೋಡಿ ಜಯ ಸಾಧಿಸಿತು. ಭಾರತ-ಸ್ವೀಡನ್ ಜೋಡಿ ತಮ್ಮ



ಮೊದಲ ಸರ್ವ್‌ನಲ್ಲಿ ಪ್ರಾಬಲ್ಯ ಸಾಧಿಸಿ ಶೇ.83 ಅಂಕಗಳನ್ನು (29/35) ಗೆದ್ದರು. ಇದು ಎರಡನೇ ಸೆಟ್‌ನ ಟೈಬ್ರೇಕ್ ಗೆಲ್ಲಲು ಹಾಗೂ ಪಂದ್ಯವನ್ನು ಮುಕ್ತಾಯಗೊಳಿಸಲು ಪ್ರಮುಖ ಕಾರಣವಾಯಿತು. ಸೆಮಿಫೈನಲ್‌ನಲ್ಲಿ ಅವರು ಶುಕ್ರವಾರ ಫ್ರಾನ್ಸ್‌ನ ಆರ್ಥರ್ ರಿಂಡರ್‌ನೆಕ್ ಮತ್ತು ಮೊನಾಕೊದ ವಾಲೆಂಟಿನ್ ವಾಶೆರೋಟ್ ಜೋಡಿಯನ್ನು ಎದುರಿಸಲಿದ್ದಾರೆ.

ರಿಂಡರ್‌ನೆಕ್ ಮತ್ತು ವಾಶೆರೋಟ್ ಕ್ವಾರ್ಟರ್ ಫೈನಲ್‌ನಲ್ಲಿ ರಷ್ಯಾದ ಆಂಡ್ರೆ ರುಬ್ಲೆವ್ ಮತ್ತು ಕರೇನ್ ಖಾಚನೋವ್ ಜೋಡಿಯನ್ನು 6-3, 6-4 ನೇರ ಸೆಟ್‌ಗಳಿಂದ ಸೋಲಿಸಿದ್ದರು.

ಅಲ್ಕರಾಜ್, ಇಗಾ ಕ್ವಾರ್ಟರ್ ಪ್ರವೇಶ

ವಿಶ್ವ ನಂ.1 ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಇಂಡಿಯನ್ ವೆಲ್ಸ್ ನಲ್ಲಿ ತಮ್ಮ ಅಜೇಯ ಗೆಲುವಿನ ಓಟ ಮುಂದುವರಿಸಿದ್ದು, ಬುಧವಾರ ಕ್ವಾರ್ಟರ್ ಫೈನಲ್‌ನಲ್ಲಿ ನಾರ್ವೆ ಆಟಗಾರ ಕ್ಯಾಸ್ಪರ್ ರೂಡ್ ಅವರನ್ನು 6-1, 7-6(2) ಸೆಟ್‌ಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಋತುವಿನ ಸತತ 15ನೇ ಗೆಲುವು ದಾಖಲಿಸಿದ ಅಲ್ಕರಾಜ್, ಇಂಡಿಯನ್ ವೆಲ್ಸ್‌ನಲ್ಲಿ ಸತತ 5ನೇ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಮಹಿಳೆಯರ ಸಿಂಗಲ್ಸ್ ನಾಲ್ಕನೇ ಸುತ್ತಿನಲ್ಲಿ ಜೆಕ್ ಗಣರಾಜ್ಯದ 13ನೇ ಶ್ರೇಯಾಂಕದ ಆಟಗಾರ್ತಿ ಕ್ಯಾರೊಲಿನಾ ಮೂಹೋವ ಅವರನ್ನು 6-2, 6-0 ನೇರ ಸೆಟ್‌ಗಳಿಂದ ಪರಾಭವಗೊಳಿಸಿದ ವಿಶ್ವ ನಂ.2 ಇಗಾ ಸ್ವಿಯಾಟೆಕ್ ಇಂಡಿಯನ್ ವೆಲ್ಸ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.



ಜೊಕೊವಿಚ್ ಮಣಿಸಿ ಸೆಮಿಗೇರಿದ ಡ್ರೇಪರ್!

ಐದು ಬಾರಿಯ ಇಂಡಿಯನ್ ವೆಲ್ಸ್ ಚಾಂಪಿಯನ್ ಸರ್ಬಿಯಾ ತಾರೆ ನೊವಾಕ್ ಜೊಕೊವಿಚ್ ಅವರನ್ನು ಹಾಲಿ ಚಾಂಪಿಯನ್ ಜೇಕ್ ಡ್ರೇಪರ್ ಸೋಲಿಸಿದ್ದಾರೆ. ಜೊಕೊ ಮಣಿಸಿದ ಡ್ರೇಪರ್ ಸೆಮಿಫೈನಲ್‌ಗೇರಿದ್ದಾರೆ. ಬುಧವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಡ್ರೇಪರ್ ಎದುರು 4-6, 6-4, 7-6 (7/5) ಸೆಟ್‌ಗಳ ಅಂತರದಿಂದ ಜೊಕೊವಿಚ್ ಸೋತಿದ್ದಾರೆ. ಭಾರೀ ಪೈಪೋಟಿ ಎದುರಾದ ಮೂರನೇ ಸೆಟ್ ನಲ್ಲಿ ಡ್ರೇಪರ್ ಕೊನೆಗೂ ಮೇಲುಗೈ ಸಾಧಿಸಿದರು.

ಕಿರುಸುದ್ದಿ

ಇಸಿ ದಿನಾಂಕ ಘೋಷಣೆ ಬಳಿಕ ಐಪಿಎಲ್ ಪೂರ್ಣ ವೇಳಾಪಟ್ಟಿ

ಮುಂಬೈ: ಐಪಿಎಲ್ 2026ನೇ ಆವೃತ್ತಿಯ ಮೊದಲ 20 ದಿನಗಳ ವೇಳಾಪಟ್ಟಿಯನ್ನು ಬಿಸಿಸಿಐ ಬುಧವಾರ ಪ್ರಕಟಿಸಿದ್ದು, ವೇಳಾಪಟ್ಟಿ ಪ್ರಕಾರವೇ ಐಪಿಎಲ್ 19ನೇ ಆವೃತ್ತಿ ನಡೆಯಲಿದೆ ಎಂದು ಬಿಸಿಸಿಐ ಉಪಾಧ್ಯಕ್ಷ ರಾಜೀವ್ ಶುಕ್ಲಾ ಗುರುವಾರ ಸ್ಪಷ್ಟವಾಗಿ ಹೇಳಿದ್ದಾರೆ. ಏಪ್ರಿಲ್-ಮೇ ತಿಂಗಳಲ್ಲಿ ಪಂಚ ರಾಜ್ಯಗಳ ಚುನಾವಣೆ ನಡೆಯುವುದರಿಂದ ಚುನಾವಣಾ ದಿನಾಂಕಗಳನ್ನು ಚುನಾವಣಾ ಆಯೋಗವು ಪ್ರಕಟಿಸಿದ ಬಳಿಕ ಬಿಸಿಸಿಐ ಐಪಿಎಲ್ ದ್ವಿತೀಯಾರ್ಧದ ವೇಳಾಪಟ್ಟಿಯನ್ನು ಪ್ರಕಟಿಸಲಿದೆ

ಕೊಹ್ಲಿಗಿದೆ ರನ್ ಹಸಿವು

ಹೊಸದಿಲ್ಲಿ: ಆರ್‌ಸಿಬಿ ತಾರೆ ವಿರಾಟ್ ಕೊಹ್ಲಿ ಈ ಬಾರಿ ಹಿಂದಿಗಿಂತಲೂ ಹೆಚ್ಚಿನ ರನ್ ಹಸಿವಿನಲ್ಲಿ ಬ್ಯಾಟಿಂಗ್ ಪ್ರದರ್ಶನ ನೀಡುವ ಸಾಧ್ಯತೆಯಿದೆ ಎಂದು ಮಾಜಿ ಆಲ್‌ರೌಂಡರ್ ಇರ್ಫಾನ್ ಪಠಾಣ್ ಅಭಿಪ್ರಾಯಿಸಿದ್ದಾರೆ. ಕಳೆದ ಐಪಿಎಲ್ ಆವೃತ್ತಿಯಲ್ಲಿ ಕೊಹ್ಲಿ 15 ಪಂದ್ಯಗಳಿಂದ 657 ರನ್‌ಗಳನ್ನು ದಾಖಲಿಸಿದ್ದಲ್ಲದೆ, ಫೈನಲ್‌ನಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 43 ರನ್ ಹೊಡೆದು ಕಪ್ ಗೆಲ್ಲಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಫೀಫಾ ವಿಶ್ವಕಪ್‌ಗೆ ಇರಾನ್ ಬಹಿಷ್ಕಾರ

ಟೆಹ್ರಾನ್: ಅಮೆರಿಕದ ಸಹ ಆತಿಥ್ಯದ 2026ರ ಫೀಫಾವಿಶ್ವಕಪ್‌ನಲ್ಲಿ ಇರಾನ್ ಭಾಗವಹಿಸಲು ಸಾಧ್ಯವಿಲ್ಲ ಎಂದು ಇರಾನ್ ಕ್ರೀಡಾ ಸಚಿವ ಅಹ್ಮದ್ ಡೊನ್ಯಾಮಲಿ ಬುಧವಾರ ಸ್ಪಷ್ಟಪಡಿಸಿದ್ದಾರೆ. ಅಮೆರಿಕ ನಮ್ಮ ಸರ್ವೋಚ್ಚ ನಾಯಕನನ್ನು ಹತ್ಯೆಗೈದಿದ್ದು, ನಾವು ವಿಶ್ವಕಪ್‌ನಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದಾರೆ. ಅಮೆರಿಕ, ಮೆಕ್ಸಿಕೋ ಮತ್ತು ಕೆನಡಾ ಆತಿಥ್ಯದಲ್ಲಿ ಜೂ.11ರಿಂದ ಜು.19ರವರೆಗೆ ನಡೆಯಲಿದೆ.

ಏಷ್ಯನ್ ಗೇಮ್ಸ್, ವಿದೇಶ ಸ್ಪರ್ಧೆಗಳಿಗಾಗಿ ಧನ ಬೆಂಬಲ

ಟೆನಿಸಿಗರಿಗೆ ಹಣಕಾಸು ನೆರವಿಗೆ ಎಂಒಸಿ ಅಸ್ತು

ಹೊಸದಿಲ್ಲಿ: ಭಾರತೀಯ ತಾರಾ ಟೆನಿಸಿಗರಿಗೆ ಹಣಕಾಸಿನ ನೆರವು ನೀಡಲು ಭಾರತೀಯ ಕ್ರೀಡಾ ಪ್ರಾಧಿಕಾರದ ಅನ್ವಯದಲ್ಲಿ ಮಿಷನ್ ಒಲಿಂಪಿಕ್ ಸೆಲ್ (ಎಂಒಸಿ) ಅನುಮತಿ ನೀಡಿದೆ.

ತಾರಾ ಆಟಗಾರರಾದ ಯೂಕಿ ಭಾಂಬ್ರಿ ಮತ್ತು ಸುಮಿತ್ ನಗಾಲ್ ಅವರಿಗೆ ಹಣಕಾಸಿನ ನೆರವು ನೀಡಲಾಗುವುದು. ಇದಲ್ಲದೆ, ಉದಯೋನ್ಮುಖ ಟೆನಿಸ್ ಪ್ರತಿಭೆ ಧಕ್ಷಿಣೇಶ್ವರ್ ಸುರೇಶ್ ಅವರನ್ನು ಟಾರ್ಗೆಟ್ ಏಷ್ಯನ್ ಗೇಮ್ಸ್ ಗ್ರೂಪ್ (ಟಿಎಜಿಜಿ) ಪಟ್ಟಿಗೆ ಸೇರಿಸಲು ಎಂಒಸಿ ಶಿಫಾರಸು ಮಾಡಿದೆ.

ಏಷ್ಯನ್ ಗೇಮ್ಸ್ 2026 ಮತ್ತು ಡೇವಿಸ್ ಕಪ್ 2026ರ ಅರ್ಹತಾ ಸುತ್ತಿನ ದ್ವಿತೀಯಾರ್ಧ ಹಂತವನ್ನು ಗಮನದಲ್ಲಿಟ್ಟು ಭಾರತೀಯ ಟೆನಿಸ್ ಆಟಗಾರರಿಗೆ ಹಣಕಾಸಿನ ನೆರವು ನೀಡಲು ಎಂಒಸಿ ಅನುಮತಿ ನೀಡಿದೆ.

ಭಾಂಬ್ರಿಗೆ 29.89 ಲಕ್ಷ ರೂ. ನೆರವು: ಪ್ರಸ್ತುತ ಇಂಡಿಯನ್ ವೆಲ್ಸ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದ ಭಾಂಬ್ರಿ ಅವರಿಗೆ ತರಬೇತಿ ಮತ್ತು 2026ರಲ್ಲಿ ಫೆಬ್ರವರಿಯಿಂದ ಸೆಪ್ಟೆಂಬರ್ ನೊಳಗಿನ ಸ್ಪರ್ಧೆಗಳಲ್ಲಿ ಭಾಗವಹಿಸಲು 29.89 ಲಕ್ಷ ರೂ. ಹಣಕಾಸು ನೆರವು ನೀಡಲು ಎಂಒಸಿ ಅನುಮತಿ ನೀಡಿದೆ. ಈ ಅವಧಿಯಲ್ಲಿ ಭಾಂಬ್ರಿ 33 ವಾರಗಳ (231 ದಿನಗಳ) ನಿರಂತರ ಎಟಿಪಿ ಮತ್ತು ಗ್ರ್ಯಾಂಡ್ ಸ್ಲಾಮ್ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ನಗಾಲ್‌ಗೆ 27.51 ಲಕ್ಷ ರೂ. ನೆರವು: ನ್ಯೋರ್ವ ತಾರೆ ಸುಮಿತ್ ನಗಾಲ್ ಅವರು 2026ರ ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳೊಳಗಿನ ಅಂತಾರಾಷ್ಟ್ರೀಯ ಪಂದ್ಯಗಳ ತರಬೇತಿ ಮತ್ತು ಹಲವು ಸ್ಪರ್ಧೆಗಳಿಗೆ ಹಣಕಾಸಿನ ನೆರವು



ನೀಡಲು ಎಂಒಸಿ ಅನುಮತಿಸಿದೆ. ಇವುಗಳಲ್ಲಿ ಎಟಿಪಿ ಚಾಲೆಂಜರ್, ಎಟಿಪಿ ಟೂರ್, ಎಟಿಪಿ ಮಾಸ್ಟರ್ಸ್ 1000 ಪಂದ್ಯಾವಳಿ ಮತ್ತು ಫ್ರೆಂಚ್ ಓಪನ್, ವಿಂಬಲ್ಡನ್, ಯುಎಸ್ ಓಪನ್‌ನಂತಹ ಗ್ರ್ಯಾಂಡ್ ಸ್ಲಾಮ್, ಡೇವಿಸ್ ಕಪ್ ದ್ವಿತೀಯಾರ್ಧ ಮತ್ತು ಏಷ್ಯನ್ ಗೇಮ್ಸ್ ಟೂರ್ನಿಗಳು ಒಳಗೊಂಡಿವೆ.

ಧಕ್ಷಿಣೇಶ್ವರ್‌ಗೆ ಬೆಂಬಲ ನೀಡಲು ಶಿಫಾರಸು: 2011ರ ಬಳಿಕ ಮೊದಲ ಬಾರಿಗೆ ಡೇವಿಸ್ ಕಪ್ ವಿಶ್ವಮಟ್ಟದ ಪಂದ್ಯಾವಳಿ ಅರ್ಹತೆ ಸಂಪಾದಿಸುವಲ್ಲಿ ಪ್ರಮುಖ ಗೆಲುವಿನ ರೂವಾರಿಯಾದ ಉದಯೋನ್ಮುಖ ಪ್ರತಿಭೆ ಧಕ್ಷಿಣೇಶ್ವರ್ ಸುರೇಶ್ ಅವರನ್ನು ಏಷ್ಯನ್ ಗೇಮ್ಸ್ ಪ್ರತಿಭೆಗಳಲ್ಲಿ ಸೇರಿಸಿಕೊಳ್ಳಲು ಎಂಒಸಿ ಶಿಫಾರಸು ಮಾಡಿದೆ. ಕಳೆದ ತಿಂಗಳು ನೆದರ್‌ಲೆಂಡ್ಸ್‌ನಲ್ಲಿ ನಡೆದಿದ್ದ ಡೇವಿಸ್ ಕಪ್ ಅರ್ಹತಾ ಸುತ್ತಿನಲ್ಲಿ ಭಾರತದ ಎಲ್ಲಾ ಮೂರು ಗೆಲುವಿನಲ್ಲಿ ಧಕ್ಷಿಣೇಶ್ವರ್ ಪ್ರಮುಖ ಪಾತ್ರ ವಹಿಸಿದ್ದರು. 88ನೇ ಮತ್ತು 162ನೇ ಶ್ರೇಯಾಂಕದ ಆಟಗಾರರ ವಿರುದ್ಧ ಪುರುಷರ ಸಿಂಗಲ್ಸ್ ಪಂದ್ಯಗಳನ್ನು ಗೆದ್ದ ಸುರೇಶ್, ಭಾಂಬ್ರಿ ಜತೆಗೂಡಿ ನಿರ್ಣಾಯಕ ಡಬಲ್ಸ್ ಪಂದ್ಯವನ್ನು ಗೆಲ್ಲಿಸಿಕೊಟ್ಟಿದ್ದರು.

ಸತತ ಪ್ರಶಸ್ತಿ ಗೆಲ್ಲುವ ಒತ್ತಡ ಪಾಟಿದಾರ್‌ಗಿದೆ

ಹೊಸದಿಲ್ಲಿ: ಕಳೆದ ಬಾರಿಯ ಐಪಿಎಲ್‌ನಲ್ಲಿ ಚೊಚ್ಚಲ ಪ್ರಶಸ್ತಿಯನ್ನು ಗೆಲ್ಲಿಸಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ, ವಿರಾಟ್ ಕೊಹ್ಲಿ ಹಾಗೂ ಆರ್‌ಸಿಬಿ ಅಭಿಮಾನಿಗಳ



18 ವರ್ಷಗಳ ಕನಸು ನನಸಾಗಿಸಿದ ನಾಯಕ ರಜತ್ ಪಾಟಿದಾರ್ ಮೇಲಿನ ಒತ್ತಡದ ಕುರಿತು ಮಾಜಿ ಕ್ರಿಕೆಟಿಗ ಕನ್ನಡಿಗ ಅನಿಲ್ ಕುಂಬ್ಳೆ ಮಾತನಾಡಿದ್ದಾರೆ. ಈ ಬಾರಿ ಆರ್‌ಸಿಬಿ ಟ್ರೋಫಿಯನ್ನು ತಮ್ಮಲ್ಲೇ ಉಳಿಸಿಕೊಳ್ಳಬೇಕೆಂಬ ನಿರೀಕ್ಷೆಗಳು ಇರುವುದರಿಂದ ನಾಯಕ ರಜತ್ ಪಾಟಿದಾರ್ ಮೇಲೆ ಬಹಳ ಒತ್ತಡವಿರಲಿದೆ ಎಂದು ಅನಿಲ್ ಕುಂಬ್ಳೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಪಾಕಿಸ್ತಾನಿ ಆಟಗಾರನ ಖರೀದಿಸಿ ಕಾವ್ಯಾ ಮಾರನ್ ಉದ್ಧಟತನ


ಲಂಡನ್: ಈವರೆಗೂ ಜಾಗತಿಕ ಟಿ20 ಪಂದ್ಯಾವಳಿಗಳಲ್ಲಿ ಭಾರತೀಯ ಮಾಲೀಕತ್ವದ ಯಾವುದೇ ಫ್ರಾಂಚೈಸಿಗಳಲ್ಲಿ ಪಾಕಿಸ್ತಾನಿ ಆಟಗಾರರನ್ನು ಖರೀದಿಸಬಾರದೆಂಬ ನಿಯಮಗಳ ಹೊರತಾಗಿಯೂ ಸನ್‌ರೈಸರ್ಸ್ ಹೈದರಾಬಾದ್ ಐಪಿಎಲ್ ಫ್ರಾಂಚೈಸಿ ಮಾಲಕಿ ಕಾವ್ಯಾ ಮಾರನ್ ತಮ್ಮ ಸನ್‌ರೈಸರ್ಸ್



ಲೀಡ್ಸ್ ದಿ ಹಂಡ್ರೆಡ್ ಫ್ರಾಂಚೈಸಿಯಲ್ಲಿ ಪಾಕ್ ಆಟಗಾರನಿಗೆ ಮಣೆ ಹಾಕಿ ಉದ್ಧಟತನ ಮೆರೆದಿದ್ದಾರೆ. ಇತ್ತೀಚೆಗೆ ಜಾಗತಿಕ ಟಿ20 ಲೀಗ್‌ಗಳಲ್ಲಿ ಪಾಕಿಗಳನ್ನು ಖರೀದಿ ಮಾಡಬಾರದೆಂಬ ಸ್ವಯಂಪ್ರೇರಿತ ನಿಲುವು ಭಾರತೀಯ ಮೂಲದ ಫ್ರಾಂಚೈಸಿಗಳು ತೆಗೆದುಕೊಂಡಿದ್ದವು. ಇಂಗ್ಲೆಂಡ್‌ನ ದಿ ಹಂಡ್ರೆಡ್ ಪಂದ್ಯಾವಳಿಯ ಪುರುಷರ ಹರಾಜಿನ ವೇಳೆ ಪಾಕ್ ಸ್ಪಿನ್ನರ್ ಅಬ್ರಾರ್ ಅಹ್ಮದ್ ಅವರನ್ನು ಕಾವ್ಯಾ ಮಾಲಕತ್ವದ ಸನ್‌ರೈಸರ್ಸ್ ಲೀಡ್ಸ್ ಫ್ರಾಂಚೈಸಿ ಬರೋಬ್ಬರಿ 2.34 ಕೋಟಿ ರೂ. ಬೆಲೆಗೆ ಖರೀದಿ ಮಾಡಿರುವುದು ಆಘಾತಕಾರಿ ಬೆಳವಣಿಗೆಯಾಗಿದೆ. ಸನ್‌ರೈಸರ್ಸ್ ಹೈದರಾಬಾದ್ ಮತ್ತು ಲೀಡ್ಸ್ ಫ್ರಾಂಚೈಸಿಗಳು ಸನ್ ಗ್ರೂಪ್‌ಗೆ ಸೇರಿದ್ದು, ಕಲಾನಿಧಿ ಮಾರನ್ ಅವರ ಪುತ್ರಿ, ಸಿಇಒ ಕಾವ್ಯಾ ಮಾರನ್ ಮುನ್ನಡೆಸುತ್ತಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5922

ಎಡದಿಂದ ಬಲಕ್ಕೆ
1.ನಗದ ನಡುವೆ ನರ್ತಕನಿದ್ದಾನೆ (4)
3. ಇದು ಸಿನಿಮಾದ ವಸ್ತು (4)
5.ನೀರಿನ ಓಟವಿಲ್ಲಿ ತಿರುಗಿದೆ (3)
6.ಹೊಸತು ಮೊದಲಿರುವ ಸಿರಿಧಾನ್ಯ (3)
8.ಇದು ಸಾರಿಗೆ ಸಾಧನ (3)
10.ಈತ ರಥದ ಚಾಲಕ (3)
11.ಹಳದಿಯನ್ನು ಕೇಳಿ ಪಡೆದ ಗೆಳತಿ (3)
15.ರಾಮನ ಬರುವಿಕೆಗಾಗಿ ಕಾದವಳು (3)
16.ಇದು ಚಿತ್ತಕ್ಕಿರುವ ಶಕ್ತಿ (4)
17.ದಾಹ ತಣಿಸಿದ ನದಿ (4)

ಮೇಲಿನಿಂದ ಕೆಳಕ್ಕೆ
1.ಹೊಸದಾಗಿ ನಿರ್ಮಿಸಿದ ತೋಟ (4)
2.ಆವುಗಳಿಗೆ ಕಾಣಿಸಿದ ಹಲ್ಲಿ (3)
3.ಹಳೆಯ ಕತ್ತಿಯ ಪಕ್ಕದಲ್ಲಿರುವ ತುತ್ತೂರಿ (3)
4.ಸರಳುಗಳಿಂದ ಮಾಡಿದ ಕಟ್ಟೆ (4)
7.ಪ್ರಾಣ ತಿರುಗಿಸಿಕೊಂಡು ಮಂತ್ರಿಯಾದ (3)
9.ನವರತ್ನಗಳಲ್ಲೊಂದಾದ ಕೆಂಪುಮಣಿ (3)
10.ಸಾರ್ವಜನಿಕವಾಗಿ ಕಾಣಿಸಿಕೊಂಡ ಚಕ್ರವರ್ತಿ (4)
12.ದೇವರು ಹೇಳುವ ಶ್ರೇಷ್ಠಮಾತು (4)
13.ಕುಶನ ಕುಲದವರಿಗೆ ಹೇಳಿದ ಕ್ಷೇಮಸಮಾಚಾರ (3)
14.ತುಂಬ ಚೂಪಾಗಿರುವಂಥಾದ್ದು(3)

5921 ಉತ್ತರ

ಎಡದಿಂದ ಬಲಕ್ಕೆ:
1.ವಿರಾಮ 4.ಹಪ್ಪಳ
5.ಕಡವಕತ್ತಿ 6.ಕೇಂಕರ
7.ಸದರ 9.ಪಾಯಸ
10.ಸುಜಲ
12.ಅರಸು 14.ಭವನ
15.ಸುಗಂಧದ್ರವ್ಯ
16.ಪತ್ತಾರ 17.ತೆರವು

ಮೇಲಿನಿಂದ ಕೆಳಕ್ಕೆ :
2.ಮಕರ 3.ತಾಪತ್ರಯ
4.ಹತ್ತಿರ 6.ಕೇಂದ್ರೀಕರಿಸು
8.ಸಹಜೀವನ 11.ಅಸುರ
14.ಭವ್ಯತೆ

ಕೆಸಿಡಿ ಮೈದಾನದಲ್ಲಿ ಕುಸ್ತಿ ಹಬ್ಬ | ತೂಕದ ಆಧಾರದಡಿ ಸ್ಪರ್ಧೆಗಳು ಅಣಿ

ಧಾರವಾಡದಲ್ಲಿ ಜಂಗಿ ಕುಸ್ತಿಗೆ ಅಖಾಡ ಸಿದ್ಧ

ಮಹಾಂತೇಶ ಕಣವಿ

ಧಾರವಾಡ: ಕುಸ್ತಿ ಕರ್ನಾಟಕ ಮತ್ತು ಮಹಾರಾಷ್ಟ್ರದ ಜನಪ್ರಿಯ ಕ್ರೀಡೆ. ರಾಜ-ಮಹಾರಾಜರ ಪ್ರೋತ್ಸಾಹದಿಂದ ಅಂತಾರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿ ಪಡೆದ ಕುಸ್ತಿಯಲ್ಲಿ ದಂಗಲ್, ಬಯಲು, ಜಂಗಿ ಕುಸ್ತಿ, ಗರಡಿ ಕುಸ್ತಿ ಹೀಗೆ ಹಲವಾರು ವಿಧಗಳುಂಟು. ಈ ದೇಶೀಯ ಕ್ರೀಡೆಯನ್ನು ಪ್ರೋತ್ಸಾಹಿಸಲು ಪ್ರಧಾನಿ ನರೇಂದ್ರ ಮೋದಿ ಅವರ ಖೇಲೋ ಇಂಡಿಯಾ ಹಾಗೂ ಫಿಟ್ ಇಂಡಿಯಾ ಯೋಜನೆ ಅನ್ವಯ ಮಾ.13 ಮತ್ತು 14ರಂದು ಧಾರವಾಡ ಕೆಸಿಡಿ ಮೈದಾನದಲ್ಲಿ ಹಮ್ಮಿಕೊಂಡ ತೂಕದ ಜಂಗಿ ಕುಸ್ತಿಗೆ ಅಖಾಡ ಸಿದ್ಧಗೊಂಡಿದೆ.

ಒಲಿಂಪಿಕ್ಸ್ ಮಾದರಿ: ಮಾ.13ರಂದು ಮಣ್ಣಿನ ಮೇಲೆಯೇ ಮ್ಯಾಟ್ ಹಾಕಿ, ಒಲಿಂಪಿಕ್ಸ್ ನಿಯಮಗಳ ಅನ್ವಯ ಕುಸ್ತಿ ಸ್ಪರ್ಧೆಗಳು ನಡೆದರೆ, ಮಾ.14ರ ಭಾರತೀಯ ಶೈಲಿ ಮಣ್ಣಿನ ಕುಸ್ತಿ ಸ್ಪರ್ಧೆಗೆ ಬರೋಬ್ಬರಿ 200 ಕೆ.ಜಿ. ವಿವಿಧ ಚೆಂಡುಹೂ ಹಾಕಿ ಅಖಾಡವನ್ನು ಪುನಃ



ನಿರ್ಮಿಸಲಿದೆ.

150 ಪೈಲ್ವಾನರು ಭಾಗಿ: ಧಾರವಾಡ ಸಂಸದರ ಕ್ರೀಡಾ ಉತ್ಸವದ ಪ್ರಯುಕ್ತ ನಡೆಯುವ ಕುಸ್ತಿಯಲ್ಲಿ 150ಕ್ಕೂ ಅಧಿಕ ಪೈಲ್ವಾನರು ಪಾಲ್ಗೊಳ್ಳಲಿದ್ದು, ಹರ್ಯಾಣ, ಮಹಾರಾಷ್ಟ್ರ, ಕರ್ನಾಟಕದ ವಿವಿಧ ಜಿಲ್ಲೆಗಳ ಹೆಸರಾಂತ ಪೈಲ್ವಾನರು ಈ ಜಂಗಿ ಕುಸ್ತಿ ಅಖಾಡದಲ್ಲಿ ಸೆಣಸಲು ಸಜ್ಜಾಗಿದ್ದಾರೆ.

ಅಖಾಡದ ವಿಶೇಷತೆ: ಶಾಸ್ತ್ರೋಕ್ತವಾಗಿಯೇ 12X12 ಅಳತೆಯ ವೃತ್ತಾಕಾರದ ಕೆಂಪು ಮಣ್ಣಿನ ಅಖಾಡ ಸಿದ್ಧಪಡಿಸಿದೆ. ಅನುಭವಿ ಪೈಲ್ವಾನರು, ಎರಡು ದಿನ ಅಖಾಡ ಸಿದ್ಧತೆ ಮಾಡಿದ್ದಾರೆ. ಮೈದಾನದ ಸುತ್ತಲೂ 1000 ಆಸನಗಳಿಂದ ಕೂಡಿದ ಪ್ರೇಕ್ಷಕರ ಗ್ಯಾಲರಿ, ಬ್ಯಾರಿಕೇಡ್ ವ್ಯವಸ್ಥೆ ಮಾಡಲಾಗಿದೆ.

ರೂ.3 ಲಕ್ಷ ಇನಾಮು: 17 ವರ್ಷಗೊಳಗೆ ಮತ್ತು ಮೇಲ್ಪಟ್ಟ ಪುರುಷ ಹಾಗೂ ಬಾಲಕರ ವಿಭಾಗದಲ್ಲಿ ತೂಕದ ಆಧಾರದಡಿ ಹಾಗೂ ಪುರುಷರ ಸೀನಿಯರ್ ವಿಭಾಗದ ಸ್ಪರ್ಧೆಗಳು ನಡೆಯಲಿವೆ. ವಿಜೇತರಿಗೆ ವಿಭಾಗವಾರು ಸೇರಿ 30 ಲಕ್ಷ ರೂ. ನಗದು ಬಹುಮಾನ ಸಹ ಘೋಷಿಸಿದೆ.

ದಿಗ್ಗಜ ಪೈಲ್ವಾನರು

ಅಂತಾರಾಷ್ಟ್ರೀಯ ಕುಸ್ತಿಪಟು ಮಿರ್ಜಾ ಇರಾನ್ ಮತ್ತು ಹರ್ಯಾಣದ ಪುಷ್ಪೇಂದ್ರ, ದಸರಾ ಕಂಠೀರವ ಖ್ಯಾತಿಯ ಶಿವಯ್ಯ ಪೂಜಾರಿ ಹಾಗೂ ಕಾಮೇಶ ಪಾಟೀಲ, ಉಪಕರ್ನಾಟಕ ಕೇಸರಿ ಖ್ಯಾತಿ ಶಿವಾನಂದ ದಡ್ಡಿ ಹಾಗೂ ಮಹಾರಾಷ್ಟ್ರದ ಪ್ರದೀಪ ಠಾಕೂರ ಹೀಗೆ ಹರ್ಯಾಣ, ಕರ್ನಾಟಕ, ಮಹಾರಾಷ್ಟ್ರದ ದಿಗ್ಗಜ ಪೈಲ್ವಾನರು ಈ ಕುಸ್ತಿಗೆ ಮೆರುಗು ತರುವುದು ವಿಶೇಷ.

ವಿಶೇಷ ಸೂಚನೆಗಳು

ಕೊಕ್ಕರೆ, ಗದ್ದಾಲೋಡ ಅಪಾಯಕಾರಿ ಡಾವು ಮಾಡಬಾರದು. ಚಡ್ಡಿ ಹಿಡಿಯುವ ಕರಾರು ಇರುತ್ತದೆ. ಜೋಡಿ ಬಾರದೆ, ಇದ್ದಲ್ಲಿ ನಗದು ಬಹುಮಾನ ಸಿಗುವುದಿಲ್ಲ. ಪಂಚರ ನಿರ್ಣಯವೇ ಅಂತಿಮ. ಕುಸ್ತಿ ಪಟುಗಳು ಬ್ಯಾಂಕ್ ಪಾಸ್‌ಬುಕ್ ಪ್ರತಿ ತರುವುದು ಕಡ್ಡಾಯ.

"ಧಾರವಾಡದಲ್ಲಿ ಕುಸ್ತಿಗೆ ಸುದೀರ್ಘ ಇತಿಹಾಸವಿದೆ. ಯುವ ಪೀಳಿಗೆಗೆ ದೇಶಿ ಕ್ರೀಡೆಯ ಬಗ್ಗೆ ಆಸಕ್ತಿ ಮೂಡಿಸಲು ಮಣ್ಣಿನ ಕುಸ್ತಿ ಆಯೋಜಿಸಿದೆ. ಸ್ಪರ್ಧೆಯಲ್ಲಿ 140ಕ್ಕೂ ಹೆಚ್ಚು ಮಲ್ಲರು ಪಾಲ್ಗೊಳ್ಳಲಿದ್ದಾರೆ.
■ ಅಮೃತ ದೇಸಾಯಿ, ಬಿಜೆಪಿ ಮಾಜಿ ಶಾಸಕ

"ಉತ್ತರ ಕರ್ನಾಟಕ ಕುಸ್ತಿಗೆ ಹೆಸರುವಾಸಿ. ಎರಡು ದಿನದ ಕ್ರೀಡಾ ಹಬ್ಬದಲ್ಲಿ ಮಕ್ಕಳ ಮಣ್ಣಿನ ಪೌರುಷದ ಆಟ ಕಣ್ತುಂಬಿಕೊಳ್ಳಲಿದ್ದು, ಈ ಜಂಗಿ ಕುಸ್ತಿಗೆ ಅಖಾಡವೂ ಸಿದ್ಧಗೊಂಡಿದೆ.
■ ಈರೇಶ ಅಂಚಟಗೇರಿ, ಮಾಜಿ ಮೇಯರ್, ಹು-ಧಾ ಮಹಾನಗರ ಪಾಲಿಕೆ

ರಾಷ್ಟ್ರಧ್ವಜವನ್ನು ಅವಮಾನಿಸಿದ ಆರೋಪ

ಪಾಂಡ್ಯ ವಿರುದ್ಧ ದೂರು ದಾಖಲು!

ಪುಣೆ: ಭಾರತದ ಟಿ20 ವಿಶ್ವಕಪ್ ಸಂಭ್ರಮಾಚರಣೆಯು ಕಾನೂನು ವಿವಾದಕ್ಕೆ ಕಾರಣವಾಗಿದೆ. ಪುಣೆಯ ವಕೀಲೊಬ್ಬರು ಮೈದಾನದಲ್ಲಿನ ಸಂಭ್ರಮಾಚರಣೆಯ ವೇಳೆ ಹಾರ್ದಿಕ್ ಪಾಂಡ್ಯ ರಾಷ್ಟ್ರಧ್ವಜವನ್ನು ಅವಮಾನಿಸಿದ್ದಾರೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ಈ ಘಟನೆಯ ಕುರಿತು ಎಫ್‌ಐಆರ್ ದಾಖಲಿಸಲು ಪೊಲೀಸರಿಗೆ ಅವರು ಮನವಿ ಮಾಡಿದ್ದಾರೆ. ಐಸಿಸಿ ಪುರುಷರ ಟಿ20 ವಿಶ್ವಕಪ್ 2026 ಗೆದ್ದ ನಂತರ ನಡೆದ ಸಂಭ್ರಮಾಚರಣೆಯ ವೇಳೆ ರಾಷ್ಟ್ರಧ್ವಜವನ್ನು



ಅವಮಾನಿಸಿದ್ದರೆಂದು ಆರೋಪಿಸಿ ಹಾರ್ದಿಕ್ ಪಾಂಡ್ಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಪುಣೆ ಮೂಲದ ವಕೀಲರು ದೂರು ನೀಡಿದ್ದಾರೆ. ಘಟನೆಯ ಬಗ್ಗೆ ಎಫ್‌ಐಆರ್ ದಾಖಲಿಸುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ. ವಕೀಲ ವಾಜಿದ್ ಖಾನ್ ಪುಣೆಯ ಶಿವಾಜಿ ನಗರ ಪೊಲೀಸ್ ಠಾಣೆಯಲ್ಲಿ ಸಲ್ಲಿಸಿದ್ದಾರೆ. ಭಾನುವಾರ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ತಂಡವನ್ನು ಸೋಲಿಸಿದ ನಂತರ ಮೈದಾನದಲ್ಲಿ ತನ್ನ ಗೆಳತಿ ಮಹಿಕಾ ಶರ್ಮಾ ಅವರೊಂದಿಗೆ ಸಂಭ್ರಮಾಚರಣೆ ನಡೆಸುವ ವೇಳೆ ಪಾಂಡ್ಯ ತ್ರಿವರ್ಣ ಧ್ವಜವನ್ನು ತನ್ನ ದೇಹದ ಮೇಲೆ ಹೊದಿಕೊಂಡಿದ್ದರು ಎಂದು ಅವರು ಆರೋಪಿಸಿದ್ದಾರೆ. ಹಾರ್ದಿಕ್ ತನ್ನ ಗೆಲುವಿನ ಸಂಭ್ರಮದಲ್ಲಿ ತನ್ನ ಗೆಳತಿಯೊಂದಿಗೆ ನೃತ್ಯ ಮಾಡುತ್ತಿದ್ದರು. ರಾಷ್ಟ್ರಧ್ವಜವನ್ನು ಬೆನ್ನಿಗೆ ಕಟ್ಟಲಾಗಿತ್ತು. 1971ರ ರಾಷ್ಟ್ರಧ್ವಜ ಕಾಯ್ದೆಯ ಸೆಕ್ಷನ್ 2ರ ಪ್ರಕಾರ, ನಾವು ರಾಷ್ಟ್ರಧ್ವಜದ ಗೌರವವನ್ನು ಕಾಪಾಡಬೇಕು. ಆದರೆ ಪಾಂಡ್ಯ ತಮ್ಮ ಗೆಲುವಿನ ಸಂಭ್ರಮದಲ್ಲಿ ಅಷ್ಟಾಗಿ ಮುಳುಗಿಹೋಗಿದ್ದು, ತಮ್ಮ ಗೆಳತಿಯೊಂದಿಗೆ ರಾಷ್ಟ್ರಧ್ವಜವನ್ನು ಧರಿಸಿಕೊಂಡೇ ವೇದಿಕೆಯಲ್ಲಿ ಮಲಗಿದ್ದರು. ನನ್ನ ಅಭಿಪ್ರಾಯದಲ್ಲಿ ಇದು ರಾಷ್ಟ್ರಧ್ವಜಕ್ಕೆ ಅವಮಾನವಾಗಿದೆ ಎಂದು ಖಾನ್ ಆರೋಪಿಸಿದ್ದಾರೆ.

ಕಿರುಸುದ್ದಿ

ಗೂಂಡಾ ಆ್ಯಕ್ಟ್ ಪ್ರಕಾರ ಹಲವು ಪ್ರಕರಣಗಳ ಆರೋಪಿ ಸೆರೆ

ಕಾಸರಗೋಡು: ಗೂಂಡಾ ಆ್ಯಕ್ಟ್ ಪ್ರಕಾರ ಹಲವು ಪ್ರಕರಣಗಳ ಆರೋಪಿಯನ್ನು ವಿದ್ಯಾನಗರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಎಸ್.ಅನೂಬ್ ಬಂಧಿಸಿದ್ದಾರೆ. ಮಧೂರು ಶಿರಿಬಾಗಿಲು ಬಿಆರ್‌ಎಂ ಹೌಸ್‌ನ ಅಬೂಬಕ್ಕರ್ ಸಿದ್ದಿಕ್ ಬಿ.ಎ.(31) ಬಂಧಿತ ಆರೋಪಿಯಾಗಿದ್ದಾನೆ. ವಿದ್ಯಾನಗರ, ಕಾಸರಗೋಡು, ಬದಿಯಡ್ಕ ಮತ್ತು ಆದೂರು ಪೊಲೀಸ್ ಠಾಣೆಗಳಲ್ಲಿ ಆತನ ವಿರುದ್ಧ ಹಲವು ಕೇಸುಗಳಿವೆ. ಆದರಲ್ಲಿ ಮಾದಕದ್ರವ್ಯ ಪ್ರಕರಣಗಳೂ ಒಳಗೊಂಡಿವೆಯೆಂದು ಪೊಲೀಸರು ತಿಳಿಸಿದ್ದಾರೆ. ಪ್ರಕರಣವೊಂದಕ್ಕೆ ಸಂಬಂಧಿಸಿ ಈ ಹಿಂದೆ ಬಂಧಿತನಾದ ಆರೋಪಿ ಕಾಸರಗೋಡು ಸಬ್ ಜೈಲಿನಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ವೇಳೆ ಆತನ ವಿರುದ್ಧ ಗೂಂಡಾ ಆ್ಯಕ್ಟ್ ಹೇರಿ ಅದಕ್ಕೆ ಸಂಬಂಧಿಸಿ ಆತನನ್ನು ಕಾಸರಗೋಡು ಸಬ್ ಜೈಲಿನಿಂದ ಕಣ್ಣೂರು ಸೆಂಟ್ರಲ್ ಜೈಲಿಗೆ ಕಳುಹಿಸಲಾಗಿತ್ತು.

ಸುಳ್ಯ ಸರಕಾರಿ ಡಿಗ್ರಿ ಕಾಲೇಜ್ ಉಪನ್ಯಾಸಕ ಕುಸಿದು ಬಿದ್ದು ಮೃತ್ಯು

ಸುಳ್ಯ: ಸುಳ್ಯ ಡಿಗ್ರಿ ಕಾಲೇಜ್ ಕನ್ನಡ ಸಹಾಯಕ ಪ್ರಾಧ್ಯಾಪಕ ಮೈಸೂರು ಕೆ.ಆರ್ ನಗರದ ಬೇರ್ಯ ಮೂಲದ ಮಂಜು ಪಿ.(40) ಗುರುವಾರ ಮಧ್ಯಾಹ್ನ ತೀವ್ರ ಅಸ್ವಸ್ಥರಾಗಿ ಮೆಡಿಕಲ್ ಬಳಿಯಲ್ಲಿ ಕುಸಿದು ಬಿದ್ದು ಮೃತಪಟ್ಟ ಘಟನೆ ವರದಿಯಾಗಿದೆ. ಮೃತರು ಸುಳ್ಯದ ಸರಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಮುಂಜಾನೆಯಿಂದ ಮಧ್ಯಾಹ್ನ ತನಕ ತರಗತಿ ನಡೆಸಿ ಬಳಿಕ ತಲೆನೋವು ಎಂದು ಕೃತಿಕ್ ಎಂಬ ವಿದ್ಯಾರ್ಥಿ ಬಳಿಯಲ್ಲಿ ಹೇಳಿದ್ದು, ಆತ ಉಪನ್ಯಾಸಕರನ್ನು ಅವರ ರೂಮಿಗೆ ಕರೆ ತಂದಿದ್ದು ಬಳಿಕ ವಿಶ್ರಾಂತಿ ಪಡೆಯುವುದಾಗಿ ತಿಳಿಸಿದ್ದರು. ಆ ಬಳಿಕ ವಿಪರೀತ ನೋವು ಕಾಣಿಸಿದ ಹಿನ್ನಲೆಯಲ್ಲಿ ಸ್ಥಳೀಯ ಖಾಸಗಿ ಮೆಡಿಕಲ್‌ಗೆ ತೆರಳಿ ಔಷಧ ಖರೀದಿಸಲು ಬಂದಾಗ ಅಲ್ಲೆ ಕುಸಿದು ಬಿದ್ದಿದ್ದು ಅವರನ್ನು ಸ್ಥಳೀಯ ಮೆಡಿಕಲ್ ಹಾಗೂ ಸಾರ್ವಜನಿಕರು ಆಸ್ಪತ್ರೆಗೆ ದಾಖಲಿಸಿದ್ದು ಆ ವೇಳೆಗಾಗಲೇ ಅವರು ಹೃದಯಘಾತದಿಂದ ಮೃತಪಟ್ಟಿದ್ದರು.



ಮೃತರು ಈ ಹಿಂದೆ ಮೈಸೂರು ಜಿಲ್ಲೆ ಕೆ.ಆರ್. ನಗರದಲ್ಲಿ ಪ್ರೌಢ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ಬಳಿಕ 2024ರ ನವಂಬರ್‌ನಲ್ಲಿ ಸುಳ್ಯದ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹ ಪ್ರಾಧ್ಯಾಪಕರಾಗಿ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸುತ್ತಿದ್ದರು. ಮೃತರು ಪತ್ನಿ ಪವಿತ್ರ ಹಾಗೂ ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು, ಕಚೇರಿ ಸಿಬ್ಬಂದಿ ಹಾಗೂ ವಿಧ್ಯಾರ್ಥಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಬಂಧಿಸಲು ಬಂದ ಪೊಲೀಸರ ಮೇಲೆ ವಾರಂಟ್ ಆರೋಪಿ ಹಲ್ಲೆ

ಬ್ರಹ್ಮಾವರ: ಬಾಕಿ ಇರುವ ವಾರಂಟ್ ಜಾರಿಗೊಳಿಸಲು ತೆರಳಿದ ಪೊಲೀಸರ ಮೇಲೆ ಆರೋಪಿ ಹಲ್ಲೆ ನಡೆಸಿ, ಇಲಾಖೆಯ ವಾಕಿಟಾಕಿಯನ್ನು ಹಾನಿಗೊಳಿಸಿ ಜೀವ ಬೆದರಿಕೆ ಹಾಕಿದ ಘಟನೆ ಬ್ರಹ್ಮಾವರ ಪೊಲೀಸ್ ಠಾಣಾ ವ್ಯಾಪ್ತಿಯ ಉಪ್ಪೂರು ಗ್ರಾಮದ ಲಕ್ಷ್ಮೀನಗರದಲ್ಲಿ ನಡೆದಿದೆ.

ಮಲ್ಪೆ ಪೊಲೀಸ್ ಠಾಣೆಯ ಹೆಡ್ ಕಾನ್ಸಟೇಬಲ್ ಸುರೇಶ್ ಕುಮಾರ್, ಮಲ್ಪೆ ವೃತ್ತ ನಿರೀಕ್ಷಕರ ಆದೇಶದಂತೆ ಬಾಕಿ ಇರುವ ವಾರಂಟ್ ಜಾರಿಗಾಗಿ ಮಾ.11ರಂದು ಬೆಳಿಗ್ಗೆ ಸುಮಾರು 6.50ರ ಸುಮಾರಿಗೆ ಠಾಣೆಯ ಹೆಡ್ ಕಾನ್ಸಟೇಬಲ್ ಆದರ್ಶ ಅವರೊಂದಿಗೆ ವಾರಂಟ್ ಆರೋಪಿ ಕಿಶೋರ್ ಎಂಬಾತನ ಮನೆಗೆ ತೆರಳಿದ್ದರು. ಬ್ರಹ್ಮಾವರ ಠಾಣಾ ವ್ಯಾಪ್ತಿಯ ಉಪ್ಪೂರು ಗ್ರಾಮದ ಲಕ್ಷ್ಮೀನಗರದಲ್ಲಿರುವ ಮನೆ ನಂ. 8–179ರ ಬಳಿ ತಲುಪಿ ಮನೆಯ ಅಂಗಳದಲ್ಲಿ ನಿಂತು ಆರೋಪಿಯನ್ನು ಕರೆದಾಗ, ಆತನು ಪೊಲೀಸರನ್ನು ಕಂಡು ಮನೆಯಿಂದ ಓಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಈ ವೇಳೆ ಸುರೇಶ್ ಕುಮಾರ್ ಹಾಗೂ ಆದರ್ಶ ಅವರು ಆರೋಪಿಯನ್ನು ಹಿಡಿದಿದ್ದಾರೆ. ಆದರೆ ತಪ್ಪಿಸಿಕೊಳ್ಳಲು ಯತ್ನಿಸಿದ ಆರೋಪಿ ಕಿಶೋರ್, ಸುರೇಶ್ ಕುಮಾರ್ ಅವರ ಮೇಲೆ ಹಲ್ಲೆ ಮಾಡಿ, ಇಲಾಖೆಯ ವಾಕಿಟಾಕಿಯನ್ನು ಕಿತ್ತು ನೆಲಕ್ಕೆ ಎಸೆದು ಜಖಂಗೊಳಿಸಿದ್ದಾನೆ. ಬಳಿಕ ತನ್ನ ತಾಯಿಯನ್ನು ಕರೆದು ಮನೆಯಿಂದ ಕತ್ತಿ ತಂದುಕೊಡು, ಪೊಲೀಸರನ್ನು ಇಲ್ಲಿಯೇ ಕಡಿದು ಹಾಕುತ್ತೇನೆ ಎಂದು ಜೀವ ಬೆದರಿಕೆ ಹಾಕಿರುವುದಾಗಿ ದೂರಿನಲ್ಲಿ ವಿವರಿಸಲಾಗಿದೆ. ನಂತರ ಪೊಲೀಸರು ಆರೋಪಿಯನ್ನು ವಾರಂಟ್ ಮೇರೆಗೆ ವಶಕ್ಕೆ ಪಡೆದು ಮಲ್ಪೆ ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ. ಹಲ್ಲೆಯಿಂದ ಗಾಯಗೊಂಡ ಸುರೇಶ್ ಕುಮಾರ್ ಮತ್ತು ಆದರ್ಶ ಅವರು ಉಡುಪಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಈ ಕುರಿತು ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಲ್ತಾನ್ ಬತ್ತೇರಿ ಬಳಿ ಫಲ್ಗುಣಿ ನದಿಗೆ ಸೇತುವೆ | ಇದೇ ಜೂನ್ ವೇಳೆಗೆ ಲೋಕಾರ್ಪಣೆ ಸಾಧ್ಯತೆ

‘ತಣ್ಣೀರುಬಾವಿ’ ಇನ್ನು ಹತ್ತಿರಾ ಹತ್ತಿರಾ!

ದಿಗಂತ ವಿಶೇಷ





ಚಿತ್ರ: ರಾಜೇಶ್ ಶೆಟ್ಟಿ ಬಲ್ಲಾಳ್‌ಬಾಗ್

ಮಂಗಳೂರು: ಮಂಗಳೂರು ಕಡೆಯಿಂದ ತಣ್ಣೀರುಬಾವಿ ಬೀಚ್‌ಗೆ ಹೋಗಬೇಕಾದರೆ ಸದ್ಯ ಕೂಳೂರು ಮಾರ್ಗವಾಗಿ ಸುಮಾರು 11 ಕಿ.ಮೀ ಕ್ರಮಿಸಬೇಕು. ನಿಧಾನವಾಗಿ ಸಾಗುವ ನಿಗದಿತ ಸಂಖ್ಯೆಯ ಬಸ್ ಸುಮಾರು ಅರ್ಧ ತಾಸು ತೆಗೆದುಕೊಳ್ಳುವುದಂತೂ ಖಚಿತ. ಇತರೆ ವಾಹನದಲ್ಲಿ ಸಾಗಿದರೂ ಸುತ್ತು ಬಳಸಿಯೇ ಸಾಗಬೇಕು. ಆದರೆ ಇನ್ನು ಆ ಚಿಂತೆ ಇಲ್ಲ. ಕೇವಲ 10 ನಿಮಿಷದಲ್ಲಿ ನೀವಿನ್ನು ತಣ್ಣೀರುಬಾವಿ ಬೀಚ್ ತಲುಪಬಹುದು.

ಮಂಗಳೂರಿನೊಂದಿಗೆ ತಣ್ಣೀರುಬಾವಿ ಬೀಚ್ ಮತ್ತು ಬೆಂಗ್ರೆ ಪ್ರದೇಶವನ್ನು ಬೆಸೆಯುವ ಮಹತ್ವದ ಯೋಜನೆಯೊಂದು ಅಂತಿಮ ಹಂತಕ್ಕೆ ಬಂದಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಜೂನ್ ವೇಳೆಗೆ ಇದು ಕಾರ್ಯಗತವಾಗಬಹುದು.

ಭರದಿಂದ ಸಾಗಿದೆ ಸೇತುವೆ ಕಾಮಗಾರಿ

ಸುಲ್ತಾನ್ ಬತ್ತೇರಿಯಿಂದ ತಣ್ಣೀರುಬಾವಿಯನ್ನು ಸಂಪರ್ಕಿಸುವ ಸೇತುವೆ ಕಾಮಗಾರಿ ಭರದಿಂದ ಸಾಗುತ್ತಿದೆ. ‘ಅತ್ಯಂತ ಮಹತ್ವದ ಈ ಯೋಜನೆಯನ್ನು ಆದಷ್ಟು ಶೀಘ್ರ ಪೂರ್ಣಗೊಳಿಸಲು ಒತ್ತು ನೀಡಿದ್ದೇವೆ. ಮೇ ಅಂತ್ಯದೊಳಗೆ ಸೇತುವೆ ಕಾಮಗಾರಿ ಮುಗಿಯಲಿದೆ ’ ಎಂದು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ವ್ಯವಸ್ಥಾಪಕ ಅರುಣ್ ಪ್ರಭ ‘ಹೊಸ ದಿಗಂತ’ಕ್ಕೆ ತಿಳಿಸಿದ್ದಾರೆ.

ಈಗ ದೋಣಿಯೇ ದಾರಿ!

ಕಳೆದ ಹಲವು ವರ್ಷಗಳಿಂದ ಸುಲ್ತಾನ್ ಬತ್ತೇರಿಯಿಂದ ಬೆಂಗ್ರೆ ಮತ್ತು ತಣ್ಣೀರುಬಾವಿ ಕಡೆಗೆ ತೆರಳುವವರು ದೋಣಿಯನ್ನು ಅವಲಂಬಿಸಿದ್ದಾರೆ. ಬೆಳಗ್ಗಿನಿಂದ ಸಂಜೆಯವರೆಗೆ ದೋಣಿಯ ಮೂಲಕವೇ ಅತ್ತಿಂದಿತ್ತ ಸಾಗಬೇಕು. ರಾತ್ರಿ ವೇಳೆ ದೋಣಿ ಸಂಚಾರವಿಲ್ಲ. ಈ ಸೇತುವೆ ನಿರ್ಮಾಣವಾದರೆ ಜನತೆ ರಾತ್ರಿ ಹಗಲೆನ್ನದೆ ಆರಾಮವಾಗಿ ಸಾಗಬಹುದು. ಘನವಾಹನಗಳನ್ನು ಹೊರತುಪಡಿಸಿ ಇತರೆ ಎಲ್ಲಾ ವಾಹನಗಳಿಗೆ ಅವಕಾಶ ಇರುವುದರಿಂದ ಜನತೆಗೆ ಹೆಚ್ಚಿನ ಅನುಕೂಲವಾಗಲಿದೆ. ಬೆಂಗ್ರೆ ಕಡೆಯಿಂದ ಮಂಗಳೂರಿಗೆ ನಿತ್ಯ ಸಾವಿರಾರು ಮಂದಿ ಕೆಲಸಕ್ಕೆ ಬರುತ್ತಾರೆ. ನಡೆದಾಡಲು ಫುಟ್‌ಪಾತ್ ವ್ಯವಸ್ಥೆ ಕೂಡ ಸಿದ್ಧವಾಗುವುದರಿಂದ ಊರಿನ ಜನತೆ ಫುಲ್ ಖುಷಿಯಲ್ಲಿದ್ದಾರೆ.

ಯೋಗೀಶ್ ಭಟ್‌ರ ಕನಸು

ಸುಲ್ತಾನ್‌ಬತ್ತೇರಿ –ತಣ್ಣೀರುಬಾವಿ ನಡುವೆ ತೂಗು ಸೇತುವ ನಿರ್ಮಾಣವಾಗಬೇಕೆಂದು ಮಾಜಿ ಶಾಸಕ ಯೋಗೀಶ್ ಭಟ್ ಅವರು ಕನಸು ಕಂಡಿದ್ದರು. ಅದಕ್ಕಾಗಿ ಅವಿರತ ಶ್ರಮಿಸಿದ್ದರು. ಅವರು ಶಾಸಕರಾಗಿದ್ದಾಗ ಇಲ್ಲಿ ತೂಗು ಸೇತುವೆ ನಿರ್ಮಾಣಕ್ಕೆ ಯೋಜನೆ ರೂಪಿಸಲಾಗಿತ್ತು. 3 ಮೀಟರ್ ಅಗಲ, 410 ಮೀಟರ್ ಉದ್ದದ ಸೇತುವೆಗೆ ಅವರ ಅವಧಿಯಲ್ಲಿ 12 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಲಾಗಿತ್ತು. 2012ರಲ್ಲಿ ಯೋಜನೆಗೆ ಚಾಲನೆಯೂ ದೊರಕಿತ್ತು. ಅಲ್ಲದೆ ಅಂದಾಜು 2 ಕೋಟಿ ರೂ. ವೆಚ್ಚದಲ್ಲಿ ಪೈಲಿಂಗ್ ಕಾರ್ಯವೂ ನಡೆದಿತ್ತು. ಆದರೆ ಅನುದಾನ ಬಿಡುಗಡೆಯಾಗದೆ ಕಾಮಗಾರಿ ಸ್ಥಗಿತಗೊಂಡಿತ್ತು. ಇದೀಗ ಅದಕ್ಕೆ ಮರುಜೀವ ದೊರೆತಿದ್ದು, ತೂಗು ಸೇತುವೆ ಬದಲಾಗಿ ಕಾಂಕ್ರಿಟ್ ಸೇತುವೆಯ ನಿರ್ಮಾಣವಾಗುತ್ತಿದೆ.

ಮಂಗಳೂರು ನಗರ ಪಾಲಿಕೆಗೆ ಭೇಟಿ ನೀಡಿದ್ದ ನಗರಾಭಿವೃದ್ಧಿ ಸಚಿವ ಸುರೇಶ್ ಭೈರತಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಸ್ಥಳೀಯರ ಆಗ್ರಹದ ಮೇರೆಗೆ ಇಲ್ಲಿ ಕಾಂಕ್ರೀಟ್ ಸೇತುವೆ ನಿರ್ಮಾಣದ ಪ್ರಸ್ತಾವ ಅಧಿಕಾರಿಗಳಿಂದ ವ್ಯಕ್ತವಾಗಿತ್ತು. ಅದರಂತೆ ಯೋಜನೆಗೆ ಮಂಜೂರಾತಿ ದೊರಕಿ ಸಿಆರ್ ಝೆಡ್ ಮತ್ತು ಪರಿಸರ ಇಲಾಖೆಯ ಅನುಮತಿ ದೊರೆತ ಬಳಿಕ ಕಳೆದ ಜನವರಿಯಲ್ಲಿ ಕಾಮಗಾರಿ ಆರಂಭಗೊಂಡಿತ್ತು. ಇದೀಗ ಅಂತಿಮ ಹಂತಕ್ಕೆ ಸೇತುವೆ ಕಾಮಗಾರಿ ತಲುಪಿದೆ.

600 ಮೀಟರ್ ಉದ್ದದ ಸೇತುವೆ

ನೂತನ ಸೇತುವೆ 600 ಮೀಟರ್ ಉದ್ದ ಇರಲಿದೆ. 10.5 ಮೀಟರ್ ಅಗಲವಿದೆ. ಸೇತುವೆಯ ಮೇಲೆ ಸಾಗುವಾಗ ಫಲ್ಗುಣಿ (ಗುರುಪುರ) ನದಿಯ ಸೌಂದರ್ಯವನ್ನು ಸವಿಯುತ್ತಾ ಸಾಗುವ ಅವಕಾಶವೂ ಪ್ರಯಾಣಿಕರಿಗೆ ಲಭ್ಯವಾಗಲಿದೆ.

- ರೂ.64 ಕೋ.ರೂ. ವೆಚ್ಚದ ಸೇತುವೆ
- ಸೆತುವೆಯ ಇಕ್ಕೆಲಗಳಲ್ಲಿ ಪಾದಚಾರಿ ಮಾರ್ಗ
- ಜೂನ್ ವೇಳೆಗೆ ಲೋಕಾರ್ಪಣೆ ಸಾಧ್ಯತೆ
- ತಣ್ಣೀರುಬಾವಿ ಬೀಚ್‌ಗಿನ್ನು ಸುಲಭ ಪಯಣ

> ‘ಸೇತುವೆ ಕಾಮಗಾರಿ ವೇಗಗತಿಯಲ್ಲಿ ಸಾಗುತ್ತಿದೆ. ಮೇ ಅಂತ್ಯದ ವೇಳೆಗೆ ಕಾಮಗಾರಿ ಮುಗಿಯಲಿದೆ. ಬಳಿಕ ಟೆಸ್ಟಿಂಗ್ ಪ್ರಕ್ರಿಯೆಗಳು ನಡೆದು ಲೋಕಾರ್ಪಣೆಯ ಸಿದ್ಧತೆ ನಡೆಯಲಿದೆ.
> ■ ಅರುಣ್ ಪ್ರಭ, ಸ್ಮಾರ್ಟ್ ಸಿಟಿ ಲಿಮಿಟೆಡ್ ವ್ಯವಸ್ಥಾಪಕರು



ವಿಧಾನಸಭಾ ಕ್ಷೇತ್ರಕ್ಕೆ ನಡೆಯಲಿರುವ ಚುನಾವಣೆಯ ಮುಂಜಾಗ್ರತೆ ಕ್ರಮದ ಅಂಗವಾಗಿ ಮಂಜೇಶ್ವರ ಠಾಣಾ ವ್ಯಾಪ್ತಿಯ ವಿವಿಧೆಡೆ ಬಿಎಸ್‌ಎಫ್ ಪಡೆ ಹಾಗೂ ಮಂಜೇಶ್ವರ ಪೊಲೀಸ್ ಅಧಿಕಾರಿಗಳು ಬುಧವಾರ ಸಂಜೆ ಪಥ ಸಂಚಲನ ನಡೆಸಿದರು. ಉಪ್ಪಳದಿಂದ ಕೈಕಂಬ ತನಕ, ತಲಪಾಡಿಯಿಂದ ಕುಂಜತ್ತೂರು ಹಾಗೂ ಪೈವಳಿಕೆಯಿಂದ ಬಾಯಿಕಟ್ಟೆವರೆಗೆ ಪಥ ಸಂಚಲನ ನಡೆಯಿತು. ಮಂಜೇಶ್ವರ ಠಾಣಾ ಸಿಐ ಜೇಜಿಶ್. ಎಸ್‌ಐ ವೈಷ್ಣವ್ ರಾಮಚಂದ್ರನ್ ಮೊದಲಾದವರು ಭಾಗವಹಿಸಿದ್ದರು.

ಕೊಡಗು ಜಿಲ್ಲೆಯಲ್ಲಿ ಕಾಡುಪ್ರಾಣಿಗಳ ನಿಲ್ಲದ ಹಾವಳಿ

ಕಾಡಾನೆ ದಾಳಿ: ಬೆಳೆಗಾರ ಸಾವು

ಸಿದ್ದಾಪುರ: ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾವಳಿ ಮುಂದುವರಿದಿದ್ದು, ಗುರುವಾರ ಹಾಡಹಗಲೇ ನಡೆದ ಕಾಡಾನೆ ದಾಳಿಗೆ ಕಾಫಿ ಬೆಳೆಗಾರರೊಬ್ಬರು ಬಲಿಯಾಗಿದ್ದಾರೆ.

ಸಿದ್ದಾಪುರ ನಿವಾಸಿ ಚೌರಿರ ಗಣಪತಿ (49) ಕಾಡಾನೆಗೆ ಬಲಿಯಾದವರು.

ಗುರುವಾರ ಪೂರ್ವಾಹ್ನ ಸಿದ್ದಾಪುರದ ಹೈಸ್ಕೂಲ್ ಪೈಸಾರಿಯಲ್ಲಿರುವ ತಮ್ಮ ಕಾಫಿ ತೋಟದಲ್ಲಿ ಕಾರ್ಮಿಕರೊಂದಿಗೆ ಕೆಲಸದ ಮೇಲ್ವಿಚಾರಣೆ ನಡೆಸುತ್ತಿದ್ದ ಸಂದರ್ಭ ಏಕಾಏಕಿ ದಾಳಿ ನಡೆಸಿದ ಕಾಡಾನೆ ಅವರನ್ನು ಸ್ಥಳದಲ್ಲೇ ಸಾಯಿಸಿರುವುದಾಗಿ ಹೇಳಲಾಗಿದೆ.



ಘಟನಾ ಸ್ಥಳಕ್ಕೆ ಸ್ಥಳಕ್ಕೆ ಪೊಲೀಸರು ಹಾಗೂ ಅರಣ್ಯ ಅಧಿಕಾರಿಗಳು ಭೇಟಿ ನೀಡಿದ್ದು, ಕಾಡಾನೆ ಹಾವಳಿಯನ್ನು ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ವಿಫಲವಾಗಿರುವಬಗ್ಗೆಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾಗಿದೆ.

ಕಾಡುಕೋಣ ದಾಳಿ: ಕಾರು ಜಖಂ

ಮಡಿಕೇರಿ: ಕಾರಿನ ಮೇಲೆ ಕಾಡುಕೋಣ ದಾಳಿ ನಡೆಸಿ ಜಖಂಗೊಳಿಸಿದ ಘಟನೆ ವೀರಾಜಪೇಟೆ ತಾಲೂಕಿನ ಸಿದ್ದಾಪುರ ವ್ಯಾಪ್ತಿಯ ಕರಡಿಗೋಡು ಗ್ರಾಮದಲ್ಲಿ ನಡೆದಿದೆ.

ಆರೆಂಜ್ ಕೌಂಟಿ ಮಾಲಕ ಇಮ್ಯಾನುವೆಲ್ ರಾಮಪುರಂ ಅವರು ಸಿದ್ದಾಪುರ ಪಟ್ಟಣದತ್ತ ತೆರಳುತ್ತಿದ್ದ ವೇಳೆ, ಒಂದು ತೋಟದಿಂದ ಮತ್ತೊಂದು ತೋಟಕ್ಕೆ ವೇಗವಾಗಿ ದಾಟುತ್ತಿದ್ದ ಕಾಡುಕೋಣ ಕಾರಿಗೆ ಗುದ್ದಿದೆ. ಪರಿಣಾಮ ಕಾರಿನ ಮುಂಭಾಗದ ಭಾಗಕ್ಕೆ ಹಾನಿಯಾಗಿದ್ದು, ವಾಹನ ಜಖಂಗೊಂಡಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ವಲಯ ಅರಣ್ಯ ಅಧಿಕಾರಿ ಶಿವರಾಮ್, ಉಪ ವಲಯ ಅರಣ್ಯ ಅಧಿಕಾರಿ ಸಂಜಿತ್ ಸೋಮಯ್ಯ, ಆರ್‌ಟಿ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಿದ್ದಾಪುರ ಭಾಗದಲ್ಲಿ ಇತ್ತೀಚೆಗೆ ಕಾಡುಕೋಣಗಳ ಹಾವಳಿ ಹೆಚ್ಚಾಗಿದ್ದು, ಸುಮಾರು 20 ದಿನಗಳ ಹಿಂದೆ ಇದೇ ಭಾಗದಲ್ಲಿ ಗೂಡ್ಸ್ ಆಟೋದ ಮೇಲೆ ಕಾಡುಕೋಣ ದಾಳಿ ನಡೆಸಿತ್ತು. ಅಲ್ಲದೆ, ಕೆಲ ದಿನಗಳ ಹಿಂದೆ ಕಾರಿನ ಮೇಲೆ ಕಾಡಾನೆ ದಾಳಿ ಮಾಡಿತ್ತು.

ಸಿದ್ದಾಪುರ-ಕರಡಿಗೋಡು ಮುಖ್ಯ ರಸ್ತೆಯ ಕಾಂಕ್ರೀಟೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಕಳೆದ 10 ದಿನಗಳಿಂದ ಗ್ರಾಮಸ್ಥರು ಪರ್ಯಾಯವಾಗಿ ಕೆಸುವಿನಹಳ್ಳ-ಮೈಸೂರು ರಸ್ತೆಯನ್ನು ಬಳಸುತ್ತಿದ್ದಾರೆ. ಆದರೆ ಈ ರಸ್ತೆಯಲ್ಲೂ ವನ್ಯಮೃಗಗಳ ಉಪಟಳ ಹೆಚ್ಚಿರುವುದರಿಂದ ಸ್ಥಳೀಯರು ಭಯದಿಂದ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ವನ್ಯಮೃಗಗಳ ಹಾವಳಿ ನಿಯಂತ್ರಣಕ್ಕೆ ಅರಣ್ಯ ಇಲಾಖೆ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಶೀಘ್ರದಲ್ಲೇ 147 ಇ-ವಾಹನ ಚಾರ್ಜಿಂಗ್ ಸ್ಟೇಷನ್ ಸ್ಥಾಪನೆ

ಕಾಸರಗೋಡು: ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಿದ್ಯುತ್ ಚಾಲಿತ ವಾಹನಗಳಿಗೆ ಅನುಕೂಲವಾಗುವಂತೆ ಶೀಘ್ರದಲ್ಲೇ 147 ಇ-ವಾಹನ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಯೋಜನೆ ತಯಾರಿಸಲಾಗಿದೆ.

ಕೇರಳ ರಾಜ್ಯ ವಿದ್ಯುತ್ ಮಂಡಳಿಯು ಕೇಂದ್ರ ಯೋಜನೆಯ ಉಸ್ತುವಾರಿಯನ್ನು ವಹಿಸಿಕೊಂಡಿದೆ. ಕೇರಳದಲ್ಲಿ ಒಟ್ಟು 270 ಇ-ವಾಹನ ಚಾರ್ಜಿಂಗ್ ಸ್ಟೇಷನ್‌ಗಳಿಗೆ ಅನುಮತಿ ಲಭಿಸಿದೆ. ಈ ಪೈಕಿ 147 ಇ-ವಾಹನ ಚಾರ್ಜಿಂಗ್ ಸ್ಟೇಷನ್‌ಗಳನ್ನು ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ಥಾಪಿಸಲಾಗುವುದು. ಸರ್ವೀಸ್ ರಸ್ತೆಯ ಬದಿಯಲ್ಲಿರುವ ಸರಕಾರಿ ಭೂಮಿಯ ಲೆಕ್ಕಾಚಾರವನ್ನು ಯೋಜನೆಗಾಗಿ ಸಲ್ಲಿಸಲಾಗಿದೆ.

ಪಿಎಂ–ಇ ಡ್ರೈವ್ (ಪಿಎಂ ಇಲೆಕ್ಟಿಕ್ ಡ್ರೈವ್ ರೆವಲ್ಯೂಶನ್ ಇನ್ ಇನ್ನೊವೇಟಿವ್ ವೆಹಿಕಲ್ ಎನ್‌ಹಾನ್ಸ್ ಮೆಂಟ್) ಎಂಬ ಯೋಜನೆಯಡಿ ಚಾರ್ಜಿಂಗ್ ಸ್ಟೇಷನ್ ಬರಲಿದೆ. ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿರುವ ಕಂದಾಯ ಭೂಮಿ, ಬಿಎಸ್‌ಎನ್‌ಎಲ್, ಕೆಎಸ್‌ಆರ್‌ಟಿಸಿ, ಕೆಎಸ್‌ಇಬಿಯ ಭೂಮಿಯಲ್ಲಿ ಅಧೀನದಲ್ಲಿರುವ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲು ಕೇಂದ್ರ ವಿದ್ಯುತ್ ಸಚಿವಾಲಯ ಹೊರಡಿಸಿದ ಗೈಡ್ ಲೈನ್ ಪ್ರಕಾರ ಪ್ರತಿ 25 ಕಿಲೋಮೀಟರ್‌ನಲ್ಲಿ ಕನಿಷ್ಠ ಒಂದು ಫಾಸ್ಟ್ ಚಾರ್ಜಿಂಗ್ ಸ್ಟೇಷನ್ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡು ಬರಲಿದೆ. ಬಸ್, ಟ್ರಕ್‌ಗಳಿಗೆ ಪ್ರತಿ 100 ಕಿಲೋ ಮೀಟರ್‌ಗಳಿಗೆ ಒಂದರಂತೆ ಇ-ವಾಹನ ಚಾರ್ಜಿಂಗ್ ಸ್ಟೇಷನ್ ನಿರ್ಮಿಸಬೇಕಾಗಿದೆ. ಆದರೆ ಕೇರಳದಲ್ಲಿ ಸ್ಥಳದ ಕೊರತೆ ಇದೆ ಎನ್ನಲಾಗಿದೆ. 120 ಕಿಲೋವ್ಯಾಟ್, 240 ಕಿಲೋ ವ್ಯಾಟ್ ಸಾಮರ್ಥ್ಯವಿರುವ ಹೈಸ್ಪೀಡ್ ಚಾರ್ಜಿಂಗ್ ಸ್ಟೇಷನ್‌ಗಳನ್ನು ಸ್ಥಾಪಿಸಲಾಗುವುದು. ದ್ವಿಚಕ್ರ ವಾಹನ, ಕಾರು, ಟ್ರಕ್‌ಗಳನ್ನು ಇದರಲ್ಲಿ ಚಾರ್ಜ್ ಮಾಡಬಹುದಾಗಿದೆ. ಸಾಮರ್ಥ್ಯ ಹೆಚ್ಚಿದರೆ ಹೆಚ್ಚಿನ ವಾಹನಗಳಿಗೆ ವೇಗವಾಗಿ ಚಾರ್ಜ್ ಮಾಡಬಹುದಾಗಿದೆ.



15 ಮೀಟರ್ ಉದ್ದ 7 ಮೀಟರ್ ಅಗಲವು ಸ್ಟೇಷನ್‌ನ ವಿನ್ಯಾಸವಾಗಿದೆ. ಚಾರ್ಜಿಂಗ್ ಸ್ಟೇಷನ್‌ಗಳ ಸಾಮರ್ಥ್ಯ 30ರಿಂದ 60 ಕಿಲೋವ್ಯಾಟ್ ಆಗಿದೆ. ಆದ್ದರಿಂದ ಚಾರ್ಜಿಂಗ್ ಸಾಮರ್ಥ್ಯ ಕಡಿಮೆಯಾಗಿದೆ. ಕೇರಳದಲ್ಲಿ ಇದುವರೆಗೆ 2.14 ಲಕ್ಷ ವಿದ್ಯುತ್ ವಾಹನಗಳನ್ನು ರಿಜಿಸ್ಟರ್ ಮಾಡಲಾಗಿದೆ.

ನುಳ್ಳಿಪ್ಪಾಡಿಯಲ್ಲಿ ಲಿಫ್ಟ್ ಹೊಂಡದಲ್ಲಿ ಮೃತದೇಹ ಪತ್ತೆ ಪ್ರಕರಣ

ಕೊಲೆ ಸಾಬೀತು: ಇಬ್ಬರು ಪೊಲೀಸ್ ವಶಕ್ಕೆ

ಕಾಸರಗೋಡು: ನಗರದ ನುಳ್ಳಿಪ್ಪಾಡಿ ರಾಷ್ಟ್ರೀಯ ಹೆದ್ದಾರಿ ಸಮೀಪ ನಿರ್ಮಿಸಲಾಗುತ್ತಿರುವ ಬಹು ಅಂತಸ್ತಿನ ಕಟ್ಟಡಕ್ಕೆ ಲಿಫ್ಟ್ ನಿರ್ಮಿಸಲು ತೋಡಲಾದ ನೀರು ತುಂಬಿದ ಹೊಂಡದಲ್ಲಿ ಮಂಗಳವಾರ ರಾತ್ರಿ ಪತ್ತೆಯಾದ ವ್ಯಕ್ತಿಯ ಮೃತದೇಹದ ಮರಣೋತ್ತರ ಪರೀಕ್ಷಾ ವರದಿ ಪೊಲೀಸರಿಗೆ ಲಭಿಸಿದ್ದು, ಆದರಲ್ಲಿ ವ್ಯಕ್ತಿಯ ಸಾವು ಕೊಲೆಯಾಗಿದೆ ಎಂದು ಸ್ಪಷ್ಟಗೊಂಡಿದೆ. ಅಲ್ಲದೆ ಕೊಲೆಗೈಯ್ಯಲ್ಪಟ್ಟ ವ್ಯಕ್ತಿಯ ಗುರುತು ಪತ್ತೆಹಚ್ಚುವಲ್ಲಿ ಪೊಲೀಸರು ಸಫಲರಾಗಿದ್ದಾರೆ.

ಮೃತ ವ್ಯಕ್ತಿ ಕರ್ನಾಟಕದ ಗದಗ ಜಿಲ್ಲೆಯ ಬಲೇಶ್ವರ ಬಾಲಹೊಸೂರು ನಿವಾಸಿ ಚಂದ್ರಶೇಖರ್ ಸುರೇಶ್‌ಪಟ್ಟಾಡ್ (38) ಎಂದು ಗುರುತಿಸ ಲಾಗಿದೆ. ಅವರು ವಲಸೆ ಕಾರ್ಮಿಕರಾಗಿದ್ದರು.

ಮಂಗಳವಾರ ರಾತ್ರಿ ಲಿಫ್ಟ್‌ನ ಹೊಂಡದಲ್ಲಿ ಮೃತದೇಹ ಪತ್ತೆಯಾಗಿದ್ದು, ಕಟ್ಟಡದ ಮಾಲಕನ ಪುತ್ರ ನೀಡಿದ ದೂರಿನಂತೆ ಕಾಸರಗೋಡು ನಗರಠಾಣೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು. ಆದರೆ ಇದು ಕೊಲೆಯಾಗಿದೆಯೆಂದು ಮರಣೋತ್ತರ ಪರೀಕ್ಷಾ ವರದಿಯಲ್ಲಿ ಸ್ಪಷ್ಟಗೊಂಡ ಹಿನ್ನೆಲೆಯಲ್ಲಿ ಕೊಲೆ ಕೃತ್ಯದಲ್ಲಿ ಶಾಮೀಲಾಗಿರುವುದಾಗಿ ಸಂಶಯಿಸಲಾಗುತ್ತಿರುವ ಇಬ್ಬರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ. ಅಲ್ಲದೆ ಮೃತದೇಹ ಪತ್ತೆಯಾದ ಸ್ಥಳದಲ್ಲಿ ಲಭಿಸಿದ ಆಧಾರ್‌ಕಾರ್ಡ್‌ನ ಜಾಡು ಹಿಡಿದು ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಈ ಕೊಲೆ ಕೃತ್ಯದಲ್ಲಿ ಇಬ್ಬರು ಅಲ್ಲದೆ ಇವರ ಹೊರತಾಗಿ ಬೇರೆ ಯಾರಾದರೂ ಶಾಮೀಲಾಗಿದ್ದಾರೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ.



ಗೇರು ಹಣ್ಣಿನ ಪೇಯ, ಸಿಹಿ ಖಾದ್ಯ, ಕುಕ್ಕೀಸ್, ಜಾಮ್, ಜೆಲ್ಲಿ, ಹಲ್ವಾ, ಹರ್ಬಲ್ ಟೀ... ನೇತ್ರ ಕ್ಯಾಶ್ಯೂ ಆ್ಯಪಲ್ ಪ್ರೊಡಕ್ಟ್ಸ್ ಸರಣಿಯಲ್ಲಿ 15ಕ್ಕೂ ಅಧಿಕ ಖಾದ್ಯ

ಮಾರುಕಟ್ಟೆಗೆ ಗೇರು ಸಂಶೋಧನಾ ನಿರ್ದೇಶನಾಲಯ ಬೂಸ್ಟರ್ ಡೋಸ್

ಪುತ್ತೂರು: ಗೋಡಂಬಿಯು ಜಗತ್ತಿನ ಆಹಾರ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿರುವ ಉತ್ಪನ್ನ. ಆದರೆ, ಆರೋಗ್ಯವರ್ಧಕ ಅಂಶಗಳಿರುವ ಗೇರು ಹಣ್ಣು ಕೂಡ ಈಗ ಆಹಾರ ಮಾರುಕಟ್ಟೆಯಲ್ಲಿ ಸಂಚಲನ ಸೃಷ್ಟಿಸುತ್ತಿದೆ. ಪುತ್ತೂರಿನಲ್ಲಿರುವ ಗೇರು ಸಂಶೋಧನಾ ನಿರ್ದೇಶನಾಲಯ (ಡಿಸಿಆರ್) ಸುಮಾರು 15 ಬಗೆಯ ಗೇರು ಹಣ್ಣು ಆಧರಿತ ಖಾದ್ಯಗಳನ್ನು ತಯಾರಿಸಿ ಯಶಸ್ವಿಯಾಗಿ ಪರೀಕ್ಷೆಗೆ ಒಳಪಡಿಸಿದೆ.

ಗೇರು ಹಣ್ಣಿನ ಮೌಲ್ಯವರ್ಧಿತ ಖಾದ್ಯಗಳನ್ನು ತಯಾರಿಸುವ ಉದ್ಯಮಿಗಳಿಗೆ ತಾಂತ್ರಿಕ ಮತ್ತು ವೈಜ್ಞಾನಿಕ ಸಹಕಾರ ನೀಡಲು ಗೇರು ಸಂಶೋಧನಾ ನಿರ್ದೇಶನಾಲಯ ನಿರ್ಧರಿಸಿದ್ದು, ಇದಕ್ಕಾಗಿ ಉದ್ಯಮಿಗಳೊಂದಿಗೆ ನೇರ ಸಂವಾದವನ್ನು ನಡೆಸಿದೆ.

ಭಾರತೀಯ ಕೃಷಿ ಸಂಶೋಧನಾ ಪರಿಷತ್ (ಐಸಿಎಆರ್) ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯವು (ಡಿಸಿಆರ್) ಇಡೀ ದೇಶದಲ್ಲಿ ಐಸಿಎಆರ್ ಅಡಿಯಲ್ಲಿ ಗೇರು ಕೃಷಿಗಾಗಿಯೇ ಸಂಶೋಧನೆ ಆಧರಿತ ಕೆಲಸ ಮಾಡುವ ಅಪೂರ್ವ ಸಂಸ್ಥೆಯಾಗಿದ್ದು, ಇದರ ವಿಜ್ಞಾನಿಗಳು ಹಲವು ಬಗೆಯ ಗೇರು ತಳಿಗಳನ್ನು ಸಂಶೋಧನೆ ಮಾಡಿ ಯಶಸ್ವಿಯಾಗಿ ಉತ್ಪಾದನೆಯಾಗುತ್ತಿದೆ.

ಗೇರು ಹಣ್ಣಿಗೆ ಆದ್ಯತೆ

ಗೇರು ಬೀಜವನ್ನು ಸಂಸ್ಕರಿಸಿ ಗೋಡಂಬಿ ಮಾರುಕಟ್ಟೆಗೆ ಪೂರೈಸುವ ನೂರಾರು ಕಂಪನಿಗಳು ಕಾರ್ಯ ನಿರ್ವಹಿಸುತ್ತಿದ್ದರೂ, ಗೇರು ಹಣ್ಣನ್ನು ಬಳಸಿಕೊಂಡು ಮೌಲ್ಯವರ್ಧಿತ ಉತ್ಪನ್ನ ತಯಾರಿಸುವ ಕಂಪನಿಗಳು ವಿರಳ. ಗೋವಾದಲ್ಲಿ ಗೇರು ಹಣ್ಣು ಬಳಸಿ ಗೋವಾ ಫೆನ್ನಿ ತಯಾರಿಸಲಾಗುತ್ತಿದ್ದು, ಇದಕ್ಕಾಗಿ ಜಿ.ಐ. ಪಡೆಯಲಾಗಿದೆ.

ಮದ್ಯ ಹೊರತುಪಡಿಸಿ ರುಚಿಕರ ಖಾದ್ಯಗಳನ್ನು ಗೇರು ಹಣ್ಣಿನ ಮೂಲಕ ತಯಾರಿಸುವ ವಿಚಾರದಲ್ಲಿ ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯದ ವಿಜ್ಞಾನಿಗಳ ತಂಡ ನಿರಂತರ ಸಂಶೋಧನೆ ಮಾಡಿದೆ. ಗೇರು ಹಣ್ಣಿನ ಪೇಯ, ಸಿಹಿ ಖಾದ್ಯ, ಕುಕ್ಕೀಸ್, ಜಾಮ್, ಜೆಲ್ಲಿ, ಹಲ್ವಾ, ಹರ್ಬಲ್ ಟೀ ಸೇರಿದಂತೆ ಸುಮಾರು 15ರಷ್ಟು ತಿನಿಸುಗಳನ್ನು ನೇತ್ರ ಕ್ಯಾಶ್ಯೂ ಆ್ಯಪಲ್ ಪ್ರೊಡಕ್ಟ್ಸ್ ಎಂಬ ಸರಣಿಯಲ್ಲಿ ತಯಾರಿಸಲಾಗಿದೆ. ಇವುಗಳನ್ನು ವಾಣಿಜ್ಯ ದೃಷ್ಟಿಯಿಂದ ಪೂರ್ಣ ಪ್ರಮಾಣದ ಉದ್ಯಮವಾಗಿ ಅನುಷ್ಠಾನಕ್ಕೆ ತಂದಿಲ್ಲ. ಮಾಹಿತಿಯ ಕೊರತೆ ಕೂಡ ಉದ್ಯಮಿಗಳು ಈ ಕ್ಷೇತ್ರಕ್ಕೆ ಕಾಲಿಡದೇ ಇರಲು ಕಾರಣವಾಗಿದೆ.

ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಮಾ.11 ರಂದು ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿ ಬಗ್ಗೆ ಉದ್ಯಮಿಗಳೊಂದಿಗೆ ಸಂವಾದ ನಡೆಸಲಾಗಿದೆ. ಈ ಸಂವಾದದಲ್ಲಿ ಗೇರು ಹಣ್ಣಿನ ಮೌಲ್ಯವರ್ಧಿತ ಉತ್ಪನ್ನಗಳ ಬಗ್ಗೆ ವಿಜ್ಞಾನಿಗಳು ಮಾಹಿತಿ ನೀಡಿ, ಗೇರುಹಣ್ಣು ಆಧರಿತ ಉತ್ಪನ್ನ ತಯಾರಿಸಲು ಉತ್ತೇಜನ ನೀಡಿದ್ದಾರೆ.



> **ಬೇಡಿಕೆ ಬರಲಿದೆ**
> ಭಾರತದಲ್ಲಿ ಮಾಹಿತಿ ಕೊರತೆಯಿಂದಾಗಿ ಗೇರು ಹಣ್ಣೆಲ್ಲ ವ್ಯರ್ಥವಾಗುತ್ತಿದೆ. ನಾವು ಸಂಶೋಧನೆ ಮಾಡಿರುವ 15 ಖಾದ್ಯಗಳನ್ನು ಉದ್ಯಮಿಗಳು ವಾಣಿಜ್ಯ ದೃಷ್ಟಿಯಿಂದ ಉತ್ಪಾದಿಸಿ ಮಾರುಕಟ್ಟೆ ಮಾಡಿದರೆ ಗೇರು ಹಣ್ಣಿಗೆ ಬೇಡಿಕೆ ಬರಲಿದೆ.
> ■ ಮೋಹನ್ ತಳಕಾಲುಕೊಪ್ಪ, ಪ್ರಧಾನ ವಿಜ್ಞಾನಿ ಪುತ್ತೂರು ಗೇರು ಸಂಶೋಧನಾ ನಿರ್ದೇಶನಾಲಯ

8 ಲಕ್ಷ ಟನ್ ಉತ್ಪಾದನೆ

ದೇಶದಲ್ಲಿ ಪ್ರತೀ ವರ್ಷ 8 ಲಕ್ಷ ಟನ್ ಗೇರು ಬೀಜ ಉತ್ಪಾದನೆಯಾಗುತ್ತಿವೆ. ಇವೆಲ್ಲವೂ ಗೋಡಂಬಿಯಾಗಿ ಬಳಕೆಯಾಗುತ್ತಿದ್ದು, ಸೀಮಿತ ಪ್ರಮಾಣದಲ್ಲಿ ರಫ್ತಾಗುತ್ತಿದೆ. ದೇಶದ ಬಳಕೆಗೆ ಇಲ್ಲಿನ ಗೋಡಂಬಿ ಸಾಕಾಗುತ್ತಿಲ್ಲ. ಉತ್ಪಾದಿತ ಗೇರು ಬೀಜದ 10 ಪಟ್ಟು ಅಧಿಕ ತೂಕದ ಗೇರು ಹಣ್ಣು ಸಿಗುತ್ತಿದ್ದರೂ ಅದರಲ್ಲಿ ಮರು ಬಳಕೆಯಾಗುತ್ತಿರುವುದು ಶೇ.10 ರಷ್ಟು ಮಾತ್ರ. ಬ್ರೆಜಿಲ್‌ನಲ್ಲಿ ಶೇ.25ರಷ್ಟು ಗೇರು ಹಣ್ಣು ಮೌಲ್ಯವರ್ಧಿತ ಉತ್ಪನ್ನವಾಗುತ್ತಿದೆ ಎನ್ನುತ್ತಾರೆ ಕೇಂದ್ರದ ವಿಜ್ಞಾನಿಗಳು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 24° | ಉಡುಪಿ 32° 24°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 13, ಮಾರ್ಚ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2

ಕಡಬ: ನ್ಯಾಯಾಲಯ ಆರಂಭದ ಕನಸು ನನಸಾಗುವ ಕಾಲ ಸನ್ನಿಹಿತ



ಪುಟ 6

ಸಂಚಾರ ನಿಯಮ ಉಲ್ಲಂಘಿಸುವವರ ಮೇಲೆ ಎಐ ನಿಗಾ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಕೇರಳದ ರಸ್ತೆಗಳಲ್ಲಿ 1965ರ ಹವಾ... ಮತ್ತೆ ಓಡಾಟ ಆರಂಭಿಸಿತು ಅಶೋಕ್ ಲೇಲ್ಯಾಂಡ್ ಬಸ್ಸು!







1965ನೇ ಇಸವಿಯಲ್ಲಿ ಓಡಾಟ ನಡೆಸುತ್ತಿದ್ದ ಬಸ್‌ನ ಮಾದರಿಯನ್ನು ಹೋಲುವ ವಿನ್ಯಾಸದೊಂದಿಗೆ ಕೆಎಸ್‌ಆರ್‌ಟಿಸಿ ವಿಂಟೇಜ್ ಬಸ್ ಸೇವೆ ಕೇರಳದಲ್ಲಿ ಆರಂಭವಾಗಿದ್ದು, ಇದರ ಉದ್ಘಾಟನೆಯನ್ನು ತಿರುವನಂತಪುರದಲ್ಲಿ ಗುರುವಾರ ಕೇರಳ ರಾಜ್ಯ ಸಾರಿಗೆ ಇಲಾಖೆ ಸಚಿವ ಕೆ.ಬಿ.ಗಣೇಶ್‌ಕುಮಾರ್ ನೆರವೇರಿಸಿದರು. ಇದು ಇನ್ನಷ್ಟು ಪ್ರವಾಸಿಗರನ್ನು ಸೆಳೆಯಲು ಸಹಾಯ ಮಾಡಲಿದೆ.

ಸುತ್ತಮುತ್ತ

ಆರು ಮೀಟರ್ ನೀರಿನ ಮಟ್ಟ ಕಾಯ್ದುಕೊಂಡ ತುಂಬೆ ನೇತ್ರಾವತಿ ಡ್ಯಾಂ

ಬಂಟ್ವಾಳ: ಜಿಲ್ಲೆಯ ಜೀವನದಿಯಾಗಿರುವ ನೇತ್ರಾವತಿ ನದಿಯ ತುಂಬೆ ವೆಂಟೆಡ್ ಡ್ಯಾಂನಲ್ಲಿ ಗುರುವಾರ ಸಂಜೆಯ ವೇಳೆಗೆ ನೀರಿನ ಮಟ್ಟ 6 ಮೀ.ನ ಸನಿಹದಲ್ಲಿದ್ದು, ಸದ್ಯದ ಮಟ್ಟಿಗೆ ಮಂಗಳೂರು ಮಹಾ ನಗರದ ಜನತೆಗೆ ಜಲಗಂಡಾಂತರವಾಗದು ಎಂಬುದು ಸದ್ಯದ ಮಟ್ಟಿಗೆ ಸಮಧಾನಕರ ಸಂಗತಿ. ಕಳೆದ ವರ್ಷವು ಮಾರ್ಚ್ ಮಧ್ಯಭಾಗದಲ್ಲಿ ಸರಿ ಸುಮಾರು 5.30 ರಿಂದ 6 ಮೀ.ನಷ್ಟು ನೀರು ಶೇಖರಣೆಯಾಗಿತ್ತು.

ರಾಷ್ಟ್ರೀಯ ಹೆದ್ದಾರಿ ದಾಟುತ್ತಿದ್ದ ಮಹಿಳೆಗೆ ಕಾರು ಡಿಕ್ಕಿ: ಗಂಭೀರ ಗಾಯ

ಉಡುಪಿ: ಉಚ್ಚಿಲ ಪೇಟೆಯ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ರಸ್ತೆ ದಾಟುತ್ತಿದ್ದ ಮಹಿಳೆಯೊಬ್ಬರಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡ ಘಟನೆ ನಡೆದಿದೆ. ಕುಂದಾಪುರ ತಾಲೂಕಿನ ಗುಲ್ವಾಡಿ ನಿವಾಸಿ ಸಬೀನಾ (58) ಗಾಯಗೊಂಡವರು. ಇವರು ಉಚ್ಚಿಲ ಪೇಟೆಯ ರಿಕ್ಷಾ ನಿಲ್ದಾಣದ ಎದುರು ಹೆದ್ದಾರಿ ದಾಟುತ್ತಿದ್ದಾಗ, ಉಡುಪಿ ಕಡೆಯಿಂದ ಮಂಗಳೂರು ಕಡೆಗೆ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ.

ಜೀವನದಲ್ಲಿ ಜಿಗುಪ್ಸೆ: ಆ್ಯಸಿಡ್ ಕುಡಿದು ವ್ಯಕ್ತಿ ಆತ್ಮಹತ್ಯೆಗೆ ಶರಣು

ಉಡುಪಿ: ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದ ವ್ಯಕ್ತಿಯೊಬ್ಬರು ರಬ್ಬರ್ ಗಿಡಕ್ಕೆ ಬಳಸುವ ಆ್ಯಸಿಡ್ ಕುಡಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ಯಡ್ತಾಡಿ ಗ್ರಾಮದಲ್ಲಿ ನಡೆದಿದೆ. ಬ್ರಹ್ಮಾವರ ತಾಲೂಕಿನ ಯಡ್ತಾಡಿ ನಿವಾಸಿ ರಮೇಶ್ (44) ಮೃತಪಟ್ಟವರು. ಕಳೆದ ಒಂದು ವರ್ಷದಿಂದ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ಚಿಕಿತ್ಸೆ ಕೊಡಿಸಿದರೂ ಗುಣಮುಖರಾಗದ ಕಾರಣ ಜೀವನದಲ್ಲಿ ಜಿಗುಪ್ಸೆ ಹೊಂದಿದ್ದರು ಎನ್ನಲಾಗಿದೆ.

ಕರಾವಳಿ ಜಿಲ್ಲೆಗಳಲ್ಲಿ ಮತ್ತಷ್ಟು ಉಷ್ಣಾಂಶ ಏರಿಕೆ: ಧಗೆ ಹೆಚ್ಚಿಸಿದ 'ಮೋಡ'!

ಮಂಗಳೂರು: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯಲ್ಲಿ ಗುರುವಾರ ವಾತಾವರಣದ ತಾಪಮಾನ ಮತ್ತಷ್ಟು ಏರಿಕೆಯಾಗಿದ್ದು, ಕೆಲವಡೆ 37 ಎಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಬಹುತೇಕ ಕಡೆಗಳಲ್ಲಿ ಮೋಡ ಮುಸುಕಿದ ವಾತಾವರಣ ಕಾಣಿಸಿಕೊಂಡಿದ್ದು, ಇದು ಉಷ್ಣಾಂಶ ಮತ್ತಷ್ಟು ಏರಿಕೆಗೆ ಕಾರಣವಾಗಿತ್ತು. ಮಾ.15ರ ಸುಮಾರಿಗೆ ಕರಾವಳಿಯ ಕೆಲವೆಡೆ ಮಳೆಯಾಗುವ ಸಾಧ್ಯತೆ ಇದೆ ಎಂದು ನಿರೀಕ್ಷೆಯಿದೆ.

ತೋಟಕ್ಕೆ ಬಂದ ಜಾನುವಾರು ಓಡಿಸುವ ವೇಳೆ ಬಿದ್ದು ಮಹಿಳೆ ಸಾವು

ಉಪ್ಪಿನಂಗಡಿ: ತೋಟಕ್ಕೆ ಮೇಯಲು ಬಂದ ಜಾನುವಾರುಗಳನ್ನು ಓಡಿಸಲು ಹೋದ ವೇಳೆ ಆಕಸ್ಮಿಕವಾಗಿ ಬಿದ್ದು ಮಹಿಳೆ ಮೃತಪಟ್ಟ ಘಟನೆ ಕಡಬ ತಾಲೂಕಿನ ಕೊಣಾಲು ಗ್ರಾಮದಲ್ಲಿ ನಡೆದಿದೆ. ಕೊಣಾಲು ಗ್ರಾಮದ ಪಾತ್ರಮಾಡಿ ನಿವಾಸಿ ಲೀಲಾವತಿ ಶೆಟ್ಟಿ (64) ಮೃತಪಟ್ಟವರು. ಇವರು ಸಂಜೆ ತಮ್ಮ ತೋಟಕ್ಕೆ ಮೇಯಲು ಬಂದ ಜಾನುವಾರುಗಳನ್ನು ಓಡಿಸಲು ಹೋದವರು ಆಕಸ್ಮಿಕವಾಗಿ ನೆಲಕ್ಕೆ ಬಿದ್ದು ಮೃತಪಟ್ಟಿದ್ದಾರೆ. ಲೀಲಾವತಿ ಅವರ ಪುತ್ರ ರಾತ್ರಿ ಮನೆಗೆ ಬಂದ ವೇಳೆ ತಾಯಿ ಮನೆಯಲ್ಲಿ ಇರಲಿಲ್ಲ. ಬಳಿಕ ಹುಡುಕಾಟ ನಡೆಸಿದಾಗ ಲೀಲಾವತಿ ಅವರು ಬಿದ್ದು ಸಾವನ್ನಪ್ಪಿರುವುದು ಕಂಡು ಬಂದಿದೆ.

ಎಲ್‌ಪಿಜಿ ಅಭಾವಕ್ಕಿಂತ ಆತಂಕವೇ ಹೆಚ್ಚು

ಪಮ್ಮ ಗ್ಯಾಸ್ ಗುಮ್ಮ!

ಸಮಸ್ಯೆಗೆ ಕಾರಣ ಈ ಬುಕ್ಕಿಂಗ್ ಭರಾಟೆ

ಮಂಗಳೂರು/ಉಡುಪಿ: ಈಗ ಎಲ್ಲೆಡೆ ಎಲ್‌ಪಿಜಿ ಸಿಲಿಂಡರ್ ಅಭಾವಕ್ಕಿಂತಲೂ ಹೆಚ್ಚಾಗಿ 'ಎಲ್‌ಪಿಜಿ ಸಿಗಲ್ಲ ಅಂತೆ ಮಾರ್ರೆ' ಎಂಬ ಆತಂಕವೇ ಹೆಚ್ಚಾಗುತ್ತಿದೆ.

ಇದರ ಪರಿಣಾಮವಾಗಿ ಎಲ್ಲೆಡೆ ಗೃಹ ಬಳಕೆ, ವಾಣಿಜ್ಯ ಬಳಕೆ ಅನಿಲಗಳಿಗಾಗಿ ಗ್ರಾಹಕರಕ್ಯೂ ಕಚೇರಿಯಲ್ಲಿಕಾಣಿಸುತ್ತಿದ್ದು ಸಿಬ್ಬಂದಿಗಳು ಮಾತ್ರ ಉತ್ತರಿಸುವುದರಲ್ಲೇ ಹೈರಾಣಾಗುತ್ತಿದ್ದಾರೆ.

ನಿರ್ಬಂಧ ಹೇರಿಕೆ

ಗೃಹಬಳಕೆ ಗ್ರಾಹಕರಿಗೂ ಈಗ ನಿರ್ಬಂಧ ಹೇರಲಾಗುತ್ತಿದ್ದು, ಒಂದು ಸಿಲಿಂಡರ್ ಇರುವವರು 21 ದಿನ ಹಾಗೂ ಎರಡು ಸಿಲಿಂಡರ್ ಇರುವವರು 30 ದಿನ ಪೂರ್ಣಗೊಳ್ಳುವ ಮೊದಲೇ ಮರು ಬುಕ್ಕಿಂಗ್ ಮಾಡುವಂತಿಲ್ಲ ಎಂದು ಏಜೆನ್ಸಿ ಗ್ರಾಹಕರಿಗೆ ಸೂಚಿಸಿವೆ. ಇದು ಜನರ ಮನದಲ್ಲಿ ಗ್ಯಾಸ್ ಪೂರೈಕೆ ಅಭಾವ ಗುಮ್ಮ ಮತ್ತಷ್ಟು ಬಲವಾಗಿ ಬೇರೂರುವಂತೆ ಮಾಡುತ್ತಿದೆ.



ಕಾಳಸಂತೆಯಲ್ಲಿ ಸಿಲಿಂಡರ್ ಅಧಿಕ ದರಕ್ಕೆ ಮಾರಾಟ?

ಇದೇ ಪರಿಸ್ಥಿತಿಯ ಲಾಭ ಪಡೆದು ವಾಣಿಜ್ಯ ಸಿಲಿಂಡರ್‌ಗಳು ಕಾಳಸಂತೆಯಲ್ಲಿ ಅಧಿಕ ದರಕ್ಕೆ ಮಾರಾಟವಾಗುತ್ತಿವೆ ಎಂಬ ಆರೋಪಗಳೂ ಕೇಳಿಬರುತ್ತಿವೆ. ಹೆಬ್ರಿಯಂತಹ ಭಾಗಗಳಲ್ಲಿ ಖಾಸಗಿ ಪಂಪ್‌ಗಳಲ್ಲೂ ಗ್ಯಾಸ್ ಲಭ್ಯವಿಲ್ಲದೆ ಜನರು ಪರದಾಡುತ್ತಿದ್ದಾರೆ. ಜಿಲ್ಲಾ ಹೋಟೆಲ್ ಮಾಲೀಕರ ಸಂಘವು ಈ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿದ್ದು, ಸರ್ಕಾರ ತಕ್ಷಣ ಮಧ್ಯಪ್ರವೇಶಿಸದಿದ್ದರೆ ಉಡುಪಿ ನಗರದ ಹೆಚ್ಚಿನ ಹೋಟೆಲ್‌ಗಳು ಶೀಘ್ರವೇ ಬಂದ್ ಆಗುವ ಸಾಧ್ಯತೆ ಇದೆ.

ಗ್ಯಾಸ್ ಬುಕ್ಕಿಂಗ್ ಮಾಡಲು ಪೈಪೋಟಿ!

ಮಧ್ಯ ಪ್ರಾಚ್ಯ ದೇಶಗಳಲ್ಲಿ ನಡಯುತ್ತಿರುವ ಯುದ್ಧದ ಪರಿಣಾಮ ವಿಶ್ವಾದ್ಯಂತ ಎಲ್ಲಾ ದೇಶಗಳಿಗೆ ತಟ್ಟುತ್ತಿವೆ. ಇತ್ತ ಭಾರತದಲ್ಲೂ ಕೆಲವೊಂದು ಸಮಸ್ಯೆಗಳು ಕಾಣಿಸುತ್ತಿದೆ. ಯುದ್ಧ ಭೀತಿಯಲ್ಲಿ ಮುಂದಿನ ದಿನಗಳಲ್ಲಿ ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಕೊರತೆ ಕಾಡಬಹುದು ಎಂಬ ಭಯದಲ್ಲಿ ಜನತೆ ತಾ ಮುಂದು ತಾ ಮುಂದು ಎಂದು ಅಡುಗೆ ಅನಿಲ ಬುಕ್ಕಿಂಗ್ ಆರಂಭಿಸಿದ್ದು, ಏಜೆನ್ಸಿಗಳು ಹೈರಾಣಾಗುತ್ತಿವೆ. ಇದಲ್ಲದೆ ಇದರ ಪರಿಣಾಮ ಇದೀಗ ಎಲ್ಲೆಡೆ ಸರ್ವರ್ ಸಮಸ್ಯೆ ಕೂಡಾ ಇನ್ನಿಲ್ಲದಂತೆ ತಲೆದೂರಿದೆ.

ಕಾಸರಗೋಡಿಗೆ ಕಾಡಿದ ಎಲ್‌ಪಿಜಿ

ಸೌದೆಯ ಒಲೆಯತ್ತ ಕ್ಯಾಂಟೀನ್‌ಗಳ ಚಿತ್ತ

ಆತಂಕದಲ್ಲಿ ಹೊಟೇಲ್ ಉದ್ಯಮ





ಕಾಸರಗೋಡು: ಮಧ್ಯಪ್ರಾಚ್ಯದಲ್ಲಿ ನಡೆವ ಯುದ್ಧದ ಪರಿಣಾಮವಾಗಿ ಗ್ಯಾಸ್ ಸಿಲಿಂಡರ್ ಪೂರೈಕೆಯಲ್ಲಿ ವ್ಯತ್ಯಯ ಕಂಡುಬಂದಿದ್ದು, ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್‌ಗಳು ಅಲಭ್ಯವಾದ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯಲ್ಲಿ ಹೊಟೇಲ್, ರೆಸ್ಟೋರೆಂಟ್‌ಗಳು ಮುಚ್ಚುವ ಪರಿಸ್ಥಿತಿ ಎದುರಾಗಿದೆ.

ಜಿಲ್ಲೆಯಲ್ಲಿ ವಾಣಿಜ್ಯ ಬಳಕೆಯ ಗ್ಯಾಸ್ ಸಿಲಿಂಡರ್‌ಗೆ ವಿಪರೀತ ಕೊರತೆ ಉಂಟಾಗಿದ್ದು, ಈ ನಿಟ್ಟಿನಲ್ಲಿ ಕೆಲವು ಹೊಟೇಲ್‌ಗಳು ಸೌದೆ ಒಲೆಯತ್ತ ಮುಖಮಾಡಿವೆ. »ಪುಟ 6

ಕುಟುಂಬಶ್ರೀ ಕೆಫೆಯಲ್ಲಿ ಒಲೆ ಅಡುಗೆ ಆರಂಭ

ಗ್ಯಾಸ್ ಬುಕ್ಕಿಂಗ್, ಪೂರೈಕೆ ಸರಿಯಾಗಿ ನಡೆಯುತ್ತಿಲ್ಲವೆಂದು ಸಾರ್ವಜನಿಕರು ದೂರಿದ್ದಾರೆ. ಈ ಮಧ್ಯೆ ಕಾಸರಗೋಡು ಜಿಲ್ಲಾ ಪಂಚಾಯತ್ ಕಚೇರಿ ಪರಿಸರದಲ್ಲಿ ಕಾರ್ಯಾಚರಿಸುವ ಕುಟುಂಬಶ್ರೀ ಕೆಫೆಯಲ್ಲಿ ಬುಧವಾರದಿಂದ ಒಲೆಯಲ್ಲಿ ಅಡುಗೆ ತಯಾರಿ ಆರಂಭಿಸಲಾಗಿದೆ.

ಸಸಿಹಿತ್ಲುವಲ್ಲಿ 45 ಕೇಜಿ ತೂಕದ ಕಡಲಾಮೆ ಪತ್ತೆ

ಫ್ಲಿಪ್ಪರ್ ಗಾಯಗೊಂಡು ತೀರಕ್ಕೆ ಬಂದ ದೈತ್ಯಗೆ ಅರಣ್ಯ ಇಲಾಖೆ ಆರೈಕೆ

ಮುಲ್ಕಿ: ಇಲ್ಲಿನ ಹಳೆಯಂಗಡಿ ಸಸಿಹಿತ್ಲು ಭಗವತೀ ದೇವಸ್ಥಾನದ ಸಮೀಪದ ಕಡಲತೀರದಲ್ಲಿ ಸುಮಾರು 45 ಕೆಜಿ ತೂಕದ ಬೃಹತ್ ಕಡಲಾಮೆಯೊಂದು ಗಾಯಗೊಂಡ ಸ್ಥಿತಿಯಲ್ಲಿ ಪತ್ತೆಯಾಗಿದೆ. ಈ ಸಂಬಂಧ ಸ್ಥಳೀಯರು ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು, ಸ್ಥಳೀಯರ ಸಹಕಾರದೊಂದಿಗೆ ರಕ್ಷಿಸಿದ್ದಾರೆ.

ತೀವ್ರವಾಗಿ ಗಾಯಗೊಂಡಿತ್ತು

ಸಮುದ್ರದ ಅಲೆಗಳ ಅಬ್ಬರಕ್ಕೆ ದಡಕ್ಕೆ ಬಂದಿದ್ದ ಈ ಕಡಲಾಮೆಯ 'ಫ್ಲಿಪ್ಪರ್' (ಈಜು ರೆಕ್ಕೆ) ತುಂಡಾಗಿದ್ದು, ತೀವ್ರವಾಗಿ ಗಾಯಗೊಂಡಿತ್ತು. ವಿಷಯ ತಿಳಿದ ತಕ್ಷಣ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆಯ ಕರಾವಳಿ ಮತ್ತು ಮೆರೈನ್ ವಿಭಾಗದ ಅಧಿಕಾರಿಗಳು ಆಮೆಯನ್ನು ವಶಕ್ಕೆ ಪಡೆದು ಪ್ರಾಥಮಿಕ ಚಿಕಿತ್ಸೆ ನೀಡಿದ್ದಾರೆ. ಗಾಯಗೊಂಡಿರುವ ಕಡಲಾಮೆಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಈಗ ಕುಂದಾಪುರದ ಕೋಡಿಬೆಂಗ್ರೆಯಲ್ಲಿರುವ ಮೆರೈನ್ ಕೇರ್ ರೆಸ್ಕ್ಯೂ ಸೆಂಟರ್‌ಗೆ ರವಾನಿಸಲಾಗಿದೆ.





ವೈದ್ಯಕೀಯ ವರದಿ ಬಂದ ಬಳಿಕ ಸ್ಪಷ್ಟ ಚಿತ್ರಣ

ಈ ಬಗ್ಗೆ ಮಾಹಿತಿ ನೀಡಿದ ಕರಾವಳಿ ಮತ್ತು ಮೆರೈನ್ ವಿಭಾಗದ ಆರ್ ಎಫ್‌ಒ ಮನೋಜ್ ಸೋನಾ, ಕಡಲಾಮೆಯ ಈಜುರೆಕ್ಕೆಗೆ ಗಾಯ ಆಗಿದ್ದು, ಇದು ನೀರಿನ ಒಳಗಡೆಯೇ ಆಗಿರುವ ಗಾಯದಂತೆ ಕಾಣುತ್ತಿದೆ. ವೈದ್ಯಕೀಯ ವರದಿ ಬಂದ ನಂತರವಷ್ಟೇ ಗಾಯಕ್ಕೆ ನಿಖರ ಕಾರಣ ತಿಳಿಯಲಿದೆ. ಚಿಕಿತ್ಸೆ ಮುಗಿದು ಆಮೆ ಚೇತರಿಸಿಕೊಂಡ ನಂತರ ಅದನ್ನು ಮರಳಿ ಸಮುದ್ರಕ್ಕೆ ಬಿಡಲಾಗುವುದು ಎಂದು ತಿಳಿಸಿದ್ದಾರೆ.

ಈಗಿಲ್ಲ ತಂಪು ತಂಪು ಕೂಲ್ ಕೂಲ್ ಕೊಡಗಿನಲ್ಲೂ ಈಗ ಬಿಸಿ ಬಿಸಿ ಹವೆ!

28° ಡಿಗ್ರಿಯಿಂದ 31° ಡಿಗ್ರಿಗೆ ತಾಪಮಾನ ಏರಿಕೆ

ಮಡಿಕೇರಿ: ತಂಪು ತಂಪು ಕೂಲ್ ಕೂಲ್ ಹವಾಮಾನಕ್ಕೆ ಹೆಸರಾದ ಕೊಡಗು ಜಿಲ್ಲೆಯ ತಾಪಮಾನ ದಿನೇದಿನೇ ಹೆಚ್ಚುತ್ತಿದೆ. ಕಳೆದ ವಾರದಲ್ಲಿ ಸರಾಸರಿ ಗರಿಷ್ಠ 28 ಡಿಗ್ರಿ ಸೆಲ್ಸಿಯಸ್ ಇದ್ದ ಜಿಲ್ಲೆಯ ತಾಪಮಾನ ಇದೀಗ 31 ಡಿಗ್ರಿಗಳಿಗೆ ಏರಿಕೆಯಾಗಿದೆ. ಇದು ಮುಂದಿನ ಎರಡು ದಿನಗಳಲ್ಲಿ ಇದು ಮತ್ತಷ್ಟು ಏರಿಕೆಯಾಗುವ ನಿರೀಕ್ಷೆಯಿದೆ.

ಮುಂದಿನ ಸೋಮವಾರದಿಂದ ಒಂದು ವಾರ ಕಾಲ ತಾಪಮಾನದಲ್ಲಿ ಮತ್ತೆ ಇಳಿಕೆಯಾಗಲಿದ್ದು, ನಂತರ ಮತ್ತೆ ಏರಿಕೆಯಾಗುವ ನಿರೀಕ್ಷೆಯಿದೆ. »ಪುಟ 6

ಆತಂಕಕಾರಿ ವಿದ್ಯಮಾನ



ಕರ್ನಾಟಕದ ಕಾಶ್ಮೀರ ಎಂದೇ ಗುರುತಿಸಲ್ಪಟ್ಟಿರುವ ಕೊಡಗು ಜಿಲ್ಲೆಯಲ್ಲಿ ಹೆಚ್ಚುತ್ತಿರುವ ತಾಪ ಜನರಲ್ಲಿ ಆತಂಕ ಮೂಡಿಸಿದೆ. ನದಿ ತೊರೆಗಳಲ್ಲಿನ ನೀರು ಆವಿಯಾಗಿ ಬತ್ತಲಾರಂಭಿಸಿದ್ದು, ಪ್ರಸಕ್ತ ಕಾಫಿ ತೋಟಗಳಿಗೆ ನೀರುಣಿಸುವ ಸಮಯವಾಗಿರುವುದರಿಂದ ಅಂತರ್ಜಲ ಮಟ್ಟವೂ ತೀವ್ರವಾಗಿ ಕುಸಿಯತೊಡಗಿದೆ.

ಎರಡೆರಡು ಬಾರಿ ಅಣೆಕಟ್ಟಿನ ಹಲಗೆ ಕಿತ್ತು ಸಮಸ್ಯೆ ಸೃಷ್ಟಿ | ಸಿಸಿ ಕ್ಯಾಮರಾ ಅಳವಡಿಕೆಗೆ ಪಂಚಾಯತ್‌ನಿಂದ ಸಿದ್ಧತೆ

ಕಿಡಿಗೇಡಿ ಕೃತ್ಯಕ್ಕೆ ಮೂಡುಗಿಳಿಯಾರು ಪರಿಸರದ ನಾಗರಿಕರು ಕಿಡಿಕಿಡಿ

ಸಂಗಮ ವಿಶೇಷ

ಕೋಟ: ಇಲ್ಲಿನ ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಯ ಗಿಳಿಯಾರು, ಮೂಡುಗಿಳಿಯಾರು ಭಾಗದತ್ತ ಹರಿಯುವ ವಾರಾಹಿ ನೀರಿಗೆ ಈಗ ಕಿಡಿಕೆಡಿಗಳು ಸಂಚಾಕಾರ ತಂದೊಡ್ಡುತ್ತಿದ್ದಾರೆ.

ಇದರ ಪರಿಣಾಮವಾಗಿ ಕುಂದಾಪುರ ತಾಲೂಕಿನ ಮೂಲಕ ಬ್ರಹ್ಮಾವರ ತಾಲೂಕು ಕೋಟ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬೇಸಿಗೆಯಲ್ಲಿನ ಬರ ನಿಗಿಸುವ ವಾರಾಹಿ ನೀರು ಈಗ ಬನ್ನಾಡಿ ಹೊಳೆಗೆ ಸೇರಲ್ಪಡುತ್ತಿದೆ.

ಅಸಲಿಗೆ ಸಮಸ್ಯೆ ಆಗಿದ್ದೇನು?

ಬೇಸಿಗೆಯಲ್ಲಿ ಮೂಡುಗಿಳಿಯಾರು ಭಾಗದ ಹಲವು ವ್ಯಾಪ್ತಿಗಳಿಗೆ ಬೇಳೂರು, ವಡ್ಡರ್ಸೆ ಗ್ರಾಮ ಪಂಚಾಯತ್ ವ್ಯಾಪ್ತಿ ಯಾಳಹಕ್ಲು ಭಾಗದ ಮೂಲಕ ಹೊಳೆ, ತೋಡುಗಳಲ್ಲಿ ನೀರು ತಲುಪುತ್ತಿತ್ತು. ಆದರೆ ಮೂಡು ಗಿಳಿಯಾರಿನ ಆಚಾರ್‌ಒಳಲು ಎಂಬ ಭಾಗದಲ್ಲಿ ಅಳವಡಿಸಿದ ಮರದ ಹಲಗೆಗೆ ಎರಡೆರಡು ಬಾರಿ ಕಿಡಿಗೇಡಿಗಳು ಹಾನಿಗೊಳಿಸಿದ್ದರಿಂದ ಮೂಡುಗಿಳಿಯಾರು ಭಾಗಕ್ಕೆ ತಲುಪಬೇಕಿದ್ದ ನೀರು ಸರಬರಾಜು ಅವ್ಯವಸ್ಥೆಗೊಂಡಿದೆ. ಈ ಹಿನ್ನೆಲ್ಲೆಯಲ್ಲಿ ಈ ಬಗ್ಗೆ ಕೋಟ ಪಂಚಾಯತ್ ವ್ಯಾಪ್ತಿಯ ಗಿಳಿಯಾರು ಮತ್ತು ಮೂಡುಗಿಳಿಯಾರು ಗ್ರಾಮಸ್ಥರು ಆಕ್ರೋಶ ಹೊರಹಾಕಿದ್ದು ಶೀಘ್ರದಲ್ಲೇ ಈ ಬಗ್ಗೆ ಸಮರ್ಪಕ ಕ್ರಮಕೈಗೊಳ್ಳಲು ಆಗ್ರಹಿಸಿವೆ. »ಪುಟ 6





ಸಿಸಿ ಟಿವಿ ಕ್ಯಾಮರಾ ಅಳವಡಿಸಿ ಕಣ್ಗಾವಲು

ಸ್ಥಳ ಪರಿಶೀಲನೆ ನಡೆಸಿದ್ದೇವೆ. ಎರಡು ಬಾರಿ ಹಲಗೆ ತೆಗೆದು ಸಮಸ್ಯೆ ಉಂಟುಮಾಡುತ್ತಿದ್ದಾರೆ ಈ ಬಗ್ಗೆ ಸಂಬಂಧಿಸಿದ ಇಲಾಖೆಗೆ ಮಾಹಿತಿ ನೀಡಲಾಗಿದೆ. ಶೀಘ್ರ ಹಲಗೆ ಜೋಡಣೆ ಮಾಡುವುದಾಗಿ ಭರವಸೆ ನೀಡಿದ್ದಾರೆ. ಸಿಸಿ ಟಿವಿ ಕ್ಯಾಮರ ಅಳವಡಿಸಿ ಇಲ್ಲಿ ಸೂಕ್ತ ಕಣ್ಗಾವಲು ಇರಿಸಲಾಗುವುದು

• ಉಮೇಶ್., ಕೋಟ ಗ್ರಾಪಂ ಪಿಡಿಒ

ಮೂಡುಗಿಳೀಯಾರಿನ ಜೀವನಾಡಿ ಈ ವಾರಾಹಿ

ಮೂಡುಗಿಳಿಯಾರಿನ ಜೀವನಾಡಿಯಾಗಿ ವಾರಾಹಿ ನೀರು ಕಳೆದ ಸಾಕಷ್ಟು ವರ್ಷಗಳಿಂದ ಜೀವ ತುಂಬುತ್ತಿದೆ. ಪ್ರತಿವರ್ಷ ಒಂದಲ್ಲ ಒಂದು ರೀತಿಯಲ್ಲಿ ಸಮಸ್ಯೆ ಸೃಷ್ಟಿಯಾಗುತ್ತಿದೆ ಇದಕ್ಕೆ ಸಂಬಂಧಿಸಿದ ಇಲಾಖೆ ಕಠಿಣ ಕ್ರಮ ಕೈಗೊಳ್ಳಬೇಕು. ಡ್ಯಾಮ್‌ಗೆ ಅಳವಡಿಸಿದ ಮರದ ಹಲಗೆಯನ್ನು ಶೀಘ್ರಗತಿಯಲ್ಲಿ ಮರು ಜೋಡಿಸಿ ಅಲ್ಲಿ ಸಿಸಿ ಟಿವಿ ಕ್ಯಾಮರಾ ಅಳವಡಿಸಿ ಕಣ್ಗಾವಲು ಇರಿಸಬೇಕು ಎಂದು ಸ್ಥಳೀಯರಾದ ಸುರೇಶ್ ಗಿಳಿಯಾರು ಆಡಳಿತ ವ್ಯವಸ್ಥೆಯನ್ನು ಆಗ್ರಹಿಸಿದ್ದಾರೆ.

ಸುತ್ತಮುತ್ತ

ಎಸ್‌ಡಿಎಂ ಕಾಲೇಜಿನಲ್ಲಿ ಇಂದು ಕ್ಯಾಂಪಸ್ ಸಂದರ್ಶನ

ಬೆಳ್ತಂಗಡಿ: ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಮಹಾವಿದ್ಯಾಲಯದಲ್ಲಿ ಇಂದು (ಮಾ.13) ಕ್ಯಾಂಪಸ್ ಸಂದರ್ಶನ ನಡೆಯಲಿದೆ. ಸಂದರ್ಶನದಲ್ಲಿ ವಿವಿಧ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸಂಸ್ಥೆಗಳು ಭಾಗವಹಿಸಲಿದೆ. ಮುನಿಯಾಲು ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಸಂಸ್ಥೆ (ಮಣಿಪಾಲ, ಉಡುಪಿ), ಜಿ. ಮಾದೇಗೌಡ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಸಂಸ್ಥೆ ಮಂಡ್ಯ, ಸ್ವಾಮಿ ವಿವೇಕಾನಂದ ಹೊಲಿಸ್ಟಿಕ್ ಹೆಲ್ತ್ ಮತ್ತು ಹೀಲಿಂಗ್ ಸೆಂಟರ್ ರಾಯಚೂರು, ಹಾಗೂ ಮಂಥೇನ ಸತ್ಯನಾರಾಯಣ ರಾಜು ಪ್ರಕೃತಿ ಚಿಕಿತ್ಸಾ ಮತ್ತುಆಸ್ಪತ್ರೆ ಆಂಧ್ರಪ್ರದೇಶದ ಸಂಸ್ಥೆಗಳು ಪಾಲ್ಗೊಳ್ಳಲಿವೆ. ಈ ಸಂಸ್ಥೆಗಳ ಪ್ರತಿನಿಧಿಗಳು ವಿದ್ಯಾರ್ಥಿಗಳೊಂದಿಗೆ ನೇರವಾಗಿ ಮಾತುಕತೆ ನಡೆಸಿ ಅವರ ಅರ್ಹತೆ, ಕೌಶಲ್ಯ ಹಾಗೂ ಆಸಕ್ತಿಯನ್ನು ಆಧರಿಸಿ ಆಯ್ಕೆ ಪ್ರಕ್ರಿಯೆ ನಡೆಸಲಿದ್ದಾರೆ.

ನಾಳೆ ವಿದ್ಯಾರ್ಥಿ ಸಂಘದ ಪದಗ್ರಹಣ

ಮಂಗಳೂರು: ನಗರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನ ನೂತನ ಪೂರ್ವ ವಿದ್ಯಾರ್ಥಿ ಸಂಘದ ಪದಗ್ರಹಣ ಸಮಾರಂಭ ಮಾ. 14ರಂದು ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ದಕ್ಷಿಣ ಕನ್ನಡ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಬಸವರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು ಶಾಸಕರಾದ ವೇದವ್ಯಾಸ ಕಾಮತ್ ಹಾಗೂ ಐವನ್ ಡಿಸೋಜ ಅಭ್ಯಾಗತರಾಗಿ ಭಾಗವಹಿಸುವರು. ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲ ಪಿ. ಪಿ. ಹೆಗ್ಡೆ ವಿದ್ಯಾರ್ಥಿವೇತನ ವಿತರಿಸಲಿದ್ದು ಸರ್ವೋಚ್ಚ ನ್ಯಾಯಾಲಯದ ವಕೀಲ ರೋಹಿತ್ ರಾವ್ ಪೂರ್ವ ವಿದ್ಯಾರ್ಥಿ ಸಂಘದ ನೂತನ ಲಾಂಛನವನ್ನು ಅನಾವರಣಗೊಳಿಸಲಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಡಾ.ತಾರಾನಾಥ ಅಧ್ಯಕ್ಷತೆ ವಹಿಸಲಿದ್ದು, ಭಾರತೀಯ ರೆಡ್‌ಕ್ರಾಸ್ ದಕ್ಷಿಣ ಕನ್ನಡ ಜಿಲ್ಲಾ ಅಧ್ಯಕ್ಷ ಶಾಂತಾರಾಮ ಶೆಟ್ಟಿ, ವಕೀಲರ ಸಂಘದ ಅಧ್ಯಕ್ಷ ರಾಘವೇಂದ್ರ ಎಚ್. ವಿ., ಪೂರ್ವ ವಿದ್ಯಾರ್ಥಿ ಸಂಘದ ನಿಕಟಪೂರ್ವ ಅಧ್ಯಕ್ಷ ಡಾ. ದೇವರಾಜ್ ಮುಖ್ಯ ಅತಿಥಿಗಳಾಗಿರುತ್ತಾರೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಅನಫ್ ಎಂ. ಕೊಳಚೆಪ್ಪು ಜಿಲ್ಲಾಮಟ್ಟಕ್ಕೆ ಆಯ್ಕೆ

ಉಪ್ಪಿನಂಗಡಿ: ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವತಿಯಿಂದ ಸಂಘಟಿಸಲ್ಪಟ್ಟ



ಇನ್‌ಸ್ಪೈರ್ ಮಾನಕ್ ಅವಾರ್ಡ್‌ಗೆ ಇಂದ್ರಪ್ರಸ್ಥ ವಿದ್ಯಾಲಯದ 8ನೇ ತರಗತಿಯ ಅನಫ್ ಎಂ ಕೊಳಚೆಪ್ಪು ಇವರ 'ಶ್ರಮಿಕ-ಯುಸರ್ ಫ್ರೆಂಡ್ಲಿ ಆಟೋಫೇವರ್ ಲೇಯಿಂಗ್ ಮಷೀನ್' (SHRAMIKA – USER FRIENDLY AUTO FAVOUR LAYING MACHINE) ಎಂಬ ಶೀರ್ಷಿಕೆಯ ಯೋಜನೆಯು ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದೆ. ಈ ಯೋಜನೆಗೆ ಇಲ್ಲಿನ ವಿಜ್ಞಾನ ಶಿಕ್ಷಕಿಯರಾದ ವೀಣಾ ಜಿ. ಹಾಗೂ ನಿಶಿತಾ ಕೆ.ಕೆ. ಮಾರ್ಗದರ್ಶನ ನೀಡಿರುತ್ತಾರೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸ್ವಾಧೀನ ಪ್ರಮಾಣ ಪತ್ರಕ್ಕೆ ವಿನಾಯಿತಿ ನೀಡುವಂತೆ ಕಿಶೋರ್ ಮನವಿ

ಪುತ್ತೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ನಿರ್ಮಿಸಿರುವ ಮನೆಗಳಿಗೆ ಮತ್ತು 94 ಸಿ ಹಕ್ಕುಪತ್ರದ ನಿವೇಶನಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ಮತ್ತು ಇತರ ಕಟ್ಟಡಗಳಿಗೆ



ಸ್ವಾಧೀನ ಪ್ರಮಾಣ ಪತ್ರ (ಒ.ಸಿ.) ದಿಂದ ವಿನಾಯಿತಿ ನೀಡುವಂತೆ ಕಿಶೋರ್ ಕುಮಾರ್ ಪುತ್ತೂರು ಒತ್ತಾಯಿಸಿದ್ದಾರೆ. ಈ ವಿಚಾರದ ಬಗ್ಗೆ ವಿಧಾನ ಪರಿಷತ್ತಿನ ಅಧಿವೇಶನದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಶಾಸಕರು, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ (ಕಟ್ಟಡಗಳ ನಿರ್ಮಾಣದ ಮೇಲೆ ಜಿಲ್ಲಾಪಂಚಾಯತ್‌ಗಳು, ತಾ.ಪಂ.ಗಳ ಮತ್ತು ಗ್ರಾ.ಪಂ.ಗಳ ನಿಯಂತ್ರಣ) (2ನೇ ತಿದ್ದುಪಡಿ) ಮಾದರಿ ಉಪ ವಿಧಿಗಳು, 2025ರ ಉಪವಿಧಿ 13ರಡಿ ಸರ್ಕಾರಕ್ಕೆ ಪ್ರದತ್ತವಾಗಿರುವ ಅಧಿಕಾರದಂತೆ 1200 ಚ.ಅ. ವಿಸ್ತೀರ್ಣದ ವರೆಗಿನ ನಿವೇಶನಗಳಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸಲಾಗಿರುವ ನೆಲ + 2 ಅಂತಸ್ತು ಅಥವಾ ಸ್ಟಿಲ್ಟ್ +3 ಅಂತಸ್ತಿನವರೆಗಿನ ವಸತಿ ಕಟ್ಟಡಗಳಿಗೆ ಸ್ವಾಧೀನಾನುಭವ / ಅಧಿಭೋಗ ಪ್ರಮಾಣ ಪತ್ರ (ಒ.ಸಿ.) ಪಡೆಯುವುದರಿಂದ ವಿನಾಯಿತಿ ನೀಡಿ ಸರ್ಕಾರದ ಆದೇಶ ಸಂಖ್ಯೆ ಆರ್.ಡಿ.ಪಿ.ಆರ್. 856/ಜಿಪಿಎ/2025 ದಿನಾಂಕ 31.12.2025ರಂದು ವಿನಾಯಿತಿ ನೀಡಿ ಆದೇಶಿಸಿತ್ತು ಎಂದರು. ಆದರೆ, ಈ ಆದೇಶದಿಂದ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಪ್ರಯೋಜನವಾಗದ ಕಾರಣ ಮತ್ತು ಆದೇಶದಲ್ಲಿ ಸ್ಪಷ್ಟತೆ ಇಲ್ಲದೆ ಇರುವುದರಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ, ನಕ್ಷೆ ಮಂಜೂರಾತಿ ಪಡೆಯದೆ ಭೂ ಪರಿವರ್ತಿತ ಮತ್ತು ಭೂ ಪರಿವರ್ತನೆಯಾಗದ ಜಮೀನಿನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ವಸತಿ ಯೋಜನೆಯಡಿ ನಿರ್ಮಿಸಿರುವ ಮನೆಗಳಿಗೆ, 94 ಸಿ ಹಕ್ಕುಪತ್ರದ ನಿವೇಶನಗಳಲ್ಲಿ ನಿರ್ಮಿಸಿರುವ ಮನೆಗಳಿಗೆ ಮತ್ತು ಇತರ ಕಟ್ಟಡಗಳಿಗೆ ಸ್ವಾಧೀನ ಪ್ರಮಾಣ ಪತ್ರ (ಒ.ಸಿ) ದಿಂದ ವಿನಾಯಿತಿ ನೀಡುವ ಮೂಲಕ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮತ್ತು ಸ್ವಾಧೀನ ಪ್ರಮಾಣ ಪತ್ರ ವಿನಾಯಿತಿಯ ಸದರಿ ಸರ್ಕಾರದ ಆದೇಶದಲ್ಲಿರುವ ನಿವೇಶನ ಎಂಬ ವ್ಯಾಖ್ಯಾನವನ್ನು ತೆಗೆದು ಗ್ರಾಮೀಣ ಭಾಗದಲ್ಲಿರುವ ಕಟ್ಟಡವನ್ನು ಮಾತ್ರ ಪರಿಗಣಿಸಿ ಪರಿಷ್ಕೃತ ಆದೇಶವನ್ನು ಹೊರಡಿಸಲು ಕೂಡಲೇ ಕ್ರಮ ವಹಿಸುವಂತೆ ಕಿಶೋರ್ ಕುಮಾರ್ ಪುತ್ತೂರು ಆಗ್ರಹಿಸಿದರು.

ಕಡಬದಲ್ಲಿ 3 ಎಕರೆ ಜಮೀನಿನಲ್ಲಿ ಕಟ್ಟಡ ನಿರ್ಮಿಸಲು ನಕ್ಷೆ ತಯಾರಿ | ಬಾಡಿಗೆ ಕಟ್ಟಡದಲ್ಲಿ ಕಲಾಪಕ್ಕೆ ಸಿದ್ಧತೆ

ನ್ಯಾಯಾಲಯ ಆರಂಭದ ಕನಸು ನನಸಾಗುವ ಕಾಲ ಸನ್ನಿಹಿತ

■ ತುಳಸಿ ಕಡಬ





ಕಡಬ: ಜನರ ಅನುಕೂಲಕ್ಕಾಗಿ ಕಡಬದಲ್ಲಿ ನ್ಯಾಯಾಲಯ ಆರಂಭವಾಗಬೇಕೆನ್ನುವ ಹಲವು ಸಮಯದ ಬೇಡಿಕೆ ಈಡೇರುವ ಕಾಲ ಸನ್ನಿಹಿತವಾಗಿದ್ದು, ಬಾಡಿಗೆ ಕಟ್ಟಡದಲ್ಲಿ ನ್ಯಾಯಾಲಯದ ಕಲಾಪ ಆರಂಭಿಸುವ ನಿಟ್ಟಿನಲ್ಲಿ ಪೂರ್ವ ಸಿದ್ಧತೆಗಳು ಈಗಾಗಲೇ ಆರಂಭಗೊಂಡಿವೆ.

ಕಡಬ ಪೇಟೆಯಲ್ಲಿ ತಾಲೂಕು ಆಡಳಿತ ಸೌಧದ ಅನತಿ ದೂರದಲ್ಲಿರುವ ಸುಂದರ ಗೌಡ ಮಂಡೆಕರ ಅವರ ಮಾಲಕತ್ವದ ಕಟ್ಟಡದ 1 ಮತ್ತು 2ನೇ ಮಹಡಿಯಲ್ಲಿ ಬಾಡಿಗೆ ಆಧಾರದಲ್ಲಿ ನ್ಯಾಯಾಲಯದ ಕಲಾಪ ನಡೆಸಲು ಬೇಕಾದ ಕೋರ್ಟ್ ಹಾಲ್, ನ್ಯಾಯಾಧೀಶರ ಕೊಠಡಿ, ಕಡತಗಳ ಕೊಠಡಿ, ಎಪಿಪಿ ಕೊಠಡಿ, ಶೌಚಾಲಯ ಇತ್ಯಾದಿಗಳನ್ನು ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳ ಉಸ್ತುವಾರಿಯಲ್ಲಿ ಸಿದ್ಧಪಡಿಸಲಾಗುತ್ತಿದೆ. ಮುಂದಿನ 2-3 ತಿಂಗಳೊಳಗೆ ಹೈಕೋರ್ಟ್‌ನ ಅನುಮತಿ ಲಭಿಸಿ ಕಡಬ ತಾಲೂಕಿನ ವ್ಯಾಪ್ತಿಗೆ ಸಂಬಂಧಿಸಿದ ನ್ಯಾಯಾಲಯದ ಕಲಾಪ ಕಡಬದಲ್ಲಿಯೇ ನಡೆಯುವ ನಿರೀಕ್ಷೆಲಾಗಿದೆ.

ಜನರಿಗೆ ಅನುಕೂಲ

ಕಡಬ ತಾಲೂಕಿನ ವ್ಯಾಪ್ತಿಗೊಳಪಟ್ಟ ಗ್ರಾಮಗಳ ಪ್ರಕರಣಗಳ ಕಡತಗಳನ್ನು ಈಗಾಗಲೇ ಪುತ್ತೂರು ತಾಲೂಕಿನಿಂದ ಬೇರ್ಪಡಿಸಿ ವಿಂಗಡಿಸಲಾಗಿದ್ದು ಪುತ್ತೂರು ನ್ಯಾಯಾಲಯದಲ್ಲಿ ಕಡಬ ತಾಲೂಕಿನ ವ್ಯಾಪ್ತಿಯ ಪ್ರಕರಣಗಳ ಪ್ರತ್ಯೇಕ ಕಲಾಪಗಳು ನಡೆಯುತ್ತಿವೆ. ನ್ಯಾಯಾಲಯ ಆರಂಭಗೊಂಡು ಕಡಬ ತಾಲೂಕಿಗೆ ಸಂಬಂಧಿಸಿದ ನ್ಯಾಯಾಲಯ ಕಲಾಪಗಳು ಕಡಬದಲ್ಲಿಯೇ ನಡೆಯುವಂತಾದರೆ ಸಾರ್ವಜನಿಕರಿಗೆ ಸಮಯ ಹಾಗೂ ಆರ್ಥಿಕ ಉಳಿತಾಯದಿಂದಾಗಿ ಅನುಕೂಲವಾಗಲಿದೆ. ನೂತನ ಕಟ್ಟಡಗಳು ನಿರ್ಮಾಣವಾಗಲು ಕಾಲಾವಕಾಶ ಬೇಕಿರುವುದರಿಂದ ತಾತ್ಕಾಲಿಕ ನೆಲೆಯಲ್ಲಿ ಬಾಡಿಗೆ ಕಟ್ಟಡದಲ್ಲಿ ನ್ಯಾಯಾಲಯ ಆರಂಭಗೊಳ್ಳಲಿದೆ.

ಸಬ್ ರಿಜಿಸ್ಟ್ರಾರ್ ಕಚೇರಿ ಬೇಕು

ನೂತನ ಕಟ್ಟಡಗಳು ನಿರ್ಮಾಣವಾಗಲು ಕಾಲಾವಕಾಶ ಬೇಕಿರುವುದರಿಂದ ಜನರ ಅನುಕೂಲಕ್ಕಾಗಿ ಖಾಸಗಿ ಬಾಡಿಗೆ ಕಟ್ಟಡದಲ್ಲಿ ನ್ಯಾಯಾಲಯದ ಕಲಾಪಗಳು ಆರಂಭವಾಗಲಿದೆ ಎನ್ನುವುದು ಸಂತಸದ ಸಂಗತಿ. ಕಡಬ ತಾಲೂಕಿನ ಜನರು ನ್ಯಾಯಾಲಯದ ಕಲಾಪಗಳಿಗಾಗಿ ಸುಳ್ಯ ಹಾಗೂ ಪುತ್ತೂರಿಗೆ ಅಲೆಯುವುದನ್ನು ತಪ್ಪಿಸಲು ಕಡಬದಲ್ಲಿಯೇ ನ್ಯಾಯಾಲಯ ಸಂಕೀರ್ಣ ಶೀಘ್ರ ಪ್ರಾರಂಭವಾಗಬೇಕು ಎನ್ನುವುದು ಎಲ್ಲರ ಬೇಡಿಕೆ. ಹಾಗೆಯೇ ಕಡಬದಲ್ಲಿ ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಕಚೇರಿಯನ್ನು ಕೂಡ ತೆರೆಯಬೇಕು ಎನ್ನುವುದು ನಮ್ಮ ಆಗ್ರಹ.

● ಲೋಕೇಶ್ ಎಂ.ಜಿ., ಕಡಬ ವಕೀಲರ ಬಳಗದ ಮುಂದಾಳು

ನಿರ್ಮಾಣಕ್ಕೆ ನಕ್ಷೆ ತಯಾರಿ

ಕಡಬದಲ್ಲಿ ನ್ಯಾಯಾಲಯ ಸಂಕೀರ್ಣ, ನ್ಯಾಯಾಧೀಶರ ವಸತಿಗೃಹ, ವಕೀಲರ ಭವನ ಹಾಗೂ ನ್ಯಾಯಾಲಯ ಸಿಬ್ಬಂದಿಗಳ ವಸತಿ ಗೃಹಗಳ ನಿರ್ಮಾಣಕ್ಕಾಗಿ ಕಡಬ ತಾಲೂಕು ಆಡಳಿತ ಸೌಧದ ಹಿಂಭಾಗದಲ್ಲಿ 3 ಎಕರೆ ಜಮೀನು ಕಾದಿರಿಸಲಾಗಿದೆ. ಕಾದಿರಿಸಿರುವ ಜಮೀನು ಪೊಲೀಸ್ ಇಲಾಖೆ ಹಾಗೂ ಕಂದಾಯ ಇಲಾಖೆಯ ಕಚೇರಿಗಳಿಗೆ ಹತ್ತಿರದಲ್ಲಿದ್ದು ಸಾರ್ವಜನಿಕರಿಗೆ ಬಂದು ಹೋಗಲು ಅನುಕೂಲಕರವಾಗಿ ಎಲ್ಲಾ ರೀತಿಯಿಂದಲೂ ಸೂಕ್ತವಾಗಿದೆ. ಹೈಕೋರ್ಟ್ ಸೂಚನೆಯಂತೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳು ಸ್ಥಳ ಪರಿಶೀಲನೆ ನಡೆಸಿ ಕಾದಿರಿಸಿದ ಜಮೀನಿಗೆ ಯಾವ ರೀತಿ ಸಂಪರ್ಕ ರಸ್ತೆ ನಿರ್ಮಿಸಬಹುದು, ಯಾವ ಯಾವ ಭಾಗದಲ್ಲಿ ಕಟ್ಟಡಗಳನ್ನು ರಚಿಸಬಹುದು ಎನ್ನುವ ಕುರಿತು ಸಮಗ್ರ ವರದಿಯನ್ನು ಚೀಫ್ ಆರ್ಕಿಟೆಕ್ಟ್‌ಗೆ ಹಸ್ತಾಂತರಿಸಿದ್ದಾರೆ. ಅವರು ನಕ್ಷೆ ತಯಾರಿಸಿ ಪರಿಶೀಲನೆಗಾಗಿ ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ ಎಂದು ತಿಳಿದು ಬಂದಿದೆ.

ಕಲ್ಲಡ್ಕ ಮಹಾವಿದ್ಯಾಲಯ: ಭಾರತೀಯ ಜ್ಞಾನ ಪರಂಪರೆಯ ಘಟಕ ಉದ್ಘಾಟನೆ



ಬಂಟ್ವಾಳ: ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಧಾರವಾಡ, ಶ್ರೀ ರಾಮ ಪ್ರಥಮ ದರ್ಜೆ ಮಹಾವಿದ್ಯಾಲಯ ಕಲ್ಲಡ್ಕ ಹಾಗೂ ವಿದ್ಯಾಭಾರತಿ ಉಚ್ಚ ಶಿಕ್ಷಾ ಸಂಸ್ಥಾನ, ಕರ್ನಾಟಕ ಇವುಗಳ ಸಹಯೋಗದೊಂದಿಗೆ ಭಾರತೀಯ ಜ್ಞಾನ ಪರಂಪರೆಯ ಘಟಕದ ಉದ್ಘಾಟನಾ ಕಾರ್ಯಕ್ರಮ ಕಲ್ಲಡ್ಕ ಶ್ರೀರಾಮ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ನಡೆಸಲಾಯಿತು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ ಅವರು ಶ್ರೀರಾಮ ಪದವಿ ವಿಭಾಗದ ಘಟಕ ಉದ್ಘಾಟಿಸಿ, ಭಾರತದ ಜ್ಞಾನ ಪರಂಪರೆಯ ವಿಚಾರಗಳನ್ನು ಪ್ರತಿಯೊಬ್ಬ ಭಾರತೀಯನೂ ತಿಳಿದುಕೊಳ್ಳುವುದು ಇಂದಿನ ಅಗತ್ಯವಿದೆ. ಇಂತಹ ಜ್ಞಾನ ಪರಂಪರೆ ನಮ್ಮ ಹೆಮ್ಮೆಯಾಗಿದೆ ಎಂದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ಸಹಾಯಕ ಪ್ರತೀಕ್ ಮಾಳಿ ಭಾರತೀಯ ಜ್ಞಾನ ಪರಂಪರೆಯ ಮಹತ್ವವನ್ನು ತಿಳಿಸಿದರು.

ಬಳಿಕ ಉಡುಪಿಯ ಆಸೆಮ್ಸ್ ಕಾಲೇಜಿನ ಪ್ರಾಂಶುಪಾಲರು, ಪ್ರಖ್ಯಾತ ಯಕ್ಷಗಾನ ಕಲಾವಿದರು, ಪ್ರಸಂಗಕರ್ತರಾದ ಪ್ರೊ. ಡಾ. ಪವನ್ ಕಿರಣಕೆರೆ ಅವರು 'ಭಾರತೀಯ ಜ್ಞಾನಪರಂಪರೆ- ಪ್ರಾಚೀನತೆಯಿಂದ ಆಧುನಿಕತೆಯೆಡೆಗೆ' ಎಂಬ ವಿಷಯದ ಕುರಿತಾಗಿ ಉಪನ್ಯಾಸ ನೀಡಿದರು.

ಕಾಲೇಜಿನ ಉಪಪ್ರಾಂಶುಪಾಲ ಸುಕನ್ಯಾ, ಘಟಕದ ಸಂಯೋಜಕ ಧನಂಜಯ ಉಪಸ್ಥಿತರಿದ್ದರು. ಇತ್ತೀಚೆಗೆ ನಡೆದ ಐಎಎಸ್ ಸಂಬಂಧಿತ ಪರೀಕ್ಷೆಯಲ್ಲಿ ಕಾಲೇಜಿನಲ್ಲಿ ಅಗ್ರಶ್ರೇಣಿ ಪಡೆದ ಬಿಕಾಂ ವಿದ್ಯಾರ್ಥಿ ಲವನೀಶ್ ಅವರನ್ನು ಅಭಿನಂದಿಸಲಾಯಿತು. ಪ್ರಾಂಶುಪಾಲ ಕೃಷ್ಣಪ್ರಸಾದ್ ಕಾಯರ್ ಕಟ್ಟೆ ಸ್ವಾಗತಿಸಿ, ಪ್ರಸ್ತಾವನೆಗೈದರು. ವಿದ್ಯಾರ್ಥಿ ಜಯಸೂರ್ಯ ನಿರೂಪಿಸಿದರು. ಘಟಕದ ಸಂಯೋಜಕ ಧನಂಜಯ ವಂದಿಸಿದರು.

ಪುತ್ತೂರು: ಬೆಟ್ಟದ ಶ್ರೀ ಮಹಾಲಕ್ಷ್ಮೀ ದೇವಿಗೆ ನಾಳೆ ಸೂರ್ಯ ರಶ್ಮಿಯ ಸ್ಪರ್ಶ

ಪುತ್ತೂರು: ಸೂರ್ಯನ ರಶ್ಮಿಯು ದೇವಿಯ ಬಿಂಬಕ್ಕೆ ಸ್ಪರ್ಶಿಸಲಿರುವ ರಾಜ್ಯದ ಎರಡನೇ ದೇವಸ್ಥಾನ ಎಂದು ಖ್ಯಾತಿ ಪಡೆದಿರುವ, ನಗರದ ರೈಲು ನಿಲ್ದಾಣದ ಬಳಿಯ ಕಾರಣಿಕ ಕ್ಷೇತ್ರ ಲಕ್ಷ್ಮೀದೇವಿ ಬೆಟ್ಟದ ಶ್ರೀ ಮಹಾಲಕ್ಷ್ಮೀ ದೇವಿಗೆ ಮಾ.14ರ ಮೀನ ಸಂಕ್ರಮಣದ ದಿನ ಮುಂಜಾನೆ ಸೂರ್ಯ ರಶ್ಮಿಯ ಸ್ಪರ್ಶವಾಗಲಿದೆ.



ವಿಶೇಷ ಪೂಜೆ

ಈ ಸಂದರ್ಭದಲ್ಲಿ ಮಹಾಲಕ್ಷ್ಮೀ ದೇವಿಗೆ ವಿಶೇಷ ಪೂಜೆ ನೆರವೇರಲಿದೆ. ಪುರಾತನ, ಕಾರಣಿಕ ಕ್ಷೇತ್ರವಾಗಿರುವ ಲಕ್ಷ್ಮೀದೇವಿ ಬೆಟ್ಟದ ಶ್ರೀ ಮಹಾಲಕ್ಷ್ಮೀ ಕ್ಷೇತ್ರದಲ್ಲಿ ಪ್ರತಿವರ್ಷ ಮೀನ ಸಂಕ್ರಮಣದ ಒಂದು ದಿನ ಮಾತ್ರವೇ ವಿಶೇಷವಾಗಿ ದೇವಿಯ ಬಿಂಬಕ್ಕೆ ಸೂರ್ಯನ ಕಿರಣಗಳ ಸ್ಪರ್ಶವಾಗಲಿದೆ. ಮುಂಜಾನೆಯ ವೇಳೆ ಸೂರ್ಯನ ಕಿರಣಗಳು ಕ್ಷೇತ್ರದ ಮೂರು ಬಾಗಿಲುಗಳನ್ನು ದಾಟಿ ಗರ್ಭಗುಡಿಯಲ್ಲಿ ನೆಲೆಯಾಗಿರುವ ದೇವಿಯ ಬಿಂಬಕ್ಕೆ ಸ್ಪರ್ಶವಾಗುತ್ತಿರುವುದು ಈ ಕ್ಷೇತ್ರದ ವಿಶೇಷತೆಯಾಗಿದೆ.

ಈ ದಿನ ಕ್ಷೇತ್ರದಲ್ಲಿ ಬೆಳಗ್ಗೆ 9.30ರಿಂದ ಲಕ್ಷ್ಮೀದೇವಿ ಭಕ್ತವೃಂದದವರಿಂದ ಭಜನೆ, ನಂತರ ಶ್ರೀಕೃಷ್ಣ ಉಪಾಧ್ಯಾಯ ಅವರಿಂದ ವೇದಘೋಷ ನಡೆಯಲಿದೆ. 7.30ರ ಸಮಯದಲ್ಲಿ ಸೂರ್ಯನ ಕಿರಣಗಳು ಕ್ಷೇತ್ರದ ಮೂರು ಬಾಗಿಲುಗಳನ್ನು ದಾಟಿ ಗರ್ಭಗುಡಿಯಲ್ಲಿ ನೆಲೆಯಾಗಿರುವ ಮಹಾಲಕ್ಷ್ಮೀ ಬಿಂಬದ ಮೇಲೆ ಸ್ಪರ್ಶಿಸಲಿದೆ. ಈ ಸಂದರ್ಭದಲ್ಲಿ ಕ್ಷೇತ್ರದ ಧರ್ಮದರ್ಶಿ ಐತ್ತಪ್ಪ ಸಪಲ್ಯ ಅವರು ದೇವಿಗೆ ವಿಶೇಷ ಪೂಜೆ ಸಲ್ಲಿಸಲಿದ್ದಾರೆ ಎಂದು ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಬಿಂಬದ ಸ್ಪರ್ಶ

ಬೆಂಗಳೂರಿನ ಗವಿ ಗಂಗಾಧರೇಶ್ವರ ದೇವಸ್ಥಾನ ಹೊರತು ಪಡಿಸಿದರೆ ಸೂರ್ಯನ ರಶ್ಮಿಯು ಬಿಂಬ ವನ್ನು ಸ್ಪರ್ಶಿಸುವ ರಾಜ್ಯದ ಎರಡನೇ ದೇವಸ್ಥಾನ ಪುತ್ತೂರಿನ ಲಕ್ಷ್ಮೀದೇವಿ ಬೆಟ್ಟದ ಮಹಾಲಕ್ಷ್ಮೀ ಕ್ಷೇತ್ರವಾಗಿದೆ. ವರ್ಷದ ಕೊನೆಯ ಮಾಸವಾಗಿರುವ ಮೀನ ಸಂಕ್ರಮಣದಂದು ಸೂರ್ಯ ತನ್ನ ಪಥ ಬದಲಿಸುವ ಮಹತ್ವದ ಘಟ್ಟ. ಮೀನ ಸಂಕ್ರಮಣದಂದು ಸೂರ್ಯನ ರಶ್ಮಿ ದೇವಳದ ಗರ್ಭಗುಡಿಗೆ ಸ್ಪರ್ಶಿಸುವ ಪುಣ್ಯದಿನ ಲಕ್ಷ್ಮೀದೇವಿ ಬೆಟ್ಟದಲ್ಲಿ ಬೆಳಗ್ಗಿನ ಜಾವ ಸೂರ್ಯನ ಕಿರಣಗಳು ದೇವಿಯ ಬಿಂಬವನ್ನು ಸ್ಪರ್ಶಿಸಲಿದೆ. ಜನವರಿಯ ಮಕರ ಸಂಕ್ರಮಣದ ದಿನ ಗವಿಗಂಗಾಧರೇಶ್ವರ ದೇವಸ್ಥಾನದಲ್ಲಿ ಸಂಜೆ ವೇಳೆ ಸೂರ್ಯರಶ್ಮಿ ಸ್ಪರ್ಶಿಸುತ್ತದೆ.

ಭಕ್ತರ ಮನ ಸೆಳೆದ ರಥೋತ್ಸವ, ಆಕರ್ಷಕ ಸುಡುಮದ್ದು ಪ್ರದರ್ಶನ



ಬೆಳ್ತಂಗಡಿ: ತಾಲೂಕಿನ ಇತಿಹಾಸಪ್ರಸಿದ್ಧ ಉಜಿರೆ ಶ್ರೀ ಜನಾರ್ದನ ಸ್ವಾಮಿಯ ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ಮಾ.3ರಿಂದ 11ರವರೆಗೆ ನಡೆದು ದೇವರ ಬ್ರಹ್ಮರಥಾರೋಹಣದ ಮೂಲಕ ಸಮಾಪನಗೊಂಡಿತು.

ಮಾ. 11ರಂದು ಬೆಳಿಗ್ಗೆ ಶ್ರೀ ಜನಾರ್ದನ ಸ್ವಾಮಿಗೆ ಬ್ರಹ್ಮಕುಂಭಾಭಿಷೇಕ ನಡೆದರೆ, ರಾತ್ರಿ ನೂತನ ಪುಷ್ಪರಥದಲ್ಲಿ ದೇವಳದ ಸುತ್ತ ದೇವರ ಉತ್ಸವ ನಡೆಯಿತು. ಬಳಿಕ ಮಧ್ಯರಾತ್ರಿ ವೇಳೆಗೆ ನೂತನ ಬ್ರಹ್ಮರಥದಲ್ಲಿ ಕುಳ್ಳಿರಿಸಿ ಮಹಾ ರಥೋತ್ಸವ ನೆರವೇರಿತು.

ಸಹಸ್ರಾರು ಭಕ್ತಬಂಧುಗಳು ರಥಚಲನೆಯನ್ನು ಕಣ್ತುಂಬಿಸಿಕೊಂಡರು. ಇದೇ ವೇಳೆ ಆಕರ್ಷಕ ಸುಡುಮದ್ದು ಪ್ರದರ್ಶನ (ಉಜಿರೆ ಬೆಡಿ)ವೂ ನಡೆಯಿತು.

ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದದಲ್ಲಿ 'ಮಾತೃ ಪೂಜನ'



ವಿಟ್ಲ: ಮಹಾನ್ ವ್ಯಕ್ತಿಗಳು ತಾಯಿಯ ಪೋಷಣೆಯಲ್ಲೇ ಬೆಳೆದವರು. ತಾಯಿ ಮತ್ತು ಮಗುವಿನ ಸಂಬಂಧವೇ ವಾತ್ಸಲ್ಯ. ಮಕ್ಕಳಲ್ಲಿ ಪ್ರೀತಿಯೂ ಬೇಕು, ಭೀತಿಯೂ ಬೇಕು. ಪ್ರತಿಯೊಬ್ಬರಿಗೂ ತನ್ನ ಹೆತ್ತವರ ಆಶೀರ್ವಾದ ಅತ್ಯಂತ ಅವಶ್ಯಕ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ರಾಜಾಂಗಣದಲ್ಲಿ ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ವತಿಯಿಂದ ನಡೆದ ಮಾತೃ ಪೂಜನ ಕಾರ್ಯಕ್ರಮ-ಮಕ್ಕಳ ಹುಟ್ಟುಹಬ್ಬ ಆಚರಣೆ ಸಂದರ್ಭ ಆಶೀರ್ವಚನ ನೀಡಿದರು.

ಮಾತೃ ಪೂಜೆ ನಡೆಸುವುದರಿಂದ ವಿಶೇಷವಾದ ಮಹತ್ವವಿದೆ. ಮಾತೃತ್ವದಿಂದಲೇ ಮಾತೆಗೆ ಬಲ. ಮಕ್ಕಳು ದಾರಿ ತಪ್ಪದಂತೆ ಆಗಬೇಕಾದರೆ ಸಂಸ್ಕಾರ ಅಗತ್ಯ. ಮಕ್ಕಳನ್ನು ಬೆಳೆಸುವ ರೀತಿ ಹೇಗಿದೆ ಎಂಬ ಅರಿವಿರಬೇಕು. ಭಾರತೀಯ ಪರಂಪರೆಗೆ ಪೂರಕವಾಗಿ ಹುಟ್ಟುಹಬ್ಬವನ್ನು ಆಚರಿಸುವುದು ಅನುಸರಣೀಯ. ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಾಧ್ವಿ ಮಾತಾನಂದಮಯೀ, ಹೆತ್ತ ತಾಯಿ, ಹೊತ್ತ ಭೂಮಿ ನಮಗೆ ಪೂಜನೀಯರು. ಮಾತೃಪೂಜೆಯನ್ನು ಮಾಡುವುದು ಅದು ದುರ್ಗಾಪೂಜೆಗೆ ಸಮಾನವಾದುದು ಎಂದರು. ಮಕ್ಕಳು ಸಾಮೂಹಿಕವಾಗಿ ಹಣತೆ ಹಚ್ಚುವುದರ ಮೂಲಕ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಿಕೊಂಡರು. ಕುರೋಮೂಲೆ ಚಂದ್ರಶೇಖರ ಉಪಾಧ್ಯಾಯ ಮಾತೃಪೂಜನ ನಡೆಸಿಕೊಟ್ಟರು. ಮಾತೃ ಮಂಡಳಿ ಸಂಚಾಲಕಿ ಉಮಾ ಇದ್ದರು. ಒಡಿಯೂರು ಶ್ರೀ ಗುರುದೇವ ವಿದ್ಯಾಪೀಠದ ಸಂಚಾಲಕ ಸೇರಾಜೆ ಗಣಪತಿ ಭಟ್ ಪ್ರಸ್ತಾವಿಸಿದರು. ಶಾಲಾ ಮುಖ್ಯ ಶಿಕ್ಷಕಿ ರೇಣುಕಾ ಎಸ್. ರೈ ಸ್ವಾಗತಿಸಿ, ಸಹಶಿಕ್ಷಕಿ ಹೇಮಾವತಿ ವಂದಿಸಿದರು. ಶಿಕ್ಷಕ ಶೇಖರ್ ಶೆಟ್ಟಿ ಬಾಯಾರು ಕಾರ್ಯಕ್ರಮ ನಿರ್ವಹಿಸಿದರು.

ಕುಂಪನಮಜಲು ಶ್ರೀ ಕ್ಷೇತ್ರದ ಜೀರ್ಣೋದ್ಧಾರಕ್ಕೆ ಚಾಲನೆ: ಭೂಮಿಪೂಜೆ



ಬಂಟ್ವಾಳ: ಫರಂಗಿಪೇಟೆ ಸಮೀಪದ ಕುಂಪನಮಜಲುವಿನಲ್ಲಿ ಶ್ರೀ ದುರ್ಗಾ ಪರಮೇಶ್ವರೀ ವಾರಾಹಿ ಅಮ್ಮನವರ ಕ್ಷೇತ್ರದ ಜೀರ್ಣೋದ್ಧಾರದ ಪ್ರಯುಕ್ತ ಭೂಮಿ ಪೂಜೆ ಗುರುವಾರ ನಡೆಯಿತು.

ವಾಸ್ತುಶಿಲ್ಪಿ ರಮೇಶ್ ಕಾರಂತ ಅವರ ನೇತೃತ್ವದಲ್ಲಿ, ಸುಜೀರು ಗಣೇಶ್ ಭಟ್ ಅವರ ಪೌರೋಹಿತ್ಯದಲ್ಲಿ, ಧರ್ಮದರ್ಶಿ ಅರ್ಕುಳ ಬೀಡು ವಜ್ರನಾಭ ಶೆಟ್ಟಿ ಭೂಮಿ ಪೂಜೆ ನೆರವೇರಿಸಿದರು. ಈ ಸಂದರ್ಭ ಸದಾನಂದ ಆಳ್ವ ಕಂಪ, ರಾಜಗುಳಿಗ ಕ್ಷೇತ್ರದ ಧರ್ಮದರ್ಶಿ ಸತೀಶ್ ಬಂದಲೆ, ಶ್ರೀ ದುರ್ಗಾಪರಮೇಶ್ವರೀ ವಾರಾಹಿ ಅಮ್ಮನವರ ಸೇವಾ ಟ್ರಸ್ಟ್ ಅಧ್ಯಕ್ಷ ರಜತ್ ಶೆಟ್ಟಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಕುಮಾರ್ ಮಲೆಮಾರ್, ಧರ್ಮದರ್ಶಿ ಸುನೀಲ್ ಕುಮಾರ್, ಸೇವಾ ಟ್ರಸ್ಟ್ ಪದಾಧಿಕಾರಿಗಳು ಭಾಗವಹಿಸಿದ್ದರು.

ಕ್ಷೇತ್ರದಲ್ಲಿ ಶ್ರೀ ದುರ್ಗಾಪರಮೇಶ್ವರೀ ವಾರಾಹಿ ಅಮ್ಮನವರ ಸಹಿತ ಶ್ರೀ ಮಹಾಗಣಪತಿ, ಶ್ರೀ ಬಂಗಾರ ಮಂತ್ರದೇವತೆ, ಶ್ರೀ ಚಾಮುಂಡೇಶ್ವರೀ, ಶ್ರೀ ಮಹಾಕಾಳಿ, ಶ್ರೀ ರಕ್ತೇಶ್ವರೀ, ಶ್ರೀ ಮಾರಿಯಮ್ಮ, ಶ್ರೀ ನಾಗದೇವರು, ಶ್ರೀ ಶನೀಶ್ವರ, ಶ್ರೀ ಕಾಳಭೈರವ, ಸ್ವಾಮಿ ಕೊರಗ ತನಿಯ, ರಾಹುಗುಳಿಗ, ಕಲ್ಲುರ್ಟಿ- ಪಂಜುಲಿ ಮೊದಲಾದ ಸಪರಿವಾರ ಶಕ್ತಿಗಳು ಹಾಗೂ ಗುರು ಸಾನಿಧ್ಯವೂ ಕಂಡು ಬಂದಿದೆ. ನಿತ್ಯ ತ್ರಿಕಾಲ ಪೂಜೆ, ಸಂಕ್ರಮಣ ಸೇವೆ, ದುರ್ಗಾ ನಮಸ್ಕಾರ ಪೂಜೆ, ಶ್ರೀ ಬಂಗಾರ ಮಂತ್ರದೇವತೆ ಹಾಗೂ ಸ್ವಾಮಿ ಕೊರಗ ತನಿಯ ದೈವಗಳಿಗೆ ನರ್ತನ ಸೇವೆಗಳು ನಡೆದು ಕೊಂಡು ಬಂದಿದೆ. ಪ್ರಸ್ತುತ ಅಮ್ಮನವರ ನುಡಿಯಂತೆ, ಜೀರ್ಣೋದ್ಧಾರ ಸಮಿತಿ ರಚಿಸಿ ಕ್ಷೇತ್ರದ ಜೀರ್ಣೋದ್ಧಾರಕ್ಕೆ ಮುಂದಡಿಯಿಟ್ಟಿದ್ದು 3.50 ಕೋ. ರೂ. ವೆಚ್ಚದಲ್ಲಿ ದೇವಸ್ಥಾನ ನಿರ್ಮಾಣಕ್ಕೆ ತೀರ್ಮಾನಿಸಲಾಗಿದೆ.



ಉಜಿರೆ ಶ್ರೀ ಜನಾರ್ದನ ಸ್ವಾಮಿಯ ಬ್ರಹ್ಮಕಲಶೋತ್ಸವದ ಬಳಿಕ ದೇವಳದ ಸುತ್ತುಮುತ್ತ ಬಿದ್ದಿರುವ ಕಸ-ತ್ಯಾಜ್ಯವನ್ನು ಗುರುವಾರ ಮುಂಜಾನೆ ಉಜಿರೆ ಬೆನಕ ಹೆಲ್ತ್ ಸೆಂಟರ್‌ನ ಮುಖ್ಯ ವೈದ್ಯಾಧಿಕಾರಿಗಳ ಸಹಿತ ಸಿಬ್ಬಂದಿಗಳು ಸ್ವಚ್ಛತಾ ಕಾರ್ಯವನ್ನು ನಡೆಸಿದರು. ಆಸ್ಪತ್ರೆಯ ಸುಮಾರು 25ಕ್ಕೂ ಹೆಚ್ಚು ಸಿಬ್ಬಂದಿಗಳು ದೇವಳದ ಸುತ್ತ ಮುತ್ತ ಸಂಪೂರ್ಣ ಸ್ವಚ್ಛತೆಯನ್ನು ಮಾಡಿದರು. ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ಗೋಪಾಲಕೃಷ್ಣ ಭಟ್, ಡಾ. ಭಾರತಿ ಭಟ್ ಅವರ ನೇತೃತ್ವ ವಹಿಸಿದ್ದರು.



ಬಂಟ್ವಾಳದ ನರಹರಿ ಪರ್ವತ ಕ್ಷೇತ್ರದಲ್ಲಿ ಸಂಧ್ಯಾಭಜನೆಯು ರಾಜೇಶ್ ಅಮ್ಟೂರು ನೇತೃತ್ವದ 'ಸ್ವರ ಸಂಕೀರ್ತನಾ' ಬಳಗದವರಿಂದ ಜರಗಿತು. ಆಡಳಿತ ಮೊಕ್ತೇಸರ ಡಾ. ಪ್ರಶಾಂತ್ ಮಾರ್ಲ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ. ಆತ್ಮರಂಜನ್ ರೈ, ಮೊಕ್ತೇಸರರಾದ ಪ್ರತಿಭಾ ಎ.ರೈ ಭಜನಾ ಸಂಯೋಜಕ ಶಂಕರ್ ಆಚಾರ್ಯ,ಓಂ ಪ್ರಕಾಶ್, ಅರ್ಚಕ ಪರಮೇಶ್ವರಮಯ್ಯ, ಮ್ಯಾನೇಜರ್ ಆನಂದ್ ಹಾಗೂ ಎಂ.ಎನ್. ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಸುಮಾರು 10 ಕೋ.ರೂ. ವೆಚ್ಚದಲ್ಲಿ ನೂತನ ಕಟ್ಟಡ ನಿರ್ಮಾಣ | ಉದ್ಘಾಟನೆಗೆ ಸಚಿವರು, ಸಂಸದರು, ಶಾಸಕರಿಗೆ ಆಹ್ವಾನ

ಮುಲ್ಕಿ ಆಡಳಿತ ಕೇಂದ್ರ, ಪ್ರಜಾ ಸೌಧ ಲೋಕಾರ್ಪಣೆಗೆ ಕೊನೆಗೂ ಮುಹೂರ್ತ!

ಮುಲ್ಕಿ: ದ.ಕ.ಜಿಲ್ಲಾಡಳಿತ ಮತ್ತು ಕರ್ನಾಟಕ ಗೃಹ ಮಂಡಳಿ, ಮಂಗಳೂರುನ ಸಂಯುಕ್ತ ಆಶ್ರಯದಲ್ಲಿ ಮುಲ್ಕಿ ಕಾರ್ನಾಡಿನ ಗೇರುಕಟ್ಟೆಯಲ್ಲಿ ಸುಮಾರು 10 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡ 'ಪ್ರಜಾ ಸೌಧ' ತಾಲೂಕು ಆಡಳಿತ ಕೇಂದ್ರದ ಉದ್ಘಾಟನಾ ಸಮಾರಂಭಕ್ಕೆ ಜಿಲ್ಲಾಡಳಿತ ಕೊನೆಗೂ ಮುಹೂರ್ತ ಫಿಕ್ಸ್ ಮಾಡಿದ್ದು ಮಾ.14ರಂದು ಶನಿವಾರ ಬೆಳಗ್ಗೆ 10 ಗಂಟೆಗೆ ಲೋಕಾರ್ಪಣೆಗೊಳ್ಳಲಿದೆ.

ಕಳೆದ ಬಿಜೆಪಿ ಸರಕಾರದ ಅವಧಿಯಲ್ಲಿ ಮುಲ್ಕಿ ಮೂಡಬಿದಿರೆ ಕ್ಷೇತ್ರದ ಶಾಸಕ ಉಮಾನಾಥ ಕೋಟ್ಯಾನ್ ನೇತೃತ್ವದಲ್ಲಿ ಸುಮಾರು 10 ಕೋಟಿ ವೆಚ್ಚದಲ್ಲಿ ಅಂದಿನ ಬಿಜೆಪಿ ಸರಕಾರದ ವಸತಿ ಸಚಿವ ಸೋಮಣ್ಣರವರಿಂದ ಶಿಲಾನ್ಯಾಸಗೊಂಡ ತಾಲೂಕು



ಆಡಳಿತ ಸೌಧದ ನಿರ್ಮಾಣ ಕಾರ್ಯ ಭರದಿಂದ ಸಾಗಿ ಬಳಿಕ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಆಡಳಿತಕ್ಕೆ ಬಂದ ನಂತರ ಕಾಮಗಾರಿ ನಿಧಾನ ಗತಿಯಲ್ಲಿ ನಡೆದಿತ್ತು. ಆದರೂ ಶಾಸಕ ಉಮಾನಾಥ ಕೋಟ್ಯಾನ್ ಅವರ ಪ್ರಯತ್ನದಿಂದ ರಾಜ್ಯ ಕಂದಾಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಅನುದಾನ ಸಮರ್ಪಕವಾಗಿ ಬಳಸಿ ಕೊನೆಗೂ ತಾಲೂಕು ಆಡಳಿತ ಸೌಧ ಲೋಕಾರ್ಪಣೆಗೆ ಸಿದ್ಧವಾಗಿ ನಿಂತಿದೆ

ಎರಡು ಪಕ್ಷಗಳ ಬ್ಯಾನರ್, ಫ್ಲೆಕ್ಸ್ ಮೇಲಾಟ

ತಾಲೂಕು ಆಡಳಿತ ಸೌಧ ಲೋಕಾರ್ಪಣೆ ಬಗ್ಗೆ ರಾಜ್ಯದಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಮಿಥುನ್ ರೈ ನೇತೃತ್ವದಲ್ಲಿ ಅಲ್ಲಲ್ಲಿ ಫ್ಲೆಕ್ಸ್ ಅಳವಡಿಸಿದ್ದರೆ, ಇನ್ನೊಂದೆಡೆ ಸ್ಥಳೀಯ ಶಾಸಕ ಉಮಾನಾಥ್ ಕೋಟ್ಯಾನ್ ಅವರನ್ನು ಅಭಿನಂದಿಸಿ ಫ್ಲೆಕ್ಸ್ ಅಳವಡಿಸಲಾಗಿದೆ. ಸ್ಥಳೀಯ ಜೆಡಿಎಸ್ ಪಕ್ಷ ಕೂಡ ತಾನೇನು ಕಮ್ಮಿ ಇಲ್ಲ ಎಂಬಂತೆ ಸ್ಥಳೀಯ ನಾಯಕ ಜೀವನ್ ಶೆಟ್ಟಿ ನೇತೃತ್ವದಲ್ಲಿ ಮುಲ್ಕಿ ತಾಲೂಕು ರಚನೆಗೆ ಅಂದಿನ ರಾಜ್ಯದ ಮುಖ್ಯಮಂತ್ರಿ, ಕುಮಾರಸ್ವಾಮಿ ಪಾತ್ರ ಬಹಳಷ್ಟಿದ್ದು, ಅವರನ್ನು ಉದ್ಘಾಟನೆಗೆ ಮುಖ್ಯ ಅತಿಥಿಯಾಗಿ ಕರೆಯಬೇಕು ಎಂದು ಒತ್ತಾಯಿಸಿದೆ.

ಮಾ.14ರಂದು ಉದ್ಘಾಟನೆ

ಮಾ.14ಕ್ಕೆ ಬೆಳಿಗ್ಗೆ 10 ಗಂಟೆಗೆ ಕಾರ್ನಾಡ್ ಗೇರುಕಟ್ಟೆ ಜಂಕ್ಷನ್ ತಾಲೂಕು ಆಡಳಿತ ಕೇಂದ್ರ ಪ್ರಜಾ ಸೌಧದ ಉದ್ಘಾಟನೆಯನ್ನು ಕಂದಾಯ ಸಚಿವ ಕೃಷ್ಣ ಬೈರೇಗೌಡ ನೆರವೇರಿಸಲಿದ್ದುಮ, ಸ್ಪೀಕರ್ ಯು.ಟಿ. ಖಾದರ್ ಫರೀದ್, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಗೌರವ ಉಪಸ್ಥಿತಿಯಲ್ಲಿ ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಉಮಾನಾಥ ಕೋಟ್ಯಾನ್ ವಹಿಸಲಿದ್ದಾರೆ. ಕರ್ನಾಟಕ ಗೃಹ ಮಂಡಳಿ, ಬೆಂಗಳೂರಿನ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ, ಸಂಸದ ಕ್ಯಾ. ಬ್ರಿಜೇಶ್ ಚೌಟ, ರಾಜ್ಯ ಸಭಾ ಸದಸ್ಯ ಡಿ.ವೀರೇಂದ್ರ ಹೆಗ್ಗಡೆ, ಶಾಸಕರಾದ ಹರೀಶ್ ಪೂಂಜ, ಡಿ. ವೇದವ್ಯಾಸ ಕಾಮತ್, ಭಾಗೀರಥಿ ಮುರುಳ್ಯ, ಡಾ. ವೈ. ಭರತ್ ಶೆಟ್ಟಿ, ರಾಜೇಶ್ ನ್ಯಾಕ್, ಯು, ಅಶೋಕ್ ಕುಮಾರ್ ರೈ, ಡಿ. ವಿಧಾನ ಪರಿಷತ್ ಸದಸ್ಯ ಐವನ್ ಡಿ'ಸೋಜ, ಮಂಜುನಾಥ ಭಂಡಾರಿ, ಕಿಶೋರ್ ಬಿ.ಆರ್.,ಎಸ್. ಎಲ್. ಭೋಜೇಗೌಡ, ಪ್ರತಾಪಸಿಂಹ ನಾಯಕ್ ಕೆ.,ಡಾ. ಧನಂಜಯ ಸರ್ಜಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ. ಎ. ಗಫೂರ್, ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಅಧ್ಯಕ್ಷ ಟಿ.ಎಂ. ಶಾಹೀದ್ ತೆಕ್ಕಿಲ್, ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣದ ಸಂಸ್ಥೆಯ ಅಧ್ಯಕ್ಷೆ ಲಾವಣ್ಯ ಬಲ್ಲಾಳ್ ಜೈನ್, ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್, ಸಹಿತ ಮೊದಲಾದವರಿಗೆ ಆಹ್ವಾನ ನೀಡಲಾಗಿದೆ.

ನಿರಂತರ ಸುದ್ದಿ ಅಪ್ಡೇಟ್‌ಗಾಗಿ
Google Lens ನಲ್ಲಿ
ಈ QRಕೋಡ್ ಸ್ಕ್ಯಾನ್ ಮಾಡಿ
WhatsApp ಗ್ರೂಪ್ ಇಂದೇ ಸೇರಿ!

ನಿಮ್ಮೂರಿನ ಸುದ್ದಿ

ಹೊಸದಿಗಂತ ಸಂಗಮ 3

ಶುಕ್ರವಾರ 13, ಮಾರ್ಚ್ 2026 | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಪುಟ ಸಂಖ್ಯೆ

ಸುತ್ತ ಮುತ್ತ

ವರ್ಗಾವಣೆಗೊಂಡ ಪೊಲೀಸರಿಂದ ಅಧಿಕಾರ ಸ್ವೀಕಾರ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ವರ್ಗಾವಣೆಗೊಂಡು ಜಿಲ್ಲೆಯಲ್ಲಿ ನೇಮಕಗೊಂಡ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್‌ಗಳು ವಿವಿಧ ಠಾಣೆಗಳಲ್ಲಿ ಅಧಿಕಾರ ವಹಿಸಿಕೊಂಡಿದ್ದಾರೆ. ಅದರಂತೆ ಹೊಸದುರ್ಗ ಪೊಲೀಸ್ ಠಾಣೆಯ ನೂತನ ಸಿಐಯಾಗಿ ದಿನೇಶನ್ ಕೊತೇರಿ ಅಧಿಕಾರ ಸ್ವೀಕರಿಸಿದ್ದಾರೆ. ಬೇಡಗಂನಲ್ಲಿ ಪಿ.ಕೆ.ವಿನೋದ್‌ಕುಮಾರ್ ಮತ್ತು ಆದೂರಿನಲ್ಲಿ ಆರ್.ಸಿ.ಬಿನು ಹಾಗೂ ಚೀಮೇನಿಯಲ್ಲಿ ರಾಜನ್ ಜಿ.ನಂಬ್ಯಾರ್ ಸಿಐಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಮಾ.15ರಂದು ವಸಂತ ಸಂಗೀತೋತ್ಸವ

ಮಂಗಳೂರು: ಮಂಗಳೂರಿನ ದಿ ಗೌಡ ಸಾರಸ್ವತ ಬ್ರಾಹ್ಮಣ ಸೇವಾ ಸಂಘದ ವತಿಯಿಂದ ಶ್ರೀ ನಾರಾಯಣಿ ಸಂಗೀತ ಕಲಾ ಕೇಂದ್ರ ಸಹಯೋಗದೊಂದಿಗೆ ವಸಂತ ಸಂಗೀತೋತ್ಸವ ಕಾರ್ಯಕ್ರಮ ಮಾ.15ರಂದು ಸಂಜೆ 4ರಿಂದ ರಾತ್ರಿ 8ರವರೆಗೆ ನಗರದ ಸುಜೀರ್ ಸಿ. ವಿ. ನಾಯಕ್ ಹವಾನಿಯಂತ್ರಿತ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ವಿದುಷಿ ನಂದಿತಾ ಪೈ, ವಿಭಾ ನಾಯಕ್, ಶಾಂತೇರಿ ಕಾಮತ್ ಮತ್ತು ವಿದುಷಿ ಮೇಘಾ ಪೈ ಸೇರಿದಂತೆ ಪ್ರತಿಭಾನ್ವಿತ ಯುವ ಕಲಾವಿದರಿಂದ ಹಿಂದೂಸ್ತಾನಿ ಗಾಯನ ನಡೆಯಲಿದೆ. ಪಿ. ಕಾರ್ತಿಕ್ ಭಟ್ ಅವರಿಂದ ಬಾನ್ಸುರಿ ವಾದನ ಇರಲಿದೆ. ಶ್ರೀವತ್ಸ ಭಟ್ ಮತ್ತು ರಾಜೇಶ್ ಭಾಗವತ್ ತಬಲಾದಲ್ಲಿ ಮತ್ತು ಮೇಧಾ ಭಟ್ ಮತ್ತು ಹೇಮಂತ್ ಭಾಗವತ್ ಹಾರ್ಮೋನಿಯಂನಲ್ಲಿ ಸಾಥ್ ನೀಡಲಿದ್ದಾರೆ ಎಂದು ಜಿಎಸ್‌ಬಿ ಸೇವಾ ಸಂಘದ ಅಧ್ಯಕ್ಷ ಡಾ.ಕಸ್ತೂರಿ ಮೋಹನ್ ಪೈ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಾಂಪ್ರದಾಯಿಕ ಶಾಸ್ತ್ರೀಯ ರಾಗಗಳಿಗೆ ಹೊಂದಿಸಲಾದ ವಿಶೇಷ ಕೊಂಕಣಿ ಸಂಯೋಜನೆಗಳ ಪ್ರಸ್ತುತಿ ಕಾರ್ಯಕ್ರಮದ ವಿಶೇಷವಾಗಿದೆ. ಕೇಳುಗರಿಗೆ ಮುಕ್ತ ಪ್ರವೇಶವಿದೆ ಎಂದರು. ಜಿಎಸ್‌ಬಿ ಸೇವಾ ಸಂಘದ ಕಾರ್ಯದರ್ಶಿ ಡಾ. ರಮೇಶ್ ಪೈ ಎ., ಶ್ರೀ ನಾರಾಯಣಿ ಸಂಗೀತ ಕಲಾ ಕೇಂದ್ರದ ಸಂಸ್ಥಾಪಕಿ ವಿದುಷಿ ನಂದಿತಾ ಪೈ, ಜಿಎಸ್‌ಬಿ ಸೇವಾ ಸಂಘದ ಪದಾಧಿಕಾರಿಗಳಾದ ಎಂ.ಆರ್. ಕಾಮತ್, ಸುಚಿತ್ರಾ ಶೆಣೈ, ವೆಂಕಟೇಶ ಎನ್. ಬಾಳಿಗಾ ಉಪಸ್ಥಿತರಿದ್ದರು.

ಮಾ.14 : ಡಾ.ವಾಮನ ನಂದಾವರ ಸಂಸ್ಮರಣೆ, ಕೃತಿಗಳ ಬಿಡುಗಡೆ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರು ಹಾಗೂ ಜಾನಪದ ವಿದ್ವಾಂಸರೂ ಆಗಿದ್ದ ಡಾ. ವಾಮನ ನಂದಾವರ ಅವರ ಸಂಸ್ಮರಣೆ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮ ಮಾ. 14ರಂದು ಮಧ್ಯಾಹ್ನ 2.30ಕ್ಕೆ ಮಂಗಳೂರಿನ ತುಳು ಭವನದಲ್ಲಿ ನಡೆಯಲಿದೆ.

ಆಕೃತಿ ಆಶಯ ಪಬ್ಲಿಕೇಶನ್ಸ್ ಸಹಯೋಗದಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಚಂದ್ರಕಲಾ ನಂದಾವರ ಅವರು ಸಂಪಾದಿಸಿರುವ ಡಾ. ವಾಮನ ನಂದಾವರ ಅವರು ಬರೆದಿರುವ ಜಾತಿ ಜನಾಂಗಗಳ ಅಧ್ಯಯನಾತ್ಮಕ ಲೇಖನಗಳ ಕೃತಿ 'ಆದಿಮ' ಮತ್ತು ಅವರ ಕವನ ಸಂಕಲನ ಕೃತಿ 'ತಾಳಮೇಳ' ಬಿಡುಗಡೆಗೊಳ್ಳಲಿದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ಅಧ್ಯಕ್ಷತೆ ವಹಿಸಿ ಕೃತಿ ಬಿಡುಗಡೆ ಮಾಡುವರು. ಉಚ್ಚಿಲ ಕಲಾಗಂಗೋತ್ರಿಯ ನಿರ್ದೇಶಕ ಕೆ. ಸದಾಶಿವ ಅವರು 'ವಾಮನ ನಂದಾವರ ಚಾವಡಿ' ನಾಮಫಲಕ ಅನಾವರಣ ಮಾಡಲಿದ್ದಾರೆ. ಶಾಸ್ತ್ರೀಯ ಅಧ್ಯಯನ ಕೇಂದ್ರದ ಡಾ. ಚಲಪತಿ ಆರ್. ಮೈಸೂರು ಅವರು 'ಆದಿಮ' ಕೃತಿಯನ್ನು ಮತ್ತು ಕವಯಿತ್ರಿ ಜ್ಯೋತಿ ಮಹಾದೇವ ಅವರು 'ತಾಳಮೇಳ' ಕೃತಿಯನ್ನು ಪರಿಚಯ ಮಾಡಲಿದ್ದಾರೆ. ರತ್ನಾವತಿ ಬೈಕಾಡಿ ತಂಡದವರು ಮತ್ತು ಜಯಲಕ್ಷ್ಮಿ ಶಾಸ್ತ್ರೀ ಅವರು ಗಾಯನ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ ಎಂದು ತುಳು ಅಕಾಡೆಮಿ ಪ್ರಕಟಣೆ ತಿಳಿಸಿದೆ.

ಸರಕಾರದ ನಿರ್ಲಕ್ಷ್ಯ ಸಹಿಸಲು ಸಾಧ್ಯವಿಲ್ಲ: ಶಿವಕುಮಾರ್ ನಾಣಯ್ಯ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ನಿರಂತರ ಕಾಡಾನೆ ದಾಳಿಯಿಂದ ಸಾಲು ಸಾಲು ಅಮಾಯಕ ಜೀವಗಳು ಬಲಿಯಾಗುತ್ತಿದ್ದರೂ ರಾಜ್ಯ ಸರಕಾರ ಯಾವುದೇ ತುರ್ತು ಕ್ರಮಗಳನ್ನು ಕೈಗೊಳ್ಳದೆ ನಿರ್ಲಕ್ಷ್ಯ



ತೋರುತ್ತಿದೆ. ಸರಕಾರದ ಈ ನಿರ್ಲಕ್ಷ್ಯ ಮನೋಭಾವವನ್ನು ಸಹಿಸಲು ಸಾಧ್ಯವಿಲ್ಲವೆಂದು ಕೊಡಗು ಜಿಲ್ಲಾ ಬಿಜೆಪಿಯ ಸಾಮಾಜಿಕ ಜಾಲತಾಣದ ಪ್ರಧಾನ ಸಂಚಾಲಕ ತೇಲಪಂಡ ಶಿವಕುಮಾರ್ ನಾಣಯ್ಯ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು ಜಿಲ್ಲೆಯಲ್ಲಿ ಕಳೆದ ಎರಡು ವಾರಗಳಲ್ಲಿ ಮೂರು ಅಮಾಯಕ ಜೀವಗಳು ಕಾಡಾನೆ ದಾಳಿಗೆ ಬಲಿಯಾಗಿವೆ. ಸರಕಾರ ಸಮಸ್ಯೆಯ ಗಂಭೀರತೆಯನ್ನು ಅರಿಯದೆ ಕೇವಲ ಪರಿಹಾರ ಚೆಕ್ ನೀಡಿ ಕೈತೊಳೆದುಕೊಳ್ಳುತ್ತಿದೆ ಎಂದು ಟೀಕಿಸಿದ್ದಾರೆ. ಅರಣ್ಯ ಸಚಿವರು ಕಾಡಾನೆ ಉಪಟಳ ತಡೆಗೆ ಸಂಬಂಧಿಸಿದಂತೆ ಕೇವಲ ಭರವಸೆಗಳನ್ನು ನೀಡುತ್ತಿದ್ದಾರೆಯೇ ಹೊರತು ಯಾವುದೇ ಯೋಜನೆಗಳು ಕಾರ್ಯಗತಗೊಳ್ಳುತ್ತಿಲ್ಲ. ಕಳೆದ ಎರಡು ವರ್ಷಗಳಿಂದ ವನ್ಯಜೀವಿಗಳ ದಾಳಿ ತೀವ್ರತೆಯನ್ನು ಪಡೆದುಕೊಳ್ಳುತ್ತಿದ್ದರೂ ಜಿಲ್ಲೆಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳುವ ಆಸಕ್ತಿಯನ್ನು ಸಚಿವರು ತೋರುತ್ತಿಲ್ಲ. ಕೊಡಗಿನಲ್ಲಿರುವ ಮಾನವ ಜೀವಗಳಿಗೆ ಬೆಲೆ ಇಲ್ಲದಾಗಿದೆ, ಸರಕಾರಕ್ಕೆ ಪರಿಸ್ಥಿತಿಯ ಗಂಭೀರತೆಯನ್ನು ಅರಿಯಲು ಇನ್ನೆಷ್ಟು ಜೀವಗಳ ಬಲಿ ಬೇಕು ಎಂದು ತೇಲಪಂಡ ಶಿವಕುಮಾರ್ ನಾಣಯ್ಯ ಪ್ರಶ್ನಿಸಿದ್ದಾರೆ.

ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಸಂವಾದ ಕಾರ್ಯಕ್ರಮ | ದ.ಕ. ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಕಳವಳ

ತ್ಯಾಜ್ಯ ಎಸೆಯುವವರ ವಿರುದ್ಧ ಸೂಕ್ತ ದಂಡ ವಿಧಿಸುತ್ತಿಲ್ಲ

ಉಳ್ಳಾಲ: ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ವಿರುದ್ಧ ಒಂದು ಲಕ್ಷ ರೂ.ವರೆಗೆ ದಂಡ ವಿಧಿಸುವ ಕಾನೂನು ಇದ್ದರೂ ಸಹ ಅದನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವ ಪರಿಣಾಮ ಸಂಪೂರ್ಣ ಸ್ವಚ್ಛತೆ ಸಾಧಿಸಲು ಸಾಧ್ಯವಾಗುತ್ತಿಲ್ಲವೆಂದು ಜಿಲ್ಲಾ ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಕಳವಳ ವ್ಯಕ್ತಪಡಿಸಿದರು.

ಮಾದರಿ ಗ್ರಾಮ ಅಭಿಯಾನ,ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘ ಉಳ್ಳಾಲ ತಾಲೂಕು ಘಟಕ ಮತ್ತು ರಾಷ್ಟ್ರೀಯ ನಿರ್ಮಲ ಗ್ರಾಮ ಪ್ರಶಸ್ತಿ ಪುರಸ್ಕೃತ ಜನಶಿಕ್ಷಣ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಬುಧವಾರದಂದು ತೊಕ್ಕೊಟ್ಟಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ನಡೆದ 'ಸಮುದಾಯ ಆರೋಗ್ಯ ಅರಿವು ಅಭಿಯಾನ' ಕಸ ಮುಕ್ತ ಗ್ರಾಮ-ಕ್ಯಾನ್ಸರ್ ಮುಕ್ತ ಗ್ರಾಮ,ಸ್ವಚ್ಛ ಮನೆ ಸ್ವಯಂ ಘೋಷಣೆ,ಸಂವಾದ ಸಂಕಲ್ಪ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ ಅವರು ಮಾತನಾಡಿದರು.



ಜಗತ್ತಿನ ಕೆಲ ರಾಷ್ಟ್ರಗಳಲ್ಲಿ ಪ್ಲಾಸ್ಟಿಕ್ ಮಳೆ ಶುರುವಾಗಿದ್ದರೆ, ನಮ್ಮ ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಬೆಂಕಿಯೇ ಹತ್ತಿಕೊಂಡಿದೆ.ಮನೆ, ಅಂಗಡಿ, ಹೊಟೇಲ್, ಶಾಲೆ, ಧಾರ್ಮಿಕ ಕ್ಷೇತ್ರ, ವಿಶ್ವವಿದ್ಯಾಲಯಗಳ ವಠಾರದಲ್ಲಿ ಪ್ಲಾಸ್ಟಿಕ್ ಅನ್ನು ಎಸೆಯುವುದಲ್ಲದೇ, ಅದನ್ನ ಸುಡುವ ಪ್ರಕ್ರಿಯೆಗಳನ್ನ ನಿರಂತರವಾಗಿ ನಡೆಸಲಾಗುತ್ತಿದೆ.ಈ ಬಗ್ಗೆ ಕ್ರಮ ವಹಿಸಲು ಸರಕಾರಕ್ಕೆ ಪತ್ರ ಬರೆದರೆ ಪ್ರೀತಿಯ ಪತ್ರೋತ್ತರ ಪ್ರಕ್ರಿಯೆ ನಡೆಯುತ್ತದೆಯೇ ಹೊರತು ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುತ್ತಿಲ್ಲ. ಮುಡಿಪುವಿನ ಪವಾಡ ಬೆಟ್ಟದಲ್ಲಿ ಮುಂದಿನ ತಿಂಗಳು ನಡೆಯುವ ವಾರ್ಷಿಕ ಉತ್ಸವ ಸಂದರ್ಭದಲ್ಲಿ 'ಮಹಾ ಮೌನ ಮುರಿಯೋಣ, ಮಹಾ ಮಾಲಿನ್ಯ ತಡೆಯೋಣ, ಮಹಾ ಗಂಡಾಂತರದಿಂದ ಪಾರಾಗೋಣ' ಎಂಬ ಧ್ಯೇಯ ವಾಕ್ಯದಡಿ ಬೃಹತ್ ಜಾಗೃತಿ ಅಭಿಯಾಣ ನಡೆಸುವ ಯೋಜನೆ ಹಮ್ಮಿಕೊಳ್ಳಲಾಗಿದೆ.ಆ ಮೂಲಕ ಮುಡಿಪು ಬೆಟ್ಟದ ಉತ್ಸವವು ಪ್ಲಾಸ್ಟಿಕ್ ಮುಕ್ತ ಸಂಪೂರ್ಣ ಸ್ವಚ್ಛತೆ ಆಗುವ ನಿಟ್ಟಿನಲ್ಲಿ ಇಂದು ನಡೆದ ಈ ಸಂವಾದವು ಪೂರಕವಾಗಬೇಕಿದೆಯೆಂದರು.

ಪರಿಸರ ಪ್ರೇಮಿ ಮಾಧವ ಉಳ್ಳಾಲ್ ಮಾತನಾಡಿದರು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಪುಷ್ಪರಾಜ್ ಬಿ.ಎನ್. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯಕಾರಿಣಿ ಸದಸ್ಯರಾದ ಶ್ರೀನಿವಾಸ ನಾಯಕ್ ಇಂದಾಜೆ, ಜನಶಿಕ್ಷಣ ಟ್ರಸ್ಟ್ ನಿರ್ದೇಶಕ ಕೃಷ್ಣ ಮೂಲ್ಯ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಜ್ಯೋತಿ, ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಶಶಿಧರ ಪೊಯ್ಯತ್ತಬೈಲ್, ನಿಟ್ಟೆ ವಿವಿ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಮೌಲ್ಯ ಡಿ., ಮೊದಲಾದವರು ಉಪಸ್ಥಿತರಿದ್ದರು. ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ದಿನೇಶ್ ನಾಯಕ್ ಸ್ವಾಗತಿಸಿ, ಉಪಾಧ್ಯಕ್ಷ ಸತೀಶ್ ಕುಮಾರ್ ಪುಂಡಿಕಾಯಿ ನಿರೂಪಿಸಿ, ಕೋಶಾಧಿಕಾರಿ ವಜ್ರ ಗುಜರನ್ ವಂದಿಸಿದರು.

> ಸ್ಯಾನಿಟರಿ ಪ್ಯಾಡ್ ಮತ್ತು ಪ್ಯಾಂಪರ್ಸ್ ಗಳು ವಿಲೇವಾರಿಯಾಗದ ತ್ಯಾಜ್ಯಗಳಾಗಿದ್ದು, ಪರಿಸರಕ್ಕೆ ಬಹಳಷ್ಟು ಮಾರಕವಾಗಿ ಪರಿಣಮಿಸುತ್ತಿವೆ. ಪ್ಯಾಡ್ ಮತ್ತು ಪ್ಯಾಂಪರ್ಸ್ ಗಳನ್ನ ಉತ್ಪಾದನೆ ಮಾಡುವ ಫ್ಯಾಕ್ಟರಿಗಳು ವರುಷಕ್ಕೆ ಕೋಟಿಗಟ್ಟಲೆ ಆದಾಯಗಳಿಸಿ ನಮಗೆ ನಾನಾ ರೀತಿಯ ರೋಗಗಳನ್ನ ಹರಡುತ್ತಿವೆ. ಪರಿಸರಕ್ಕೆ ಮಾರಕವಾದ ಇಂತಹ ಉತ್ಪನ್ನಗಳನ್ನ ತ್ಯಜಿಸಿ, ಮರು ಬಳಕೆಯಾಗುವಂತಹ ಬಟ್ಟೆಗಳನ್ನು ಉಪಯೋಗಿಸಬೇಕಿದೆ.
>
> ● ಶೀನ ಶೆಟ್ಟಿ, ಜಿಲ್ಲಾ ಸ್ವಚ್ಛತಾ ರಾಯಭಾರಿ

> ಕಳೆದ 39 ವರುಷಗಳಿಂದ ಗಿಡಗಳನ್ನ ನೆಡುವುದು ಮಾತ್ರವಲ್ಲದೆ ನಾಲ್ಕು ವರುಷಗಳ ಕಾಲ ಅದರ ನಿರ್ವಹಣೆಯನ್ನು ನಡೆಸುತ್ತಾ ಬಂದಿದ್ದೇನೆ. ಜೈಪುರ ನಗರ ಮಾದರಿಯಲ್ಲಿ ಮಂಗಳೂರನ್ನು ಕೂಡ ಹಣ್ಣುಗಳ ನಗರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಯೋಜನೆಯನ್ನ ಹಮ್ಮಿಕೊಂಡಿದ್ದು,ಮಂಗಳೂರು ನಗರಪಾಲಿಕೆ, ಜಿಲ್ಲಾಡಳಿತ, ಪತ್ರಕರ್ತರ ಸಂಪೂರ್ಣ ಸಹಕಾರ ಬೇಕಿದೆಯೆಂದರು.
>
> ● ಮಾಧವ ಉಳ್ಳಾಲ್, ಪರಿಸರ ಪ್ರೇಮಿ

ಮಾ.25: ಶರವೂರು ಅಲಂಕಾರ ಸಮಿತಿಯಿಂದ ಆ್ಯಂಬುಲೆನ್ಸ್ ಕೊಡುಗೆ

ಗ್ರಾಮೀಣ ಪ್ರದೇಶದ ಬಡವರಿಗೆ ಸಿಗಲಿದೆ ಉಚಿತ ಸೇವೆ

ಆಲಂಕಾರು: ಯುವಕರು ಸಂಘಟಿತರಾದರೆ ಸಮಾಜಕ್ಕೆ ಪೂರಕವಾಗಿ ಬೆಳೆಯ ಬಲ್ಲರು ಎಂಬುವುದನ್ನು ಆಲಂಕಾರಿನ ಯುವ ಜನತೆ ಸಾಧಿಸಿ ತೋರಿಸಿದೆ. ಕಡಬ ತಾಲೂಕು ಆಲಂಕಾರು ಗ್ರಾಮದ ಶರವೂರು ಶ್ರೀ ದುರ್ಗಾಪರಮೇಶ್ವರೀ ದೇವಾಲಯ ಬ್ರಹ್ಮಕಲಶೋತ್ಸವ ಅಂಗವಾಗಿ ಆಲಂಕಾರು ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಎಂಬ ಯುವಕರ ಸಂಘಟನೆ ಅಸ್ತಿತ್ವಕ್ಕೆ ಬಂದಿದ್ದು ಬ್ರಹ್ಮಕಲಶೋತ್ಸವದ ಸವಿ ನೆನಪಿಗಾಗಿ ಇದೀಗ ಈ ತಂಡ ಅಂಬುಲೆನ್ಸ್ ಖರೀದಿಸಿ ಸಮಾಜ ಸೇವೆಗೆ ಮುಂದಾಗಿರುವುದು ಸಮಾಜದ ಎಲ್ಲಾ ವರ್ಗದವರಿಂದ ಪ್ರಶಂಸೆಗೆ ಪಾತ್ರವಾಗಿದೆ.

ದೇವಾಲಯದ ವಾರ್ಷಿಕ ಜಾತ್ರಾ ಮಹೋತ್ಸವದ ಪೇಟೆ ಸವಾರಿ ಮತ್ತು ಕಟ್ಟೆ ಪೂಜೆಯ ದಿವಸ ಆಲಂಕಾರು ಪೇಟೆಯನ್ನು ಶೃಂಗರಿಸುವ ಉದ್ದೇಶದಿಂದ ಆಲಂಕಾರು ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಅಸ್ತಿತ್ವಕ್ಕೆ ಬಂದಿತ್ತು. ಪ್ರತೀ ವರ್ಷದ ಜಾತ್ರೆಯ ಸಂದರ್ಭ ಪೇಟೆ ಶುಚಿಗೊಳಿಸಿ ಶೃಂಗರಿಸುವುದು, ಸ್ವಾಗತ ಗೋಪುರದ ದುರಸ್ತಿ ಮಾಡುವುದು, ಆಲಂಕಾರು ಪೇಟೆಯಲ್ಲಿ ಶ್ರೀ ದೇವಿ ಸಂಚರಿಸುವ ಕಡೆಗಳಲ್ಲಿ ವಿದ್ಯುತ್ ದೀಪದ ವ್ಯವಸ್ಥೆ ಮಾಡುವುದು ಈ ಸಮಿತಿಯ ಜವಾಬ್ದಾರಿಯಾಗಿತ್ತು.

ಶರವೂರು ಬ್ರಹ್ಮಕಲಶೋತ್ಸವದ ಅಂಗವಾಗಿ ಆಲಂಕಾರು ಪೇಟೆಯಿಂದ ಕುದ್ಮಾರು ಪೇಟೆಯವರೆಗೆ ಸುಮಾರು 6ಕಿ ಮೀ ವಿದ್ಯುತ್ ದೀಪ ಅಲಂಕಾರ ಮಾಡಲು ಈ ಸಮಿತಿ ಯೋಜನೆ ಹಾಕಿಕೊಂಡಿದೆ. ಇದರ ಖರ್ಚು ವೆಚ್ಚಗಳಿಗಾಗಿ ಅದೃಷ್ಟ ಚೀಟಿ ಮಾರಾಟದ ವ್ಯವಸ್ಥೆ ಮಾಡಿಕೊಂಡಿದೆ. ಈ ಅದೃಷ್ಟ ಚೀಟಿಯಲ್ಲಿ ಉಳಿಕೆಯಾದ ಹಣ ಮತ್ತು ದಾನಿಗಳ ನೆರವಿನಿಂದ ಸಂಗ್ರಹಿಸಿದ ಮೊತ್ತದಲ್ಲಿ ಮಾ25ರಂದು ಸಾರ್ವಜನಿಕ ಆ್ಯಂಬುಲೆನ್ಸ್ ಲೋಕಾರ್ಪಣೆಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಸರ್ವ ಧರ್ಮಿಯರ ತಂಡ

ಆಲಂಕಾರು ಪೇಟೆಯಲ್ಲಿರುವ 10 ಜನ ಚಾಲಕರ ತಂಡವನ್ನು ಮಾಡಿಕೊಂಡು ತುರ್ತು ಸೇವೆಗೆ ಅಣಿಯಾಗಿರುವಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. 3 ಜನರ ಸಂಪರ್ಕ ಸಂಖ್ಯೆಯನ್ನು ಅಂಬುಲೆನ್ಸ್‌ನಲ್ಲಿ ನಮೂದಿಸಲಾಗಿದೆ. ಈ ತಂಡದಲ್ಲಿ ಇಬ್ಬರು ಮುಸ್ಲಿಂ ಚಾಲಕರಿದ್ದು ಸರ್ವ ಧರ್ಮ ಸಮನ್ವತೆಯನ್ನು ಸಾರುವ ಉದ್ದೇಶದಿಂದ ಈ ಯೋಜನೆ ಹಾಕಿಕೊಳ್ಳಲಾಗಿದೆ. ಇದರಲ್ಲಿ ದುಡಿಯುವ ಚಾಲಕರಿಗೆ ಯಾವುದೇ ಸಂಬಳವಿಲ್ಲ. ಶ್ರೀ ದುರ್ಗಾಂಬ ಅಲಂಕಾರ ಸಮಿತಿ ಶ್ರೀ ಕ್ಷೇತ್ರ ಶರವೂರು ಎಂಬ ಶಿರೋನಾಮೆಯಡಿಯಲ್ಲಿ 3 ಆಕ್ಸಿಜನ್ ಸಿಲಿಂಡರ್‌ನ ವ್ಯವಸ್ಥೆಯುಳ್ಳ ಈ ವಾಹನ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ. ಇದರ ಸ ನಿರ್ವಹಣೆ ಸಮಿತಿಯದ್ದಾಗಿದೆ.

> **ಬಡವರಿಗೆ ಉಚಿತ ಸೇವೆ**
>
> ಆ್ಯಂಬುಲೆನ್ಸ್ ಖರೀದಿ ನಮ್ಮ ಬಹಳ ವರ್ಷದ ಕನಸಾಗಿತ್ತು. ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಎಂಬ ಮಾತಿನಂತೆ ಬ್ರಹ್ಮಕಲಶೋತ್ಸವದ ಪೇಟೆ ಅಲಂಕರಿಸುವ ಉದ್ದೇಶದಿಂದ ಅದೃಷ್ಟ ಚೀಟಿಯಲ್ಲಿ ಸಂಗ್ರಹಿಸಿದ ಮೊತ್ತದಲ್ಲಿ ಆ್ಯಂಬುಲೆನ್ಸ್ ಖರೀದಿ ಮಾಡಲಿದ್ದೇವೆ. ಕಡು ಬಡವರು ಆ್ಯಂಬುಲೆನ್ಸ್‌ನ ಸಹಾಯ ಯಾಚಿಸಿದಲ್ಲಿ ಸಂಪೂರ್ಣ ಉಚಿತವಾಗಿ ಸೇವೆ ನೀಡಲಾಗುವುದು. ಇತರರಿಗೂ ಅತೀ ಕಡಿಮೆ ಬಾಡಿಗೆಯಲ್ಲಿ ಈ ವಾಹನ ಬಾಡಿಗೆಗೆ ಲಭ್ಯವಾಗಲಿದೆ. ರೂ.5 ಸಾವಿರಕ್ಕಿಂತ ಹೆಚ್ಚು ಮೊತ್ತವನ್ನು ನೀಡಿದ ದಾನಿಗಳಿಗೆ ಮುಂದಿನ ದಿನಗಳಲ್ಲಿ ಸಂಪೂರ್ಣ ಉಚಿತ ಸೇವೆ ನೀಡಲಿದ್ದೇವೆ. ಮುಂದಿನ ದಿನಗಳಲ್ಲಿ ಆ್ಯಂಬುಲೆನ್ಸ್ ಟ್ರಸ್ಟ್ ರಚಿಸುವ ಉದ್ದೇಶವಿದೆ.
>
> ● ಗಣರಾಜ್ (ಮುನ್ನಾ), ದುರ್ಗಾಂಬ ಅಲಂಕಾರ ಸಮಿತಿ ಅಧ್ಯಕ್ಷರು

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ವಿವೇಕ ಸ್ಮೃತಿ ಕಾರ್ಯಕ್ರಮ

ಯುವಶಕ್ತಿಯ ಸದ್ಬಳಕೆ ಅಗತ್ಯ: ಡಾ. ದೇವಿದಾಸ್

ಪುತ್ತೂರು: ಯುವಶಕ್ತಿ ಎನ್ನುವುದು ಒಂದು ರಾಷ್ಟ್ರದ ಶಕ್ತಿ. ಇದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿದರೆ ಅದು ಒಂದು ಉತ್ತಮ ಶಕ್ತಿಯಾಗಿ ಹೊರ ಹೊಮ್ಮುತ್ತದೆ. ಯಶಸ್ಸನ್ನು ಸಾಧಿಸಬೇಕಾದರೆ ಧೈರ್ಯ, ಶಿಸ್ತು ಮತ್ತು ಪರಿಶ್ರಮ ಈ ಮೂರು ಅಂಶಗಳು ನಮ್ಮಲ್ಲಿರಬೇಕು. ಭಾರತದ ಸಂಸ್ಕೃತಿಯ ತಿರುಳಾದ ವೇದಾಂತ ಭಾವ, ಜ್ಞಾನ, ಭ್ರಾತೃತ್ವವನ್ನು ವಿಶ್ವಕ್ಕೆ ಪರಿಚಯಿಸಿ ಯುವಕರನ್ನು ಜಾಗೃತಗೊಳಿಸಿದವರು ಸ್ವಾಮಿ ವಿವೇಕಾನಂದರು ಎಂದು ಉಡುಪಿಯ ಎಂಜಿಎಂ ಸಂಧ್ಯಾ ಕಾಲೇಜಿನ ಪ್ರಾಂಶುಪಾಲ ಡಾ. ದೇವಿದಾಸ್ ಎಸ್. ನಾಯಕ್ ಹೇಳಿದರು.



ನಗರದ ವಿವೇಕಾನಂದ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜ್ (ಸ್ವಾಯತ್ತ), ವಿವೇಕಾನಂದ ಸ್ನಾತಕೋತ್ತರ ಅಧ್ಯಯನ ಕೇಂದ್ರ, ವಿವೇಕಾನಂದ ಸಂಶೋಧನಾ ಕೇಂದ್ರ ಮತ್ತು ಐಕ್ಯೂಎಸಿ ಹಾಗೂ ವಿವೇಕಾನಂದ ಪಾಲಿಟೆಕ್ನಿಕ್‌ನ ಸಹಯೋಗದಲ್ಲಿ ನಡೆದ ವಿವೇಕ ಸ್ಮೃತಿ ಕಾರ್ಯಕ್ರಮದಲ್ಲಿ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು.

ವಿವೇಕಾನಂದರು ಆಧುನಿಕ ಭಾರತ ದೇಶವನ್ನು ಸರಿಯಾಗಿ ಅರ್ಥೈಸಿಕೊಂಡು ಯುವಜನತೆಗೆ ಅದನ್ನು ಪಸರಿಸಿದರು. ವೃದ್ಧರ ಮನೋಸ್ಥಿತಿಯನ್ನು ಬದಲಾಯಿಸಲಾಗುವುದಿಲ್ಲ ಎಂದು ತಿಳಿದ ಅವರು ಯುವಕರನ್ನು ಪ್ರೇರೇಪಿಸಿದರು. ಜಗತ್ತಿನ ಎಷ್ಟೇ ದೇವರುಗಳನ್ನು ನಂಬಿಯೂ ನಮ್ಮಲ್ಲಿ ನಿಮಗೆ ನಂಬಿಕೆಯಿಲ್ಲದಿದ್ದರೆ ಏನನ್ನೂ ಸಾಧಿಸಲಾಗುವುದಿಲ್ಲ. ಜೀವನದಲ್ಲಿ ಎಷ್ಟೇ ಅಡಚಣೆಗಳು ಬಂದರೂ ಅದನ್ನು ದಾಟಿ ಮುನ್ನುಗ್ಗಬೇಕು. ನಾವು ಯಾವುದೇ ಕೆಲಸವನ್ನು ಮಾಡಬೇಕಾದರೂ ಫಲಾಪೇಕ್ಷೆ ನಿರೀಕ್ಷಿಸಬಾರದು. ಯಾರು ಇತರರಿಗೋಸ್ಕರ ಬದುಕುತ್ತಾರೋ ಅವರು ತಮ್ಮ ಜೀವನದಲ್ಲಿ ಯಶಸ್ಸನ್ನು ಕಾಣುತ್ತಾರೆ. ಸಾಧಿಸಬೇಕಾದರೆ ವಿವೇಕಾನಂದರ ಚಿಂತನೆಗಳನ್ನು ನಿಮ್ಮಲ್ಲಿ ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಪಾತ್ರ ವಹಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ಪಾಲಿಟೆಕ್ನಿಕ್ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ವಿಶ್ವೇಶ್ವರ ಭಟ್ ಬಂಗಾರಡ್ಕ, ವಿವೇಕಾನಂದರು ಒಬ್ಬ ದೇಶ ನಾಯಕ. ಇವರು ರೋಮಾಂಚನಕಾರಿಯಾದ ವ್ಯಕ್ತಿತ್ವವನ್ನು ಹೊಂದಿದ್ದು ಸಾಮಾಜಿಕ ಚಿಂತನೆಗಳನ್ನು ಜನತೆಗೆ ನೀಡಿದ್ದಾರೆ. ಇವರು ಸಿದ್ಧಿ ಪುರುಷ ಎಂದೇ ಪ್ರಸಿದ್ಧರಾದವರು. ಭಾರತ ದೇಶದ ಸಂಸ್ಕೃತಿ ಕೇವಲ ಇಲ್ಲಿಗೆ ಮಾತ್ರ ಸೀಮಿತವಾಗಿರದೆ ಹೊರ ದೇಶಕ್ಕೂ ತಲುಪಿದೆ ಎಂದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಮುರಳೀಧರ್ ಹಾಗೂ ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರದ ಸಂಯೋಜಕಿ ಹಾಗೂ ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ವಿದ್ಯಾ ಎಸ್. ಉಪಸ್ಥಿತರಿದ್ದರು.

ವಿವೇಕಾನಂದ ಸಂಶೋಧನಾ ಕೇಂದ್ರ ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ನಿರ್ದೇಶಕಿ ಡಾ. ವಿಜಯಸರಸ್ವತಿ ಸ್ವಾಗತಿಸಿ, ಸಿವಿಲ್ ವಿಭಾಗದ ಮುಖ್ಯಸ್ಥ ರವಿರಾಮ್ ಎಸ್. ವಂದಿಸಿದರು. ಸ್ನಾತಕೋತ್ತರ ಎಂಕಾಂ ವಿಭಾಗದ ವಿದ್ಯಾರ್ಥಿನಿ ಅನನ್ಯಾ ಎಸ್. ಕಾರ್ಯಕ್ರಮ ನಿರ್ವಹಿಸಿದರು.

ಕಿನ್ನಿಗೋಳಿ: ಏಕಬಳಕೆಯ ಪ್ಲಾಸ್ಟಿಕ್ ನಿಷೇಧ ಕುರಿತು ಜನಜಾಗೃತಿ ಜಾಥ



ಕಿನ್ನಿಗೋಳಿ: ಸ್ವಚ್ಛ ಭಾರತ್ ಮಿಷನ್ -2 (ನಗರ) ಯೋಜನೆಯಡಿ ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧದ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವ ಅಂಗವಾಗಿ ಮೂರು ಕಾವೇರಿಯಿಂದ ಕಿನ್ನಿಗೋಳಿಯ ತನಕ ಕಾಲ್ನಡಿಗೆ ಜಾಥ ಕಾರ್ಯಕ್ರಮ ನಡೆಯಿತು.

ಪ.ಪಂ. ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಮುಂದಿನ 1 ತಿಂಗಳ ಕಾಲ ಸಂತೆ ಹಾಗೂ ಅಂಗಡಿ ಮುಂಗಟ್ಟುಗಳಲ್ಲಿ ಪ್ಲಾಸ್ಟಿಕ್ ಬಳಕೆ ವಿರುದ್ಧ ಜಾಗೃತಿ ಮೂಡಿಸಲಾಗುವುದು. ಪ.ಪಂ. ಮಾದರಿಯಾಗುವ ನಿಟ್ಟಿನಲ್ಲಿ ಸಾರ್ವ ಜನಿಕರು ಗ್ರಾಮಸ್ಥರು ಸಹಕಾರ ನೀಡಬೇಕು ಹಾಗೂ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡಬೇಡಿ, ಒಣ ಕಸ ಹಾಗೂ ಹಸಿಕಸ ವಿಂಗಡನೆ ಮಾಡಿ ಸಹಕರಿಸಿ ಎಂದರು.

ಸರಕಾರದ ಪರಿಸರ ಹಾಗೂ ಪ್ರವಾಸೋದ್ಯಮ ಮಂಡಳಿ ಅಧ್ಯಕ್ಷ ಭಾಗವಹಿಸಿ ಶಾಲೆಟ್ ಇಂಟೋ ಮಾತನಾಡಿ, ಆಧುನಿಕತೆಯ ಧಾವಂತದಲ್ಲಿ ನಾವು ಪರಿಸರ ಹಾಗೂ ನಮ್ಮತನವನ್ನು ಮರೆತು ಬಿಡುತ್ತಿದ್ದೇವೆ ಎಂದರು.

ಪ.ಪಂ. ಮುಖ್ಯಾಧಿಕಾರಿ ಜಯಶಂಕರ್, ಪಾಂಪೈ ಕಾಲೇಜಿನ ಪ್ರಾಚಾರ್ಯ ಡಾ. ಪುರುಷೋತ್ತಮ ಕೆ.ವಿ., ಯುಗಪುರುಷದ ಸಂಪಾದಕ ಭುವನಾಭಿರಾಮ ಉಡುಪ , ಕಿನ್ನಿಗೋಳಿ ರೋಟರಿ ಅಧ್ಯಕ್ಷ ಸಾಯಿನಾಥ ಶೆಟ್ಟಿ, ಉದ್ಯಮಿ ದೀಪಕ್ ರೋಡ್ರಿಗಸ್, ಸ್ಟೇನಿ ಪಿಂಟೋ, ಪ.ಪಂ. ಸದಸ್ಯ ಶೈಲೇಶ್ ಅಂಚನ್, ಪ್ರಣೀಕ್ ಕೋಟ್ಯಾನ್, ದಾಮೋದರ ಶೆಟ್ಟಿ, ಸುನೀತಾ ರೋಡ್ರಿಗಸ್, ಪ್ರಕಾಶ್ ಆಚಾರ್, ಗೋಪಾಲಕೃಷ್ಣ ಪುನರೂರು, ಕುಶಲತಾ, ಕೋಕಿಲ, ಕಾರ್ಯಕ್ರಮಕ್ಕೆ ಸಹಕಾರ ನೀಡುವ ಸಂಸ್ಥೆಯ ಪೀಲ್ಡ್ ಸುಪರ್ ವೈಸರ್ ರವೀಂದ್ರ ಡಿಎಸ್, ಸುಬಾಷ್ ಸಾಗರ್, ಕೋಡಿನೇಟರ್ ಅಬಿಷೇಕ್ ಪಂಡಿತ್, ಹಾಗೂ ಶಾಲಾ ಮುಖ್ಯಸ್ಥರು ಇದ್ದರು. ಜಾಥವು ಮೂರುಕಾವೇರಿಯಿಂದ ಕಿನ್ನಿಗೋಳಿ ಪೇಟೆಯಲ್ಲಿ ಸಾಗಿ ಬಸ್ಸು ನಿಲ್ದಾಣದಲ್ಲಿ ಸಮಾಪನ ಗೊಂಡಿತು.

ವಿವೇಕಾನಂದರು ಏಕತೆಯ ಮೂಲಕ ದೈವೀಕತೆ ಕಂಡವರು: ಡಾ. ಮುರಳೀಧರ



ಕೊಣಾಜೆ: ವಿವೇಕಾನಂದರು ಕಟ್ಟಿದ ಪ್ರತಿಪಾದನೆಯ ಮೂಲವೇ ಮನುಷ್ಯ, ಮನುಷ್ಯತ್ವ ಮಾನವಿಯತೆಯಲ್ಲಿ ಸುಪ್ತವಾದ ದೈವೀಕತೆಯೇ ಮನುಷ್ಯತ್ವ ಎಂದು ನಂಬಿದ ಅವರು ಇದರಿಂದಲೇ ಮನುಷ್ಯನ ಆಂತರಿಕ ವಿಕಾಸವನ್ನು ಅರಿಯುವ ಪ್ರಯತ್ನ ಮಾಡಿ ಏಕತೆಯ ಮೂಲಕ ದೈವೀಕತೆಯನ್ನು ಕಂಡರು ಎಂದು ಸ್ವಾಮೀ ವಿವೇಕಾನಂದ ಶೈಕ್ಷಣಿಕ ಅನುಸಂಧಾನ ಗೊಟ್ಟಿಗೆರೆ ಬೆಂಗಳೂರು ಇದರ ಗೌರವ ಶೈಕ್ಷಣಿಕ ನಿರ್ದೇಶಕ ಡಾ.ಹೆಚ್ .ಎನ್ ಮುರಳೀಧರ ಹೇಳಿದರು.

ಅವರು ಮಂಗಳೂರು ವಿಶ್ವವಿದ್ಯಾನಿಲಯದ ಸ್ವಾಮಿ ವಿವೇಕಾನಂದ ಅಧ್ಯಯನ ಕೇಂದ್ರದ ವತಿಯಿಂದ ಎಸ್ ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಸಹಯೋಗದಲ್ಲಿ ಗುರುವಾರ ಪ್ರೊ. ವಿವೇಕ್ ರೈ ವಿಚಾರ ವೇದಿಕೆಯಲ್ಲಿ ನಡೆದ ವಿವೇಕವಾಣಿ ' ಸ್ವಾಮೀ ವಿವೇಕಾನಂದರ ವಿಶ್ವಧರ್ಮ ಆದರ್ಶ' ಎಂಬ ವಿಷಯದಲ್ಲಿ ಉಪನ್ಯಾಸ ನೀಡಿದರು.

ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಪ್ರೊ. ನಾಗಪ್ಪ ಗೌಡ ಸಮಾರಂಭದ ಅಧ್ಯಕ್ಷತೆ ವಹಿಸಿ, ನಮ್ಮ ದೇಶದಲ್ಲಿ ಅನೇಕ ದಾರ್ಶನಿಕರು ಮಹಾತ್ಮರು ಬಂದು ಹೋಗಿದ್ದಾರೆ. ಆದರೆ ಇತ್ತೀಚೆಗೆ ಅವರ ತತ್ವ ಸಿದ್ಧಾಂತದ ಪಾಲನೆಯ ಬದಲಾಗಿ ಅವರನ್ನು ಆರಾಧನೆಯ ರೂಪದಲ್ಲಿಯೇ ಹೆಚ್ಚಾಗಿ ಕಾಣುವಂತಾಗಿದೆ. ಎಂದರು.

ವಿವೇಕಾನಂದ ಅಧ್ಯಯನ ಕೇಂದ್ರದ ಸಂಯೋಜಕ ಡಾ.ಚಂದ್ರು ಹೆಗ್ಡೆ ಸ್ವಾಗತಿಸಿ, ಪ್ರಾಧ್ಯಾಪಕ ಪ್ರೊ.ಸೋಮಣ್ಣ ಹೊಂಗಳ್ಳಿ ವಂದಿಸಿದರು. ವಿದ್ಯಾರ್ಥಿ ದುಶ್ಯಂತ್ ನಿರೂಪಿಸಿದರು. ಪ್ರಾಧ್ಯಾಪಕ ಡಾ. ಧನಂಜಯ ಕುಂಬ್ಳೆ, ಡಾ. ಯಶು ಕುಮಾರ್ ಹಾಗೂ ಮೊದಲಾದವರು ಉಪಸ್ಥಿತರಿದ್ದರು.



ವಿಧಾನಸಭಾ ಚುನಾವಣೆ ಪ್ರಯುಕ್ತ ಬೂತ್ ಸಂಖ್ಯೆ 91, 92, 93, 100ರ ಸಭೆಯು ಪ್ರತಾಪನಗರ ಗಣೇಶ್ ಮಂದಿರದಲ್ಲಿ ಶಕ್ತಿ ಕೇಂದ್ರದ ಉಸ್ತುವಾರಿ ವಸಂತಕುಮಾರ್ ಮಯ್ಯರ ನೇತೃತ್ವದಲ್ಲಿ ನಡೆಯಿತು. ಮಂಗಲ್ಪಾಡಿ ಬಿಜೆಪಿ ಪೂರ್ಣಾವಧಿ ಕಾರ್ಯಕರ್ತ ಸ್ವರ್ಣ ಪ್ರಸಾದ್ ಕಾರ್ಯಕರ್ತರಿಗೆ ಚುನಾವಣಾ ಕಾರ್ಯಾಗಾರ ನಡೆಸಿದರು. ಪಕ್ಷದ ನೇತಾರರಾದ ವಲ್ಸರಾಜ್ ಮತ್ತು ಬೂತ್ ಮಟ್ಟದ ಎಲ್ಲಾ ನೇತಾರರು, ಕಾರ್ಯಕರ್ತರು ಉಪಸ್ಥಿತರಿದ್ದರು.



ಡಾ. ಬಿ. ಆರ್.ಅಂಬೇಡ್ಕರ್ ವಿದ್ಯಾ ನಿಧಿ ಟ್ರಸ್ಟ್ ಉಳ್ಳಾಲ ತಾಲೂಕು ವತಿಯಿಂದ ಏ.14ರಂದು ನಡೆಯಲಿರುವ ಡಾ. ಬಿ. ಆರ್.ಅಂಬೇಡ್ಕರ್ ಜನ್ಮ ದಿನಾಚರಣೆಯ ಆಮಂತ್ರಣವನ್ನು ಕರ್ನಾಟಕ ದಲಿತ ಸಂಘರ್ಷ ಸಮಿತಿ ಬೈಂದೂರು ಇದರ ಸಂಚಾಲಕ ಜಗದೀಶ್ ಗಂಗೊಳ್ಳಿ, ಕರ್ನಾಟಕ ರಾಜ್ಯ ಆದಿದ್ರಾವಿಡ ಸಮಾಜ ಸೇವಾ ಸಂಘದ ಕೋಶಾಧಿಕಾರಿ ರಾಜ ಚೆಂಡ್ತಿಮಾರ್, ಪ್ರವೀಣ್ ಕುಮಾರ್ ಜೆ.ಪಿ ಬಿಡುಗಡೆಗೊಳಿಸಿದರು. ಉಳ್ಳಾಲ ನಗರಸಭೆಯ ನಾಮ ನಿರ್ದೇಶನ ಸದಸ್ಯ ರವಿ, ವಿದ್ಯಾನಿಧಿ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷರು ಯಾದವ, ಸಂಶೋಧನಾ ವಿದ್ಯಾರ್ಥಿ ಶಿವರಾಜ್ ಪಟೇಲ, ಸದಾನಂದ ಮಾಡೂರು, ಪ್ರೀತೇಶ್ ಪಜೀರ್ , ಅಸ್ಸೈಗೋಳಿ ವಿದ್ಯೋದಯ ಅನುದಾನಿತ ಹಿ.ಪ್ರಾ. ಶಾಲೆಯ ವಿದ್ಯಾರ್ಥಿಗಳು ಇದ್ದರು.

ಪುತ್ತೂರಿನ ಅಭಿವೃದ್ಧಿ ಸಹಿಸದ ಕೆಲವರಿಂದ ತಪ್ಪು ಮಾಹಿತಿ | ಮೆಡಿಕಲ್ ಕಾಲೇಜ್ ಹೋರಾಟ ಸಮಿತಿಯಿಂದ ಆರೋಪ

ಸೇಡಿಯಾಪಿನಲ್ಲಿ ಮೆಡಿಕಲ್ ಕಾಲೇಜ್ ಆರಂಭಿಸಲು ಸರ್ಕಾರ ಅನುಮತಿ

ಪುತ್ತೂರು: ಬನ್ನೂರು ಗ್ರಾಮದ ಸೇಡಿಯಾಪಿನಲ್ಲಿ ಸರಕಾರಿ ಮೆಡಿಕಲ್ ಕಾಲೇಜ್ ಆರಂಭಿಸಲು ರಾಜ್ಯ ಸರಕಾರ ಈಗಾಗಲೇ ಅನುಮತಿ ನೀಡಿದೆ. ಇದರ ಜೊತೆಗೆ ಅಲ್ಲಿ 300 ಬೆಡ್‌ನ ಆಸ್ಪತ್ರೆಯೂ ಆಗಲಿದೆ. ಆದರೆ, ಬಿಜೆಪಿಯವರು ಮೊಸರಲ್ಲಿ ಕಲ್ಲು ಹುಡುಕುವ ಕಾರ್ಯ ಮಾಡುತ್ತಿದ್ದು ಸೇಡಿಯಾಪಿನಲ್ಲಿ ಆಸ್ಪತ್ರೆ ಮಾಡುವುದನ್ನು ವಿರೋಧಿಸುತ್ತಿದ್ದಾರೆ ಎಂದು ಕೋಡಿಂಬಾಡಿ ಗ್ರಾಮ ಪಂಚಾಯತ್ ಮಾಜಿ ಉಪಾಧ್ಯಕ್ಷ ಜಯಪ್ರಕಾಶ್ ಬದಿನಾರು, ಸಾಮಾಜಿಕ ಮುಂದಾಳು ಎ. ಜತೀಂದ್ರ ಶೆಟ್ಟಿ ಅಳಿಮರ ಮತ್ತು ಮೆಡಿಕಲ್ ಕಾಲೇಜ್ ಹೋರಾಟ ಸಮಿತಿಯ ವಿಶ್ವಪ್ರಸಾದ್ ಸೇಡಿಯಾಪು ಹೇಳಿದ್ದಾರೆ.



ಅವರು ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಮೆಡಿಕಲ್ ಕಾಲೇಜಿಗೆ ಬಜೆಟ್‌ನಲ್ಲಿ ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಪುತ್ತೂರಿನ ಜನರ ಕನಸು ಶಾಸಕ ಅಶೋಕ್ ಕುಮಾರ್ ರೈ ಅವರ ಮೂಲಕ ನನಸಾಗುತ್ತಿದೆ. ಇದಕ್ಕೆ ಪೂರಕವಾಗಿ 300 ಹಾಸಿಗೆಗಳ ಸರಕಾರಿ ಆಸ್ಪತ್ರೆಯನ್ನು ಸೇಡಿಯಾಪಿನಲ್ಲೇ ಆರಂಭಿಸಲು ಸರಕಾರ ದಿಟ್ಟ ಹೆಜ್ಜೆ ಇರಿಸಿದೆ. ಇದಕ್ಕೆ ಬೇಕಾದ ಮೂಲಭೂತ ವ್ಯವಸ್ಥೆ ಸೇಡಿಯಾಪಿನಲ್ಲಿ ಇದೆ. ಗ್ರಾಮಾಂತರ ಪ್ರದೇಶಕ್ಕೆ ಒತ್ತು ನೀಡುವ ಉದ್ದೇಶದಿಂದ ಪೇಟೆ ಪ್ರದೇಶವನ್ನು ಬಿಟ್ಟು ಗ್ರಾಮೀಣ ಭಾಗದಲ್ಲಿ ವ್ಯವಸ್ಥೆ ಮಾಡಲಾಗಿದೆ. 2016ರಲ್ಲಿ ಆಗಿನ ಕಾಂಗ್ರೆಸ್ ಶಾಸಕಿ ಶಕುಂತಳಾ ಶೆಟ್ಟಿಯವರ ಅವಧಿಯಲ್ಲಿ 40 ಎಕ್ರೆ ಜಾಗವನ್ನು ಮೆಡಿಕಲ್ ಕಾಲೇಜಿಗೆ ನಿಗದಿ ಮಾಡಲಾಗಿತ್ತು. ನಂತರ ಆ ಜಾಗದಲ್ಲಿ ಸೀ ಫುಡ್ ತಯಾರಿಕಾ ಘಟಕ ಮಾಡಲು ಪ್ರಯತ್ನ ಮಾಡಿದರು. ಇದಕ್ಕೆ ವಿರೋಧ ವ್ಯಕ್ತವಾದಾಗ ಯೋಜನೆಯನ್ನು ಕೈಬಿಟ್ಟರು. ನಂತರ ಶಾಸಕ ಅಶೋಕ್ ಕುಮಾರ್ ರೈ ಅವರು ಮೆಡಿಕಲ್ ಕಾಲೇಜ್ ಕನಸಿಗೆ ಪುನರ್ಜನ್ಮ ಕೊಡುವ ಕೆಲಸ ಮಾಡಿದರು. ಈಗ ಕೆಲವೊಂದು ವಿಘ್ನಸಂತೋಷಿಗಳು ವಿನಾ ಕಾರಣ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪುತ್ತೂರಿನಲ್ಲಿ ಅಭಿವೃದ್ಧಿಯನ್ನು ಸಹಿಸದ ಕೆಲವರು ತಪ್ಪು ಮಾಹಿತಿ ನೀಡಿ ಜನರನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಈ ಕುರಿತು ಮುಂದಿನ ದಿನ ಜನಜಾಗೃತಿ ಮಾಡುವ ಕಾರ್ಯಕ್ರಮ ಆರಂಭಿಸಲಿದ್ದೇವೆ ಎಂದವರು ಹೇಳಿದರು.

ಸೇಡಿಯಾಪಿನಲ್ಲಿ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಆಗುವುದರಿಂದ ಎಲ್ಲರಿಗೂ ಅದು ಕೇಂದ್ರ ಸ್ಥಳವಾಗಿದೆ ಎಂದು ಎ. ಜತೀಂದ್ರ ಶೆಟ್ಟಿ ಅಳಿಮರ ತಿಳಿಸಿದರು. 300 ಬೆಡ್ ಆಸ್ಪತ್ರೆಗೆ ಕನಿಷ್ಠ 8 ಎಕ್ರೆ ಜಾಗ ಬೇಕೆಂದು ಮೆಡಿಕಲ್ ಕಾಲೇಜ್ ಕುರಿತು ಸ್ಥಳಕ್ಕೆ ಆಗಮಿಸಿದ ಸಂಬಂಧಿಸಿದ ಇಲಾಖಾ ಇಂಜಿನಿಯರ್ ಮಾಹಿತಿ ನೀಡಿದ್ದಾರೆ. ಹೊಸ ರೂಲ್ಸ್ ಪ್ರಕಾರ ಮೆಡಿಕಲ್ ಕಾಲೇಜಿಗೆ ಕನಿಷ್ಠ 8 ಎಕ್ರೆ ಜಾಗ ಬೇಕಾಗಿದೆ. ಹಾಲಿ ಸರಕಾರಿ ಆಸ್ಪತ್ರೆ ಇರುವ ಜಾಗ ಕೇವಲ 5.16 ಎಕ್ರೆ ಇದೆ. ಅದು ಆಸ್ಪತ್ರೆಗೆ ಕಟ್ಟಡಕ್ಕೆ ಸಾಕಾಗುವುದಿಲ್ಲ. ಆಸ್ಪತ್ರೆ ಎಂದಾಕ್ಷಣ ಅಲ್ಲಿ ವಿಶಾಲವಾದ ಪಾರ್ಕಿಂಗ್, ಆಂಬುಲೆನ್ಸ್‌ಗಳು ಸರಾಗವಾಗಿ ಓಡಾಡಲು ರಸ್ತೆಗಳು ಬೇಕಾಗುತ್ತದೆ. ಅಂತಹ ಎಲ್ಲಾ ಸೌಲಭ್ಯ ಈಗಿನ ಆಸ್ಪತ್ರೆಯಲ್ಲಿ ಇಲ್ಲ, ಹಾಗಾಗಿ ಸೇಡಿಯಾಪು ಆಸ್ಪತ್ರೆಗೆ ಮತ್ತು ಮೆಡಿಕಲ್ ಕಾಲೇಜಿಗೆ ಸೂಕ್ತ ಸ್ಥಳ. ಈಗಾಗಲೇ ಅಧಿಕಾರಿಗಳು ಸ್ಥಳಕ್ಕೆ ಬಂದು ಮಣ್ಣು ಪರೀಕ್ಷೆ ಮಾಡಿ ಹೋಗಿದ್ದಾರೆ. ಡ್ರೋನ್ ಸರ್ವೆ ನಡೆದು ಕಟ್ಟಡದ ಸ್ಕೆಚ್ ಕೂಡಾ ಆಗಿದೆ. ಎಲ್ಲಾ ಕಡೆಯಿಂದಲೂ ಸಂಪರ್ಕ ರಸ್ತೆಯೂ ಇದೆ ಎಂದು ವಿಶ್ವಪ್ರಸಾದ್ ಸೇಡಿಯಾಪು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಪುತ್ತೂರು ಸರಕಾರಿ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿ ಸದಸ್ಯ ಆಸ್ಕರ್ ಆನಂದ್ ಉಪಸ್ಥಿತರಿದ್ದರು.

ಹೊಸ ದಿಗಂತ
ನಿಮ್ಮೂರಿನ ಸುದ್ದಿ
ನಿರಂತರ ಸುದ್ದಿ ಅಪ್‌ಡೇಟ್‌ಗಾಗಿ Google Lens ನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!
website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb
ಶುಕ್ರವಾರ 13, ಮಾರ್ಚ್ 2026

ಸುತ್ತಮುತ್ತ

ವೈದ್ಯನಾಥ ಜುಮಾದಿ ಬಂಟ ದೈವಗಳ ವಾರ್ಷಿಕ ನೇಮ

ಬಂಟ್ವಾಳ: ಶಂಭೂರು ಗ್ರಾಮದ ದಿಂಡಿಕೆರೆ ಜೋಡುಸ್ಥಾನ ಎಂಬಲ್ಲಿ ವೈದ್ಯನಾಥ ಜುಮಾದಿ ಬಂಟ ದೈವಗಳ ವಾರ್ಷಿಕ ನೇಮೋತ್ಸವ ಬುಧವಾರ



ಸಂಪನ್ನಗೊಂಡಿತು. ಅಡೆಪಿಲ ಭಂಡಾರದ ಮನೆಯಲ್ಲಿ ಸೋಮವಾರ ರಾತ್ರಿ ಶ್ರೀ ಧರ್ಮರಸು ದೈವಕ್ಕೆ ನೇಮೋತ್ಸವ ನಡೆದು, ದಿಂಡಿಕೆರೆ ಜೋಡುಸ್ಥಾನಕ್ಕೆ ಮಂಗಳವಾರ ಸಂಜೆ ಭಂಡಾರ ಬಂದು ರಾತ್ರಿ ವೈದ್ಯನಾಥ ನೇಮೋತ್ಸವ ನಡೆಯಿತು. ಜುಮಾದಿ ಬಂಟ ದೈವಗಳ ನೇಮೋತ್ಸವ ಬುಧವಾರ ರಾತ್ರಿ ನೆರವೇರಿತು. ಆರಾಧನಾ ಸಮಿತಿ ಅಧ್ಯಕ್ಷ ನವೀನ್ ಕೋಟ್ಯಾನ್, ಗೌರವಾಧ್ಯಕ್ಷ ಸೀತಾರಾಮ ಪೂಜಾರಿ, ರಮೇಶ ಪೂಜಾರಿ ಭಂಡಾರದಮನೆ, ಪ್ರಧಾನ ಕಾರ್ಯದರ್ಶಿ ಹೇಮಚಂದ್ರ ಶಂಭೂರು, ಮೋನಪ್ಪ ಸಪಲ್ಯ, ಪ್ರಧಾನ ಅರ್ಚಕ ಜಗನ್ನಾಥ ಅಡೆಪಿಲ ಭಂಡಾರದ ಮನೆ, ಶೇಖರ ಅಡೆಪಿಲ, ಅಣ್ಣು ಪೂಜಾರಿ ಬಾವಮನೆ, ಕುದ್ರೋಳಿ ಕ್ಷೇತ್ರದ ಕೋಶಾಧಿಕಾರಿ ಪದ್ಮರಾಜ್ ಆರ್.ಪೂಜಾರಿ, ಮಾಜಿ ಪುರಸಭಾಧ್ಯಕ್ಷ ವಾಸು ಪೂಜಾರಿ, ಮಾಜಿ ಸದಸ್ಯ ಜಗದೀಶ ಕುಂದರ್, ತಾ.ಪಂ.ಮಾಜಿ ಉಪಾಧ್ಯಕ್ಷ ಆನಂದ ಶಂಭೂರು ಮತ್ತಿತರರು ಇದ್ದರು.

ಫಿಲೋಮಿನಾ ಕಾಲೇಜಿನ ಬಿಬಿಎ ವಿದ್ಯಾರ್ಥಿಗಳಿಂದ ಕೈಗಾರಿಕಾ ಭೇಟಿ

ಮಂಗಳೂರು: ನಗರದ ಸಂತ ಫಿಲೋಮಿನಾ ಕಾಲೇಜಿನ ವ್ಯವಹಾರ ನಿರ್ವಹಣಾ ವಿಭಾಗ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ನೀಡುವ ಉದ್ದೇಶದಿಂದ ಕೈಗಾರಿಕಾ ಭೇಟಿಯನ್ನು ಆಯೋಜಿಸಿತು. ಎರಡು ವಿಭಿನ್ನ ತಂಡಗಳಲ್ಲಿ ಭೇಟಿ ಕಾರ್ಯಕ್ರಮ ನಡೆಯಿತು. ದ್ವಿತೀಯ ಬಿಬಿಎ ವಿದ್ಯಾರ್ಥಿಗಳು ಪಣಂಬೂರಿನ ನ್ಯೂ ಮಂಗಳೂರು ಪೋರ್ಟ್ ಅಥಾರಿಟಿಗೆ ಭೇಟಿ ನೀಡಿ ಬಂದರಿನವಿವಿಧ ವಿಭಾಗಗಳ ಕಾರ್ಯವೈಖರಿ, ಕಾರ್ಗೋ ನಿರ್ವಹಣೆ, ರಫ್ತು-ಆಮದು ಪ್ರಕ್ರಿಯೆಗಳು ಹಾಗೂ ಲಾಜಿಸ್ಟಿಕ್ಸ್ ವ್ಯವಸ್ಥೆಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಇದರ ಮೂಲಕ ವಿದ್ಯಾರ್ಥಿಗಳಿಗೆ ಸಾಗಾಣಿಕೆ ಕಾರ್ಯಾಚರಣೆಗಳು ಮತ್ತು ಅಂತಾರಾಷ್ಟ್ರೀಯ ವ್ಯಾಪಾರದ ಪ್ರಾಯೋಗಿಕ ಅಂಶಗಳ ಕುರಿತು ತಿಳಿದುಕೊಳ್ಳುವ ಅವಕಾಶ ದೊರೆಯಿತು. ಇದೇ ವೇಳೆ ಪ್ರಥಮ ಬಿಬಿಎ ಮತ್ತು ಬಿಬಿಎ ಅನಾಲಿಟಿಕ್ಸ್ ವಿದ್ಯಾರ್ಥಿಗಳು ಕುಲಶೇಖರದಲ್ಲಿರುವ ನಂದಿನಿ ಡೈರಿಗೆ ಭೇಟಿ ನೀಡಿದರು. ಅಲ್ಲಿ ಹಾಲಿನ ಸಂಗ್ರಹಣೆ, ಸಂಸ್ಕರಣೆ, ಗುಣಮಟ್ಟ ಪರಿಶೀಲನೆ, ಪ್ಯಾಕೇಜಿಂಗ್ ಮತ್ತು ವಿತರಣೆ ವ್ಯವಸ್ಥೆಗಳ ಕುರಿತು ಅಧಿಕಾರಿಗಳು ವಿವರಿಸಿದರು. ವಿದ್ಯಾರ್ಥಿಗಳು ಡೈರಿಯ ವಿವಿಧ ವಿಭಾಗಗಳನ್ನು ವೀಕ್ಷಿಸಿ ಉತ್ಪಾದನಾನಿರ್ವಹಣೆ ಮತ್ತು ತಂತ್ರಜ್ಞಾನ ಬಳಕೆಯ ಬಗ್ಗೆ ತಿಳಿದುಕೊಂಡರು.

ಬಿಜೆಪಿ ಮಹಿಳಾ ಮೋರ್ಚಾದಿಂದ ಅಭಿನಂದನೆ

ಕಾಸರಗೋಡು: 58ನೇ ವಯಸ್ಸಿನಲ್ಲಿ ಪ್ಲಸ್‌ಟು ತತ್ಸಮಾನ ಪರೀಕ್ಷೆಯಲ್ಲಿ ಉನ್ನತ ಅಂಕ ಗಳಿಸಿದ ಕುತ್ತಿಕೋಲ್‌ನ ಚಿತ್ರಲೇಖಾ ಅವರನ್ನು ಭಾರತೀಯ ಜನತಾ ಮಹಿಳಾಮೋರ್ಚಾದ ಕಾರ್ಯಕರ್ತೆಯರು ಮನೆಗೆ ತೆರಳಿ ಅಭಿನಂದಿಸಿದರು. ಬಿಜೆಪಿ ಕುತ್ತಿಕೋಲ್ ಪಂ.ಸಮಿತಿ ಅಧ್ಯಕ್ಷ ಮಣಿ ಕಾವುಗಾಲ್, ಮಹಿಳಾಮೋರ್ಚಾ ಮುಳಿಯಾರು ಮಂಡಲಾಧ್ಯಕ್ಷೆ ಧರ್ಮಾವತಿ ಪಾಲಾರು, ಮಂಡಲ ಸಮಿತಿ ಕಾರ್ಯದರ್ಶಿ ಅನಿತಾ ರವಿ, ಗೋಪಾಲಕೃಷ್ಣ ಪಡ್ಪು ಮುಂತಾದವರು ಭಾಗವಹಿಸಿದ್ದರು.

ಟೆಂಡರ್‌ಗೆ ಆಹ್ವಾನ

ಕಾಸರಗೋಡು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಆಕಾಂಕ್ಷಿ ಬ್ಲಾಕ್ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಬೆಳವಣಿಗೆಯ ಮೇಲ್ವಿಚಾರಣಾ ಸಾಮಗ್ರಿಗಳ ಖರೀದಿಗೆ ಮರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸಲು ಕೊನೆ ದಿನ ಮಾ.18ರಂದು ಮಧ್ಯಾಹ್ನ 1 ಗಂಟೆ ಆಗಿದೆ. ಹೆಚ್ಚಿನ ಮಾಹಿತಿಗೆ 04994 293060 ಸಂಪರ್ಕಿಸಬಹುದು.

ವರ್ತಕರ ಹಿತರಕ್ಷಣಾ ವೇದಿಕೆ: ವಿಶೇಷ ಸಭೆ

ಸುಳ್ಯ: ಸುಳ್ಯದ ಫ್ಯಾನ್ಸಿ, ಹಾರ್ಡ್‌ವೇರ್, ಫುಟ್ ವೇರ್, ಬಟ್ಟೆ, ದಿನಸಿ ಮುಂತಾದ ಅಂಗಡಿಗಳ ಮಾಲೀಕರ ವಿಶೇಷ ಸಭೆಯು ಸುಳ್ಯ ವರ್ತಕರ ಹಿತರಕ್ಷಣಾ ಸಮಿತಿ ವತಿಯಿಂದ ಮಂಗಳವಾರ ನಡೆಯಿತು. ಅನುಪ್ ಶೆಣೈ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪ್ರಮುಖವಾಗಿ ಹೊರ ರಾಜ್ಯದಿಂದ ಬಂದು ಸಭಾಭವನ ಕಲ್ಯಾಣ ಮಂಟಪಗಳಲ್ಲಿ ಕಳಪೆ ಗುಣಮಟ್ಟದ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ನಿಯಂತ್ರಿಸುವಂತೆ ಕೋರಲು ತೀರ್ಮಾನಿಸಲಾಗಿದೆ.

ನಗರ ಪಂಚಾಯತ್ ಪೊಲೀಸ್ ಮತ್ತು ಇತರ ಇಲಾಖೆಗಳಿಗೆ ಈ ಕುರಿತು ಮನವಿ ಸಲ್ಲಿಸುವುದು ಎಂದು ತೀರ್ಮಾನಿಸಿದರು. ವಾಹನಗಳಲ್ಲಿ ದಿನಸಿ ವಸ್ತು ಮಾರಾಟ ಮಾಡಿ ಗ್ರಾಹಕರನ್ನು ವಂಚಿಸುವ ಮತ್ತು ವಾಹನ ಸಂಚಾರಕ್ಕೆ ಅಡಚಣೆ ಉಂಟು ಮಾಡುವ ವಿಚಾರವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಗೃಹ ಬಳಕೆಯ ಮಿಕ್ಸಿ, ಗ್ರೈಂಡರ್ ಮುಂತಾದ ಉತ್ಪನ್ನಗಳನ್ನು ಮನೆಮನೆಗಳಿಗೆ ಸುಲಭ ಕಂತಿನ ರೂಪದಲ್ಲಿ ನಕಲಿ ಉತ್ಪನ್ನಗಳನ್ನು ಪೂರೈಸುವುದರ ಬಗ್ಗೆಯೂ ಸಂಬಂಧಿಸಿದವರ ಗಮನಕ್ಕೆ ತರಬೇಕೆಂದು ತೀರ್ಮಾನಿಸಲಾಯಿತು. ಎಂ.ಬಿ. ಸದಾಶಿವ ಮಾತನಾಡಿದರು. ಕೇಶವ ಪ್ರಭು ವ್ಯಾಪಾರಿಗಳ ನೀತಿ ಸಂಹಿತೆ ಅವಶ್ಯವೆಂದು ಹೇಳಿದರು. ವೇದಿಕೆಯಲ್ಲಿ ಮಾಧವ ದೀಕ್ಷಾ, ಶೃತಿ ಉಪ್ಪಳಿಕೆ ಕೇಶವ ಮತ್ತಿತರರಿದ್ದರು. ಗೋಕುಲ್ ಫ್ಯಾಷನ್‌ನ ರಾಮಚಂದ್ರ ಸ್ವಾಗತಿಸಿದರು.

ಕೊಡಗು ಪತ್ರಕರ್ತರ ಸಂಘದಿಂದ ಸಂವಾದ ಕಾರ್ಯಕ್ರಮ | ಜಿಲ್ಲಾಸ್ಪತ್ರೆ ಡೀನ್‌ಡಾ. ಲೋಕೇಶ್ ಮಾಹಿತಿ

ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವ್ಯವಸ್ಥೆ

ಮಡಿಕೇರಿ: ಜಿಲ್ಲಾಸ್ಪತ್ರೆಯಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥೆ ಕಲ್ಪಿಸುವ ಪ್ರಸ್ತಾಪವಿದ್ದು, ಇದನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ನಿರಂತರ ಪ್ರಯತ್ನ ಸಾಗುತ್ತಿದೆ ಎಂದು ಕೊಡಗು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಬೋಧಕ ಆಸ್ಪತ್ರೆ (ಜಿಲ್ಲಾಸ್ಪತ್ರೆ) ಡೀನ್ ಮತ್ತು ನಿರ್ದೇಶಕ ಡಾ. ಲೋಕೇಶ್ ಹೇಳಿದ್ದಾರೆ.
ಕೊಡಗು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಜಿಲ್ಲಾಸ್ಪತ್ರೆ ಡೀನ್ ಅವರೊಂದಿಗೆ ಆಯೋಜಿಸಲಾಗಿದ್ದ ಸಂವಾದ ಕಾರ್ಯಕ್ರಮದಲ್ಲಿ ಚರ್ಚಿಸಲಾದ ವಿಷಯಗಳ ಕುರಿತ ಪ್ರಗತಿ ಹಾಗೂ ಅನುಷ್ಠಾನ ಕುರಿತು ಮಾಹಿತಿ ಪಡೆಯುವ ಅವರು ಈ ಮಾಹಿತಿ ನೀಡಿದ್ದಾರೆ.

ವೈದ್ಯರ ಕೊರತೆ ಇದೆ

ಪ್ರಸ್ತುತ ಜಿಲ್ಲಾಸ್ಪತ್ರೆ ವೇಗದಲ್ಲಿ ಅಭಿವೃದ್ಧಿ ಕಾಣುತ್ತಿದೆ. ವೈದ್ಯರ ಕೊರತೆಯಿದ್ದರೂ ಇರುವ ವೈದ್ಯರಿಂದ ರೋಗಿಗಳಿಗೆ ಅಗತ್ಯ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ರೇಡಿಯೋಲಾಜಿಸ್ಟ್ ಹೊರತುಪಡಿಸಿ ಬೇರೆಲ್ಲ ವಿಭಾಗದಲ್ಲೂ ವೈದ್ಯರಿದ್ದು, ಹುದ್ದೆ ಭರ್ತಿಗೆ ಆಹ್ವಾನಿಸಲಾಗಿದೆ. ಆದರೆ, ಕೊಡಗಿಗೆ ನಿಯೋಜನೆಗೆ



ವೈದ್ಯರು ಹಿಂದೇಟು ಹಾಕುತ್ತಿದ್ದಾರೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.
ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ, ವೈದ್ಯಕೀಯ ಸ್ನಾತಕೋತ್ತರ ಶಿಕ್ಷಣದೊಂದಿಗೆ ನರ್ಸಿಂಗ್, ಪ್ಯಾರಾ ಮೆಡಿಕಲ್, ಅಲೈಡ್ ಸೈನ್ಸ್ ಕೋರ್ಸ್'ಗಳು ಲಭ್ಯವಿವೆ. ಸ್ನಾತಕೋತ್ತರ ವೈದ್ಯರು ಕೂಡಾ ಚಿಕಿತ್ಸೆಗೆ ನೆರವಾಗುತ್ತಿರುವುದರಿಂದ ವೈದ್ಯರ ಕೊರತೆ ಒಂದಷ್ಟು ನೀಗಿದೆ ಎಂದರು.

ವೈದ್ಯಕೀಯ ಅಧೀಕ್ಷಕ ಡಾ. ಸೋಮಶೇಖರ್ ಮಾತನಾಡಿ, ಮಹಿಳಾ ಮತ್ತು ಮಕ್ಕಳ ವಿಭಾಗದಲ್ಲಿ ಅತ್ಯಂತ ಗುಣಮಟ್ಟದ ಸೇವೆಯನ್ನು ಒದಗಿಸಲಾಗುತ್ತಿದೆ. ಕ್ರಿಟಿಕಲ್ ಕೇರ್ ಸೆಂಟರ್ ನಿಂದಲೂ ಹೆಚ್ಚಿನ ಪ್ರಯೋಜನವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಒಪಿಡಿ ಕೌಂಟರ್ ಹೆಚ್ಚಳ

ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಂಜುಂಡಯ್ಯ ಮಾತನಾಡಿ, ಸ್ಕ್ಯಾನಿಂಗ್ ಸೇವೆಗಳನ್ನು ಒಂದೇ ಕಟ್ಟಡದಲ್ಲಿ ತರಲಾಗುವುದು. ಒಪಿಡಿ ಕೌಂಟರ್ ಗಳನ್ನು ಹೆಚ್ಚಿಸಲಾಗುವುದು. ಹೆಲ್ಪ್ ಡೆಸ್ಕ್ ಸ್ಥಾಪಿಸಲಾಗುವುದು. ಐಟಿಡಿಪಿ ಇಲಾಖೆಯಿಂದ 2 ಸಿಬ್ಬಂದಿ ನಿಯೋಜನೆಯಾಗಲಿದ್ದು, ಅವರಿಂದಲೂ ರೋಗಿಗಳಿಗೆ ಸಹಾಯ ದೊರೆಯಲಿದೆ ಎಂದರು.
ಇದೇ ಸಂದರ್ಭ ನೂತನವಾಗಿ ನಿರ್ಮಾಣ ಗೊಳ್ಳುತ್ತಿರುವ 300 ಹಾಸಿಗೆ ಸಾಮರ್ಥ್ಯದ ಕಾವೇರಿ ಬ್ಲಾಕ್, ಕ್ರಿಟಿಕಲ್ ಕೇರ್ ಸೆಂಟರ್, ಅಭಿವೃದ್ಧಿಗೊಂಡ ಹೆರಿಗೆ ಕೇಂದ್ರ, ಮಕ್ಕಳ ಒಳರೋಗಿ ವಿಭಾಗ ಹಾಗೂ ಎರಡು ವರ್ಷದಿಂದ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಮಿದುಳು ಆರೋಗ್ಯ ಕ್ಲಿನಿಕ್ ಘಟಕವನ್ನು ಪತ್ರಕರ್ತರು ವೀಕ್ಷಿಸಿದರು.

ಲಸಿಕೆಯ 100 ಡೋಸ್‌ಗಳು ಸದ್ಯಕ್ಕೆ ಜಿಲ್ಲಾಸ್ಪತ್ರೆಗೆ ಆಗಮಿಸಿದ್ದು, 14 ರಿಂದ 16 ವರ್ಷದ ಬಾಲಕಿಯರು ಈ ಉಚಿತ ಲಸಿಕೆಯ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ ಅವರು ಮಾಹಿತಿ ನೀಡಿದರು.
ಈ ಸಂದರ್ಭ ಸ್ಥಾನೀಯ ವೈದ್ಯಾಧಿಕಾರಿಗಳಾದ ಡಾ. ಧನಂಜಯ್, ಡಾ. ಅಭಿನಂದನ್ ಹಾಗೂ ಸಾಮಾನ್ಯ ವೈದ್ಯ ಶಾಸ್ತ್ರ ವಿಭಾಗದ ವೈದ್ಯ ಡಾ. ಪವನ್ ಹಾಜರಿದ್ದರು. ಪತ್ರಕರ್ತರ ಸಂಘದ ಜಿಲ್ಲಾ ಅಧ್ಯಕ್ಷ ಬಾಚರಣಿಯಂಡ ಅನು ಕಾರ್ಯಪ್ಪ ರಾಜ್ಯ ಸಮಿತಿ ನಿರ್ದೇಶಕಿ ಬಿ.ಆರ್. ಸವಿತಾ ರೈ, ಪ್ರಧಾನ ಕಾರ್ಯದರ್ಶಿ ಎಚ್.ಜೆ. ರಾಕೇಶ್, ಕಾರ್ಯದರ್ಶಿ ರಿಜ್ವಾನ್ ಹುಸೇನ್, ಮಲ್ಲಿಕಾರ್ಜುನ್, ನಿರ್ದೇಶಕರಾದ ಜೈರುಸ್ ಥೋಮಸ್ ಅಲೆಗ್ಸಾಂಡರ್, ಜಿ.ಆರ್. ಪ್ರಜ್ವಲ್, ಶಿವಕುಮಾರ್, ರಂಗಸ್ವಾಮಿ, ಅಬ್ದುಲ್ಲಾ, ವಿಷ್ಮಾ, ಸಂತೋಷ್ ರೈ, ಕೊಡಗು ಪ್ರೆಸ್‌ಕ್ಲಬ್ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ, ಪ್ರಧಾನ ಕಾರ್ಯದರ್ಶಿ ಆದರ್ಶ್ ಅದ್ಕಲೇಗಾರ್ ಇದ್ದರು.

ತುರ್ತು ಸಂಪರ್ಕ ಸಂಖ್ಯೆ

ತುರ್ತು ವೈದ್ಯಕೀಯ ಸೇವೆ ಹಾಗೂ ಆಸ್ಪತ್ರೆಯಲ್ಲಿ ಸಮಸ್ಯೆಗಳು ಉಂಟಾದಲ್ಲಿ ವೈದ್ಯಾಧಿಕಾರಿಗಳನ್ನು ಸಂಪರ್ಕಿಸುವಂತೆ ಡಾ. ಲೋಕೇಶ್ ಮನವಿ ಮಾಡಿದರು. ಆರ್‌ಎಂಒಹ ಡಾ. ಧನಂಜಯ್ **9945607166**, ಡಾ. ಅಭಿನಂದನ್ **9844790767**, ವೈದ್ಯಕೀಯ ಅಧೀಕ್ಷಕ ಡಾ. ಸೋಮಶೇಖರ್ **9448984095**, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ. ನಂಜುಂಡಯ್ಯ **9482111211** ಸಂಖ್ಯೆಯನ್ನು ಸಂಪರ್ಕಿಸಬಹುದಾಗಿದೆ.

ಯುವ ಪೀಳಿಗೆಗೆ ಹರಿಶ್ಚಂದ್ರ ಸಾಲ್ಯಾನ್ ಕೃತಿ ಮಾರ್ಗದರ್ಶಕ: ಡಾ. ಪುನರೂರು



ಮುಲ್ಕಿ: ಯುವ ಪೀಳಿಗೆಗೆ ಮಾರ್ಗದರ್ಶನ ಹಾಗೂಸಂಸ್ಕೃತಿಸಂಸ್ಕಾರಗಳಉತ್ತೇಜನಕ್ಕಾಗಿ ಹರಿಶ್ಚಂದ್ರ ಪಿ. ಸಾಲ್ಯಾನ್‌ರವರ ಸಾಹಿತ್ಯ ಕೃಷಿ ಅನನ್ಯ ಎಂದು ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಹೇಳಿದರು.

ಅವರು ಕೆ. ಎಸ್. ರಾವ್ ನಗರದ ಶ್ರೀ ನಾರಾಯಣ ಗುರು ಸಮಾಜ ಸೇವಾ ಸಂಘದಲ್ಲಿ ಮಂಗಳವಾರ ಹರಿಶ್ಚಂದ್ರ ಪಿ. ಸಾಲ್ಯಾನ್‌ರವರ 22ನೇ ಕೃತಿ 'ತುಳುನಾಡ್ದ ತುಳು ಗಾದೆಲು' ಬಿಡುಗಡೆಗೊಳಿಸಿ ಮಾತನಾಡಿದರು.

ಸೇವೆ ಅಭಿನಂದನೀಯ

ಸಭೆಯಲ್ಲಿ ಮುಖ್ಯ ಅತಿಥಿ ಕೊಡೆತ್ತೂರು ಭುವನಾಭಿರಾಮ ಉಡುಪ ಮಾತನಾಡಿ, ತುಳುನಾಡಿನ ಜನಪದ ನೆಲೆಯಲ್ಲಿ ಹರಿಶ್ಚಂದ್ರ ಪಿ. ಸಾಲ್ಯಾನ್ ಸೇವೆ ಅಭಿನಂದನೀಯವಾಗಿದ್ದು, ಅವರು ಬರೆದ 'ಮದು-ಮದಿಪುನುಡಿಕಟ್ಟ್' ಎಂಬ ಕೃತಿಯು ಬಹಳ ಜನಪ್ರಿಯವಾಗಿದೆ ಎಂದರು. ಈ ಸಂದರ್ಭ ಪ್ರತಿಭಾನ್ವಿತ ಲೇಖಕಿ ಶರೋನ್ ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು.

ಅತಿಥಿಗಳಾಗಿ ಉದ್ಯಮಿ ಸದಾಶಿವ ಆಚಾರ್ಯ, ಮೂಲ್ಕಿ ಬಂಟರ ಸಂಘದ ಅಧ್ಯಕ್ಷ ಅಶೋಕ್‌ಕುಮಾರ್ ಶೆಟ್ಟಿ, ತುಳು ಪತ್ರಿಕೆ ಪೂವರಿಯ ವಿಜಯ್ ಕುಮಾರ್ ಭಂಡಾರಿ ಪುತ್ತೂರು, ಸಮಾಜಿಕ ಕಾರ್ಯಕರ್ತ ಜನಾರ್ದನ ಬಂಗೇರ, ಗೋಪಿನಾಥ ಪಡಂಗ, ದಿನೇಶ್‌ಕೊಲ್ನಾಡ್, ಐಕಳ ಜಯಪಾಲ ಶೆಟ್ಟಿ ಉದ್ಯಮಿ ಜೋನ್ ಕ್ವಾಡ್ರಸ್, ಸರೋಜಿನಿ ಸುವರ್ಣ, ಇಂದಿರಾ, ವಿಜಯಎಚ್.ಸಾಲ್ಯಾನ್, ಕೇಶವಾನಂದ ಗುರೂಜಿ, ಕರುಣಾಕರ ಸುವರ್ಣ, ಜಿ. ಟಿ. ಆಚಾರ್ಯ ಮುಂಬೈ, ಜೆ.ಎಸ್. ಕರ್ಕೇರ, ಮೊದಲಾದವರು ಇದ್ದರು. ಜೆಸಿ ದಿನೇಶ್ ಶೆಟ್ಟಿ ಸ್ವಾಗತಿಸಿ, ವಾಸು ಪೂಜಾರಿ ಕಾರ್ಯಕ್ರಮ ವಂದಿಸಿದರು.

ಪುತ್ತೂರು ಅಕ್ಷಯ ಕಾಲೇಜಿನಲ್ಲಿ ಆರ್ಥಿಕ ಸಾಕ್ಷರತೆ ಮಾಹಿತಿ ಕಾರ್ಯಾಗಾರ



ಪುತ್ತೂರು: ಅಕ್ಷಯ ಎಜುಕೇಶನಲ್ ಮತ್ತು ಚಾರಿಟೇಬಲ್ ಟ್ರಸ್ಟ್ ಅಧೀನದಲ್ಲಿ ಕಾರ್ಯಾಚರಿಸುತ್ತಿರುವ ಅಕ್ಷಯ ಕಾಲೇಜಿನಲ್ಲಿ ಎಲೈಟ್ ಆಂತರಿಕ ವಿನ್ಯಾಸ ಸಂಘ ಹಾಗೂ ಐಕ್ಯೂಎಸಿ ಸಹಭಾಗಿತ್ವದಲ್ಲಿ ಆಂತರಿಕ ವಿನ್ಯಾಸ ವಿಭಾಗದ ವಿದ್ಯಾರ್ಥಿಗಳಿಗೆ 'ಆರ್ಥಿಕ ಸಾಕ್ಷರತೆ' ಎಂಬ ವಿಷಯದ ಕುರಿತು ಮಾಹಿತಿ ಕಾರ್ಯಾಗಾರ ನಡೆಸಲಾಯಿತು.

ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿದ್ದ ಅಕ್ಷಯ ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ಕಿಶೋರ್ ಕುಮಾರ್ ರೈ ಕೆ. ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಆರ್ಥಿಕ ಸಾಕ್ಷರತೆಯ ವ್ಯಾಪ್ತಿಗೆ ಬರುವ ಕೌಶಲ್ಯಗಳಲ್ಲಿ ಮನೆಯ ಬಜೆಟ್, ಸಾಲ ನಿರ್ವಹಣೆ, ಹಣಕಾಸು ಉತ್ಪನ್ನಗಳನ್ನು ಮೌಲ್ಯಮಾಪನ ಮಾಡುವುದು, ಹೂಡಿಕೆಗಳನ್ನು ಆಯ್ಕೆ ಮಾಡುವುದು ಮತ್ತು ಇನ್ನೂ ಹೆಚ್ಚಿನ ವಿಚಾರಗಳ ಬಗ್ಗೆ ವಿವರಿಸಿ ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರಗಳ ಮೂಲಕ ಉತ್ತಮ ಕಾರ್ಯಾಗಾರವನ್ನು ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷರು ಆಂತರಿಕ ವಿನ್ಯಾಸ ವಿಭಾಗದ ಮುಖ್ಯಸ್ಥ ಹಾಗೂ ಕಾಲೇಜಿನ ಉಪಪ್ರಾಂಶುಪಾಲ ರಕ್ಷಣ ಟಿ.ಆರ್. ಪ್ರಾಸ್ತಾವಿಸಿದರು. ವಿಭಾಗದ ಉಪನ್ಯಾಸಕ ಕಾವ್ಯ ಹಾಗೂ ವಿಸ್ಮಯ ಇದ್ದರು. ಎಲೈಟ್ ಸಂಘದ ಅಧ್ಯಕ್ಷ ವಿದ್ಯಾರ್ಥಿ ಸೃಜನ್ ಸ್ವಾಗತಿಸಿ, ಪ್ರಥಮ ವಿಭಾಗದ ವಿದ್ಯಾರ್ಥಿನಿ ದುರ್ಗಲಕ್ಷ್ಮಿ ವಂದಿಸಿದರು. ತೃತೀಯ ವಿಭಾಗದ ಸ್ಫೂರ್ತಿ ನಿರ್ವಹಿಸಿದರು.

ಪ್ರಭಾಕರ ಪ್ರಭುಗೆ 'ಸ್ವಸ್ತಿಕ್' ಪುರಸ್ಕಾರ



ಬಂಟ್ವಾಳ: ಸಹಕಾರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುವುದರೊಂದಿಗೆ ಇತರ ಕ್ಷೇತ್ರಗಳಲ್ಲೂ ಸಹಕಾರ ಕ್ಷೇತ್ರವನ್ನು ಪಸರಿಸಿಕೊಂಡು ಎಲ್ಲಾ ಚಟುವಟಿಕೆಗಳಲ್ಲಿ ತೊಡಗಿಸಿ ಸಲ್ಲಿಸಿರುವ ಸಮಾಜ ಸೇವೆಯನ್ನು ಪರಿಗಣಿಸಿ ಸಿದ್ದಕಟ್ಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಪ್ರಭಾಕರ ಪ್ರಭು ಅವರನ್ನು ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಪುಂಜಾಲಕಟ್ಟೆ ವತಿಯಿಂದ ಜರಗಿದ ಸಾಮೂಹಿಕ ವಿವಾಹ ಸಂದರ್ಭದಲ್ಲಿ ರಾಜ್ಯ ಮಟ್ಟದ 'ಸ್ವಸ್ತಿಕ್ ಸಂಭ್ರಮ ಪುರಸ್ಕಾರ- 2026' ನೀಡಿ ಗೌರವಿಸಲಾಯಿತು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ, ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರಾದ ರವಿಶಂಕರ್‌ಶೆಟ್ಟಿ ಬಡಾಜೆಗುತ್ತು, ಸ್ವಸ್ತಿಕ್ ಫ್ರೆಂಡ್ಸ್ ಕ್ಲಬ್ ಸ್ಥಾಪಕಾಧ್ಯಕ್ಷ ಎಂ. ತುಂಗಪ್ಪ ಬಂಗೇರ, ಬಿಜೆಪಿ ಬಂಟ್ವಾಳ ಮಂಡಲದ ಅಧ್ಯಕ್ಷ ಚೆನ್ನಪ್ಪ ಕೋಟ್ಯಾನ್, ಬಿಜೆಪಿ ಮುಖಂಡ ಸಂದೇಶಶೆಟ್ಟಿ ಆರೆಬೆಟ್ಟು, ಪ್ರಮುಖರಾದ ಹರೀಂದ್ರ ಪೈ, ವಾಲ್ಟರ್ ನಂದಳಿಕೆ, ಕಿರಣ್ ಚಂದ್ರ ಪುಷ್ಪಗಿರಿ, ಜಗನ್ನಾಥ ಶೆಟ್ಟಿ, ಪುನೀತ್ ಕುಮಾರ್, ಶಾರದಾ, ಗೀತಾ ಹೆಗ್ಡೆ, ಅಬ್ದುಲ್ ಹಮೀದ್ ಮೋಹನ್ ಶೆಟ್ಟಿ, ಹೇಮಂತ್ ಕುಮಾರ್, ಸತೀಶ್ ಬಂಗೇರ, ಚಂದ್ರಶೇಖರ ಶೆಟ್ಟಿಗಾರ್, ಮಾದವ ಬಂಗೇರ, ಅಬ್ದುಲ್ಲಾ ಪಿ. ಜಯರಾಮ, ರತ್ನಾಕರ, ಶಾಜಿ ಹುಸೈನ್, ಧನ್ ರಾಜ್, ರಫಿಕ್ ಮತ್ತಿತರರಿದ್ದರು. ಪ್ರಭಾಕರ ಸ್ವಾಗತಿಸಿ, ರಾಜೇಶ್ ಬಂಗೇರ ವಂದಿಸಿದರು.

ಕುಂದಾಪುರದಲ್ಲಿ ವೈದ್ಯಕೀಯ ಚಿಕಿತ್ಸಾಲಯ 'ತ್ರಿನಯ' ಉದ್ಘಾಟನೆ



ಕುಂದಾಪುರ: ವಿಜ್ಞಾನ ಹಾಗೂ ತಂತ್ರಜ್ಞಾನ ಮುಂದುವರೆಯುತ್ತಿರುವ ಪ್ರಸ್ತುತ ಕಾಲಘಟ್ಟದಲ್ಲಿ ಬೆಳೆಯುತ್ತಿರುವ ಕುಂದಾಪುರದಂತಹ ನಗರಕ್ಕೆ ಆಧುನಿಕ ತಂತ್ರಜ್ಞಾನ ಹೊಂದಿರುವ ಚರ್ಮ, ಕೂದಲು ಹಾಗೂ ಅಲಂಕಾರಿಕ ಚಿಕಿತ್ಸೆಗಳ ನುರಿತ ವೈದ್ಯಕೀಯ ವ್ಯವಸ್ಥೆಯ ಅಗತ್ಯವನ್ನು ಡಾ. ಅನುಷಾ ಶೆಟ್ಟಿ ಪೂರೈಸಿರುವುದು ಸಂತೋಷವಾಗಿದೆ ಎಂದು ಶಾಸಕ ಎ. ಕಿರಣ್ ಕುಮಾರ ಕೊಡ್ಗಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂದಾಪುರದ ಕೇಕ್‌ವಾಲಾ ಬಿಲ್ಡಿಂಗ್‌ನ ಮೊದಲ ಮಹಡಿಯಲ್ಲಿ ನೂತನವಾಗಿ ಆರಂಭಿಸಲಾದ ಆಧುನಿಕ ವೈದ್ಯಕೀಯ ತಂತ್ರಜ್ಞಾನದ ಚರ್ಮ, ಕೂದಲು, ಅಲಂಕಾರಿಕ ಚಿಕಿತ್ಸೆಗಳು ಹಾಗೂ ಲೇಸರ್ ಚಿಕಿತ್ಸೆಯ ವೈದ್ಯಕೀಯ ಚಿಕಿತ್ಸಾಲಯ 'ತ್ರಿನಯ'ವನ್ನು ಭಾನುವಾರ ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನದ ಬಳಕೆಯಿಂದ ಕಾಯಿಲೆ ಉಲ್ಬಣವಾಗುವ ಮೊದಲೇ ಪರಿಹಾರ ಕಂಡುಕೊಳ್ಳಲು ಸಾಧ್ಯ. ಈ ನಿಟ್ಟಿನಲ್ಲಿ ಕಾಸ್ಮೆಟಿಕ್ ಡರ್ಮಾಟೋ ಸರ್ಜರಿ ಚಿಕಿತ್ಸೆಗಳು ತುಂಬಾ ಉಪಯೋಗಕಾರಿ ಎಂದು ಅವರು ಹೇಳಿದರು.
ಡಾ.ಅನುಷಾ ಶೆಟ್ಟಿ, ಡಾ. ಕೃತನ್ ಶೆಟ್ಟಿ, ಮಾಜಿ ಶಾಸಕ ಕೆ. ಗೋಪಾಲ ಪೂಜಾರಿ, ಉದ್ಯಮಿಗಳಾದ ಎಚ್.ಜಯಶೀಲ ಶೆಟ್ಟಿ, ಬಿ.ಉದಯ್‌ಕುಮಾರ ಶೆಟ್ಟಿ, ಬಿ.ವಿನಯ್ ಕುಮಾರ ಶೆಟ್ಟಿ, ಕೃಷ್ಣ ಶೆಟ್ಟಿ, ಮನೀಶ್ ಜೆ. ಶೆಟ್ಟಿ, ಜಿ.ಪಂ ಮಾಜಿ ಸದಸ್ಯ ಹರ್ಕೂರು ಮಂಜಯ್ಯ ಶೆಟ್ಟಿ, ಜಿಲ್ಲಾ ಗುತ್ತಿಗೆದಾರರ ಸಂಘದ ಅಧ್ಯಕ್ಷ ಗೋಕುಲ್ ಶೆಟ್ಟಿ ಉಪ್ಪುಂದ, ಸಂಪತ್ ಕುಮಾರ ಶೆಟ್ಟಿ ಶಾನಾಡಿ, ಡಾ.ಆತುಲ್‌ಕುಮಾರ ಶೆಟ್ಟಿ ಇದ್ದರು.

ಮುಕ್ಕ ಶ್ರೀನಿವಾಸ್ ವಿಶ್ವವಿದ್ಯಾಲಯ: 2 ದಿನಗಳ ತಾಂತ್ರಿಕ ಉತ್ಸವ ಉದ್ಘಾಟನೆ



ಮಂಗಳೂರು: ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೈಬರ್ ವ್ಯವಸ್ಥೆಯನ್ನು ರಕ್ಷಿಸಿ, ತಂತ್ರಜ್ಞಾನವನ್ನು ಜವಾಬ್ದಾರಿಯಿಂದ ಬಳಸುವ ಮೂಲಕ ಸೈಬರ್ ರಕ್ಷಣಾಕಾರರಾಗಬೇಕು ಎಂದು ಭಾರತ, ಅಮೇರಿಕ, ಫಿಲಿಪೈನ್ಸ್ ಹಾಗೂ ಇನ್ನಿತರ ದೇಶಗಳಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕಳೆದ ಹಲವಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ದಿಯಾ ಸಿಸ್ಟಮ್ಸ್ ಮತ್ತು ಗ್ಲೋ ಟಚ್ ಟೆಕ್ನಾಲಜೀಸ್ ಸಂಸ್ಥೆಗಳ ನಿರ್ದೇಶಕ ಶ್ಯಾಮ್ ಪ್ರಸಾದ್ ಹೆಬ್ಬಾರ್ ಕರೆ ನೀಡಿದರು.

ಸುರತ್ಕಲ್ ಸಮೀಪದ ಮುಕ್ಕದಲ್ಲಿರುವ ಶ್ರೀನಿವಾಸ್ ಯೂನಿವರ್ಸಿಟಿ ಇನ್ ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಆಂಡ್ ಟೆಕ್ನಾಲಜಿಯಲ್ಲಿ ಎರಡು ದಿನಗಳ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ತಾಂತ್ರಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಉತ್ಸವ 'ಟೆಕ್ ಯುವ - 26' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಡಿಜಿಟಲ್ ಯುಗದಲ್ಲಿ ಸೈಬರ್ ಜಾಗೃತಿ ಅತ್ಯಂತ ಮಹತ್ವದ ಅಂಶವಾಗಿದೆ. ಸೈಬರ್ ದಾಳಿಯಿಂದಾಗಿ ವೈಯುಕ್ತಿಕ ಮಾಹಿತಿ, ಬ್ಯಾಂಕ್ ಖಾತೆಯ ಮಾಹಿತಿಗಳು ಸೋರಿಕೆಯಾಗುತ್ತಿದೆ. ಇದನ್ನು ತಡೆಯಬೇಕಾದು ತುರ್ತು ಇಂದಿನದ್ದು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ. ಕೆ. ಸತ್ಯನಾರಾಯಣ ರೆಡ್ಡಿ, ವಿದ್ಯಾರ್ಥಿಗಳು ನಿರಂತರ ಕಲಿಕೆ, ಆವಿಷ್ಕಾರ, ಕೌಶಲ್ಯಗಳ ಉನ್ನತೀಕರಣ, ಮತ್ತು ಇಂಜಿನಿಯರಿಂಗ್ ತಂತ್ರಜ್ಞಾನದ ಮೂಲಕ ಸಮಾಜಕ್ಕೆ ಉಪಯುಕ್ತವಾಗುವ ಪರಿಹಾರಗಳನ್ನು ಅಭಿವೃದ್ಧಿಪಡಿಸುವತ್ತ ಗಮನ ಹರಿಸಬೇಕು ಎಂದು ಹೇಳಿದರು.
ಕಾಲೇಜಿನ ಮುಖ್ಯಸ್ಥ ಡಾ. ರಾಮಕೃಷ್ಣ ಎನ್ ಹೆಗಡೆ, ಶ್ರೀನಿವಾಸ್ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ನಿರ್ದೇಶಕರಾದ ಡಾ.ಪ್ರವೀಣ್ ಬಿ. ಎಂ., ಟೆಕ್ ಯುವ ಕಾರ್ಯಕ್ರಮದ ಸಂಚಾಲಕ ಪ್ರೊ. ಕೆ.ಶ್ರೀನಾಥ್ ರಾವ್, ಟೆಕ್ ಯುವ-26 ರ ವಿದ್ಯಾರ್ಥಿ ಸಮನ್ವಯಕಾರ ಆದರ್ಶ್, ಸಾಗರ್ ಎ, ಸ್ನೇಹಾ ರೀಶೆಲ್ ರೊಡ್ರಿಗಸ್, ಮತ್ತು ಕಾರ್ತಿಕ್ ವೆರ್ಣೇಕರ್ ಇದ್ದರು. ಸಂಶೋಧನಾ ವಿಭಾಗದ ನಿರ್ದೇಶಕಡಾ. ಪ್ರವೀಣ್ ಬಿ. ಎಂ. ವಂದಿಸಿದರು. ಪ್ರೊ.ರೋಹನ್ ಫೆರ್ನಾಂಡಿಸ್ ನಿರೂಪಿಸಿದರು. 1,500 ಇಂಜಿನಿಯರಿಂಗ್ ವಿದ್ಯಾರ್ಥಿಗಳು 48ಕ್ಕೂ ಅಧಿಕ ಸ್ಪರ್ಧೆಗಳಲ್ಲಿ ಭಾಗವಹಿಸಿದರು.

ಅಲ್ಲಿಪಾದೆ: ಆರೋಗ್ಯ ತಪಾಸಣಾ ಶಿಬಿರ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬಂಟ್ವಾಳ,,ಕೆ. ಎಸ್. ಹೆಗ್ಡೆ ಚಾರಿಟೇಬಲ್ ಆಸ್ಪತ್ರೆ ದೇರಳಕಟ್ಟೆ, ಶ್ರೀರಾಮ ಭಜನಾ ಮಂದಿರ ಅಲ್ಲಿಪಾದೆ, ಮಹಿಳಾ ಜ್ಞಾನವಿಕಾಸ ಕೇಂದ್ರ ಅಲ್ಲಿಪಾದೆ, ನಾವೂರು ಇವರ ಸಹಬಾಗಿತ್ವದಡಿಯಲ್ಲಿ ಅಲ್ಲಿಪಾದೆ ಶ್ರೀರಾಮ ಭಜನಾ ಮಂದಿರದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ವಲಯ ಜನಜಾಗ್ರತಿ ವೇದಿಕೆಯ ಅಧ್ಯಕ್ಷ ಮನ್ಮಥರಾಜ್ ಜೈನ್ ಶಿಬಿರದ ಉದ್ಘಾಟನೆ ನೆರವೇರಿಸಿದರು. ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ. ಆರೋಗ್ಯದ ತಪಾಸ ಣಾ ಅಗತ್ಯತೆ ಮತ್ತು ಆರೋಗ್ಯ ಕಾಪಾಡುವಲ್ಲಿ ಜೀವನ ಶೈಲಿ ಮತ್ತು ಆಹಾರ ಪದ್ಧತಿಗಳು ಹೇಗಿರಬೇಕೆಂಬ ಕುರಿತು ಮಾಹಿತಿ ನೀಡಿದರು. ಮಾಜಿ ಗ್ರಾ.ಪಂ. ಅಧ್ಯಕ್ಷ ಲೀಲಾವತಿ, ಸಂಜೀವ ಶೆಟ್ಟಿ ಮೀನಲಿ, ನವೀನ್ ಶೆಟ್ಟಿ ಗೀತಾ, ವಲಯ ಮೇಲ್ವಿಚಾರಕ ರಾಜೇಶ್ ನಾಯ್ಕ್, ಕೃಷ್ಣಪ್ಪ ಓಡುದಡ್ಕ, ರಘು ಎರುಕಡಪ್ಪು, ಸಂಯೋಜಕಿ ಉಮಾ, ಜ್ಞಾನವಿಕಾಸ ಸಮನ್ವಯಧಿಕಾರಿ ಸವಿತಾ, ಸೇವಾಪ್ರತಿನಿಧಿಗಳಾದ ವಸಂತಿ, ವಿಜಯ, ಉಷಾ, ಸಿ.ಎಸ್. ಸಿ ಸೇವಾದಾರ ರಕ್ಷಿತಾ, ಭವಾನಿ ಇದ್ದರು.



ಭಗವಾನ್ ಶ್ರೀ ಸತ್ಯಸಾಯಿಬಾಬಾ ಜನ್ಮ ಶತಮಾನೋತ್ಸವದ ಅಂಗವಾಗಿ ದೇಶವ್ಯಾಪಿ ವಿವಿಧ ಆರಾಧನಾ ಮಂದಿರಗಳು, ದೇಗುಲಗಳಿಗೆ ಸಂಚರಿಸುವ ಶ್ರೀ ಸತ್ಯಸಾಯಿ ಪ್ರೇಮವಾಹಿನಿ ರಥಯಾತ್ರೆ, ಬಡವರ ಪಾಲಿನ ಬಂಧು, ಕೊಡುಗೈದಾನಿ ಕಿಳಿಂಗಾರು ದಿ.ಸಾಯಿರಾಂ ಭಟ್ ಅವರ ಕಿಳಿಂಗಾರು ಶ್ರೀ ಸಾಯಿ ಮಂದಿರಕ್ಕೆ ಬುಧವಾರ ಆಗಮಿಸಿತು. ಸಾಯಿರಾಂ ಕೆ.ಎನ್.ಕೃಷ್ಣ ಭಟ್ ದಂಪತಿಗಳು ಶ್ರೀಪಾದುಕೆಗಳನ್ನು ಸ್ವೀಕರಿಸಿ ಬರಮಾಡಿಕೊಂಡರು. ಸಾಯಿರಾಂ ಭಕ್ತರು ಸತ್ಸಂಗ, ಭಜನೆ ಇತ್ಯಾದಿಗಳನ್ನು ನಡೆಸಿಕೊಟ್ಟರು.

ವಿವೇಕಾನಂದ ಕಾಲೇಜಿನಲ್ಲಿ 'ಹಂಸ ಧ್ವನಿ' ಸುನಾದ ವಿವೇಕ ಸ್ಮೃತಿ, ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ

ಸಂಗೀತವೆಂದರೆ ಭಾರತೀಯ ಸಂಸ್ಕೃತಿಯ ಸಂಪತ್ತು: ಕಾಂಚನ ಎ. ಈಶ್ವರ ಭಟ್

ಪುತ್ತೂರು: ಸಂಗೀತವೆಂದರೆ ಒಂದು ಕುಟುಂಬವಿದ್ದಂತೆ. ಸಂಗೀತ ಹೇಳುವುದು ಹಾಗೂ ಕೇಳುವುದರಲ್ಲಿ ಭಾವನೆಗಳ ವಿನಿಮಯವಾಗುವುದು. ಲಲಿತ ಕಲೆಗಳಲ್ಲಿ ಅಮೋಘವಾದುದು ಹಾಗೂ ದೈವಿಕ ಕಲೆ ಎನಿಸಿಕೊಂಡದ್ದು ಶಾಸ್ತ್ರೀಯ ಸಂಗೀತ. ಇಂತಹ ಶಾಸ್ತ್ರಬದ್ಧವಾದ ಯಾವುದೇ ಕಲೆಗಳನ್ನು ಕಲಿತುಕೊಳ್ಳಲು ಗುರು ಅವಶ್ಯ ಎಂದು ಪುತ್ತೂರಿನ ಸುನಾದ ಸಂಗೀತ ಕಲಾಶಾಲೆಯ ನಿರ್ದೇಶಕ ವಿದ್ವಾನ್ ಕಾಂಚನ ಎ. ಈಶ್ವರ ಭಟ್ ಹೇಳಿದರು.
ನಗರದ ವಿವೇಕಾನಂದ ಕಲಾ, ವಿಜ್ಞಾನ ವಾಣಿಜ್ಯ ಕಾಲೇಜಿನ (ಸ್ವಾಯತ್ತ) ಬೈಂದೂರು ಪ್ರಭಾಕರ ರಾವ್ ಸಭಾಂಗಣದಲ್ಲಿ ಸುನಾದ ಸಂಗೀತ ಕಲಾ ಶಾಲೆ ಪುತ್ತೂರು, ವಿವೇಕಾನಂದ ಸಂಶೋಧನಾ ಕೇಂದ್ರ, ಭಾರತೀಯ ಸಂಸ್ಕೃತಿ ಮತ್ತು ಲಲಿತ



ಕಲೆಗಳ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ನಡೆದ 'ಹಂಸ ಧ್ವನಿ' ಸುನಾದ ವಿವೇಕ ಸ್ಮೃತಿ ಹಾಗೂ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಹಾಗೂ ಸಂಚಾಲಕ ಮುರಳಿ ಕೃಷ್ಣ ಕೆ.ಎನ್. ಶುಭ ಹಾರೈಸಿದರು. ಹಿರಿಯ ಪಿಟೀಲು ವಾದಕ ವಿದ್ವಾನ್ ವಿಠಲ ರಾಮಮೂರ್ತಿ ಚೆನ್ನೈ, ಸಂಗೀತ ವಿದ್ವಾನ್ ಟಿ.ಎಸ್. ಪಟ್ಟಾಭಿರಾಮ ಪಂಡಿತ್ ಬೆಂಗಳೂರು ಇದ್ದರು. ವಿವೇಕಾನಂದ ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ. ವಿಜಯಸರಸ್ವತಿ ಬಿ ಪ್ರಾಸ್ತಾವಿಸಿದರು. ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಸ್ವಾಗತಿಸಿದರು. ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥೆ, ಭಾರತೀಯ ಸಂಸ್ಕೃತಿ ಮತ್ತು ಲಲಿತ ಕಲೆಗಳ ಅಧ್ಯಯನ ಕೇಂದ್ರದ ಸಂಯೋಜಕಿ ಡಾ. ವಿದ್ಯಾ ಎಸ್. ವಂದಿಸಿದರು. ಕನ್ನಡ ಉಪನ್ಯಾಸಕಿ ಡಾ. ಗೀತಾ ಕುಮಾರಿ ಟಿ. ನಿರ್ವಹಿಸಿದರು.
ಮಧ್ಯಾಹ್ನದ ನಂತರ ಕರ್ನಾಟಕ ಶಾಸ್ತ್ರೀ ಸಂಗೀತ ಕಾರ್ಯಕ್ರಮ ಜರುಗಿದ್ದು ಹಾಡುಗಾರಿಕೆಯಲ್ಲಿ ವಿದ್ವಾನ್ ಟಿ.ಎಸ್. ಪಟ್ಟಾಭಿರಾಮ ಪಂಡಿತ್, ಪಿಟೀಲಿನಲ್ಲಿ ವಿದ್ವಾನ್ ವಿಠ್ಠಲ ರಾಮಮೂರ್ತಿ, ಮೃದಂಗದಲ್ಲಿ ವಿದ್ವಾನ್ ಕಾಂಚನ ಎ. ಈಶ್ವರ ಭಟ್, ಘಟಂನಲ್ಲಿ ವಿದ್ವಾನ್ ಶರತ್ ಕೌಶಿಕ್ ಮೈಸೂರು ಹಾಗೂ ಮೋರ್ಸಿಂಗ್‌ನಲ್ಲಿ ವಿದ್ವಾನ್ ಬಾಲಕೃಷ್ಣ ಹೊಸಮನೆ ಸಹಕರಿಸಿದರು. ಕಾರ್ಯಕ್ರಮವನ್ನು ಕಾಲೇಜಿನ ವಿಶೇಷಾಧಿಕಾರಿ ಡಾ. ಮನಮೋಹನ ಸಂಯೋಜಿಸಿದರು. ವಿದ್ವಾನ್ ವಿಠ್ಠಲ ರಾಮಮೂರ್ತಿ 'ಸಂಗೀತ ಮತ್ತು ಭಾವ' ಎನ್ನುವ ವಿಚಾರವನ್ನು ತಮ್ಮ ಹಾಡುಗಾರಿಕೆಯ ಮೂಲಕ ವಿದ್ಯಾರ್ಥಿಗಳಿಗೆ ಪ್ರಸ್ತುತಪಡಿಸಿದರು. ವಿದ್ವಾನ್ ಬಾಲಕೃಷ್ಣ ಹೊಸಮನೆ, ಡಾ. ನಿಶಿತಾ ಮತ್ತೂರು ಅವರ ಪರಿಕಲ್ಪನೆಯಲ್ಲಿ ಭಾವ ರಾಗ ತಾಳ ನಾಟ್ಯವನ್ನು ಒಳಗೊಂಡಿರುವ 'ಪ್ರದರ್ಶನಂ' ಕಾರ್ಯಕ್ರಮ ನಡೆಯಿತು.

ಗೌರವ ಸಮರ್ಪಣೆ

ಈ ಸಂದರ್ಭ ವಿದ್ವಾನ್ ವಿಠ್ಠಲ ರಾಮಮೂರ್ತಿ, ವಿದ್ವಾನ್ ಟಿ.ಎಸ್. ಪಟ್ಟಾಭಿರಾಮ ಪಂಡಿತ್, ಪುತ್ತೂರಿನ ಸುನಾದ ಸಂಗೀತ ಕಲಾ ಶಾಲೆಯ ನಿರ್ದೇಶಕ ವಿದ್ವಾನ್ ಕಾಂಚನ ಎ. ಈಶ್ವರ ಭಟ್ ಮತ್ತು ವಿದ್ವಾನ್ ಬಾಲಕೃಷ್ಣ ಹೊಸಮನೆ ಅವರಿಗೆ ಗೌರವ ಸಮರ್ಪಣೆ ನಡೆಯಿತು.

ಸುತ್ತ ಮುತ್ತ

ಜಿಲ್ಲಾ ಮಟ್ಟದ ಮಾಧ್ಯಮ ಪ್ರಮಾಣೀಕರಣ ಸಮಿತಿ ರಚನೆ

ಕಾಸರಗೋಡು: ಕೇರಳ ವಿಧಾನಸಭಾ ಚುನಾವಣೆಯ ಭಾಗವಾಗಿ ಜಿಲ್ಲಾ ಮಟ್ಟದ ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿಯನ್ನು ರಚಿಸಲಾಗಿದೆ. ಜಿಲ್ಲಾ ಚುನಾವಣಾಧಿಕಾರಿಯಾಗಿರುವ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಜಿಲ್ಲಾ ಮಾಹಿತಿ ಅಧಿಕಾರಿ ಎಸ್.ಎನ್.ಎಂ.ಮಧುಸೂದನನ್ ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಕಾಸರಗೋಡು ಆರ್‌ಡಿಒ ಬಿನು ಜೋಸೆಫ್, ಜಿಲ್ಲಾ ಕಾನೂನು ಅಧಿಕಾರಿ ಎಸ್.ಎನ್.ಶಶಿಕುಮಾರ್, ಅಕ್ಷಯ ಐಟಿ ಮಿಷನ್ ಡಿಪಿಎಂ ಸಿ.ಎಂ.ಮಿಥುನ್‌ಕೃಷ್ಣ ಮತ್ತು ನಿವೃತ್ತ ಮಾಹಿತಿ ಅಧಿಕಾರಿ ಮತ್ತು ಪತ್ರಕರ್ತ ಸಿ.ಎಚ್. ಆನಂದ ಅವರನ್ನು ಸದಸ್ಯರನ್ನಾಗಿ ಹೊಂದಿರುವ ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣಾ ಸಮಿತಿಯನ್ನು ರೂಪಿಸಲಾಗಿದೆ.

ನಾಳೆ ಕಾಯಿಮಲೆ ದೈವಸ್ಥಾನದಲ್ಲಿ ನೇಮ

ಮುಳ್ಳೇರಿಯ: ಬೆಳ್ಳೂರು ಸಮೀಪದ ಕಾಯಿಮಲೆ ಶ್ರೀ ಗುಳಿಗ, ಶ್ರೀ ಕೊರಗತನಿಯ ಸನ್ನಿಧಿಯಲ್ಲಿ ನೇಮೋತ್ಸವವು ಮಾ.14 ಮತ್ತು 15ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಮಾ.14ರಂದು ಬೆಳಗ್ಗೆ 8ಗಂಟೆಗೆ ಗಣಪತಿ ಹವನ, 9ಕ್ಕೆ ಭಜನಾ ಸಂಕೀರ್ತನೆ, ಮಧ್ಯಾಹ್ನ 1ಗಂಟೆಗೆ ಅನ್ನ ಸಂತರ್ಪಣೆ, ಅಪರಾಹ್ನ 2.30ಕ್ಕೆ ಗುಳಿಗ ದೈವದ ಭಂಡಾರ ಇಳಿಯುವುದು, 3.30ರಿಂದ ಗುಳಿಗ ದೈವದ ಕೋಲ, ಸಂಜೆ 6.30ಕ್ಕೆ ಕೊರಗತನಿಯ ದೈವದ ಭಂಡಾರ ಇಳಿಯುವುದು, ರಾತ್ರಿ 8.30ಕ್ಕೆ ಅನ್ನ ಸಂತರ್ಪಣೆ, 9.30ಕ್ಕೆ ಕೊರಗತನಿಯ ದೈವದ ಕೋಲ ಹಾಗೂ ಮಾ.15ರಂದು ಮುಂಜಾನೆ ದೈವದ ನೇಮ ಸಮಾಪ್ತಿಯಾಗಲಿದೆ.

ಅತಿಥಿ ಉಪನ್ಯಾಸಕರ ನೇಮಕಾತಿ

ಕಾಸರಗೋಡು: ಸೀತಾಂಗೋಳಿಯ ಐಟಿಐ ಕೇಂದ್ರದಲ್ಲಿ ಡಿ ಮತ್ತು ಸಿವಿಲ್ ಟ್ರೇಡ್‌ನಲ್ಲಿ ಸಾಮಾನ್ಯ ವರ್ಗದ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಮಾ.17 ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ. ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವಿ, ಮೂರು ವರ್ಷಗಳ ಡಿಪ್ಲೊಮಾ ಅಥವಾ ಡ್ರಾಫ್ಟ್ಸ್‌ಮನ್ ಸಿವಿಲ್ ಎನ್‌ಟಿಸಿ ಮತ್ತು ಮೂರು ವರ್ಷಗಳ ಕೆಲಸದ ಅನುಭವ, ಎನ್‌ಎಸಿ ಮತ್ತು ಒಂದು ವರ್ಷದ ಕೆಲಸದ ಅನುಭವ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ: 04998 245099 ಕರೆ ಮಾಡಬಹುದು.

ನೀಲೇಶ್ವರ: ಅಂಗನವಾಡಿಗಳಿಗೆ ಅಡುಗೆ ಪಾತ್ರೆ, ವಿತರಣೆ

ಕಾಸರಗೋಡು: ನೀಲೇಶ್ವರ ನಗರಸಭೆಯ 2025–26ರ ವಾರ್ಷಿಕ ಯೋಜನೆಯ ಭಾಗವಾಗಿ ನಗರಸಭಾ ವ್ಯಾಪ್ತಿಯಲ್ಲಿರುವ ಅಂಗನವಾಡಿಗಳಿಗೆ ಅಡುಗೆ ಪಾತ್ರೆಗಳನ್ನು ವಿತರಿಸಲಾಯಿತು. ನಗರಸಭಾ ಸಭಾಂಗಣದಲ್ಲಿ ಗುರುವಾರ ಆಯೋಜಿಸಲಾದ ಸಮಾರಂಭದಲ್ಲಿ ಅಧ್ಯಕ್ಷ ಪಿ.ಪಿ.ಮುಹಮ್ಮದ್ ರಫಿ ವಿತರಣೆಯನ್ನು ಉದ್ಘಾಟಿಸಿದರು.
ಅಂಗನವಾಡಿಗಳ ಭೌತಿಕ ಪರಿಸ್ಥಿತಿಗಳನ್ನು ಸುಧಾರಿಸಲು ಮತ್ತು ಮಕ್ಕಳಿಗೆ ಗುಣಮಟ್ಟದ ಆಹಾರವನ್ನು ಖಚಿತಪಡಿಸಿಕೊಳ್ಳಲು ಈ ಯೋಜನೆಯು ಆದ್ಯತೆ ನೀಡುತ್ತದೆ. ಉಪಾಧ್ಯಕ್ಷೆ ಪಿ.ಎಂ.ಸಂಧ್ಯಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಗರಸಭೆಯ ವಿವಿಧ ಅಭಿವೃದ್ಧಿ ಚಟುವಟಿಕೆಗಳು ಮತ್ತು ಅಂಗನವಾಡಿಗಳ ಸಬಲೀಕರಣದ ಬಗ್ಗೆ ಕಾರ್ಯಕ್ರಮದಲ್ಲಿ ಚರ್ಚಿಸಲಾಯಿತು. ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಶಮೀನಾ ಮುಹಮ್ಮದ್, ಕೌನ್ಸಿಲರ್‌ಗಳಾದ ಸುರೇಶ್ ಬಾಬು, ಸುಭಾಷ್, ಸತೀಶನ್, ಪ್ರಕಾಶನ್, ರಾಜಿ ಮಾತನಾಡಿದರು. ಐಸಿಡಿಎಸ್ ಮೇಲ್ವಿಚಾರಕಿ ಕೆ.ಪಿ.ಗೀತಾ ಸ್ವಾಗತಿಸಿ, ಅಂಗನವಾಡಿ ಕಾರ್ಯಕರ್ತೆ ಕೆ.ಸುಧಾ ವಂದಿಸಿದರು.

ನೀಲೇಶ್ವರ ಬ್ಲಾಕ್ ಪಂಚಾಯತ್‌ನಲ್ಲಿ ಜಾಗೃತಿ ತರಗತಿ

ಕಾಸರಗೋಡು: ಉದ್ಯೋಗದ ಸ್ಥಳದಲ್ಲಿ ಮಹಿಳೆಯರ ಸುರಕ್ಷತೆಯನ್ನು ಖಾತರಿಪಡಿಸುವ ಭಾಗವಾಗಿ ನೀಲೇಶ್ವರ ಬ್ಲಾಕ್ ಪಂಚಾಯತ್ ಆಂತರಿಕ ಕುಂದುಕೊರತೆ ಪರಿಹಾರ ಸಮಿತಿಯ ಆಶ್ರಯದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳಾ ಸುರಕ್ಷತೆ ಕಾಯ್ದೆಯ ವಿಷಯದ ಕುರಿತು ಜಾಗೃತಿ ತರಗತಿಯನ್ನು ಗುರುವಾರ ಆಯೋಜಿಸಲಾಗಿತ್ತು. ಕೆಲಸದ ಜಾಗದಲ್ಲಿ ಮಹಿಳೆಯರು ಎದುರಿಸುತ್ತಿರುವ ತೊಂದರೆಗಳನ್ನು ಪರಿಹರಿಸಲು ಮತ್ತು ಕಾನೂನು ಸುರಕ್ಷತೆಯ ಬಗ್ಗೆ ಜಾಗೃತಿ ಮೂಡಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪ್ರಮುಖ ಕೌನ್ಸಿಲರ್ ಶೈಜಾ ಥೋಮಸ್ ತರಗತಿಯ ನೇತೃತ್ವ ವಹಿಸಿದ್ದರು. ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಸಿ.ಎಂ. ಮೀನಾಕುಮಾರಿ ಅಧ್ಯಕ್ಷತೆ ವಹಿಸಿದ್ದರು.

ಅತಿಥಿ ಉಪನ್ಯಾಸಕ ಹುದ್ದೆಗೆ ಸಂದರ್ಶನ

ಕಾಸರಗೋಡು: ಚೆರುವತ್ತೂರು ಸರಕಾರಿ ಐಟಿಐ ಕೇಂದ್ರದಲ್ಲಿ ತರಬೇತಿ ಉಪನ್ಯಾಸಕ (ಪಂಬ್ಲರ್) ಹುದ್ದೆಗೆ ಅತಿಥಿ ಉಪನ್ಯಾಸಕರ ನೇಮಕಾತಿಗಾಗಿ ಸಂದರ್ಶನವು ಮಾ.16 ರಂದು ಬೆಳಗ್ಗೆ 10.30ಕ್ಕೆ ಕೋಝಿಕ್ಕೋಡ್ ಸಿವಿಲ್ ಸ್ಟೇಷನ್‌ನಲ್ಲಿರುವ ಉತ್ತರ ವಲಯ ತರಬೇತಿ ನಿರೀಕ್ಷಕರ ಕಚೇರಿಯಲ್ಲಿ ನಡೆಯಲಿದೆ. ಮೆಕ್ಯಾನಿಕಲ್ ಇಂಜಿನಿಯರಿಂಗ್ ಅಥವಾ ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಮೂರು ವರ್ಷಗಳ ಡಿಪ್ಲೊಮಾ ವಿದ್ಯಾರ್ಹತೆಯಾಗಿದೆ. ಹೆಚ್ಚಿನ ಮಾಹಿತಿಗೆ 0495 2371451 ಕರೆ ಮಾಡಬಹುದು.

ಕಾಞಂಗಾಡು ಮೈಕ್ಕಾನಂ ನಗರದಲ್ಲಿ 99 ಲಕ್ಷ ರೂ. ವೆಚ್ಚದ ಯೋಜನೆಗೆ ಚಾಲನೆ | ಒ.ಆರ್.ಕೇಳು ಹೇಳಿಕೆ

ಪರಿಶಿಷ್ಟ ವಿಭಾಗದವರ ಸಮಗ್ರ ಪ್ರಗತಿ ಸರ್ಕಾರದ ಮುಖ್ಯಗುರಿ

ಕಾಸರಗೋಡು: ಕಾಞಂಗಾಡು ನಗರಸಭಾ ವ್ಯಾಪ್ತಿಯ ಮೈಕ್ಕಾನಂ ನಗರದ ಸಮಗ್ರ ಗ್ರಾಮಾಭಿವೃದ್ಧಿ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲಾಗಿದೆ. ಅಂಬೇಡ್ಕರ್ ಗ್ರಾಮೀಣಾಭಿವೃದ್ಧಿ ಯೋಜನೆಯಡಿ ಪೂರ್ಣಗೊಂಡ ಅಭಿವೃದ್ಧಿ ಕಾರ್ಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ಒ.ಆರ್.ಕೇಳು ಅವರು ಆನ್‌ಲೈನ್ ಮೂಲಕ ಗುರುವಾರ ಉದ್ಘಾಟಿಸಿದರು.
ಮೈಕ್ಕಾನಂ ನಗರದಲ್ಲಿ ಒಟ್ಟು 99 ಲಕ್ಷ ರೂಪಾಯಿ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಅಂಬೇಡ್ಕರ್ ಗ್ರಾಮ ವಿಕಾಸ ಯೋಜನೆಯಡಿ ಹಿಂದುಳಿದ ಸ್ಥಳಗಳನ್ನು ಆಯ್ಕೆ ಮಾಡಿ ಅಲ್ಲಿನ ಮೂಲಸೌಲಭ್ಯಗಳನ್ನು ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಸಚಿವರು ಹೇಳಿದರು.
ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಉನ್ನತಿಗಾಗಿ ಕೇರಳ ಸರಕಾರವು ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಶಿಕ್ಷಣ ಕ್ಷೇತ್ರದಲ್ಲಿ



ಸಾಧನೆ ಮಾಡುವ ವಿದ್ಯಾರ್ಥಿಗಳ ಉನ್ನತ ವಿದ್ಯಾಭ್ಯಾಸಕ್ಕೆ ಆಗತ್ಯವಿರುವ ಎಲ್ಲಾ ಬೆಂಬಲವನ್ನು ಸರಕಾರವು ಒದಗಿಸುತ್ತಿದೆ. ಜನರ ಜೀವನ ಮಟ್ಟವನ್ನು ಸುಧಾರಿಸುವುದು ಸರಕಾರದ ಪ್ರಮುಖ ಉದ್ದೇಶವಾಗಿದೆ ಎಂದು ಸಚಿವರು ನುಡಿದರು.
ಅಂಬೇಡ್ಕರ್ ಗ್ರಾಮಾಭಿವೃದ್ಧಿ ಯೋಜನೆಯು 15ಕ್ಕೂ ಹೆಚ್ಚು ಮನೆಗಳನ್ನು ಹೊಂದಿರುವ ಪ್ರಮುಖ ನಗರದ ಸಮಗ್ರ ಅಭಿವೃದ್ಧಿಯ ಗುರಿಯನ್ನು ಹೊಂದಿದೆ. ರಾಜ್ಯದ ನೂರಾರು ಹಳ್ಳಿಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರಲಾಗಿದೆ. ರಾಜ್ಯ ಸರಕಾರವು 50ರಿಂದ 14 ಮನೆಗಳನ್ನು ಹೊಂದಿರುವ ಸಣ್ಣ ಹಳ್ಳಿಗಳ ಸಮಗ್ರ ಅಭಿವೃದ್ಧಿಗಾಗಿ ಐಶ್ವರ್ಯ ಗ್ರಾಮಂ ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ಪರಿಶಿಷ್ಟ ಜಾತಿ ವಿಭಾಗದವರಿಗೆ ಉನ್ನತ ಶಿಕ್ಷಣ ಪಡೆಯಲು ಮತ್ತು ವಿದೇಶಗಳಲ್ಲಿ ಉದ್ಯೋಗವನ್ನು ಹುಡುಕಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಇಲಾಖೆಯು ನವೀನ ಯೋಜನೆಗಳನ್ನು ರೂಪಿಸುತ್ತಿದೆ ಮತ್ತು ಕಾರ್ಯಗತಗೊಳಿಸುತ್ತಿದೆ ಎಂದು ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.
ಸಮಾರಂಭದಲ್ಲಿ ಕಾಞಂಗಾಡು ಶಾಸಕ ಇ.ಚಂದ್ರಶೇಖರನ್ ಅಧ್ಯಕ್ಷತೆ ವಹಿಸಿದ್ದರು. ನಗರಸಭಾ ಉಪಾಧ್ಯಕ್ಷೆ ಲತಾ ಬಾಲಕೃಷ್ಣನ್, ಸ್ಥಾಯೀ ಸಮಿತಿ ಅಧ್ಯಕ್ಷರಾದ ಎಂ.ಸುಮತಿ, ಫೌಝಿಯಾ ಶರೀಫ್, ಎಂ.ವಿಜಯನ್, ವಾರ್ಡ್ ಕೌನ್ಸಿಲರ್ ಗಣಿದ ಎ.ರಾಜನ್, ಪಿ. ವಿ.ಮಣಿ ಇದ್ದರು. ನಗರಸಭಾ ಅಧ್ಯಕ್ಷ ವಿ.ವಿ.ರಮೇಶನ್ ಸ್ವಾಗತಿಸಿ, ಪರಿಶಿಷ್ಟ ಜಾತಿ ಅಭಿವೃದ್ಧಿ ವಿಭಾಗದ ಅಧಿಕಾರಿ ಪಿ.ಬಿ.ಬಶೀರ್ ಧನ್ಯವಾದವಿತ್ತರು.

ಹಲವು ಕಾರ್ಯಚಟುವಟಿಕೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಮಗ್ರ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ವಿವಿಧ ಕಾರ್ಯಚಟುವಟಿಕೆಗಳನ್ನು ಜಾರಿಗೊಳಿಸಲಾಗಿದೆ. ಜಿಲ್ಲೆಯ 4 ತಾಲೂಕುಗಳ ವ್ಯಾಪ್ತಿಯ ಕಾಲನಿಗಳ ಅಭಿವೃದ್ಧಿಗೆ ರೂಪುರೇಷೆ ನೀಡಲಾಗಿದೆ. ಅಲ್ಲದೆ ಕಾಲನಿ ನಿವಾಸಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

ಸಮರ್ಪಕ ಅನುಷ್ಠಾನ

ಪರಿಶಿಷ್ಟ ಜಾತಿ ಅಭಿವೃದ್ಧಿ ವಿಭಾಗದ ಅಧಿಕಾರಿ ಪಿ.ಮಿನಿ ಅವರು ಯೋಜನಾ ವರದಿಯನ್ನು ಮಂಡಿಸಿದರು. ಜಿಲ್ಲಾ ನಿರ್ಮಾಣ ಕೇಂದ್ರದ ಪ್ರಧಾನ ವ್ಯವಸ್ಥಾಪಕ ಇ.ಪಿ.ರಾಜ್‌ಮೋಹನ್ ಅವರು ನಿರ್ಮಾಣ ವರದಿಯನ್ನು ಮಂಡಿಸಿದರು. ಯೋಜನೆಯ ಭಾಗವಾಗಿ ರಸ್ತೆ ನವೀಕರಣ, ಕುಡಿಯುವ ನೀರಿನ ಯೋಜನೆ, ಮನೆ ನವೀಕರಣ, ಸಮುದಾಯ ಭವನ ನವೀಕರಣ, ಬಾವಿ ನವೀಕರಣ ಮತ್ತು ಸೌರ ಬೀದಿ ದೀಪಗಳನ್ನು ಈ ಪ್ರದೇಶದಲ್ಲಿ ಅಳವಡಿಸಲಾಗಿದೆ. ಜಿಲ್ಲಾ ನಿರ್ಮಾಣ ಕೇಂದ್ರವು ಯೋಜನಾ ಕಾಮಗಾರಿಯ ಹೊಣೆಗಾರಿಕೆ ವಹಿಸಿಕೊಂಡಿತ್ತು.

ಲೈಫ್ ವಸತಿ ಯೋಜನೆಯ ಕೀಲಿಕೈ ಹಸ್ತಾಂತರ, ಫಲಾನುಭವಿಗಳ ಸಭೆ



ಪೆರ್ಲ: ಎಣ್ಮಕಜೆ ಪಂಚಾಯತ್ ಲೈಫ್ ವಸತಿ ಯೋಜನೆಯ ಕೀಲಿಕೈ ಹಸ್ತಾಂತರ ಸಮಾರಂಭ ಮತ್ತು ಫಲಾನುಭವಿಗಳ ಸಭೆ ಪಂಚಾಯತ್ ಸಭಾಂಗಣದಲ್ಲಿ ಜರಗಿತು. ಗ್ರಾಮ ಪಂಚಾಯತ್ ಅಧ್ಯಕ್ಷೆ ಕುಸುಮಾವತಿ ಬಿ. ಉದ್ಘಾಟಿಸಿ ಮಾತನಾಡಿ, ಯೋಜನೆ ಸಂಬಂಧಿಸಿ 260 ಫಲಾನುಭವಿಗಳಿಗೆ ಮೊದಲ ಕಂತಿನ ಹಣ ನೀಡಲಾಗಿದೆ. ಒಪ್ಪಂದ ಪತ್ರಕ್ಕೆ ಸಹಿ ಹಾಕಿದ ಎಲ್ಲರಿಗೂ ಮೊದಲ ಕಂತಿನ ಹಣ ವಿತರಿಸಲಾಗುವುದು ಎಂದು ಮಾಹಿತಿ ನೀಡಿದರು. ಎಣ್ಮಕಜೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಅಬೂಬಕರ್ ಸಿದ್ದಿಕ್ ವಳಮುಗರು ಅಧ್ಯಕ್ಷತೆ ವಹಿಸಿ ಮಾತನಾಡಿ, ಪಂಚಾಯತ್ ವ್ಯಾಪ್ತಿಯಲ್ಲಿ ಪಡಿತರ ಚೀಟಿ ಇನ್ನಿತರ ವ್ಯವಸ್ಥೆಗಳು ಇಲ್ಲದವರನ್ನು ಗುರುತಿಸಿ ವಸತಿ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ರಮ್ಯಾ ಇಬ್ರಾಹಿಂ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ವಿಜಯ ಕೆ, ಸದಸ್ಯರಾದ ಪ್ರಮೀಳಾ, ಪುಷ್ಪಾವತಿ, ಆಯಿಷಾ ಎ.ಎ, ಆಯಿಷತ್ ರಬಿಯಾ, ರಾಮಚಂದ್ರ ಎಂ., ನಳಿನಾಕ್ಷಿ ಸಿ.ಸಿ., ಕೃಷ್ಣಪ್ಪ, ಸೌದಾಬಿ ಹನೀಫ್, ಯೋಜನಾ ಸಮಿತಿ ಉಪಾಧ್ಯಕ್ಷ ಬಿ.ಎಸ್. ಗಾಂಭೀರ್ ಮಾತನಾಡಿದರು.
ವಿಇಒ ಪ್ರಮೋದ್ ಆರ್.ಆರ್. ವರದಿ ಮಂಡಿಸಿದರು. ಪ್ರಭಾರ ಕಾರ್ಯದರ್ಶಿ ಗಿರೀಶ್ ಟಿ. ಸ್ವಾಗತಿಸಿ, ಹೆಡ್ ಕ್ಲರ್ಕ್ ವಿನೋದ್ ವಂದಿಸಿದರು.

ಮುಂದಿನ ಪೀಳಿಗೆಗೆ ಧಾರ್ಮಿಕ ಆಧ್ಯಾತ್ಮಿಕ ಮೌಲ್ಯಗಳನ್ನು ದಾಟಿಸಬೇಕಿದೆ: ಎಡನೀರು ಶ್ರೀ



ಬದಿಯಡ್ಕ: ಹೆಚ್ಚುತ್ತಿರುವ ಆಧುನೀಕರಣದ ಮಧ್ಯೆ ನಮ್ಮ ಪಾರಂಪರಿಕ ಜೀವನ ಶೈಲಿಗಳು ಬದಲಾಗದಿರಲಿ. ನವ ಸಮಾಜ ನಿರ್ಮಾಣದಲ್ಲಿ ಪ್ರತಿಯೊಬ್ಬ ಪೋಷಕನೂ ಜವಾಬ್ದಾರಿಯುತರಾಗಿ ಕಾರ್ಯಾಚರಿಸಿದಾಗ ಸುಂದರ ವ್ಯವಸ್ಥೆ ರೂಪುಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಬದುಕು, ಜೀವನ ಕೌಶಲ್ಯ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಮಕ್ಕಳಿಗೆ ಕೈದಾಟಿಸಿದಾಗ ಪ್ರಬಲ ಅಂತಃಶಕ್ತಿಯ ಪೀಳಿಗೆ ಸೃಷ್ಟಿಗೊಳ್ಳುವುದು ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.
ಹಿರಿಯ ಸಹಕಾರಿ ಸುಬ್ರಹ್ಮಣ್ಯ ಭಟ್ ಅವರ ಸಹಸ್ರ ಚಂದ್ರದರ್ಶನ ಶಾಂತಿ ಸಹಿತ ವಿವಿಧ ಕಾರ್ಯಕ್ರಮಗಳ ಅಂಗವಾಗಿ ಬುಧವಾರ ಸಂಜೆ ನೀರ್ಚಾಲು ಸಮೀಪದ ಪುದುಕೋಳಿಯಲ್ಲಿ ನಡೆದ ಅಭಿನಂದನೆ – ಗುರುವಂದನೆ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.
ಕೊಂಡೆವೂರು ಮಠಾಧೀಶ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿ ಆಶೀರ್ವಚನಗೈದರು. ಗ್ರಾ.ಪಂ. ಅಧ್ಯಕ್ಷ ಶಂಕರ ಡಿ. ಅಧ್ಯಕ್ಷತೆ ವಹಿಸಿದ್ದರು. ಜ್ಯೋತಿಷ್ಯ ವಿದ್ವಾನ್ ವೆಂಕಟೇಶ್ವರ ಭಟ್ ಕುಂಜಾರು ಅಭಿನಂದಿಸಿ ಮಾತನಾಡಿದರು. ಮೈಸೂರು ವಿವಿ ದೂರ ಶಿಕ್ಷಣ ನಿರ್ದೇಶನಾಲಯದ ರಿಜಿಸ್ಟ್ರಾರ್ ನವೀನ್ ಕುಮಾರ್, ನಂಜುಂಡಸ್ವಾಮಿ ಚೆನ್ನರಾಯಪಟ್ಟಣ, ರಾಜಗೋಪಾಲ ಭಟ್ ಬೇಲಕೇರಿ, ಸಿದ್ದರಾಜು ಮೈಸೂರು, ಬ್ಲಾಕ್ ಪಂಚಾಯತ್ ಸದಸ್ಯ ಮಹೇಶ್ ವಳಕ್ಕುಂಜ, ಬದಿಯಡ್ಕ ಗ್ರಾಪಂ ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ., ಸದಸ್ಯೆ ರಜನಿ ಸಂದೀಪ್ ಪುದುಕೋಳಿ ಶುಭಹಾರೈಸಿದರು.
ಬ್ಲಾಕ್ ಪಂಚಾಯತ್ ಸದಸ್ಯ ಖಾದರ್ ಮಾನ್ಯ, ಗ್ರಾಪಂ ಸದಸ್ಯ ಶ್ಯಾಮಪ್ರಸಾದ್ ಮಾನ್ಯ ಮೊದಲಾದವರು ಮಾತನಾಡಿದರು. ಸಾಧಕರನ್ನು ಗೌರವಿಸಲಾಯಿತು. ಸುಬ್ರಹ್ಮಣ್ಯ ಭಟ್ – ರುಕ್ಮಿಣಿ ಅಮ್ಮ ದಂಪತಿ ಉಪಸ್ಥಿತರಿದ್ದರು. ಯಕ್ಷಮಿತ್ರರು ಮಾನ್ಯ ವತಿಯಿಂದ ಸಹಸ್ರಚಂದ್ರ ದರ್ಶನ ಆಚರಿಸಿದ ಸುಬ್ರಹ್ಮಣ್ಯ ಭಟ್ ದಂಪತಿಯನ್ನು ಸನ್ಮಾನಿಸಲಾಯಿತು. ಸಂತೋಷ್ ಕುಮಾರ್ ಮಾನ್ಯ ಸ್ವಾಗತಿಸಿ, ಸುಂದರ ಶೆಟ್ಟಿ ಕೊಲ್ಲಂಗಾನ ವಂದಿಸಿದರು. ಕೃಷ್ಣಮೂರ್ತಿ ಪುದುಕೋಳಿ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಹನುಮಗಿರಿ ಮೇಳದವರಿಂದ ಶ್ರೀರಾಮ ಚರಿತಾಮೃತಂ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿತು.

ಕೇಂದ್ರ ಸರ್ಕಾರದ ಜನಪರ ಯೋಜನೆ ಕಾಸರಗೋಡಿಗೂ ತಲುಪಲಿ: ನಳಿನ್



ಮುಳ್ಳೇರಿಯ: ಎಲ್ಲಾ ವಿಭಾಗದವರಿಗೆ ಸಮಾನವಾದ ರೀತಿಯಲ್ಲಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಯೋಜನೆಗಳನ್ನು ತಲುಪಿಸುವಾಗ ಕೇರಳದಲ್ಲಿ ಎಡರಂಗ ಸರಕಾರವು ಕೇಂದ್ರದ ಯೋಜನೆಗಳನ್ನು ಅನುಷ್ಠಾನಗೊಳಿಸದೇ ನಿರ್ಲಕ್ಷ್ಯ ವಹಿಸುತ್ತಿದೆ. ಮಾತ್ರವಲ್ಲದೆ ಕೇಂದ್ರದ ಯೋಜನೆಗಳನ್ನು ತಮ್ಮದೆಂದು ಬಿಂಬಿಸುವ ದುಷ್ಟ ಆಡಳಿತವನ್ನು ಎಡರಂಗವು ನಡೆಸುತ್ತಿದೆ ಎಂದು ಕರ್ನಾಟಕ ರಾಜ್ಯ ಬಿಜೆಪಿ ಮಾಜಿ ಅಧ್ಯಕ್ಷ, ದಕ್ಷಿಣ ಕನ್ನಡ ಮಾಜಿ ಸಂಸದ ನಳೀನ್ ಕುಮಾರ್ ಕಟೀಲು ಹೇಳಿದ್ದಾರೆ.
ಕುಂಬ್ಡಾಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಮೈಲುತೊಟ್ಟಿ ಎಂಬಲ್ಲಿ ಎಸ್‌ಸಿ ಕಾಲನಿಯಲ್ಲಿ ಬುಧವಾರ ಸಂಜೆ ನಡೆದ ಕುಟುಂಬ ಸಂಗಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕುಟುಂಬ ಸಂಗಮದಲ್ಲಿ ಕಾಲನಿಯ ಆನಂದ ಅಧ್ಯಕ್ಷತೆ ವಹಿಸಿದ್ದರು. ಬಿಜೆಪಿ ಕೋಝಿಕೋಡ್ ವಲಯ ಅಧ್ಯಕ್ಷ, ವಕೀಲ ಕೆ.ಶ್ರೀಕಾಂತ್, ವಲಯ ಪ್ರಧಾನ ಕಾರ್ಯದರ್ಶಿ ಎಂ.ಸುಧಾಮ ಗೋಸಾಡ, ರಾಜ್ಯ ಸಮಿತಿ ಸದಸ್ಯ ಹರೀಶ್ ನಾರಂಪಾಡಿ, ಬದಿಯಡ್ಕ ಮಂಡಲ ಅಧ್ಯಕ್ಷ ಗೋಪಾಲಕೃಷ್ಣ ಮುಂಡೋಳುಮೂಲೆ, ಪ್ರಧಾನ ಕಾರ್ಯದರ್ಶಿ ರವೀಂದ್ರ ರೈ ಗೋಸಾಡ, ಕುಂಬ್ಡಾಜೆ ಬಿಜೆಪಿ ಅಧ್ಯಕ್ಷ ಶಶಿಧರ ತೆಕ್ಕಮೂಲೆ, ಶ್ರೀಧರ ಬೆಳ್ಳೂರು, ಕುಂಬ್ಡಾಜೆ ಗ್ರಾಪಂ ಆರೋಗ್ಯ ಸ್ಥಾಯೀ ಸಮಿತಿ ಅಧ್ಯಕ್ಷೆ ಪ್ರಿಯಾಂಕ ಎ.ಸಿ., ಪಂಚಾಯತ್ ಸದಸ್ಯ ಕೊರಗಪ್ಪ ಬೆಳ್ಳಿಗೆ, ಹರೀಶ್ ಕುಣಿಕುಳ್ಳಾಯ, ಜಯಪ್ರಕಾಶ್, ರಘು ಮಾಚವ್, ರಾಮ ಮತ್ತಿತರರು ಭಾಗವಹಿಸಿದ್ದರು. ರಾಜೇಶ್ ಶೆಟ್ಟಿ ಸ್ವಾಗತಿಸಿದರು. ಬಿಜೆಪಿ ಕುಂಬ್ಡಾಜೆ ಗ್ರಾಪಂ ಪ್ರಧಾನ ಕಾರ್ಯದರ್ಶಿ ಪ್ರಮೋದ್ ಭಂಡಾರಿ ವಂದಿಸಿದರು.

ವಿದ್ಯಾನಗರ ನಗರಸಭಾ ಕ್ರೀಡಾಂಗಣ ನವೀಕರಣ: ಜಿಲ್ಲಾಧಿಕಾರಿ ಅರ್ಜುನ್



ಕಾಸರಗೋಡು: ವಿದ್ಯಾನಗರದಲ್ಲಿರುವ ಕಾಸರಗೋಡು ಮುನ್ಸಿಪಲ್ ಕ್ರೀಡಾಂಗಣದ ನವೀಕರಣಕ್ಕಾಗಿ ಒಂದು ವಾರದೊಳಗೆ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸ್ಪೋರ್ಟ್ಸ್ ಕೇರಳ ಫೌಂಡೇಶನ್‌ಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.
ವಿದ್ಯಾನಗರದಲ್ಲಿರುವ ಮುನ್ಸಿಪಲ್ ಕ್ರೀಡಾಂಗಣಕ್ಕೆ ಗುರುವಾರ ಭೇಟಿ ನೀಡಿದ ನಂತರ ಅವರು ಈ ವಿಷಯ ತಿಳಿಸಿದರು. ಎಂಟು ಪಥಗಳ ಸಿಂಥೆಟಿಕ್ ಟ್ರ್ಯಾಕ್, ಫುಟ್ಬಾಲ್ ಟರ್ಫ್, ಮುನ್ಸಿಪಲ್ ಕ್ರೀಡಾಂಗಣದಲ್ಲಿನ ಮೂಲಭೂತ ಸೌಕರ್ಯ ಮತ್ತು ಪೆವಿಲಿಯನ್ ನವೀಕರಣ ಸೇರಿದಂತೆ ವಿವರವಾದ ವರದಿಯನ್ನು ಸಿದ್ಧಪಡಿಸಿ ನೀಡುವಂತೆ ಅವರು ಇದೇ ವೇಳೆ ನಿರ್ದೇಶಿಸಿದರು.
ಖೇಲೋ ಇಂಡಿಯಾ ಯೋಜನೆಯಲ್ಲಿ ಸೇರಿಸುವ ಮೂಲಕ ಈ ವರ್ಷವೇ ರಾಜ್ಯ ಕ್ರೀಡಾ ಇಲಾಖೆಯ ಮುಖೇನ ಈ ಯೋಜನೆಯನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಇಲ್ಲದಿದ್ದರೆ ಲಭ್ಯವಿರುವ ಯಾವುದೇ ಹಣವನ್ನು ಬಳಸಿಕೊಂಡು ಈ ವರ್ಷವೇ ಕ್ರೀಡಾಂಗಣದ ನವೀಕರಣವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಘೋಷಿಸಿದರು.
ಕ್ರೀಡೆಗಳಲ್ಲಿ ಆಸಕ್ತಿ ಹೊಂದಿರುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಮತ್ತು ಉನ್ನತ ಸಾಧನೆ ಮಾಡಲು ಜಿಲ್ಲೆಯಲ್ಲಿ ಉತ್ತಮ ಕ್ರೀಡಾಂಗಣ ಅತ್ಯಗತ್ಯ ಎಂದರು.
ಕಾಸರಗೋಡು ನಗರಸಭಾ ಅಧ್ಯಕ್ಷೆ ಶಾಹಿನಾ ಸಲೀಂ, ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನ ವಿಶೇಷ ಅಧಿಕಾರಿ ವಿ.ಚಂದ್ರನ್, ಕ್ರೀಡಾ ಕೇರಳ ಪ್ರತಿಷ್ಠಾನದ ಸಹಾಯಕ ಇಂಜಿನಿಯರ್ ಜಿಲ್ಲಾಧಿಕಾರಿ ಜೊತೆಗಿದ್ದರು.

ನಾಳೆ ಕಿದೂರು ಕಿರಿಯ ಪ್ರಾಥಮಿಕ ಶಾಲೆ ಕಟ್ಟಡ, ಮಹಾದ್ವಾರ ಉದ್ಘಾಟನೆ



ಕುಂಬಳೆ: ಕಾಸರಗೋಡು ಅಭಿವೃದ್ಧಿ ಪ್ಯಾಕೇಜ್‌ನಿಂದ ಮಂಜೂರಾದ ಕಿದೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಹಾಗೂ ಶಾಲಾ ಸುವರ್ಣ ಮಹೋತ್ಸವದ ಸವಿನೆನಪಿಗಾಗಿ ನಿರ್ಮಿಸಿದ ಶಾಲಾ ಮಹಾದ್ವಾರ, ನೂತನ ವೇದಿಕೆಯ ಉದ್ಘಾಟನಾ ಸಮಾರಂಭವು ಮಾ.14ರಂದು ಜರಗಲಿದೆ.
ಬೆಳಗ್ಗೆ 9.30ಕ್ಕೆ ಶಾಲಾ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷ ಜಯಕುಮಾರ್ ಜಿ. ಧ್ವಜಾರೋಹಣ ನಡೆಸುವರು. ಸಂಜೆ 4 ಗಂಟೆಗೆ ನಡೆಯುವ ಸಭಾ ಕಾರ್ಯಕ್ರಮವನ್ನು ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ನೂತನ ಕಟ್ಟಡವನ್ನು ಉದ್ಘಾಟಿಸುವರು. ಕುಂಬಳೆ ಗ್ರಾ.ಪಂ. ಅಧ್ಯಕ್ಷ ವಿ.ಪಿ.ಅಬ್ದುಲ್ ಖಾದರ್ ಅಧ್ಯಕ್ಷತೆ ವಹಿಸುವರು. ಕಾಸರಗೋಡು ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ಜಗದೀಶ್ ವರದಿ ಮಂಡಿಸುವರು. ಮುಖ್ಯ ಅತಿಥಿಗಳಾಗಿ ಕಾಸರಗೋಡು ಬ್ಲಾಕ್ ಪಂಚಾಯತ್ ಸದಸ್ಯೆ ನಸೀಮ ಪಿ.ಎಂ., ಕುಂಬಳೆ ಗ್ರಾ.ಪಂ. ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಎಂ.ಪಿ. ಖಾಲಿದ್, ಕುಂಬಳೆ ಗ್ರಾ.ಪಂ. ಸದಸ್ಯರಾದ ಸುಕೇಶ್ ಭಂಡಾರಿ, ಮಂಜುನಾಥ ಆಳ್ವ ಮಡ್ವ ಜಿಲ್ಲಾ ಶಿಕ್ಷಣ ಉಪನಿರ್ದೇಶಕ ಇಬ್ರಾಹಿಂ ಬಿ., ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿ ಜೋರ್ಜ್ ಕ್ರಾಸ್ತ, ಮಂಜೇಶ್ವರ ಸುಪರಿಂಡೆಂಟ್ ಎಇಒ ಜಿತೇಂದ್ರ ಎಸ್. ಎಚ್., ರಾಜಗೋಪಾಲನ್ ಪಿ., ಜಿಲ್ಲಾ ಪಂಚಾಯತ್ ಸದಸ್ಯ ಅಝೀಜ್ ಕಳತ್ತೂರು ಮೊದಲಾದವರು ಭಾಗವಹಿಸುವರು. ಈ ಸಂದರ್ಭದಲ್ಲಿ ಸೇವೆಯಿಂದ ನಿವೃತ್ತಿ ಹೊಂದುವ ವೀಣಾ ಕುಮಾರಿ ಕೆ.ಸಿ.ಯವರಿಗೆ ಬೀಳ್ಕೊಡುಗೆ ಸಮಾರಂಭ ನಡೆಯಲಿದೆ. ಕಿದೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ರಾಮು ಯು., ಇಚ್ಲಂಪಾಡಿ ಎಸ್‌ಬಿ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯ, ಪುಂಡರೀಕಾಕ್ಷ ಕೆ.ಎಲ್., ಕುಂಬಳೆ ಗ್ರಾ.ಪಂ. ಮಾಜಿ ಸದಸ್ಯೆ ಪುಷ್ಪಲತಾ ಶೆಟ್ಟಿ ಕುಂಬಳೆ ಗ್ರಾ.ಪಂ. ಮಾಜಿ ಸದಸ್ಯ ರವಿರಾಜ್ ಕೆ., ಬಿಜೆಪಿ ರಾಜ್ಯ ಸಮಿತಿ ಸದಸ್ಯ ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ ಶುಭಹಾರೈಸುವರು.
ಸಂಜೆ 6 ಗಂಟೆಯಿಂದ ಅಂಗನವಾಡಿ ಮಕ್ಕಳಿಂದ, ಶಾಲಾ ಮಕ್ಕಳಿಂದ ಹಾಗೂ ಹಳೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿದೆ.

ಎಕೆಪಿಎ ವೆಸ್ಟ್ ಯೂನಿಟ್‌ನಿಂದ ಮಹಿಳಾ ದಿನಾಚರಣೆ, ಗೌರವಾರ್ಪಣೆ



ಕಾಸರಗೋಡು: ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಶನ್ ವೆಸ್ಟ್ ಯೂನಿಟ್ ವತಿಯಿಂದ ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ಯೂನಿಟ್ ಸದಸ್ಯರ ಕುಟುಂಬದ ಅತೀ ಹಿರಿಯ ಮಹಿಳೆಯಾದ ಯೂನಿಟ್ ಅಧ್ಯಕ್ಷ ವಸಂತ ಕೆರೆಮನೆಯವರ ತಾಯಿ ಉಮಾವತಿ ನಾರಾಯಣ ಆಚಾರ್ಯ ಕೆರೆಮನೆ ಅವರ ನಿವಾಸಕ್ಕೆ ತೆರಳಿ ಗೌರವಿಸಲಾಯಿತು.
ಎಕೆಪಿಎ ಕಾಸರಗೋಡು ಜಿಲ್ಲಾ ಸಮಿತಿ ಸದಸ್ಯ ಮೈಂದಪ್ಪ ಕೆ.ಎಂ, ಯೂನಿಟ್ ಕಾರ್ಯದರ್ಶಿ ಶಾಲಿನಿ ರಾಜೇಂದ್ರನ್ ನಗರಸಭೆಯ 33ನೇ ವಾರ್ಡ್ ಸದಸ್ಯ ಕೆ.ಎನ್.ರಾಮಕೃಷ್ಣ ಹೊಳ್ಳ ಗೌರವಿಸಿದರು. ಈ ಸಂದರ್ಭದಲ್ಲಿ ಯೂನಿಟ್ ಅಧ್ಯಕ್ಷ ವಸಂತ್ ಕೆರೆಮನೆ ಎಕೆಪಿಎ ಕಾಸರಗೋಡು ಜಿಲ್ಲಾ ಜೊತೆ ಕಾರ್ಯದರ್ಶಿ ಮನು ಎಲ್ಲೋರ, ವಲಯ ಜೊತೆ ಕಾರ್ಯದರ್ಶಿ ಗಣೇಶ್ ರೈ, ಯೂನಿಟ್ ಕೋಶಾಧಿಕಾರಿ ಅಮಿತ್, ಸದಸ್ಯ ರತೀಶ್ ರಾಮು, ಸನ್ಮಾನಿತರ ಕುಟುಂಬ ಸದಸ್ಯರಾದ ಮನಮೋಹನ್ ಆಚಾರ್ಯ ಕೆರೆಮನೆ, ತುಕಾರಾಮ ಆಚಾರ್ಯ ಕೆರೆಮನೆ, ಗೀತಾ ತುಕಾರಾಮ, ದಿವ್ಯಾಶ್ರೀ ವಸಂತ್ ಇದ್ದರು.

ಕಾಸರಗೋಡು ನಗರದ ಪ್ರಸಿದ್ಧ ದೇವಸ್ಥಾನದಲ್ಲಿ ನೆರವೇರಲಿದೆ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಉತ್ಸವ

ಮಾ.19ರಿಂದ 23ರ ವರೆಗೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದ ಜಾತ್ರೆ

ಕಾಸರಗೋಡು: ಕಾಸರಗೋಡು ನಗರದ ಪ್ರಸಿದ್ಧ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವವು ಉಚ್ಚಿಲ ಪದ್ಮನಾಭ ತಂತ್ರಿಯವರ ನೇತೃತ್ವದಲ್ಲಿ ಮಾ.19ರಿಂದ 23ರ ತನಕ ವಿವಿಧ ವೈದಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ.
ಕಾರ್ಯಕ್ರಮದ ಅಂಗವಾಗಿ ಮಾ.19ರಂದು ಬೆಳಗ್ಗೆ 5.30ಕ್ಕೆ ಗಣಪತಿಹೋಮ, 9 ಗಂಟೆಗೆ ಬಳ್ಳಪದವು ವೀಣಾವಾದಿನಿ ಸಂಗೀತ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಶಾಸ್ತ್ರೀಯ ಸಂಗೀತ, 10.45ಕ್ಕೆ ಪ್ರಾರ್ಥನೆ, ಧ್ವಜಾರೋಹಣ ನಡೆಯಲಿದೆ.
ಮಧ್ಯಾಹ್ನ 12.05ರಿಂದ ಮಹಾಪೂಜೆ, ಉತ್ಸವಬಲಿ, ಅನ್ನಸಂತರ್ಪಣೆ, ಸಂಜೆ 5ಕ್ಕೆ ಭಜನೆ, 6ಕ್ಕೆ ತಾಯಂಬಕ, 6.30ರಿಂದ ಭರತನಾಟ್ಯ, ರಾತ್ರಿ 8.30ಕ್ಕೆ ಪೂಜೆ,





ಉತ್ಸವಬಲಿ ನಡೆಯಲಿದೆ.
ಮಾ.20ರಂದು ಬೆಳಗ್ಗೆ 7ಕ್ಕೆ ಉಷಃಪೂಜೆ, ಉತ್ಸವಬಲಿ, 9ರಿಂದ ಭಜನೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಉತ್ಸವಬಲಿ, ಸಂಜೆ 5ರಿಂದ ಭಜನೆ, 6ಕ್ಕೆ ತಾಯಂಬಕ, 6.30ರಿಂದ ಸಂಗೀತನೃತ್ಯ, ರಾತ್ರಿ 8.30ಕ್ಕೆ ರಂಗಪೂಜೆ, ರಾತ್ರಿ ಪೂಜೆ, ಉತ್ಸವಬಲಿ ನಡೆಯಲಿದೆ.
ಮಾ.21ರಂದು ಬೆಳಗ್ಗೆ 7ಗಂಟೆಗೆ ಉಷಃಪೂಜೆ, ಉತ್ಸವಬಲಿ, 10 ಗಂಟೆಗೆ ಭಜನೆ, ಮಧ್ಯಾಹ್ನ 12ಕ್ಕೆ ಮಹಾ ಪೂಜೆ, ಉತ್ಸವಬಲಿ, ಸಂಜೆ 5ಕ್ಕೆ ಭಜನೆ, 6ಕ್ಕೆ ತಾಯಂಬಕ, 6.30 ರಿಂದ ಭಕ್ತಿ ರಸಮಂಜರಿ, ರಾತ್ರಿ 8.30ಕ್ಕೆ ಪೂಜೆ, ಉತ್ಸವ ಬಲಿ, ನಡುದೀಪೋತ್ಸವ, ಕಟ್ಟೆಪೂಜೆ ನಡೆಯಲಿದೆ.
ಮಾ.22ರಂದು ಬೆಳಗ್ಗೆ 5.30ಕ್ಕೆ ಪ್ರತಿ ತಿಂಗಳ ಶುಕ್ಲ ಪಕ್ಷದ ಚತುರ್ಥಿ ದಿನದ ಗಣಪತಿಹೋಮ, 7ಕ್ಕೆ ಉಷಃಪೂಜೆ, ಉತ್ಸವಬಲಿ, 10ಕ್ಕೆ ಸಂಗೀತ ಕಚೇರಿ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಉತ್ಸವಬಲಿ, ಸಂಜೆ 5 ಗಂಟೆಗೆ ಭಜನೆ, 6ಕ್ಕೆ ತಾಯಂಬಕ, 6.30ರಿಂದ ನೃತ್ಯಸಂಧ್ಯಾ, ರಾತ್ರಿ 8.30ಕ್ಕೆ ಪೂಜೆ, ಉತ್ಸವಬಲಿ, ಕಟ್ಟೆಪೂಜೆ ಮತ್ತು ಕರಂದಕ್ಕಾಡ್ ಬೆಡಿಕಟ್ಟೆಯಲ್ಲಿ ವಿಶೇಷ ಪೂಜೆ, ಉತ್ಸವ ಮತ್ತು ಶ್ರೀ ದೇವರ ಶಯನ ನಡೆಯಲಿದೆ.
ಮಾ.23ರಂದು ಬೆಳಗ್ಗೆ 9.10ರಿಂದ ಶ್ರೀ ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ, ಶಯನೋದ್ಘಾಟನೆ, ಮಹಾಭಿಷೇಕ, ಮಹಾಪೂಜೆ, 10ಕ್ಕೆ ಭಜನೆ, 11ರಿಂದ ತುಲಾಭಾರ ಸೇವೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ಉತ್ಸವಬಲಿ, ಅನ್ನಸಂತರ್ಪಣೆ, ಸಂಜೆ 5ಕ್ಕೆ ಭಜನೆ, 6ಕ್ಕೆ ತಾಯಂಬಕ, 6.30ರಿಂದ ಗೀತಾ–ಸಾಹಿತ್ಯ–ಸಂಭ್ರಮ, ರಾತ್ರಿ 8.30ಕ್ಕೆ ಪೂಜೆ, ಉತ್ಸವಬಲಿ, ಕಟ್ಟೆಪೂಜೆ, ಅವಭೃತ ಸ್ನಾನ, ದರ್ಶನಬಲಿ, ರಾಜಾಂಗಣ ಪ್ರಸಾದ ಸ್ವೀಕಾರ, ಧ್ವಜಾವರೋಹಣ, 9.30ಕ್ಕೆ ಸಾಂಸ್ಕೃತಿಕ ಕಲಾ ವೈಭವ ಕಾರ್ಯಕ್ರಮ ನಡೆಯಲಿದೆ.

ರಕ್ತೇಶ್ವರೀ ನೇಮ

ಮಾ.28ರಂದು ಸಂಜೆ ಶ್ರೀ ಕ್ಷೇತ್ರದಲ್ಲಿ ರಕ್ತೇಶ್ವರೀ ನೇಮ ಮತ್ತು ರಾತ್ರಿ ಗುಳಿಗನ ಕೋಲ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸುತ್ತಮುತ್ತ

ಕಾಪು ಮಾರಿಗುಡಿಗೆ ಕನ್ನಡ, ತೆಲುಗು ಚಿತ್ರನಟಿ ಶಾನ್ವಿ ಶ್ರೀವಸ್ತವ ಭೇಟಿ



ಕಾಪು: ಕನ್ನಡ ಮತ್ತು ತೆಲುಗು ಚಿತ್ರರಂಗದ ನಟಿ ಶಾನ್ವಿ ಶ್ರೀವಸ್ತವ ಅವರು ಗುರುವಾರ ಕಾಪು ಶ್ರೀ ಹೊಸ ಮಾರಿಗುಡಿ ದೇವಸ್ಥಾನಕ್ಕೆ ಭೇಟಿಕೊಟ್ಟು ಉಚ್ಚಂಗಿ ಸಹಿತ ಮಾರಿಯಮ್ಮ ದೇವಿಯ ದರುಶನ ಪಡೆದರು. ವ್ಯವಸ್ಥಾಪನಾ ಸಮಿತಿ ಮತ್ತು ಅಭಿವೃದ್ಧಿ ಸಮಿತಿ ವತಿಯಿಂದ ಗೌರವಿಸಲಾಯಿತು, ಪ್ರಧಾನ ಅರ್ಚಕ ವೇದಮೂರ್ತಿ ಶ್ರೀನಿವಾಸ ತಂತ್ರಿ ಕಲ್ಯ ಅಮ್ಮನ ಅನುಗ್ರಹ ಪ್ರಸಾದ ನೀಡಿದರು. ಪ್ರಬಂಧಕ ಗೋವರ್ಧನ್ ಸೇರಿಗಾರ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ಮೊದಲನೇ ಪುಟದಿಂದ

ಗ್ಯಾಸ್ ಗುಮ್ಮ!

ಅಡುಗೆ ಅನಿಲ ಸಮಯಕ್ಕೆ ಸರಿಯಾಗಿ ದೊರಕದಿರುವುದೇ ಇದಕ್ಕೆ ಕಾರಣವೆಂದು ಕಾರ್ಮಿಕರು ತಿಳಿಸಿದ್ದಾರೆ. ಮಂಗಳೂರಿನ ಸುರತ್ಕಲ್, ಬೈಕಂಪಾಡಿ ಎಚ್‌ಪಿಸಿಎಲ್, ಐಒಸಿಎಲ್, ಬಿಪಿಸಿಎಲ್ ಮೊದಲಾದ ಕೇಂದ್ರಗಳಲ್ಲಿ ಪ್ರಮುಖ ಗ್ಯಾಸ್ ಕಂಪೆನಿಗಳ ಘಟಕಗಳಿದ್ದು ಅಲ್ಲಿಂದ ಕಾಸರಗೋಡು ಜಿಲ್ಲೆ ಸಹಿತ ಹೆಚ್ಚಿನ ಕಡೆಗಳಿಗೆ ಗ್ಯಾಸ್ ಸಿಲಿಂಡರ್ ಪೂರೈಕೆಯಾಗುತ್ತಿದೆ.
ಆದರೆ ವಾಣಿಜ್ಯ ಸಿಲಿಂಡರ್ ಪೂರೈಕೆಯ ಮೇಲೆ ನಿಯಂತ್ರಣವಿರುವ ಹಿನ್ನೆಲೆಯಲ್ಲಿ ಹೊಟೇಲ್, ರೆಸ್ಟೋರೆಂಟ್, ದೇವಾಲಯಗಳು ಸೇರಿದಂತೆ ವಿವಿಧ ಕಡೆಗಳಲ್ಲಿ ಸಮಸ್ಯೆಗೆ ಕಾರಣವಾಗಿದೆ. ಗೃಹಬಳಕೆಯ ಸಿಲಿಂಡರ್‌ಗಳನ್ನು ಈ ಹಿಂದೆ 21 ದಿನಕ್ಕೆ ಬುಕ್ಕಿಂಗ್ ಮಾಡಬಹುದಾಗಿತ್ತು. ಆದರೆ ಈ ಅವಧಿಯನ್ನು 30 ದಿನಕ್ಕೆ ನಿಗದಿಪಡಿಸಲಾಗಿದೆ.
ಇದೇ ವೇಳೆ ಜಿಲ್ಲೆಯ ಕೆಲವು ಹೊಟೇಲ್‌ಗಳಲ್ಲಿ ಮತ್ತು ಮನೆಗಳಲ್ಲಿ ವಿದ್ಯುತ್ ಉಪಕರಣಗಳನ್ನು ಉಪಯೋಗಿಸಿ ಅಡುಗೆ ಮಾಡಲು ಆರಂಭಿಸಲಾಗಿದ್ದು ಇದರಿಂದಾಗಿ ವಿದ್ಯುತ್ ಕ್ಷಾಮವೂ ತಲೆದೋರಬಹುದು ಎಂದು ಆತಂಕಪಡಲಾಗಿದೆ. ಜಿಲ್ಲೆಯ ಕೆಲವು ಪ್ರಮುಖ ಹೊಟೇಲ್‌ಗಳಲ್ಲೂ ಅಡುಗೆ ಅನಿಲ ಲಭ್ಯತೆಯ ಕೊರತೆ ಸಮಾಲೋಚನೆ ಪಣಿಮಿಸುತ್ತಿದ್ದು ಈ ಪರಿಸ್ಥಿತಿ ಇನ್ನಷ್ಟು ದಿವಸಗಳ ಕಾಲ ಮುಂದುವರಿದರೆ ಹೊಟೇಲ್‌ಗಳ ಚಟುವಟಿಕೆಗಳನ್ನು ಸೀಮಿತಗೊಳಿಸಬೇಕಾದೀತು ಎಂಬ ಮಾತುಗಳು ಕೇಳಿಬರುತ್ತಿವೆ.

ಸೌದೆಯ ಒಲೆಯತ್ತ ಚಿತ್ತ

ಈ ನಡುವೆ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದ್ದು ಸತತ ಬುಕ್ಕಿಂಗ್‌ಗಳು ಹಾಗೂ ತಮಗೆ ಪೂರೈಕೆಯಲ್ಲಿ ಆಗುತ್ತಿರುವ ವ್ಯತ್ಯಯದ ಹಿನ್ನೆಲೆಯಲ್ಲಿ ಗ್ಯಾಸ್ ಏಜೆನ್ಸಿಗಳು ವಾಣಿಜ್ಯ ಸಿಲಿಂಡರ್‌ಗಳ ಪೂರೈಕೆಯನ್ನು ಬಹುತೇಕ ಸ್ಥಗಿತಗೊಳಿಸಿರುವುದು ಸಣ್ಣ ಹೊಟೇಲ್ ಮತ್ತು ಫಾಸ್ಟ್ ಫುಡ್ ಸೆಂಟರ್‌ಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಉಡುಪಿ ಜಿಲ್ಲೆಯ ಪಟ್ಟಣದಲ್ಲಿ ಈಗಾಗಲೇ ಕೆಲವು ಹೊಟೇಲ್‌ಗಳು ಗ್ಯಾಸ್ ಇಲ್ಲದೆ ಬಾಗಿಲು ಹಾಕಿವೆ. ಅಜ್ಜರಕಾಡಿನಂತಹ ಪ್ರದೇಶಗಳಲ್ಲಿನ ಅಂಗಡಿಗಳ ಮಾಲೀಕರು, ಗ್ಯಾಸ್ ಏಜೆನ್ಸಿಯವರು ಭರವಸೆ ನೀಡುತ್ತಿದ್ದಾರೆಯೇ ಹೊರತು ಪೂರೈಕೆ ಮಾಡುತ್ತಿಲ್ಲ. ಕಟ್ಟಿಗೆ ಒಲೆ ಬಳಸುವ ವ್ಯವಸ್ಥೆಯೂ ನಮ್ಮಲ್ಲಿಲ್ಲ, ಹೀಗೇ ಮುಂದುವರಿದರೆ ಪರಿಸ್ಥಿತಿ ಬಿಗಡಾಯಿಸಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಬಿಸಿ ಹವೆ!

ಏಪ್ರಿಲ್, ಮೇ ತಿಂಗಳಲ್ಲಿ ಮಳೆಯಾಗದಿದ್ದಲ್ಲಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕವಿದೆ.ಜಿಲ್ಲೆಯಲ್ಲಿ ಕನಿಷ್ಠ ತಾಪಮಾನವೇ 18ಡಿಗ್ರಿ ಸೆಲ್ಸಿಯಸ್‌ಗೆ ಏರಿದ್ದು ರಾತ್ರಿಯಲ್ಲಿ ಫ್ಯಾನ್, ಕೂಲರ್ ಅಥವಾ ಎಸಿ ಇಲ್ಲದೆ ನಿದ್ರಿಸುವುದೇ ಕಷ್ಟವಾಗುತ್ತಿದೆ.ಕೊಡಗು ಜಿಲ್ಲೆಯ ಸರಾಸರಿ ಉಷ್ಣಾಂಶ ಗರಿಷ್ಠ 33ಹಾಗೂ ಕನಿಷ್ಠ 23 ಡಿಗ್ರಿ ಸೆಲ್ಸಿಯಸ್‌ಗಳಾಗಿದ್ದು, ಕಳೆದ ವರ್ಷ ಇದು ಗರಿಷ್ಠ 36 ಹಾಗೂ ಕನಿಷ್ಠ 22 ಡಿಗ್ರಿಗಳಿಗೆ ಏರಿಕೆಯಾಗಿತ್ತು.

ನಾಗರಿಕರು ಕಿಡಿಕಿಡಿ

ಕೋಟ ಪಂಚಾಯತ್ ವ್ಯಾಪ್ತಿಯ ಹಲವು ಭಾಗಗಳು ಬೇಸಿಗೆಯಲ್ಲಿ ಅಂತರ್ಜಲ ಮಟ್ಟ ಕುಸಿತದಿಂದ ಆ ಭಾಗಗಳ ಬಾವಿಯಲ್ಲಿ ನೀರಿನ ಮಟ್ಟ ದಯನೀಯ ಸ್ಥಿತಿ ತಲುಪಿದೆ.ಆದರೆ ಕಳೆದ ಕೆಲವಾರು ವರ್ಷಗಳಿಂದ ವಾರಾಹಿ ನೀರು ಸರಾಗವಾಗಿ ಹರಿಯುತ್ತಿರುವ ಹಿನ್ನಲ್ಲೆಯಲ್ಲಿ ಗ್ರಾಮೀಣ ಹಳ್ಳಿ ಭಾಗವಾದ ಮೂಡುಗಿಳಿಯಾರಿನ ಪರಿಸರದ ಜನರಲ್ಲಿ ವಾರಾಹಿ ಜೀವರಕ್ಷೆಯಾಗಿ ಕಾರ್ಯನಿರ್ವಹಿಸುತ್ತಿದೆ.
ಆದರೆ ಕಳೆದೆರಡು ವರ್ಷಗಳಿಂದ ಕಿಡಿಗೇಡಿಗಳ ಕೃತ್ಯದಿಂದ ವಾರಾಹಿ ನೀರು ಪೋಲಾಗುತ್ತಿದ್ದು ಬನ್ನಾಡಿ ಹೊಳೆಯನ್ನು ಸೇರುತ್ತಿದೆ ಇದರಿಂದ ಮೂಡಿಗಿಳಿಯಾರು ಭಾಗದಲ್ಲಿ ಅಂತರ್ಜಲ ಮಟ್ಟ ತೀವ್ರ ಕುಸಿತಗೊಂಡಿದೆ.
ಆಚಾರ್ ಒಳಲು ಹಲಗೆ ತೆರವು,ನೀರು ಪೋಲು ಮೂಡುಗಿಳಿಯಾರು ಭಾಗದ ಜೀವನಾಡಿಯಾದ ವಾರಾಹಿ ನೀರು ಯಾಳಹಕ್ಲು ಭಾಗದಿಂದ ಮೂಡುಗಿಳಿಯಾರು ವ್ಯಾಪ್ತಿಯ ಆಚಾರಟ ಒಳಲು ವಾಂಟೆಡ್‌ಡಾಮ್‌ನಲ್ಲಿ ಶೇಖರಣೆಯಾಗುತ್ತಿದ್ದು ಇಲ್ಲಿ ಅಳವಡಿಸಲಾದ ಮರದ ಹಲಗೆಯನ್ನು ಕಿಡಿಗೇಡಿಗಳು ತೆರವುಗೊಳಿಸುತ್ತಿದ್ದಾರೆ ಇದರಿಂದ ನೀರು ಪೂರ್ಣ ಪ್ರಮಾಣದಲ್ಲಿ ಪೋಲಾಗುತ್ತಿದ್ದು ಬನ್ನಾಡಿ ಹೊಳೆಯನ್ನು ಸೇರುತ್ತಿದೆ.ಈ ಬಗ್ಗೆ ಸ್ಥಳೀಯರು ಉಲ್ಲೇಖಿಸುವಂತೆ ಹಲವು ವ್ಯಾಪ್ತಿಯಲ್ಲಿ ಬಾವಿ ಕಾಮಗಾರಿ ಕೈಗೊಳ್ಳುವರ ಕೃತ್ಯ ನಡೆದಿರಬಹುದು ಎಂಬ ಶಂಕೆ ಕೂಡಾ ವ್ಯಕ್ತಪಡಿಸಿದ್ದಾರೆ.

ಎನ್‌ಎಚ್ 66ರ ಅರಾಟೆ ಸೇತುವೆ | 85 ಕೋಟಿ ರೂ. ಕಾಮಗಾರಿಗೆ ಮೂರು ತಿಂಗಳ ಹಿಂದೆ ಗುದ್ದಲಿಪೂಜೆ

ಅನುದಾನವಿದ್ದರೂ ಆರಂಭವಾಗಿಲ್ಲ ಹಳೆ ಸೇತುವೆಯ ದುರಸ್ತಿ

ಕುಂದಾಪುರ: ರಾಷ್ಟ್ರೀಯ ಹೆದ್ದಾರಿ 66ರ ಸೌಪರ್ಣಿಕಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಅರಾಟೆಯ ಹಳೆಯ ಸೇತುವೆ ದುರಸ್ತಿಗೆ 85 ಕೋಟಿ ರೂ. ಸರಕಾರ ಬಿಡುಗಡೆ ಮಾಡಿ, ಕಾಮಗಾರಿಯ ಗುದ್ದಲಿ ಪೂಜೆ ನಡೆದು ಮೂರು ತಿಂಗಳು ಕಳೆಯುತ್ತಾ ಬಂದಿದ್ದರೂ, ಕಾಮಗಾರಿ ಪ್ರಾರಂಭವಾಗುವ ಯಾವುದೇ ಲಕ್ಷಣ ಗೋಚರಿಸುತ್ತಿಲ್ಲ.
ಸೇತುವೆಯ ಪಿಲ್ಲರ್‌ಗಳು ಉತ್ತಮ ಸ್ಥಿತಿಯಲ್ಲಿದ್ದು ಮೇಲ್ಭಾಗದ ಕಾಂಕ್ರೀಟ್ ಹಾಸು ಮಾತ್ರ ಶಿಥಿಲಗೊಂಡಿದೆ ಎಂಬ ಕಾರಣದಿಂದ ಸೇತುವೆಯ ಪಿಲ್ಲರ್‌ಗಳನ್ನು ತೆಗೆಯದೆ, ಸೇತುವೆಯ ಮೇಲ್ಭಾಗದಲ್ಲಿನ ಕಾಂಕ್ರೀಟ್ ಹಾಸನ್ನು ತೆಗೆದು ಸೇತುವೆಯನ್ನು ದುರಸ್ತಿ ಮಾಡುವ ಯೋಜನೆ ಇದಾಗಿದೆ. ಕಾಮಗಾರಿ ಪೂರ್ಣಗೊಳ್ಳಲು ಅಂದಾಜು ಒಂದುವರೆ ವರ್ಷ ಬೇಕಾಗಬಹುದು ಎಂದು ತಜ್ಞರು ಹೇಳುತ್ತಿದ್ದಾರೆ. ಕಳೆದ ಡಿ.20ರಂದು ಸೇತುವೆ ದುರಸ್ತಿ ಕಾಮಗಾರಿಗೆ ಸಂಸದ ಬಿ.ವೈ. ರಾಘವೇಂದ್ರ ಗುದ್ದಲಿಪೂಜೆ ನೆರವೇರಿಸಿದ್ದರು. ಈವರೆಗೆ ಸೇತುವೆ ದುರಸ್ತಿಯ ಯಾವುದೇ ಲಕ್ಷಣ



ಕಾಣಸುತ್ತಿಲ್ಲ, ಮುಂದಿನ 2– 3 ತಿಂಗಳಲ್ಲಿ ಮಳೆಗಾಲ ಪ್ರಾರಂಭವಾಗಲಿದ್ದು ಮಳೆಗಾಲದಲ್ಲಿ ದುರಸ್ಥಿ ಕಾರ್ಯ ನಡೆಸುವುದು ಕಷ್ಟಸಾಧ್ಯ.
ಇನ್ನೇನು ಕಾಮಗಾರಿ ಆರಂಭವಾಗಿಯೇ ಬಿಟ್ಟಿತು ಎಂದು ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದ ಜನರು, ದುರಸ್ಥಿ ಕಾಮಗಾರಿ ಯಾವಾಗ ಪ್ರಾರಂಭ ಎಂದು ಜನಪ್ರತಿನಿಧಿಗಳನ್ನು ಮತ್ತು ಅಧಿಕಾರಿಗಳನ್ನು ಪ್ರಶ್ನೆ ಮಾಡುತ್ತಿದ್ದಾರೆ. 2024ರ ನ.25ರಿಂದ ಅರಾಟೆ ಹಳೆ ಸೇತುವೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಹೊಸ ಸೇತುವೆಯಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಇದರಿಂದ ಈ ಅರಾಟೆಯಿಂದ ಮೂವತ್ತುಮುಡಿ– ಕನ್ನಡಕುದ್ರುವಿನವರೆಗಿನ

> **ಸಂಚಾರ ಮುಕ್ತಗೊಳಿಸಿ**
> ಹೆದ್ದಾರಿಯಲ್ಲಿ ಸರಕು ಸಾಗಾಟದ ವಾಹನಗಳು, ಬಸ್ಸುಗಳು, ಘನ ಮತ್ತು ಲಘು ವಾಹನಗಳು ನಿರಂತರವಾಗಿ ಸಂಚರಿಸುತ್ತಿದ್ದು, ಹೊಸ ಸೇತುವೆಯಲ್ಲಿ ಒತ್ತಡ ಸೃಷ್ಟಿಯಾಗಿದೆ. ಸೇತುವೆಯ ದುರಸ್ತಿ ಕಾಮಗಾರಿ ಆದಷ್ಟು ಶೀಘ್ರ ಪ್ರಾರಂಭಿಸಬೇಕು ಮತ್ತು ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಸೇತುವೆಯನ್ನು ಸಂಚಾರಕ್ಕೆ ಮುಕ್ತವನ್ನಾಗಿ ಮಾಡಬೇಕು.
> ● ನವೀನ್ ಗಂಗೊಳ್ಳಿ, ಸಾಮಾಜಿಕ ಕಾರ್ಯಕರ್ತ, ಗಂಗೊಳ್ಳಿ

ಇನ್ನು 2 ತಿಂಗಳು ಟ್ರಾಫಿಕ್ ಜಾಮ್
ಬೇಸಗೆಯಲ್ಲಿ ಬೇರೆ ಜಿಲ್ಲೆಗಳಿಂದ ಕರಾವಳಿ ಭಾಗಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಿದೆ. ಮರವಂತೆ, ಕೊಲ್ಲೂರು, ಒತ್ತಿನೆಣೆ, ಮುರ್ಡೇಶ್ವರ, ಉಡುಪಿ ಕಡೆಗೆ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳ ದಟ್ಟಣೆಯೂ ಈ ಸಮಯದಲ್ಲಿ ಹೆಚ್ಚಿರುತ್ತದೆ. ಇದಲ್ಲದೆ ಮುಂಬೈ, ಬೆಂಗಳೂರು ಮತ್ತಿತರ ಕಡೆಗಳಲ್ಲಿ ನೆಲೆಸಿರುವ ಜನ ಊರಿಗೆ ಬೇಸಗೆ ರಜೆಯಲ್ಲಿ ಬರುವುದರಿಂದ ಇನ್ನಷ್ಟು ವಾಹನ ದಟ್ಟಣೆ ಹೆಚ್ಚಿರುತ್ತದೆ. ಹಾಗಾಗಿ ಇಲ್ಲಿ ಇನ್ನು 2 ತಿಂಗಳು ನಿರಂತರ ಟ್ರಾಫಿಕ್ ಜಾಮ್ ಖಾಯಂ ಅನ್ನುವಂತಾಗಲಿದೆ.

ರಾಷ್ಟ್ರೀಯ ಹೆದ್ದಾರಿ 66 ಅಪಘಾತ ವಲಯವಾಗಿ ಮಾರ್ಪಟ್ಟಿದ್ದು, ದಿನೇ ದಿನೇ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ. ವಾಹನ ದಟ್ಟಣೆ ಹೆಚ್ಚಿರುವ ದಿನಗಳಲ್ಲಿ ಅಂತೂ ನಿರಂತರ ಟ್ರಾಫಿಕ್ ಜಾಮ್ ಆಗುತ್ತಿದೆ. ರಾಷ್ಟ್ರೀಯ ಹೆದ್ದಾರಿ ಆಗಿರುವ ಕಾರಣ ರಾತ್ರಿ ಹಗಲೆನ್ನದೇ ಬೈಕ್, ಕಾರು, ರಿಕ್ಷಾದಂತಹ ವಾಹನಗಳಿಂದ ಹಿಡಿದು, ಬಸ್‌ಗಳು, ಸರಕು ಸಾಗಾಟದ ಘನ ವಾಹನಗಳು ಸೇರಿದಂತೆ ಪ್ರತಿ ದಿನ ಸಾವಿರಾರು ವಾಹನಗಳು ಸಂಚರಿಸುತ್ತಿರುತ್ತವೆ. ಈಗ ಹೆದ್ದಾರಿಯ ಒಂದೇ ಮಾರ್ಗದಲ್ಲಿ ಎರಡೂ ಕಡೆಗಳ ವಾಹನಗಳನ್ನು ಬಿಡಲಾಗುತ್ತಿದ್ದು ಆದರೆ ಹೊಸ ಸೇತುವೆಯನ್ನು ವಿಭಾಗಿಸಿ ಕೋನುಗಳನ್ನು ಹಾಕಲಾಗಿದೆ. ಅದೆಲ್ಲ ವಾಹನಗಳು ತಾಗಿ ಹಾಳಾಗಿವೆ. ಇನ್ನು ಸಿಗ್ನಲ್ ಲೈಟ್, ಅಲ್ಲಲ್ಲಿ ಹಂಪ್ ಹಾಕಲಾಗಿದೆ. ಅದು ಬಿಟ್ಟರೆ ಬೇರೆ ಏನೂ ಮಾಡಿಲ್ಲ, ಹೊಸ ಸೇತುವೆಯಲ್ಲಿ ಬೆಳಕಿನ ವ್ಯವಸ್ಥೆಯಿಲ್ಲ, ಮೂವತ್ತುಮುಡಿ ಹಾಗೂ ಅರಾಟೆ ಎರಡೂ ಕಡೆ ಡೈವರ್ಶನ್ ತೆಗೆದುಕೊಳ್ಳುವಲ್ಲಿಯೂ ಸಹ ಸರಿಯಾದ ಬೆಳಕಿನ ವ್ಯವಸ್ಥೆಯಿಲ್ಲ.
ಶಿಥಿಲಗೊಂಡಿರುವ ಸುಮಾರು 58 ವರ್ಷಗಳಷ್ಟು ಹಳೆಯದಾದಸೇತುವೆಯದುರಸ್ತಿಕಾಮಗಾರಿಯನ್ನು ಆದಷ್ಟು ಶೀಘ್ರ ಪ್ರಾರಂಭಿಸಬೇಕು ಮತ್ತು ನಿಗದಿತ ಅವಧಿಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಅರಾಟೆ ಹಳೆ ಸೇತುವೆಯನ್ನು ಸಂಚಾರಮುಕ್ತಗೊಳಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಉಳ್ತೂರು ಘನತ್ಯಾಜ್ಯ ಘಟಕ ನಿರ್ಮಾಣ ಸ್ಥಳಕ್ಕೆ ಡಿಸಿ ಸ್ವರೂಪ ಭೇಟಿ



ಕೋಟ: ಸಾಲಿಗ್ರಾಮ ಪಟ್ಟಣ ಪಂಚಾಯತ್ ಘನತ್ಯಾಜ್ಯ ನಿರ್ವಹಣೆಗೆ ಉಳ್ತೂರು ಗ್ರಾಮದಲ್ಲಿ ಖರೀದಿಸಿದ ಸ್ಥಳಕ್ಕೆ ಉಡುಪಿ ಜಿಲ್ಲಾಧಿಕಾರಿ ಸ್ವರೂಪ ಟಿ.ಕೆ ಬುಧವಾರ ಭೇಟಿ ನೀಡಿದರು.
ಈ ಸಂದರ್ಭದಲ್ಲಿ ಸ್ಥಳದಲ್ಲಿ ಸ್ಥಳೀಯ ಗ್ರಾಮಸ್ಥರು ಸ್ಥಳದಲ್ಲಿ ಯಾವುದೇ ಘಟಕ ನಿರ್ಮಾಣ ಮಾಡದಂತೆ ಆಕ್ಷೇಪಣೆ ವ್ಯಕ್ತಪಡಿಸಿದರು.
ಜಿಲ್ಲಾಧಿಕಾರಿಯವರು ಸಾರ್ವಜನಿಕರಲ್ಲಿ ಸರಕಾರದ ಯೋಜನೆಯ ಉಪಯೋಗದ ಬಗ್ಗೆ ಈ ಯೋಜನೆಯಿಂದ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆ ಯಾಗುವುದಿಲ್ಲವೆಂದು ಇದನ್ನು ಸದ್ಬಳಕೆ ಮಾಡುವಂತೆ ಮನವರಿಕೆ ಮಾಡಿದರು.
ಸಾಲಿಗ್ರಾಮ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಅಜಯ್ ಭಂಡಾರ್ಕಾರ್, ಸ್ಥಳೀಯರಲ್ಲಿ ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತ್ ಕೂಡ ಎನ್‌ಜಿಟಿ ನಿರ್ದೇಶನವನ್ನು ಪಾಲಿಸ ಬೇಕಾಗುತ್ತದೆ ಸುತ್ತಮುತ್ತಲಿನ ಗ್ರಾಮ ಪಂಚಾಯತ್‌ನ ಬಳಸಿದ ನೀರನ್ನು ಸಹಾ ಈ ಘಟಕದಲ್ಲಿ ವಿಲೇಮಾಡಿದ್ದಲ್ಲಿ ಗ್ರಾಮ ಪಂಚಾಯತ್‌ಗೂ ಸಹಾ ಮೂಲಸೌಲಭ್ಯ ಮೊತ್ತವನ್ನು ಉಳಿಸಬಹುದಾಗಿರುವುದಾಗಿ ತಿಳಿಸಿದರು.

> **ಕಾಪು, ಬೈಂದೂರಿಗೆ ಕರೆದೊಯ್ಯುವಂತೆ ಸೂಚನೆ**
> ಘನತ್ಯಾಜ್ಯ ಘಟಕ ಸ್ಥಾಪನೆಗೆ ಸ್ಥಳೀಯರು ತೀವ್ರ ವಿರೋಧ ವ್ಯಕ್ತಪಡಿಸಿರುವುದರಿಂದ ಉಳ್ತೂರು ಗ್ರಾಮದ ಸ್ಥಳೀಯರನ್ನು ಬೈಂದೂರು ಪಟ್ಟಣ ಪಂಚಾಯತ್ ಮತ್ತು ಕಾಪು ಪುರಸಭೆಯಲ್ಲಿನ ಘಟಕವನ್ನು ವೀಕ್ಷಿಸಲು ಕರೆದೊಯ್ಯುವಂತೆ ಜಿಲ್ಲಾಧಿಕಾರಿಯವರು ಮುಖ್ಯಾಧಿಕಾರಿಯವರಿಗೆ ಸೂಚಿಸಿದರು.

ನಿಟ್ಟೆ ವಿವಿ: ಅಂತರ್ ಕಾಲೇಜು ಅಥ್ಲೆಟಿಕ್ ಚಾಂಪಿಯನ್‌ಶಿಪ್‌ಗೆ ಚಾಲನೆ



ನಿಟ್ಟೆ: ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾದ ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದಿಂದ ಆಯೋಜಿಸಲಾದ ಇಂಟರ್ ಕಾಲೇಜಿಯೇಟ್ ಅಥ್ಲೆಟಿಕ್ ಚಾಂಪಿಯನ್‌ಶಿಪ್ 2026 ಕ್ರೀಡಾಕೂಟಕ್ಕೆ ಬುಧವಾರ ನಿಟ್ಟೆಯ ಬಿ.ಸಿ. ಆಳ್ವಾ ಕ್ರೀಡಾಂಗಣದಲ್ಲಿ ಚಾಲನೆ ನೀಡಲಾಯಿತು.
ಉಡುಪಿ ಜಿಲ್ಲಾ ಅಥ್ಲೆಟಿಕ್ ಅಸೋಸಿಯೇಷನ್ ಅಧ್ಯಕ್ಷ ಹರಿಪ್ರಸಾದ್ ರೈ ಉದ್ಘಾಟಿಸಿ ಮಾತನಾಡಿ, ಕ್ರೀಡೆ ವಿದ್ಯಾರ್ಥಿಗಳ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ ಶಿಸ್ತು, ನಾಯಕತ್ವ ಹಾಗೂ ತಂಡಭಾವವನ್ನು ಬೆಳೆಸುತ್ತದೆ ಎಂದು ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೇಳಿದರು.
ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಕ್ರೀಡೆಯಲ್ಲಿಯೂ ಸಮಾನ ಆಸಕ್ತಿ ತೋರಿಸಿ ಸಾಧನೆ ಮಾಡಬೇಕು ಎಂದು ಅವರು ಕರೆ ನೀಡಿದರು.
ನಿಟ್ಟೆ ವಿವಿ ಆಫ್-ಕ್ಯಾಂಪಸ್ ಕೇಂದ್ರದ ನಿರ್ವಹಣೆ ಹಾಗೂ ಅಭಿವೃದ್ಧಿ ವಿಭಾಗದ ನಿರ್ದೇಶಕ ಎ. ಯೋಗೀಶ್ ಹೆಗ್ಡೆ ಅವರು ಗೌರವ ಅತಿಥಿಯಾಗಿದ್ದರು. ಅಧ್ಯಕ್ಷತೆಯನ್ನು ಎನ್‌ಎಂಎಎಂ ತಾಂತ್ರಿಕ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ನಿರಂಜನ್ ಎನ್. ಚಿಪ್ಳೂಂಕರ್ ವಹಿಸಿದ್ದರು. ದೈಹಿಕ ಶಿಕ್ಷಣ ನಿರ್ದೇಶಕ ಡಾ. ಗಣೇಶ್ ಪೂಜಾರಿ ಸ್ವಾಗತಿಸಿದರು. ನಿಟ್ಟೆ ಎಜುಕೇಶನ್ ಟ್ರಸ್ಟ್‌ನ ಕ್ರೀಡಾ ಆಡಳಿತಾಧಿಕಾರಿ ಶ್ಯಾಮ್ ಸುಂದರ್ ಎಂ. ವಂದಿಸಿದರು. ನಂತರ ವಿವಿಧ ಅಥ್ಲೆಟಿಕ್ ಸ್ಪರ್ಧೆಗಳು ಪ್ರಾರಂಭವಾಗಿ ವಿವಿಧ ಕಾಲೇಜುಗಳಿಂದ ಬಂದಿರುವ ಕ್ರೀಡಾಪಟುಗಳು ಉತ್ಸಾಹದಿಂದ ಪಾಲ್ಗೊಂಡರು.

ಕೋಟ ಪಡುಕರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಸಹಜಯೋಗ'



ಕೋಟ: ಕೋಟ ಪಡುಕರೆ ಲಕ್ಷ್ಮೀ ಸೋಮಬಂಗೇರ ಸರಕಾರಿ ಪ್ರಥಮದರ್ಜೆ ಪದವಿ ಕಾಲೇಜಿನಲ್ಲಿ ಸಹಜ ಯೋಗ ಕಾರ್ಯಕ್ರಮ
ಲಕ್ಷ್ಮಿ ಸೋಮ ಬಂಗೇರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚಿಗೆ ಸಹಜಯೋಗ ಕಾರ್ಯಕ್ರಮವನ್ನು ನಡೆಸಲಾಯಿತು. ಯೋಗದ ಪ್ರಾಮುಖ್ಯತೆಯ ಪ್ರಾತ್ಯಕ್ಷಿಕತೆಯ ಮೂಲಕ ಡಾ. ಚಂದ್ರಕಾಂತ್ ಮಾತನಾಡಿ ಬದುಕಿಗೆ ಭಕ್ತಿ, ಕರ್ಮ ಎಷ್ಟು ಮುಖ್ಯವೋ ಹಾಗೆಯೇ ಯೋಗವೂ ಅಷ್ಟೇ ಮುಖ್ಯವಾಗಿದೆ. ಭಾರತ ದೇಶದ ಪರಂಪರೆಯಲ್ಲಿ ಯೋಗಕ್ಕೆ ತನ್ನದೇಯಾದ ಮಹತ್ವದ ಸ್ಥಾನವನ್ನು ನೀಡಲಾಗಿದೆ ಸಹಜ ಯೋಗ ಸಂಸ್ಥೆಯ ವತಿಯಿಂದ ದಿನನಿತ್ಯದ ಜೀವನದಲ್ಲಿ ಅನುಸರಿಸುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.
ಸಹಜ ಯೋಗ ಸಂಸ್ಥೆಯ ಸದಸ್ಯ ಡಾ. ವೀರೇಶ್ ಮಾತನಾಡಿದರು.
ಪ್ರಾಂಶುಪಾಲ ಡಾ. ರಮೇಶ್ ಆಚಾರ್ಯ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಐಕ್ಯೂಎಸಿ ಸಂಚಾಲಕ ಪ್ರೊ. ಸುಬ್ರಹ್ಮಣ್ಯಂ ಭಾಗವಹಿಸಿದ್ದರು. ಸಹಾಯಕ ಪ್ರಾಧ್ಯಾಪಕ ರಾಮಚಂದ್ರ ಭಟ್ ನಿರೂಪಿಸಿದರು.

ಪಡುಬಿದ್ರಿ ಯುವವಾಹಿನಿ ಘಟಕದಿಂದ ಮಹಿಳಾ ದಿನಾಚರಣೆ



ಪಡುಬಿದ್ರಿ: ಯುವವಾಹಿನಿ ಪಡುಬಿದ್ರಿ ಘಟಕದ ವತಿಯಿಂದ ಮಹಿಳಾ ದಿನಾಚರಣೆ ಹಾಗೂ ಸಂತೋಷ ಕೂಟವು ರಿವರ್ ಶೈನ್ ಕಯಾಕಿಂಗ್ ಮತ್ತು ಅಡ್ವೆಂಚರ್, ಚೆನ್ನಯ ಕುದುರು ಮುಲ್ಕಿ ಇಲ್ಲಿ ಜರಗಿತು.
ಮುಖ್ಯ ಅತಿಥಿಯಾಗಿ ಯುವವಾಹಿನಿ ಕೇಂದ್ರ ಸಮಿತಿ ಮಂಗಳೂರು ಇದರ ಮಾಜಿ ಅಧ್ಯಕ್ಷ ಉದಯ್ ಅಮೀನ್ ಮಟ್ಟು ಮಾತನಾಡಿದರು.
ಪಡುಬಿದ್ರಿ ಘಟಕದ ಮಾಜಿ ಅಧ್ಯಕ್ಷೆ, ನಿವೃತ್ತ ಮುಖ್ಯ ಶಿಕ್ಷಕಿ ಚಿತ್ರಾಕ್ಷಿ ಕೆ. ಕೋಟ್ಯಾನ್ ಮಹಿಳಾ ದಿನಾಚರಣೆ ಬಗ್ಗೆ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ವಿಧಿತ್ ಪೂಜಾರಿ ಕರ್ನಿರೆ ವಹಿಸಿದ್ದರು. ಕೇಂದ್ರ ಸಮಿತಿ ಸಂಘಟನಾ ನಿರ್ದೇಶಕರಾದ ಮಮತಾ ಅಂಚನ್, ಪಡುಬಿದ್ರಿ ಘಟಕದ ಕಾರ್ಯದರ್ಶಿ ಭಾಸ್ಕರ್ ಎನ್ ಅಂಚನ್, ಕೋಶಾಧಿಕಾರಿ ತುಳಸಿ ಕರುಣಾಕರ್, ಮಹಿಳಾ ನಿರ್ದೇಶಕಿ ಲತಾ ವಸಂತ್, ಪಡುಬಿದ್ರಿ ಬ್ರಹ್ಮಶ್ರೀ ನಾರಾಯಣಗುರು ಮಹಿಳಾ ಮಂಡಳಿ ಅಧ್ಯಕ್ಷೆ ಸುಜಾತಾ ಹರೀಶ್ ಇದ್ದರು. ಹರೀಶ್ ಕೋಟ್ಯಾನ್ ಉಳ್ಳೂರು ಮತ್ತು ರವಿರಾಜ್ ಎನ್. ಕೋಟ್ಯಾನ್ ನಿರೂಪಿಸಿದರು.

ಪಡುಬಿದ್ರಿ ಬಂಟರ ಸಂಘ: ಶ್ರೀ ಗುರು ನಿತ್ಯಾನಂದ ಸ್ವಾಮಿಗಳ ಪ್ರತಿಷ್ಠಾ ಉತ್ಸವ



ಪಡುಬಿದ್ರಿ: ಪಡುಬಿದ್ರಿ ಬಂಟರ ಸಂಘದಲ್ಲಿ ಸದ್ಗುರು ಶ್ರೀ ಗುರು ನಿತ್ಯಾನಂದ ಸ್ವಾಮಿಗಳ 6ನೇ ವಾರ್ಷಿಕ ಪ್ರತಿಷ್ಠಾ ಮಹೋತ್ಸವ ಗುರುವಾರ ಸಂಪನ್ನಗೊಂಡಿತು.
ಮುರಳೀಧರ ಆಚಾರ್ಯ ನೇತೃತ್ವದಲ್ಲಿ ಬಂಟರ ಸಂಘದ ಸಂಬಂಧಿತ ನಾಗಬನದಲ್ಲಿ ತನು,ತಂಬಿಲಸೇವೆಯನ್ನುನಡೆಸಲಾಯಿತು.
ಬಳಿಕ ಶ್ರೀ ಗುರು ನಿತ್ಯಾನಂದ ಸ್ವಾಮಿಗಳಿಗೆ ವಿಶೇಷ ಕಲಶಾಭಿಷೇಕ ಪುರಸ್ಸರ ಪಂಚಾಮೃತಾಭಿಷೇಕ, ಗುರುಗಳಿಗೆ ವಿಶೇಷ ಪುಷ್ಪಾಲಂಕಾರದ ಬಳಿಕ ಷೋಡಶೋಪಚಾರ ಪೂಜೆ, ಮಹಾ ಮಂಗಳಾರತಿಯನ್ನು ಜರಗಿಸಲಾಯಿತು.
ಪಡುಬಿದ್ರಿ ಬಂಟರ ಸಂಘದ ಮಹಿಳಾ ವಿಭಾಗದ ಆನಂದ ಭೈರವಿ ಮಹಿಳಾ ಭಜನ ತಂಡದವರು ವಿಶೇಷ ಭಜನಾ ಸೇವೆ ನಡೆಸಿಕೊಟ್ಟರು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು.
ಪಡುಬಿದ್ರಿ ಬಂಟರ ಸಂಘದ ಅಧ್ಯಕ್ಷರಾದ ಐಕಳಬಾವ ಡಾ.ದೇವಿಪ್ರಸಾದ್ ಶೆಟ್ಟಿ ಬೆಳಪು, ಕಾರ್ಯದರ್ಶಿ ಪ್ರಕಾಶ್ ಶೆಟ್ಟಿ ಪಡುಹಿತ್ಲು, ಕೋಶಾಧಿಕಾರಿ ರವಿ ಶೆಟ್ಟಿ ಗುಂಡ್ಲಾಡಿ, ಬಂಟ್ಸ್ ವೆಲ್‌ಫೇರ್ ಟ್ರಸ್ಟ್‌ನ ಅಧ್ಯಕ್ಷ ಡಾ. ವೈ. ಎನ್. ಶೆಟ್ಟಿ, ರವೀಂದ್ರನಾಥ ಜಿ. ಹೆಗ್ಡೆ, ಸಂತೋಷ್ ಕುಮಾರ್ ಶೆಟ್ಟಿ ಪಲ್ಲವಿ, ಶ್ರೀನಾಥ್ ಹೆಗ್ಡೆ ನವೀನ್‌ಚಂದ್ರ ಜೆ. ಶೆಟ್ಟಿ, ನವೀನ್ ಎನ್. ಶೆಟ್ಟಿ, ಹರೀಶ್ ಕೆ. ಶೆಟ್ಟಿ ಪಾದೆಬೆಟ್ಟು, ಜಯ ಶೆಟ್ಟಿ ಪದ್ರ, ಮುರಳೀನಾಥ ಶೆಟ್ಟಿ, ಅನಿಲ್ ಶೆಟ್ಟಿ ಪೇಟೆಮನೆ, ಮಹಿಳಾ ವಿಭಾಗದ ಅಧ್ಯಕ್ಷೆ ಭಾರತಿ ಶೆಟ್ಟಿ ಗುಂಡ್ಲಾಡಿ, ಕಾರ್ಯದರ್ಶಿ ಸುಶ್ಮಿತಾ ಶೆಟ್ಟಿ, ಕೋಶಾಧಿಕಾರಿ ಲತಾ ಪಿ. ಶೆಟ್ಟಿ, ಬಂಟರ ಯುವ ವಿಭಾಗದ ಅಧ್ಯಕ್ಷ ಸುಜಿತ್ ಶೆಟ್ಟಿ, ಬಿಜೆಪಿ ಕಾಪು ಮಂಡಲ ಅಧ್ಯಕ್ಷ ಜಿತೇಂದ್ರ ಶೆಟ್ಟಿ ಉದ್ಯಾವರ, ವಿನಯ್ ಶೆಟ್ಟಿ, ಧನಪಾಲ್ ಶೆಟ್ಟಿ ಕಂಕಣಗುತ್ತು, ಕರುಣಾಕರ ಶೆಟ್ಟಿ, ರವಿಶೆಟ್ಟಿ ಪಾದೆಬೆಟ್ಟು ಇದ್ದರು.

ನಾಳೆ ರಾಜ್ಯ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿ ಖಂಡಿಸಿ ಬಿಜೆಪಿ ಪ್ರತಿಭಟನೆ

ಕಾರ್ಕಳ: ರಾಜ್ಯದ ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯ, ಬೆಲೆ ಏರಿಕೆ ಹಾಗೂ ಅಭಿವೃದ್ಧಿ ವಿರೋಧಿ ಧೋರಣೆಗಳನ್ನು ಖಂಡಿಸಿ ಕಾರ್ಕಳ ವಿಧಾನಸಭಾ ಕ್ಷೇತ್ರದ ಭಾರತೀಯ ಜನತಾ ಪಾರ್ಟಿ ವತಿಯಿಂದ ಜನ ವಿರೋಧಿ ಕಾಂಗ್ರೆಸ್ ರಾಜ್ಯ ಸರ್ಕಾರದ ವಿರುದ್ಧ ಮಾ.14ರಂದು ಪುರಸಭೆ ಹಾಗೂ ಗ್ರಾಮ ಮಟ್ಟದಲ್ಲಿ ಬಿಜೆಪಿ ವತಿಯಿಂದ ಬೃಹತ್ ಜನಾಗ್ರಹ ಸಭೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾರ್ಕಳ ಬಿಜೆಪಿ ಕ್ಷೇತ್ರಾಧ್ಯಕ್ಷ ನವೀನ್ ನಾಯಕ್ ಹೇಳಿದರು.
ಅವರು ಕಾರ್ಕಳ ಪತ್ರಿಕಾ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ,ಡೀಮ್ ಅರಣ್ಯ ವಿರಹಿತವಾದರೂ ಬಡವರಿಗೆ ನಿವೇಶನ ನೀಡದೇ ಅರ್ಜಿದಾರರ ಅರ್ಜಿಗಳನ್ನು ಸಕಾರಣವಿಲ್ಲದೇ ತಿರಸ್ಕರಿಸಲಾಗುತ್ತಿದೆ. ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿಗೆ ಯಾವುದೇ ಮಹತ್ವ ನೀಡದಿರುವುದು, ಅಭಿವೃದ್ಧಿಗೆ ಅಗತ್ಯ ಅನುದಾನ ನೀಡದಿರುವುದು ಹಾಗೂ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದಿರುವುದು ಸರ್ಕಾರದ ವೈಫಲ್ಯವನ್ನು ತೋರಿಸುತ್ತದೆ ಎಂದು ಹೇಳಿದರು.
ವಿಧವಾ ವೇತನ, ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಪಿಂಚಣಿ ಯೋಜನೆಗಳಲ್ಲಿ ಗೊಂದಲ ಉಂಟಾಗಿದೆ. ಅಘೋಷಿತ ಲೋಡ್ ಶೆಡ್ಡಿಂಗ್ ಹಾಗೂ ನಿರಂತರ ವಿದ್ಯುತ್ ದರ ಏರಿಕೆಯಿಂದ ಜನತೆ ತೊಂದರೆ ಅನುಭವಿಸುತ್ತಿದ್ದಾರೆ. ಜೊತೆಗೆ ಅಗತ್ಯ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ರಾಜ್ಯ ಬಜೆಟ್‌ನಲ್ಲಿ ಕರಾವಳಿ ಭಾಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ ಎಂದು ಟೀಕಿಸಿದರು.
ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ಹಿಂದೂ ಹಾಗೂ ಬಿಜೆಪಿ ಕಾರ್ಯಕರ್ತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ಆರೋಪಿಸಿದರು. ಗ್ರಾಮ ಪಂಚಾಯತ್‌ನಿಂದ ವಿಧಾನಸೌಧದವರೆಗೆ ಭ್ರಷ್ಟಾಚಾರ ಹೆಚ್ಚಾಗಿದೆ ಎಂದು ಹೇಳಿದರು.
ಜವಳಿ ಪಾರ್ಕ್ ಕುರಿತು ಮಾತನಾಡಿದ ಅವರು, ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಯೋಜನೆ ರೂಪಿಸಲಾಗಿದ್ದರಿಂದ ಎರಡು ಬಾರಿ ಟೆಂಡರ್ ಕರೆಯಲಾಗಿದ್ದರೂ ಟೆಂಡರ್‌ದಾರರು ಮುಂದೆ ಬಂದಿಲ್ಲ. ಈ ಬಗ್ಗೆ ಈಗಾಗಲೇ ವಿಧಾನಸಭೆಯಲ್ಲಿ ಪ್ರಸ್ತಾಪಿಸಿದ್ದು ರಾಜ್ಯ ಸರ್ಕಾರವೇ ನೇರವಾಗಿ ಜವಳಿ ಪಾರ್ಕ್ ಆರಂಭಿಸಬೇಕು ಎಂದು ಶಾಸಕ ಸುನೀಲ್ ಕುಮಾರ್ ಆಗ್ರಹಿಸಿದ್ದಾರೆ ಎಂದರು.
ಸುದ್ದಿಗೋಷ್ಠಿಯಲ್ಲಿ ಬಿಜೆಪಿ ವಕ್ತಾರ ರವೀಂದ್ರ ಮೊಯ್ಲಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸತೀಶ್ ಪೂಜಾರಿ ಬೋಳ, ಯುವಮೋರ್ಚಾ ಅಧ್ಯಕ್ಷ ರಾಕೇಶ್ ಶೆಟ್ಟಿ, ಯುವಮೋರ್ಚಾ ರಾಜ್ಯ ಕಾರ್ಯದರ್ಶಿ ವಿಖ್ಯಾತ್ ಶೆಟ್ಟಿ ಉಪಸ್ಥಿತರಿದ್ದರು.



ಕೋಟ ಕೋಡಿ ಕನ್ಯಾಣ ಶ್ರೀ ಶನೀಶ್ವರ ದೇವಸ್ಥಾನದ ವಾರ್ಷಿಕೋತ್ಸವ ಪ್ರಯುಕ್ತ ಶ್ರೀ ಕ್ಷೇತ್ರ ಕಮಲಶಿಲೆ ಯಕ್ಷಗಾನ ಮೇಳದ ವೇದಿಕೆಯಲ್ಲಿ ಭಾಗವತ ಸದಾಶಿವ ಅಮೀನ್ ಕೊಕ್ಕರ್ಣೆ ಅವರನ್ನು ಉದ್ಯಮಿ ಶಿವ ಎಸ್. ಕರ್ಕೇರ ಸನ್ಮಾನಿಸಿದರು.

ಕಾರ್ಕಳದಲ್ಲಿ ರಸ್ತೆ ಸುರಕ್ಷತೆಗೆ ಸಾರಿಗೆ ಇಲಾಖೆ ಎಐ ಆಧರಿತ ಕ್ಯಾಮೆರಾ ಅಳವಡಿಕೆ | ವಾಹನ ಮಾಲೀಕರ ಮನೆಗೆ ತಲುಪಲಿದೆ ನೋಟೀಸ್

ಸಂಚಾರ ನಿಯಮ ಉಲ್ಲಂಘಿಸುವವರ ಮೇಲೆ ನಿಗಾ ವಹಿಲಿದೆ ಕ್ಯಾಮೆರಾ ಕಣ್ಣು!

■ ಗಣೇಶ್ ನಾಯಕ್, ಸಾಣೂರು

ಕಾರ್ಕಳ: ಈವರೆಗೆ ಪೊಲೀಸರ ಕಣ್ತಪ್ಪಿಸಿ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದವರು, ಪೊಲೀಸರು ಈ ರಸ್ತೆಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದರೆ ಬೇರೊಂದು ರಸ್ತೆಯ ಮೂಲಕ ತಪ್ಪಿಸಿಕೊಂಡು ಹೋಗುತ್ತಿದ್ದ ವಾಹನ ಸವಾರರು, ವಿಶೇಷವಾಗಿ ದ್ವಿಚಕ್ರ ವಾಹನ ಚಾಲಕರು ಇನ್ನು ಮುಂದೆ ಸಂಚಾರ ನಿಯಮ ಪಾಲನೆಯಿಂದ ತಪ್ಪಿಸಿಕೊಳ್ಳಲು ಕಷ್ಟಸಾಧ್ಯವಾಗಿದೆ. ಇದನ್ನೂ ಮೀರಿದರೆ ಅನಿವಾರ್ಯವಾಗಿ ದಂಡ ಕಟ್ಟಬೇಕಾಗುತ್ತದೆ.
ಕಾರ್ಕಳ ತಾಲೂಕಿನ ದೂಪದಕಟ್ಟೆ (ಪಡುಬಿದ್ರಿ–ಕಾರ್ಕಳ) ರಾಜ್ಯ ಹೆದ್ದಾರಿಯಲ್ಲಿ ಎಐ ಆಧಾರಿತ ಸ್ಮಾರ್ಟ್ ಕ್ಯಾಮೆರಾ ಅಳವಡಿಸಲಾಗಿದ್ದು, ಇನ್ನು





2–3ದಿನಗಳಲ್ಲಿ ಕಾರ್ಯಾರಂಭ ಗೊಳ್ಳಲಿದೆ.
ಎಎನ್‌ಪಿಆರ್‌ಸಿಸಿ ಕ್ಯಾಮೆರಾಗಳನ್ನು ಇಲ್ಲಿ ಅಳವಡಿಸಲಾಗಿದ್ದು ಉಡುಪಿ ಜಿಲ್ಲೆಯಲ್ಲಿ ಅಪಘಾತ ಮತ್ತು ಸಾರಿಗೆ ನಿಯಮ ಉಲ್ಲಂಘನೆ ಹೆಚ್ಚಿರುವ 8 ರಸ್ತೆಗಳಲ್ಲಿ ರಸ್ತೆ ಸುರಕ್ಷತೆಗೆ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಸ್ಮಾರ್ಟ್ ಎನ್‌ಫೋರ್ಸ್‌ಮೆಂಟ್ ವ್ಯವಸ್ಥೆ ಜಾರಿಗೆ ಇಲಾಖೆ ಮುಂದಾಗಿದೆ.

ನೋಟಿಸ್ ಮೊಬೈಲ್‌ಗೆ!
ಈ ಎಐ ಕ್ಯಾಮರಾಗಳು ವಾಹನಗಳು ನಿಯಮ ಉಲ್ಲಂಘಿಸಿದರೆ (ಸುಮಾರು ಒಂದು ಕಿ.ಮೀ. ದೂರದಿಂದ ಬರುವ ವಾಹನಗಳ) ಅದರ ವೀಡಿಯೋ, ಫೋಟೋ ಸೆರೆ ಹಿಡಿದು ಕೇಂದ್ರ ಕಚೇರಿಯಲ್ಲಿನ ನಿಯಂತ್ರಣ ಕೊಠಡಿಗೆ ಮಾಹಿತಿ ರವಾನಿಸಲಿದೆ. ಅದರ ಆಧಾರದಲ್ಲಿ ಆ ವಾಹನಗಳ ವಿರುದ್ಧ ಸ್ವಯಂ ಚಾಲಿತ ಡಿಜಿಟಲ್ ಚಲನ್ ಸಿದ್ಧಪಡಿಸಿ, ವಾಹನ ಮಾಲೀಕರ ಇಮೇಲ್ ಅಥವಾ ಮೊಬೈಲ್ ಸಂಖ್ಯೆಗೆ ರವಾನಿಸಲಾಗುತ್ತದೆ. ಡಿಜಿಟಲ್ ಚಲನ್‌ನೊಂದಿಗೆ ವೀಡಿಯೋ ಮತ್ತು ಫೋಟೋ ದಾಖಲೆ ರೂಪದಲ್ಲಿ ಕಳುಹಿಸಲಾಗುತ್ತದೆ. ಅಲ್ಲದೆ, ವಾಹನ ಮಾಲೀಕರು ತಮ್ಮ ನಿಯಮ ಉಲ್ಲಂಘನೆಗೆ ಬದಲಾಗಿ ದಂಡವನ್ನು ಆನ್‌ಲೈನ್ ಮೂಲಕ ಪಾವತಿಸುವ ಅವಕಾಶವನ್ನೂ ನೀಡಲಾಗುತ್ತದೆ.

ವಾಹನಗಳನ್ನು ತಡೆದು ನಿಲ್ಲಿಸಬೇಕಿಲ್ಲ
ಈ ರೀತಿಯ ಕ್ಯಾಮರಾಗಳ ಬಳಕೆಯಿಂದಾಗಿ ಪೊಲೀಸರು ವಾಹನಗಳನ್ನು ತಡೆದು ದಂಡ ವಿಧಿಸಬೇಕಾದ ಅನಿವಾರ್ಯತೆ ಇರುವುದಿಲ್ಲ, ವಿಡಿಯೋ, ಫೋಟೋ ದಾಖಲಾಗುವ ಕಾರಣ ವಾಹನಗಳ ಮಾಲಕರು ನಾವು ಸಂಚಾರ ನಿಯಮ ಉಲ್ಲಂಘಿಸಿಲ್ಲ ಎಂದು ಹೇಳುವಂತೆಯೂ ಇಲ್ಲ.

> **ಇಲಾಖೆ ಜೊತೆ ಸಹಕರಿಸಿ**
> ವಾಹನ ಸವಾರರು ಸಂಚಾರ ನಿಯಮ ಪಾಲನೆಯಿಂದ ಬೇರೊಬ್ಬರ ಜೀವ ಉಳಿಸುವುದರೊಂದಿಗೆ ನಮ್ಮ ಜೀವ-ಜೀವನವನ್ನೂ ಉಳಿಸಿಕೊಳ್ಳಬಹುದು. ಈ ನಿಟ್ಟಿನಲ್ಲಿ ಜನರು ಇಲಾಖೆಯೊಂದಿಗೆ ಸಹಕರಿಸಬೇಕೆಂದು ಪೊಲೀಸರು ಮನವಿ ಮಾಡಿದ್ದಾರೆ.